ಶನಿವಾರ, ಮೇ 10, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಯೋಧರಿಗೆ ಬೆಂಬಲ

ಭಾರತೀಯ ಸೇನಾ ಪಡೆಗಳಿಗೆ ಯಶಸ್ಸು ಕೋರಿ ಬೆಂಗಳೂರಿನಲ್ಲಿ ಶುಕ್ರವಾರ ನಡೆದ ತಿರಂಗಾ ಯಾತ್ರೆಯಲ್ಲಿ ಮಹಿಳೆಯರು ಭಾಗವಹಿಸಿದ್ದರು

ಪ್ರಜಾವಾಣಿ ಚಿತ್ರ

RERA NO: PRM/KA/RERA/1251/309/PR/070525/007719
FOR MORE DETAILS VISIT WWW.RERA.KARNATAKA.GOV.IN

Luxuriously Crafted. Perfectly Located.

LAUNCHING CASAGRAND PROMENADE YELAHANKA

@ just ₹6999/SFT

65+ PREMIUM AMENITIES | 13000 SFT GRAND CLUBHOUSE
2.6 ACRES LUSH GREENERY | 32000 SFT CENTRAL COURTYARD

THE BEST OF LUXURY & CONNECTIVITY

MALL OF ASIA (10 MINS) | MANYATA TECH PARK (15 MINS)
HEBBAL FLYOVER (15 MINS) | INTERNATIONAL AIRPORT (20 MINS)

SPACIOUS 3 & 4 BHK RESIDENCES FROM ₹1.3CR - ₹1.89CR*

PRICE BENEFITS

YELAHANKA MARKET PRICE ~~₹10000/SFT~~ | CASAGRAND LAUNCH PRICE ~~₹7399/SFT~~

EARLY BIRD PRICE ₹6999/SFT
(FOR FIRST 25 BOOKINGS ONLY)

TYPE	SIZE	LAUNCH PRICE	EARLY BIRD PRICE
3 BHK	1845 - 2152 SFT	~~₹1.37CR~~ - ₹1.6CR	₹1.3CR - ₹1.52CR
4 BHK	2609 - 2670 SFT	₹1.93CR - ~~₹2CR~~	₹1.84CR - ₹1.89CR

TOTAL UNITS - 223 | UNITS SOLD - 83 | AVAILABLE UNITS - 140 | HANDOVER IN 36 MONTHS

CREDAI
93840 54982
EXCLUSIVE SITE VISIT AVAILABLE
VISIT MODEL HOUSE AT SITE

CASAGRAND
building aspirations

3400 SFT SWIMMING POOL

LAUNCHING
CASAGRAND PROMENADE
YELAHANKA

SPACIOUS 3 & 4 BHK RESIDENCES

₹1.3CR - ₹1.89CR*

THOUGHTFULLY CURATED MODERN AMENITIES FOR EVERYDAY LIVING

65+ WORLD-CLASS AMENITIES

CLUBHOUSE VIEW

PODIUM VIEW

Outdoor Amenities
- Walking / Jogging Track
- Cycling Track
- Pergola Seating Gallery
- Senior Citizen Plaza & More

Kid's Play Area
- Skating Rink
- Vertical Playground
- Rock Climbing Wall
- Crèche & More

Sports, Fitness & Well-being
- Indoor Gym
- Yoga Deck
- Cricket Practice Net
- Basketball Court & More

Indoor Games Room
- TT & Pool Room
- Board Games Room
- Video Game Room

Convenience
- Dormitory
- Car Charging Bay
- Car Washing Bay
- Air Filling Station

Terrace Amenities
- Sky Cinema
- Terrace Hangout Plaza
- Grilling Pavilion
- Rooftop Café & More

Swimming Pool Amenities
- Adult Pool
- Kid's Pool
- Outdoor Jacuzzi
- Poolside Cabana & More

Features & Entertainment
- Multi-purpose Hall With Pantry
- Mini Theatre
- Indoor Co-working Space
- Learning Centre & More


MEDITATION DECK


AMPHITHEATRE

AERIAL VIEW


INDOOR GAMES ROOM

Location Route Map



WHY CASAGRAND?

20 years of real estate excellence	**160+** landmark projects	**55,000+** happy families	**2023** rigorous quality checks	**87%** on-time delivery	**7 cities** Chennai, Bengaluru, Hyderabad, Coimbatore, Pune, Delhi & Dubai
2 months of rental assurance	**6 months** of resale support	**8 years** warranty & 10 years of community maintenance	**75%** open area for 2x more light & ventilation	**0%** space wastage planning for carpet area efficiency	**23** global brands used in fittings and finishing materials

CREDAI
93840 54982
EXCLUSIVE SITE VISIT AVAILABLE
VISIT MODEL HOUSE AT SITE

SCAN TO EXPERIENCE THE VIRTUAL WALK-THROUGH

CASAGRAND
building aspirations

ಶನಿವಾರ, ಮೇ 10, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 129 | ಪುಟ 26

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗ್ರಾಮಸ್ಥರ ಸ್ಥಳಾಂತರ...

ಜಮ್ಮು ಮತ್ತು ಕಾಶ್ಮೀರದ ಉರಿ ಪಟ್ಟಣದಲ್ಲಿ ಗುರುವಾರ ರಾತ್ರಿಯಿಡೀ ಪಾಕಿಸ್ತಾನ ಡ್ರೋನ್, ಫಿರಂಗಿ ದಾಳಿ ನಡೆಸಿದ್ದರಿಂದ ಆತಂಕಗೊಂಡಿರುವ ಗಡಿ ಭಾಗದ ಗ್ರಾಮಸ್ಥರನ್ನು ಶುಕ್ರವಾರ ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸುವ ಪ್ರಕ್ರಿಯೆ ನಡೆಯಿತು. ಈ ವೇಳೆ ರೋದಿಸುತ್ತಿದ್ದ ಮಹಿಳೆಯನ್ನು ಇತರರು ಸಂತೈಸಿದರು –ಎಎಫ್‌ಪಿ ಚಿತ್ರ

ವಾರದ ವಿಶೇಷ
ಯುದ್ಧದಲ್ಲೀಗ ಡ್ರೋನ್ ಯುಗ

ಯುಜಿಸಿ ಶ್ರೇಣಿ ವೇತನ; ಕೆಲಸ ಗೌಣ 7

ಐಪಿಎಲ್ ಒಂದು ವಾರ ಸ್ಥಗಿತ 13

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,454	24,008	₹1,01,760 (ಬೆಂಗಳೂರು)	₹1,01,500 (ಬೆಂಗಳೂರು)	85.36

ಪಾಕಿಸ್ತಾನದ ನಾಲ್ಕು ವಾಯು ರಕ್ಷಣಾ ಕೇಂದ್ರಗಳ ಮೇಲೆ ದಾಳಿ – ಅಲ್ಲಿನ ಸೇನೆಗೆ ಭಾರಿ ಹಾನಿ ● ದೇಶದೊಳಗೆ ನುಸುಳಲು ಯತ್ನಿಸಿದ ಏಳು ಉಗ್ರರ ಹತ್ಯೆ ● ತನ್ನ 36 ಸ್ಥಳ ಗುರಿಯಾಗಿಸಿ ನಡೆಸಿದ ದಾಳಿ ನಿಷ್ಕ್ರಿಯಗೊಳಿಸಿದ ಭಾರತ

ಸಿಂಧೂರ ಪ್ರಹಾರ: ಪಾಕ್ ಡ್ರೋನ್ ತತ್ತರ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಾಕಿಸ್ತಾನ ಹಾಗೂ ಪಾಕ್ ಆಕ್ರಮಿತ ಪ್ರದೇಶಗಳ ಉಗ್ರರ ದಮನಕ್ಕೆ ಭಾರತ ಸೇನೆಯು 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಆರಂಭಿಸಿದ ಬಳಿಕ ಉಭಯ ದೇಶಗಳ ನಡುವಿನ ಸಂಘರ್ಷ ತಾರಕಕ್ಕೆ ಏರಿದೆ. ಪಾಕಿಸ್ತಾನ ಸೇನೆಯು ಗುರುವಾರ ರಾತ್ರಿ ನಡೆಸಿದ ಡ್ರೋನ್ ಹಾಗೂ ಕ್ಷಿಪಣಿ ದಾಳಿಗಳಿಗೆ ಭಾರತೀಯ ಸೇನೆ ತಕ್ಕ ಪ್ರತ್ಯುತ್ತರ ನೀಡಿದೆ. ದೇಶದೊಳಗೆ ನುಗ್ಗಿ ಪಾತಕ ಕೃತ್ಯ ನಡೆಸಲು ಸಂಚು ರೂಪಿಸಿದ್ದ ಏಳು ಉಗ್ರರನ್ನು ಗಡಿ ಭದ್ರತಾ ಪಡೆ ಹತ್ಯೆಗೈದಿದೆ.

ಪ್ರತೀಕಾರದ ಕ್ರಮವಾಗಿ ಭಾರತೀಯ ಸೇನೆಯು ಪಾಕ್‌ನ ವಾಯು ರಕ್ಷಣಾ ಕೇಂದ್ರಗಳ ಮೇಲೆ ಡ್ರೋನ್ ದಾಳಿ ನಡೆಸಿ ಕೇಂದ್ರವೊಂದನ್ನು ಧ್ವಂಸಗೊಳಿಸಿದೆ. ಪಾಕಿಸ್ತಾನವು ಹೆಚ್ಚು ಸಾಮರ್ಥ್ಯದ ಆರ್ಟಿಲರಿ ಗನ್‌ಗಳು ಮತ್ತು ಸಶಸ್ತ್ರ ಡ್ರೋನ್‌ಗಳನ್ನು ಬಳಸಿಕೊಂಡು ನಿಯಂತ್ರಣ ರೇಖೆಯಾದ್ಯಂತ ದಾಳಿ ನಡೆಸಿದೆ. ಇದರಿಂದಾಗಿ, ಭಾರತೀಯ ಸೇನೆಯ ಕೆಲವು ಸಿಬ್ಬಂದಿ ಮೃತಪಟ್ಟಿದ್ದು, ಕೆಲವರು ಗಾಯಗೊಂಡಿದ್ದಾರೆ. ಭಾರತದ ಪ್ರತೀಕಾರದ ಗುಂಡಿನ ದಾಳಿಯಲ್ಲಿ ಪಾಕಿಸ್ತಾನ ಸೇನೆಗೆ ಭಾರಿ ಹಾನಿ ಉಂಟಾಗಿದೆ ಎಂದು ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪಾಕಿಸ್ತಾನ ಸೇನೆಯು ಶುಕ್ರವಾರ ರಾತ್ರಿಯೂ ಜಮ್ಮು ಮತ್ತು ಕಾಶ್ಮೀರದ ಸಾಂಬಾ ಜಿಲ್ಲೆ, ಪಂಜಾಬ್‌ನ ಫಿರೋಜ್‌ಪುರ, ರಾಜಸ್ಥಾನದ ಪೋಖರಣ್ ಮತ್ತಿತರ ಕಡೆಗಳಲ್ಲಿ ಡ್ರೋನ್ ಹಾಗೂ ಕ್ಷಿಪಣಿ ದಾಳಿ ನಡೆಸಿದೆ. ಇವುಗಳನ್ನು ಭಾರತೀಯ ಸೇನೆ ವಿಫಲಗೊಳಿಸಿದೆ. ಜಮ್ಮು ಮತ್ತು ಕಾಶ್ಮೀರದ ಹೆಚ್ಚಿನ ಭಾಗಗಳಲ್ಲಿ ಬ್ಲ್ಯಾಕ್‌ಔಟ್ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಶ್ರೀನಗರ ವಿಮಾನ ನಿಲ್ದಾಣ ಮತ್ತು ಅವಂತಿಪುರ ವಾಯುನೆಲೆ ಗುರಿಯಾಗಿಸಿ ನಡೆಸಿದ ಡ್ರೋನ್ ದಾಳಿಗಳನ್ನು ವಿಫಲಗೊಳಿಸಲಾಗಿದೆ. ಪಂಜಾಬ್‌ನ ಫಿರೋಜ್‌ಪುರದಲ್ಲಿ ವಸತಿ ಪ್ರದೇಶದಲ್ಲಿ ಡ್ರೋನ್ ಬಿದ್ದು ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ. 'ಖಾಯ್ ಫೆಮೆ ಕಿ ಗ್ರಾಮದಲ್ಲಿ ಡ್ರೋನ್ ಅಪ್ಪಳಿಸಿದ ಪರಿಣಾಮ ಮನೆಯೊಂದು ಹೊತ್ತಿ ಉರಿಯಿತು' ಎಂದು ಫಿರೋಜ್‌ಪುರ ಎಸ್‌ಪಿ ಭೂಪಿಂದರ್ ಸಿಂಗ್ ತಿಳಿಸಿದ್ದಾರೆ.

'ಪಾಕಿಸ್ತಾನ ಸೇನೆಯು ಲೇಹ್‌ನಿಂದ ಸರ್ ಕ್ರೀಕ್‌ವರೆಗಿನ ಪಶ್ಚಿಮ ಗಡಿಯುದ್ದಕ್ಕೂ ಭಾರತೀಯ ಪಡೆಗಳ ಮೇಲೆ ಬುಧವಾರ ಹಾಗೂ ಗುರುವಾರ ರಾತ್ರಿ ಹಲವು ಬಾರಿ ದಾಳಿ ನಡೆಸಿದೆ. 36 ಪ್ರದೇಶಗಳ ಮೇಲೆ ದಾಳಿ ಮಾಡಲು ಸುಮಾರು 300-400 ಡ್ರೋನ್‌ಗಳನ್ನು ಸಹ ಬಳಸಿದೆ. ಅವುಗಳನ್ನು ಭಾರತೀಯ ಪಡೆಗಳು ಚಲನಶೀಲ ಮತ್ತು ಸ್ಥಿರ ಶಸ್ತ್ರಾಸ್ತ್ರಗಳ ಮೂಲಕ ಹೊಡೆದು ಉರುಳಿಸಿವೆ. ಡ್ರೋನ್‌ಗಳ ಮೂಲದ ಬಗ್ಗೆ ತನಿಖೆ ಮಾಡಲಾಗುತ್ತಿದೆ. ಇವು ಟರ್ಕಿಯ ಡ್ರೋನ್‌ಗಳು ಎಂಬುದು ಆರಂಭಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಕರ್ನಲ್ ಸೋಫಿಯಾ ಖುರೇಷಿ ಮಾಹಿತಿ ನೀಡಿದರು.

ನಾಗರಿಕ ವಿಮಾನಗಳೇ ಗುರಾಣಿ: 'ಭಾರತೀಯ ಸೇನೆ ತಕ್ಕ ಪ್ರತ್ಯುತ್ತರ ನೀಡುತ್ತದೆ ಎಂಬುದನ್ನು ಚೆನ್ನಾಗಿ ಬಲ್ಲ ಪಾಕ್ ಸೇನೆಯು ತನ್ನ ನಾಗರಿಕ ವಿಮಾನಗಳನ್ನೇ ಗುರಾಣಿಗಳನ್ನಾಗಿ ಬಳಸುತ್ತಿದೆ. ಈಗಿನ ಸನ್ನಿವೇಶದಲ್ಲಿ ಭಾರತ ಹಾಗೂ ಪಾಕಿಸ್ತಾನದ ಅಂತರರಾಷ್ಟ್ರೀಯ ಗಡಿಯ ಪ್ರದೇಶದಲ್ಲಿ ಅಂತರರಾಷ್ಟ್ರೀಯ ವಿಮಾನ ಸೇರಿದಂತೆ ಯಾವುದೇ ವಿಮಾನ ಹಾರಾಟ ಸುರಕ್ಷಿತವಲ್ಲ.

12ನೇ ಪುಟ ನೋಡಿ

ಎಸ್–400, ಆಕಾಶ್ ಕ್ಷಿಪಣಿ ಪ್ರತ್ಯುತ್ತರ

ನವದೆಹಲಿ: ಪಾಕಿಸ್ತಾನವು ಡ್ರೋನ್ ಹಾಗೂ ಕ್ಷಿಪಣಿಗಳಿಂದ ನಡೆಸುತ್ತಿರುವ ದಾಳಿಯನ್ನು ಹಿಮ್ಮೆಟ್ಟಿಸುವುದಕ್ಕಾಗಿ ಭಾರತೀಯ ಪಡೆಗಳು ಅತ್ಯಾಧುನಿಕ ಎಸ್–400 ಟ್ರಯಂಫ್ ಕ್ಷಿಪಣಿ ವ್ಯವಸ್ಥೆ, ಬರಾಕ್–8 ಹಾಗೂ ಆಕಾಶ್ ಕ್ಷಿಪಣಿಗಳನ್ನು ಬಳಸುತ್ತಿವೆ ಎಂದು ಉನ್ನತ ಮೂಲಗಳು ಶುಕ್ರವಾರ ಹೇಳಿವೆ. 10

1.ಭಾರತ–ಪಾಕಿಸ್ತಾನ ಗಡಿ ಪೋಸ್ಟ್ ಬಳಿಯ ಹವೇಲಿಯನ್ ಗ್ರಾಮದ ಜನರನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸುವ ವೇಳೆ ಗ್ರಾಮಸ್ಥರು ತಮ್ಮ ಸಾಮಗ್ರಿಗಳನ್ನು ವಾಹನಕ್ಕೆ ತುಂಬಿದರು –ಎಎಫ್‌ಪಿ ಚಿತ್ರ 2. ಜಮ್ಮು ಮತ್ತು ಕಾಶ್ಮೀರದ ಸಾಂಬಾ ಜಿಲ್ಲೆಯ ಕಂದರಾಲ್ ಗ್ರಾಮದ ಜನರು ಬಂಕರ್‌ನಲ್ಲಿ ಆಶ್ರಯ ಪಡೆದರು – ಪಿಟಿಐ ಚಿತ್ರ

ಕೋಮು ಬಣ್ಣ ನೀಡಲು ಪಾಕ್ ಯತ್ನ: ಮಿಸ್ರಿ

'ಭಾರತದ ಪೂಜಾ ಸ್ಥಳಗಳ ಮೇಲೆ ಪಾಕ್ ದಾಳಿ ನಡೆಸಿದೆ. ಇದನ್ನು ಭಾರತದ ಸಶಸ್ತ್ರ ಪಡೆಗಳ ಮೇಲೆ ಹೊರಿಸಲು ಯತ್ನಿಸಿದೆ. ಈ ಅವಿವೇಕದ ಪ್ರಯತ್ನಗಳು ಇಸ್ಲಾಮಾಬಾದ್‌ನ ದುಷ್ಟ ಯೋಜನೆ ಹಾಗೂ ಜಗತ್ತನ್ನು ದಾರಿ ತಪ್ಪಿಸುವ ಪ್ರಯತ್ನಕ್ಕೆ ಸಾಕ್ಷಿ' ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಭಾರತ ತನ್ನದೇ ನಗರಗಳ ಮೇಲೆ ದಾಳಿ ಮಾಡುತ್ತದೆ ಎಂದು ಭಾವಿಸುವುದು ಪಾಕಿಸ್ತಾನ ಮಾತ್ರ ಕಲ್ಪಿಸಿಕೊಳ್ಳಬಹುದಾದ ಫ್ಯಾಂಟಸಿ ಹಾಗೂ ಹುಚ್ಚು ಕಲ್ಪನೆ' ಎಂದು ವ್ಯಂಗ್ಯವಾಡಿದರು.

'ಪಾಕ್ ಪ್ರೇರಿತ ಉಗ್ರರು ನಡೆಸಿದ ಕೃತ್ಯಕ್ಕೆ ಭಾರತ ಬಹಳ ಸಂಯಮದಿಂದ ಪ್ರತಿಕ್ರಿಯೆ ನೀಡಿದೆ. ಇದಕ್ಕೆ ಕೋಮು ಬಣ್ಣ ನೀಡಲು ಪಾಕ್ ಹವಣಿಸುತ್ತಿದೆ. ಧಾರ್ಮಿಕ ಸ್ಥಳಗಳ ಮೇಲೆ ದಾಳಿ ಮಾಡಲಾಗಿದೆ ಎಂದು ಸುಳ್ಳು ಆರೋಪ ಮಾಡುತ್ತಿದೆ. ಆದರೆ, ಪಾಕ್ ಸೇನೆಯು ಪೂಂಛ್‌ನಲ್ಲಿರುವ ಗುರುದ್ವಾರ ಹಾಗೂ ಅಮೃತಸರದ ಮತ್ತೊಂದು ಧಾರ್ಮಿಕ ಸ್ಥಳಕ್ಕೆ ದಾಳಿ ಮಾಡಿದೆ. ಇದರ ಹೊಣೆಯನ್ನು ಪಾಕ್ ಹೊರಬೇಕಿತ್ತು. ಅದರ ಬದಲು ಭಾರತದ ಮೇಲೆ ಅಸಂಬದ್ಧ ಆರೋಪ ಮಾಡುತ್ತಿದೆ. ಇದು ಪಾಕ್‌ನ ಹತಾಶ ಪ್ರಯತ್ನವಲ್ಲದೆ ಬೇರೇನೂ ಅಲ್ಲ. ಈ ಮೂಲಕ ಜಗತ್ತನ್ನು ಮೋಸಗೊಳಿಸಲು ಸಾಧ್ಯವಿಲ್ಲ' ಎಂದು ಅವರು ಅಭಿಪ್ರಾಯಪಟ್ಟರು.

ಈಗಿನ ಭದ್ರತಾ ಸನ್ನಿವೇಶ ಗಮನದಲ್ಲಿ ಇಟ್ಟುಕೊಂಡು, ಕರ್ತಾರಪುರ ಸಾಹಿಬ್ ಕಾರಿಡಾರ್ ಅನ್ನು ಸ್ಥಗಿತಗೊಳಿಸಲಾಗಿದೆ ಎಂದು ಮಿಸ್ರಿ ಹೇಳಿದರು.

'ಇಂಧನದ ಕೊರತೆಯಿಲ್ಲ ಎಟಿಎಂ ಸೇವೆ ಸ್ಥಗಿತವಿಲ್ಲ'

ನವದೆಹಲಿ (ಪಿಟಿಐ): ಭಾರತ ಮತ್ತು ಪಾಕಿಸ್ತಾನದ ನಡುವೆ ತಲೆದೋರಿರುವ ಸಂಘರ್ಷದಿಂದ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲ ಸಿಲಿಂಡರ್ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗುವುದಿಲ್ಲ. ಎಟಿಎಂ ಕೇಂದ್ರಗಳ ಸೇವೆಯೂ ಸ್ಥಗಿತಗೊಳ್ಳುವುದಿಲ್ಲ ಎಂದು ಸರ್ಕಾರಿ ಸ್ವಾಮ್ಯದ ತೈಲ ಉತ್ಪಾದಕ ಕಂಪನಿಗಳು ಮತ್ತು ಬ್ಯಾಂಕ್‌ಗಳು ಶುಕ್ರವಾರ ಸ್ಪಷ್ಟಪಡಿಸಿವೆ.

ಉಭಯ ದೇಶಗಳ ಗಡಿ ಭಾಗದಲ್ಲಿ ಉದ್ವಿಗ್ನತೆ ಉಲ್ಬಣಿಸಿದೆ. ಇದರಿಂದ ಇಂಧನ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂಬ ಸುದ್ದಿಯು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಗ್ರಾಹಕರು ಇಂತಹ ಸುಳ್ಳು ಹಾಗೂ ಆಧಾರರಹಿತ ಸುದ್ದಿಗಳನ್ನು ನಂಬಬಾರದು. ದೇಶದಲ್ಲಿ ಇಂಧನ ಹಾಗೂ ಎಲ್‌ಪಿಜಿ ದಾಸ್ತಾನು ಸಾಕಷ್ಟಿದೆ' ಎಂದು ಭಾರತೀಯ ತೈಲ ನಿಗಮ (ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಹಾಗೂ ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ಪ್ರತ್ಯೇಕ ಹೇಳಿಕೆಯಲ್ಲಿ ತಿಳಿಸಿವೆ.

ವದಂತಿಗೆ ಕಿವಿಗೊಟ್ಟು ಇಂಧನ ಪೂರೈಕೆ ಮಳಿಗೆಗಳಿಗೆ ದಾಂಗುಡಿ ಇಡಬಾರದು ಎಂದು ಕೋರಿವೆ.

12ನೇ ಪುಟ ನೋಡಿ

ವಿಮಾನ ನಿಲ್ದಾಣಕ್ಕೆ 3 ಗಂಟೆ ಮುನ್ನ ತಲುಪಿ

ಮುಂಬೈ: ಪ್ರಯಾಣಿಕರು ತಾವು ಪ್ರಯಾಣಿಸುವ ವಿಮಾನಗಳು ಹೊರಡುವ ನಿಗದಿತ ಸಮಯಕ್ಕಿಂತ ಮೂರು ಗಂಟೆ ಮುಂಚಿತವಾಗಿ ವಿಮಾನ ನಿಲ್ದಾಣಗಳನ್ನು ತಲುಪುವಂತೆ ನಾಗರಿಕ ವಿಮಾನಯಾನ ಸಚಿವಾಲಯ ಮತ್ತು ನಾಗರಿಕ ವಿಮಾನಯಾನ ಭದ್ರತಾ ಸಂಸ್ಥೆ (ಬಿಸಿಎಎಸ್) ತಿಳಿಸಿದೆ.

ಭಾರತ ಮತ್ತು ಪಾಕಿಸ್ತಾನ ನಡುವೆ ಉದ್ವಿಗ್ನ ಪರಿಸ್ಥಿತಿ ತೀವ್ರಗೊಂಡಿರುವ ಹಿನ್ನೆಲೆಯಲ್ಲಿ ಈ ಸೂಚನೆ ನೀಡಲಾಗಿದೆ. ಪ್ರಯಾಣಿಕರು ಆನ್‌ಲೈನ್‌ನಲ್ಲಿ ಚೆಕ್–ಇನ್ ಮಾಡಿಕೊಳ್ಳುವ ಮೂಲಕ ಸಮಯ ಉಳಿಸಿಕೊಳ್ಳಬಹುದು ಎಂದು ವಿಮಾನಯಾನ ಸಂಸ್ಥೆಗಳು ಸಲಹೆ ನೀಡಿವೆ.

'ವಿಮಾನ ಹೊರಡುವ 75 ನಿಮಿಷ ಮೊದಲು ಚೆಕ್–ಇನ್ ಪ್ರಕ್ರಿಯೆ ಮುಕ್ತಾಯಗೊಳ್ಳಲಿದೆ. ಚೆಕ್–ಇನ್ ಮತ್ತು ಬೋರ್ಡಿಂಗ್ ಪ್ರಕ್ರಿಯೆಗಳನ್ನು ಸುಗಮವಾಗಿಸಲು ಪ್ರಯಾಣಿಕರು ವಿಮಾನ ನಿಲ್ದಾಣಗಳಿಗೆ ಮೂರು ಗಂಟೆ ಮೊದಲೇ ತಲುಪಿ' ಎಂದು ಏರ್ ಇಂಡಿಯಾ ಸಲಹೆ ನೀಡಿದೆ. ಆಕಾಶ ಏರ್, ಇಂಡಿಗೊ, ಸ್ಪೈಸ್ ಜೆಟ್ ಸಹ ಇದೇ ರೀತಿಯ ಸಲಹೆ ನೀಡಿವೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

11 ಸಚಿವರಿಂದ ಲಿಖಿತ ಅಭಿಪ್ರಾಯ ಸಲ್ಲಿಕೆ

ಬೆಂಗಳೂರು: 'ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿದ ಸಾಮಾಜಿಕ,ಶೈಕ್ಷಣಿಕ ಸಮೀಕ್ಷೆಯ ದತ್ತಾಂಶಗಳ ಅಧ್ಯಯನ ವರದಿಯ ಕುರಿತು 11 ಸಚಿವರು ತಮ್ಮ ಲಿಖಿತ ಅಭಿಪ್ರಾಯವನ್ನು ಮುಖ್ಯಮಂತ್ರಿಗೆ ಸಲ್ಲಿಸಿದ್ದಾರೆ. 5

ರಾಜ್ಯದಲ್ಲೂ ಹೆಚ್ಚಿನ ಕಟ್ಟೆಚ್ಚರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ–ಪಾಕಿಸ್ತಾನದ ಮಧ್ಯೆ ಸಂಘರ್ಷ ತೀವ್ರ ಗೊಂಡಿದ್ದು, ರಾಜ್ಯದಲ್ಲೂ ಕಟ್ಟೆಚ್ಚರ ವಹಿಸುವಂತೆ ಸ್ಥಳೀಯ ಪೊಲೀಸರಿಗೆ ಗುಪ್ತಚರ ವಿಭಾಗ ಸೂಚಿಸಿದೆ.

ಗಡಿ ಭಾಗದಲ್ಲಿ ಉದ್ವಿಗ್ನ ಪರಿಸ್ಥಿತಿ ತಲೆದೋರಿದ್ದು, ರಾಜ್ಯದ ವಿವಿಧ ಜಿಲ್ಲೆಗಳ ಸೂಕ್ಷ್ಮ ಪ್ರದೇಶಗಳ ಮೇಲೆ ತೀವ್ರ ನಿಗಾ ವಹಿಸಬೇಕು. ಜತೆಗೆ, ಬಂದೋಬಸ್ತ್ ಕೈಗೊಳ್ಳಬೇಕು ಎಂದೂ ಹೇಳಿದೆ.

ಆಡಳಿತ ಕಟ್ಟಡಗಳು, ರಕ್ಷಣಾ ಸ್ಥಾವರಗಳು, ವಿಜ್ಞಾನ ಸಂಶೋಧನಾ ಕೇಂದ್ರಗಳು, ವಿಮಾನ ನಿಲ್ದಾಣಗಳು, ಜಲಾಶಯಗಳು, ಉಪಗ್ರಹ ಕೇಂದ್ರಗಳು, ಜಲ ವಿದ್ಯುತ್ ಸ್ಥಾವರಗಳು, ಅಣು ವಿದ್ಯುತ್ ಸ್ಥಾವರ, ರೈಲು ನಿಲ್ದಾಣಗಳು, ಮೆಟ್ರೊ ನಿಲ್ದಾಣ, ಬಸ್ ನಿಲ್ದಾಣಗಳಲ್ಲಿ ನಿಗಾ ವಹಿಸಬೇಕು ಎಂದು ರಾಜ್ಯ ಗುಪ್ತಚರ ವಿಭಾಗದ ನಿರ್ದೇಶಕ ಹೇಮಂತ್ ಎಂ. ನಿಂಬಾಳ್ಕರ್ ಸೂಚಿಸಿದ್ದಾರೆ.

ಬಂದರು, ಹಡಗು ತಯಾರಿಕಾ ಸಂಸ್ಥೆಗಳು, ಸಾಫ್ಟ್‌ವೇರ್ ಕಂಪನಿಗಳು, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಕೇಂದ್ರಗಳು, ಪೈಪ್‌ಲೈನ್ ಮತ್ತು ಸಂಗ್ರಹಾಗಾರಗಳು, ಜನಸಂದಣಿ ಸೇರುವ ಶಾಪಿಂಗ್ ಮಾಲ್‌ಗಳು, ತಾರಾ ಹೋಟೆಲ್‌ಗಳು, ವಿದೇಶಿ ರಾಜತಾಂತ್ರಿಕ ಕಚೇರಿಗಳು, ಭಾರಿ ಕೈಗಾರಿಕೆಗಳು, ಜನ ಸಂದಣಿ ಸೇರುವ ದೇವಾಲಯಲಗಳು, ಮಸೀದಿ ಹಾಗೂ ಚರ್ಚ್‌ಗಳು ಸೇರಿ ಜನಸಂದಣಿ ಸ್ಥಳಗಳಲ್ಲಿಯೂ ಕಟ್ಟೆಚ್ಚರ ವಹಿಸಬೇಕು ಎಂದು ತಿಳಿಸಿದ್ದಾರೆ.

12ನೇ ಪುಟ ನೋಡಿ

'ಸುಳ್ಳು ಸುದ್ದಿ ಹರಡಿದರೆ ಕ್ರಮ'

'ಆಪರೇಷನ್ ಸಿಂಧೂರ' ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹರಡುವವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಎಚ್ಚರಿಕೆ ನೀಡಿದರು.

'ದಾಳಿಯ ಸಂಬಂಧ ಕೆಲವು ಕಿಡಿಗೇಡಿಗಳು ಸುಳ್ಳು ಸುದ್ದಿ ಹರಡುತ್ತಿದ್ದಾರೆ. ಅಂಥವರ ವಿರುದ್ಧ ಕ್ರಮಕ್ಕೆ ಸೂಚಿಸಲಾಗಿದೆ' ಎಂದು ಹೇಳಿದರು. 'ಭಾರತದ ಗಡಿ ಪ್ರದೇಶದಲ್ಲಿ ಹಲವು ಬೆಳವಣಿಗೆಗಳು ನಡೆಯುತ್ತಿವೆ. ರಕ್ಷಣಾ ಇಲಾಖೆ ಅಧಿಕಾರಿಗಳೇ ಅಧಿಕೃತವಾಗಿ ಮಾಹಿತಿ ನೀಡುತ್ತಿದ್ದಾರೆ. ಸಾರ್ವಜನಿಕರು ಸಮಾಜಕ್ಕೆ ತಪ್ಪು ಮಾಹಿತಿ ನೀಡಬಾರದು' ಎಂದು ಕೋರಿದರು. ಬೆಂಗಳೂರಿನ ಸೂಕ್ಷ್ಮ ಪ್ರದೇಶದಲ್ಲಿ ಬಂದೋಬಸ್ತ್ ಹೆಚ್ಚಿಸುವಂತೆ ಡಿಸಿಪಿ ಹಾಗೂ ಎಸಿಪಿಗಳಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಮುಖ್ಯಮಂತ್ರಿ ಸಭೆ ಇಂದು

ಬೆಂಗಳೂರು: ರಾಜ್ಯದಲ್ಲಿ ನಾಗರಿಕ ರಕ್ಷಣಾ ಕಾರ್ಯ ಚಟುವಟಿಕೆಗಳನ್ನು ಪರಾಮರ್ಶಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ (ಮೇ 10) ಸಂಜೆ 4ಕ್ಕೆ ಮಹತ್ವದ ಸಭೆ ಕರೆದಿದ್ದಾರೆ.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ನಡೆಯುವ ಸಭೆಯಲ್ಲಿ ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಗಳು, ಸರ್ಕಾರದ ಪ್ರಮುಖರು ಭಾಗವಹಿಸುವರು.

12ನೇ ಪುಟ ನೋಡಿ

ಅಸ್ತಿತ್ವ ಕಳೆದುಕೊಳ್ಳಲಿರುವ ಬಿಬಿಎಂಪಿ ● ಹೊಸ ವ್ಯವಸ್ಥೆಗೆ ಮುನ್ನುಡಿ

ಮೇ 15ಕ್ಕೆ ಗ್ರೇಟರ್ ಬೆಂಗಳೂರು ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮೇ 15ರಿಂದ ಅಸ್ತಿತ್ವ ಕಳೆದುಕೊಳ್ಳಲಿದ್ದು, 'ಗ್ರೇಟರ್ ಬೆಂಗಳೂರು ಪ್ರದೇಶ' (ಜಿಬಿಎ) ಎಂದಾಗಲಿದೆ.

ಬಿಬಿಎಂಪಿಯನ್ನು ಜಿಬಿಎ ಎಂದು ಅಧಿಸೂಚಿಸುವವರೆಗೂ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ– 2024 ಜಾರಿಗೆ ಬರಲು ಸಾಧ್ಯವಿಲ್ಲ. ಈ ಕಾಯ್ದೆ ಅನುಷ್ಠಾನಕ್ಕೆ ತರಲು ಹಾಗೂ ಗ್ರೇಟರ್ ಬೆಂಗಳೂರು ಪ್ರದೇಶವನ್ನು ವಿಸ್ತರಿಸಲು ಅಧಿಸೂಚನೆ ಹೊರಡಿಸಲು ಸಚಿವ ಸಂಪುಟ ಸಭೆಯಲ್ಲಿ ಶುಕ್ರವಾರ ಅನುಮೋದನೆ ದೊರೆತಿದೆ ಎಂದು ಕಾನೂನು ಸಚಿವ ಎಚ್‌.ಕೆ. ಪಾಟೀಲ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ– 2024ರ ಕಲಂ 1(2)ರಂತೆ, ಗ್ರೇಟರ್ ಬೆಂಗಳೂರು ಪ್ರದೇಶವನ್ನು ಅಧಿಸೂಚಿಸಲು ಹಾಗೂ ಕಲಂ 1(3) ರಂತೆ ಕಾಯ್ದೆಯನ್ನು ಜಾರಿಗೊಳಿಸಲು ಮತ್ತು ಕಲಂ 131ರಂತೆ ನಗರ ಪಾಲಿಕೆಗೆ ಆಡಳಿತಾಧಿಕಾರಿ ನೇಮಕ ಮಾಡಲು ಅಗತ್ಯವಿರುವ ಅಧಿಸೂಚನೆ ಮೇ 15ರಂದು ಹೊರಬೀಳಲಿದೆ.

'ಗ್ರೇಟರ್ ಬೆಂಗಳೂರು ಪ್ರದೇಶ' ಎಂದು ಪ್ರಸ್ತುತವಿರುವ ಬಿಬಿಎಂಪಿ ಪ್ರದೇಶವನ್ನೇ ಮೊದಲು ಅಧಿಸೂಚಿಸಲಾಗುತ್ತದೆ. ಬಿಬಿಎಂಪಿ ವಿಸರ್ಜನೆಯಾಗುವುದರಿಂದ 'ಗ್ರೇಟರ್ ಬೆಂಗಳೂರು ಪ್ರದೇಶ'ಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲಾಗುತ್ತದೆ. ಆಡಳಿತಾಧಿಕಾರಿ ನೇಮಕವಾದ ಮೇಲೆ ಕಾಯ್ದೆಗೆ ಅನುಗುಣವಾಗಿ ನಗರ ಪಾಲಿಕೆಗಳ ನಿಯಮಗಳು, ಕಾನೂನಿನ ಉಪಬಂಧಗಳನ್ನು ರಚಿಸಲಾಗುತ್ತದೆ.

ನಗರ ಪಾಲಿಕೆಗಳಡಿ ಕಾರ್ಯ ನಿರ್ವಹಿಸುವ ಪ್ರಾಧಿಕಾರಗಳಿಗೆ ನಿಯಮಗಳನ್ನು ಜಾರಿ ಮಾಡಿ, ಕರ್ತವ್ಯ, ಪ್ರಕಾರ್ಯಗಳನ್ನು ನಿಗದಿಪಡಿಸಲಾಗುತ್ತದೆ. ನಿಯಮಗಳಂತೆ ಎಲ್ಲ ಅಧಿಕಾರವನ್ನು ಆಡಳಿತಾಧಿಕಾರಿ ಚಲಾಯಿಸಬಹುದು.

5B ಪುಟ ನೋಡಿ

ಮೂರು ನಗರ ಪಾಲಿಕೆ?



ಉದ್ದೇಶಿತ ಗ್ರೇಟರ್ ಬೆಂಗಳೂರು ನಕ್ಷೆ

ಮೇ 15ರಿಂದ ಬಿಬಿಎಂಪಿ ವ್ಯಾಪ್ತಿ ಮಾತ್ರ 'ಗ್ರೇಟರ್ ಬೆಂಗಳೂರು ಪ್ರದೇಶ' ಎಂದಾಗಲಿದ್ದರೂ, ನಂತರದ ದಿನಗಳಲ್ಲಿ ವ್ಯಾಪ್ತಿ ಹಿಗ್ಗಲಿದೆ. ತಲಾ ಸುಮಾರು 125 ವಾರ್ಡ್‌ಗಳ ಮೂರು ನಗರ ಪಾಲಿಕೆಗಳನ್ನು ರಚಿಸುವ ಯೋಜನೆ ಇದ್ದು, ಅದಕ್ಕೆ ತಕ್ಕಂತೆ 'ಗ್ರೇಟರ್ ಬೆಂಗಳೂರು ಪ್ರದೇಶ'ದ ಗಡಿಯನ್ನು ಗುರುತಿಸಲಾಗುತ್ತದೆ.

ನಗರದ ಸುತ್ತಲಿರುವ ಕೈಗಾರಿಕಾ ಪ್ರದೇಶಗಳನ್ನೂ ಒಳಗೊಂಡಂತೆ ಎಲೆಕ್ಟ್ರಾನಿಕ್ ಸಿಟಿ, ಅತ್ತಿಬೆಲೆ, ಜಿಗಣಿ ಕೈಗಾರಿಕೆ ಪ್ರದೇಶ, ಬೊಮ್ಮಸಂದ್ರ, ಸರ್ಜಾಪುರ, ಬಾಗಲೂರು, ರಾಜಾನುಕುಂಟೆ, ಹೆಸರಘಟ್ಟ, ದಾಸನಪುರ, ಮಾಕಳಿ, ತಾವರೆಕೆರೆ, ಕುಂಬಳಗೋಡು, ಕಗ್ಗಲಿಪುರ, ಹಾರೋಹಳ್ಳಿಯನ್ನು 'ಗ್ರೇಟರ್ ಬೆಂಗಳೂರು ಪ್ರದೇಶ'ಕ್ಕೆ ಸೇರಿಸಿಕೊಳ್ಳುವ ಸಾಧ್ಯತೆ ಇದೆ.

ಕಾಯ್ದೆಯಲ್ಲೇ ಇರುವಂತೆ, ಎಲ್ಲ ನಗರ ಪಾಲಿಕೆಗಳ ಹೆಸರು 'ಬೆಂಗಳೂರು' ಎಂದೇ ಆರಂಭವಾಗಬೇಕಿದೆ. 'ಬೆಂಗಳೂರು ಕೇಂದ್ರ ನಗರ ಪಾಲಿಕೆ', 'ಬೆಂಗಳೂರು ಉತ್ತರ ನಗರ ಪಾಲಿಕೆ', 'ಬೆಂಗಳೂರು ದಕ್ಷಿಣ ನಗರ ಪಾಲಿಕೆ'... ಹೀಗೆ ಹೆಸರಿಸಲಾಗುತ್ತದೆ. 'ಗ್ರೇಟರ್ ಬೆಂಗಳೂರು ಪ್ರದೇಶ' ವ್ಯಾಪ್ತಿಯನ್ನು ಹಿಗ್ಗಿಸಿದ ಮೇಲೆ ಅದರನ್ವಯ ಮೂರು ಅಥವಾ ಐದು ನಗರಪಾಲಿಕೆಗಳನ್ನು ರಚಿಸಲಾಗುತ್ತದೆ ಎನ್ನಲಾಗಿದೆ.

ವಂದೇ ಭಾರತ್ ರೈಲಿಗೆ ಕಲ್ಲು

ಬಂಗಾರಪೇಟೆ: ರೈಲ್ವೆ ಇಲಾಖೆ ಪವರ್ ರೂಮ್ ಬಳಿ ವಂದೇ ಭಾರತ್ ರೈಲಿಗೆ ಕಲ್ಲು ತೂರಿದ ಇಬ್ಬರು ಬಾಲಕರನ್ನು ಶುಕ್ರವಾರ ರೈಲ್ವೆ ರಕ್ಷಣಾ ದಳದ ಸಿಬ್ಬಂದಿ ವಶಕ್ಕೆ ಪಡೆದು ಮುಚ್ಚಳಿಕೆ ಬರೆಸಿಕೊಂಡು ಬಿಡುಗಡೆ ಮಾಡಿದ್ದಾರೆ. ತಾಲ್ಲೂಕಿನ ಹುಣಸನಹಳ್ಳಿ ರೈಲ್ವೆ ಮೇಲ್ಸೇತುವೆ ಬಳಿ ಮುಸ್ಲಿಂ ಸಮುದಾಯದ 15 ಬಾಲಕರು ಕಲ್ಲು ತೂರಿದ್ದು, 13 ಮಂದಿ ಪರಾರಿಯಾಗಿದ್ದಾರೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯ
ಭಾರತ ಸರ್ಕಾರ

ಕೈಲಾಸ ಮಾನಸ ಸರೋವರ ಯಾತ್ರೆ

ವಿದೇಶಾಂಗ ವ್ಯವಹಾರಗಳ ಸಚಿವಾಲಯವು 2025ನೇ ಸಾಲಿನ ಕೈಲಾಸ ಮಾನಸ ಸರೋವರ ಯಾತ್ರೆಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ



ಅರ್ಹತೆ : 1ನೇ ಜನವರಿ 2025ಕ್ಕೆ 18 ರಿಂದ 70 ವರ್ಷ ಪ್ರಾಯ ಪೂರೈಸಿರುವ ಭಾರತೀಯ ನಾಗರಿಕರು
ಆಯ್ಕೆ : ವೈದ್ಯಕೀಯ ಪರೀಕ್ಷೆಗಳ ಬಳಿಕ ಕಂಪ್ಯೂಟರೀಕೃತ ಆಯ್ಕೆ ಮೂಲಕ
ನೋಂದಣಿ : ಆನ್‌ಲೈನ್ ಅರ್ಜಿ ಮೂಲಕ ಮಾತ್ರ. ವಿವರಗಳಿಗಾಗಿ ಭೇಟಿ ಕೊಡಿ https://kmy.gov.in

ಟೆಲಿಫೋನ್: 011-23088133

CBC 14108/13/0001/2526

ಸಾತನೂರು ಗ್ರಾ.ಪಂ ಎಂ. ಕೃಷ್ಣಪ್ಪ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಸಾತನೂರು ಗ್ರಾಮಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಎಂ.ಕೃಷ್ಣಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶಿವಣ್ಣ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕಾಗಿ ಶುಕ್ರವಾರ ಚುನಾವಣೆ ನಡೆಯಿತು.

ಒಟ್ಟು 11 ಸದಸ್ಯಬಲ ಹೊಂದಿರುವ ಪಂಚಾಯಿತಿ ಯಲ್ಲಿ ಕೃಷ್ಣಪ್ಪ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆಯಾದರು.

ಈ ವೇಳೆ ಮಾತನಾಡಿದ ಕೃಷ್ಣಪ್ಪ, ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರು ಮತ್ತು ಕಸದ ಸಮಸ್ಯೆ ನಿವಾರಣೆ ಸೇರಿ ಮೂಲಸೌಕರ್ಯಗಳನ್ನು ಕಲ್ಪಿಸಲು ಆದ್ಯತೆ ನೀಡಲಾಗುವುದು ಎಂದರು.

2025–26ನೇ ಸಾಲಿನಲ್ಲಿ ಪ್ರಾಯೋಗಿಕವಾಗಿ, 2027ರಲ್ಲಿ ಪೂರ್ಣ ಪ್ರಮಾಣದಲ್ಲಿ ಜಾರಿ

ಸುಲಭದಲ್ಲಿ ಗಣಿತ ಕಲಿಸುವ ‘ಧಾತು’ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂತ್ರಜ್ಞಾನವನ್ನು ಬಳಸಿಕೊಂಡು ಪ್ರಾಯೋಗಿಕ ವಿಧಾನದ ಮೂಲಕ ಗಣಿತವನ್ನು ಸುಲಭವಾಗಿ ಕಲಿಯಲು ಅನುವು ಮಾಡಿಕೊಡುವ ‘ಧಾತು’ ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಬೆಂಗಳೂರಿನ ‘ಪ್ರಯೋಗ’ ಶಿಕ್ಷಣ ಸಂಶೋಧನಾ ಸಂಸ್ಥೆಯು 9–12ನೇ ತರಗತಿಯ ವಿದ್ಯಾರ್ಥಿಗಳಿಗೆ ಎನ್‌ಸಿಇಆರ್‌ಟಿ ಪಠ್ಯಕ್ರಮದ ಆಧಾರದಲ್ಲಿ ‘ಧಾತು’ ಕಾರ್ಯಕ್ರಮವನ್ನು ಅಭಿವೃದ್ಧಿ ಪಡಿಸಿದ್ದು, 2025–26ನೇ ಸಾಲಿನಲ್ಲಿ ಪ್ರಾಯೋಗಿಕವಾಗಿ ಜಾರಿಗೆ ಬರಲಿದೆ. 2027ರಲ್ಲಿ ಪೂರ್ಣ ಪ್ರಮಾಣದಲ್ಲಿ ಜಾರಿಯಾಗಲಿದೆ.

ಜೆಇಇಯಂಥ ರಚನಾತ್ಮಕ ಮೌಲ್ಯಮಾಪನಗಳು ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬೆಂಬಲಿಸಲು ವಿನ್ಯಾಸಗೊಳಿಸಲಾದ ಧಾತು, ವಿದ್ಯಾರ್ಥಿಗಳಿಗೆ ಸರಿಯಾದ ಉತ್ತರ ನೀಡುವುದಕ್ಕೆ ಮಾರ್ಗದರ್ಶನ ಮಾಡಲಿದೆ. ಸಂದರ್ಭೋಚಿತ ಸುಳಿವುಗಳೊಂದಿಗೆ ಬಹು-ಆಯ್ಕೆಯ ಸ್ವರೂಪವನ್ನು ಬಳಸುತ್ತದೆ. ವಿದ್ಯಾರ್ಥಿಗಳು ತಪ್ಪುಗಳನ್ನು ಮಾಡುವ ಸಾಧ್ಯತೆಯಿರುವ ಪ್ರಮುಖ ಅಂಶಗಳನ್ನು ಇದು ಗುರುತಿಸುತ್ತದೆ. ಶಿಕ್ಷಕರಿಗೆ ಮೌಲ್ಯಮಾಪನವನ್ನೂ ಸುಲಭಗೊಳಿಸಲಿದೆ ಎಂದು ‘ಪ್ರಯೋಗ’ ತಿಳಿಸಿದೆ.

ತಂತ್ರಜ್ಞಾನವನ್ನು ಬಳಸಿಕೊಂಡು ಪ್ರಾಯೋಗಿಕ ವಿಧಾನದ ಮೂಲಕ ಗಣಿತ ಕಲಿಯಲು ಅನುವು ಮಾಡಿಕೊಡುವ ‘ಧಾತು’ ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು

ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಅಭಯ್ ಕರಂದಿಕರ್ ಮಾತನಾಡಿ, ‘ಪ್ರಯೋಗವು ಶಿಕ್ಷಣ ಸಂಶೋಧನೆಯಲ್ಲಿ ನಾವೀನ್ಯಕ್ಕೆ ಚಾಲನೆ ನೀಡುತ್ತಿದೆ. ದೇಶದಾದ್ಯಂತ ಸ್ಟೆಮ್ ಕಲಿಕೆಗೆ ಒಂದು ಮಾದರಿಯನ್ನು ಸೃಷ್ಟಿಸುತ್ತಿದೆ’ ಎಂದು ಹೇಳಿದರು.

‘ಒಂದು ಕಾಲದಲ್ಲಿ ಗಣಿತವು ಭಾರತದ ಶಕ್ತಿಯಾಗಿತ್ತು. ಈಗ ಪ್ರೌಢಶಾಲಾ ಮಟ್ಟದ ಶೇ 80ರಷ್ಟು ವಿದ್ಯಾರ್ಥಿಗಳು ಗಣಿತ ಅಂದರೆ ಆತಂಕ ಪಡುತ್ತಾರೆ. ತಂತ್ರಜ್ಞಾನವು ನಮ್ಮ ಭವಿಷ್ಯವನ್ನು ರೂಪಿಸುತ್ತಿರುವುದರಿಂದ, ಗಣಿತವು ಎಂದಿಗಿಂತಲೂ ಹೆಚ್ಚು ನಿರ್ಣಾಯಕವಾಗಿದೆ’ ಎಂದರು.

‘ಗಣಿತ ವಿಷಯದಲ್ಲಿ ಅನೇಕ ವಿದ್ಯಾರ್ಥಿಗಳು ಎದುರಿಸುತ್ತಿರುವ ಭಯ ಮತ್ತು ಆತಂಕವನ್ನು ನಿವಾರಿಸಲು ‘ಧಾತು’ವನ್ನು ಅಭಿವೃದ್ಧಿಪಡಿಸಲಾಗಿದೆ. ಶಿಕ್ಷಕರು ಪ್ರತಿ ವಿದ್ಯಾರ್ಥಿಗೂ ತಮ್ಮದೇ ಆದ ವೇಗದಲ್ಲಿ ಮಾರ್ಗದರ್ಶನ ಮಾಡಲು ಸಹಾಯ ಮಾಡುತ್ತದೆ’ ಎಂದು ‘ಪ್ರಯೋಗ’ದ ವ್ಯವಸ್ಥಾಪಕ ಟ್ರಸ್ಟಿ ವಲ್ಲೀಶ್ ಹೇರೂರ್ ಮಾಹಿತಿ ನೀಡಿದರು. ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ಕಂಪ್ಯೂಟರ್ ಸೈನ್ಸ್ (ಎಮೆರಿಟಸ್) ಪ್ರಾಧ್ಯಾಪಕ ಜೆಫ್ರಿ ಡಿ. ಉಲ್ಮನ್, ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಪ್ರಾಧ್ಯಾಪಕ ವೈ. ನರಹರಿ ಮತ್ತು ಐಐಐಎಸ್‌ಟಿ ಅಧ್ಯಕ್ಷೆ ತೇಜಸ್ವಿನಿ ಅನಂತ್ ಕುಮಾರ್ ಭಾಗವಹಿಸಿದ್ದರು.

ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ-2025ರ ಕ್ರೀಡಾ ಕೋಟಾ-2025ರ ಅಡಿಯಲ್ಲಿ ಹೆಡ್ ಕಾನ್‌ಸ್ಟೇಬಲ್ (ಜನರಲ್ ಡ್ಯೂಟಿ) ಹುದ್ದೆಗೆ ಹಾಕಿ ವಿಭಾಗದಲ್ಲಿನ ಪ್ರತಿಭಾವಂತ ಮಹಿಳಾ ಕ್ರೀಡಾಪಟುಗಳ ನೇಮಕಾತಿ

ಕೇಂದ್ರಿಯ ಕೈಗಾರಿಕಾ ಭದ್ರತಾ ಪಡೆಯಲ್ಲಿ ಕ್ರೀಡಾ ಕೋಟಾ (ಹಾಕಿ ವಿಭಾಗ) –2025ರ ಅಡಿಯಲ್ಲಿನ 30 ಹೆಡ್ ಕಾನ್‌ಸ್ಟೇಬಲ್ (ಜನರಲ್ ಡ್ಯೂಟಿ) ಖಾಲಿಹುದ್ದೆಗಳಿಗಾಗಿ ಭಾರತೀಯ ಮಹಿಳಾ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

2. ಸಂಪೂರ್ಣ ವಿವರಗಳಿಗಾಗಿ ದಿನಾಂಕ 10.05.2025 ರಿಂದ 16.05.2025ರ ಅವಧಿಯ ಎಂಪ್ಲಾಯ್‌ಮೆಂಟ್ ನ್ಯೂಸ್ / ರೋಜಗಾರ್ ಸಮಾಚಾರ್ ಪತ್ರಿಕೆಯಲ್ಲಿನ ಜಾಹೀರಾತು / ಅಧಿಸೂಚನೆ ಪರಿಶೀಲಿಸಿರಿ ಅಥವಾ ಸಿಐಎಸ್‌ಎಫ್‌ನ https://www.cisfrectt.cisf.gov.in ವೆಬ್‌ಸೈಟ್‌ಗೆ ಭೇಟಿ ಕೊಡಿ.

CBC 19113/11/0005/2526

17ರಿಂದ ಸನಾತನ ರಾಷ್ಟ್ರ ಶಂಖನಾದ ಮಹೋತ್ಸವ

ಬೆಂಗಳೂರು: ಸನಾತನ ಸಂಸ್ಥೆಯ ಸಂಸ್ಥಾಪಕ ಜಯಂತ ಬಾಲಾಜಿ ಅಠಾವಳೆ ಅವರ 83ನೇ ಜನ್ಮೋತ್ಸವ ಮತ್ತು ಸಂಸ್ಥೆಯ ರಜತ ಮಹೋತ್ಸವದ ಅಂಗವಾಗಿ ಮೇ 17ರಿಂದ 19ರವರೆಗೆ ಗೋವಾದಲ್ಲಿ ‘ಸನಾತನ ರಾಷ್ಟ್ರ ಶಂಖನಾದ ಮಹೋತ್ಸವ’ವನ್ನು ಆಯೋಜಿಸಲಾಗಿದೆ ಎಂದು ಸನಾತನ ಸಂಸ್ಥೆಯ ಪ್ರತಿನಿಧಿ ಶಾರದಾ ತಿಳಿಸಿದರು.

‘ಹಿಂದೂ ರಾಷ್ಟ್ರ ರತ್ನ’ ಮತ್ತು ‘ಸನಾತನ ಧರ್ಮಶ್ರೀ’ ಪ್ರಶಸ್ತಿ ಪ್ರದಾನ ಕೂಡ ನಡೆಯಲಿದೆ. ಸನಾತನ ರಾಷ್ಟ್ರದ ನಿರ್ಮಾಣಕ್ಕಾಗಿ 1 ಕೋಟಿ ಶ್ರೀರಾಮನಾಮ ಜಪ ಮಾಡಲಾಗುವುದು. ಪಾರಂಪರಿಕ ಕಲೆಯ ಪ್ರದರ್ಶನ ಮತ್ತು ಛತ್ರಪತಿ ಶಿವಾಜಿ ಮಹಾರಾಜರ ಕಾಲದ ಪ್ರಾಚೀನ ಶಸ್ತ್ರಾಸ್ತ್ರಗಳು ಹಾಗೂ ಸನಾತನ ಸಂಸ್ಕೃತಿ, ಕಲೆ, ಆಯುರ್ವೇದ ವಸ್ತುಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೇ 19ರಂದು ವಿಶ್ವ ಕಲ್ಯಾಣಕ್ಕಾಗಿ ಮಹಾಧನ್ವಂತರಿ ಯಜ್ಞ ನಡೆಯಲಿದೆ. 1,000 ವರ್ಷಗಳ ಹಿಂದಿನ ಸೋಮನಾಥ ಜ್ಯೋತಿರ್ಲಿಂಗವನ್ನು ಪ್ರದರ್ಶನಕ್ಕೆ ಇಡಲಾಗುವುದು. ವಕೀಲರಾದ ಶಕುಂತಲಾ ಶೆಟ್ಟಿ, ಶಬರಿಮಲೆ ಅಯ್ಯಪ್ಪ ಸೇವಾ ಸಮಾಜದ ಅಧ್ಯಕ್ಷ ಎನ್. ಜಯರಾಂ, ಹಿಂದೂ ಜನಜಾಗೃತಿ ಸಮಿತಿ ರಾಜ್ಯ ವಕ್ತಾರ ಮೋಹನ್ ಗೌಡ, ಮುಖಂಡ ಎಂ.ಎಲ್. ಶಿವಕುಮಾರ್ ಉಪಸ್ಥಿತರಿದ್ದರು.

ಕೃಷಿ ಸಚಿವ ಎನ್‌. ಚಲುವರಾಯಸ್ವಾಮಿ ಸಲಹೆ

ತಪ್ಪು ತಿದ್ದಿ ನಡೆದರೆ ದೇಶಕ್ಕೆ ಒಳಿತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವೇಷ, ಸ್ವಾರ್ಥ, ಅಸೂಯೆಯಿಂದ ದೇಶದಲ್ಲಿ ಅನೇಕ ಸಮಸ್ಯೆಗಳು ಉದ್ಭವಿಸುತ್ತಿವೆ. ಜನರು ತಮ್ಮ ತಪ್ಪುಗಳನ್ನು ತಿದ್ದಿ ನಡೆದರೆ ದೇಶಕ್ಕೆ ಒಳಿತು ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ನಗರದಲ್ಲಿ ಶುಕ್ರವಾರ ಕೃಷಿ ಇಲಾಖೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರ ಕ್ಷೇಮಾಭಿವೃದ್ಧಿ ಸಂಘ, ಕೃಷಿ ಪದವೀಧರ ಅಧಿಕಾರಿಗಳ ಸಂಘ ಆಯೋಜಿಸಿದ್ದ ಬುದ್ಧ, ಬಸವಣ್ಣ, ಬಾಬೂ ಜಗಜೀವನರಾಂ, ಬಿ.ಆರ್.ಅಂಬೇಡ್ಕರ್ ಅವರ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಅಂಬೇಡ್ಕರ್ ಅವರು ಹೇಳಿದಂತೆ ಇತಿಹಾಸ ಗೊತ್ತಿಲ್ಲದವರು, ಇತಿಹಾಸ ಬರೆಯಲು ಸಾಧ್ಯವಿಲ್ಲ. ಅಂಬೇಡ್ಕರ್, ಬಸವಣ್ಣ, ಬಾಬೂ ಜಗಜೀವನರಾಂ, ಅಂಬೇಡ್ಕರ್ ಅವರು ದೇಶಕ್ಕೆ ಕೊಡುಗೆ ನೀಡಿದ್ದಾರೆ. ಮಹನೀಯರ ಸಂದೇಶ, ಆಚಾರ, ವಿಚಾರಗಳನ್ನು ತಿಳಿದು ಸಾಗಬೇಕು ಎಂದು ಕರೆ ನೀಡಿದರು.

ಬಾಬೂ ಜಗಜೀವನರಾಂ ಅವರು ದೇಶದ ಉಪ ಪ್ರಧಾನಿಯಾಗಿದ್ದರು. ಕೃಷಿ ಸಚಿವರಾಗಿ ಹೊಸ ತಂತ್ರಜ್ಞಾನ ತಂದು ಹಸಿರು ಕ್ರಾಂತಿ ಸೃಷ್ಟಿಸಿದರು. ಅವರ ಶ್ರಮದ ಫಲವಾಗಿ ಹಸಿವಿನ ಸಮಸ್ಯೆ ನೀಗಿದೆ. ದೇಶಕ್ಕೆ ಸಾವಿರಾರು ವರ್ಷಗಳ ಇತಿಹಾಸ ಇದೆ. ಸಂವಿಧಾನ ಕೊಟ್ಟಿರುವ ಅವಕಾಶಗಳನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಂಡು, ದೇಶದ ಅಭಿವೃದ್ಧಿಗೆ ಕೊಡುಗೆ ನೀಡಬೇಕು ಎಂದು ಸಲಹೆ ನೀಡಿದರು.

ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಬುದ್ಧ, ಬಸವಣ್ಣ, ಬಾಬೂ ಜಗಜೀವನರಾಂ, ಡಾ.ಬಿ.ಆರ್‌. ಅಂಬೇಡ್ಕರ್ ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಜಿ.ಟಿ. ಪುತ್ರ, ಮಹೇಶ ಬಿ. ಶಿರೂರ, ಎನ್‌. ಚಲುವರಾಯಸ್ವಾಮಿ, ವೈ.ಎಸ್‌. ಪಾಟೀಲ, ಬಿ. ವೈ. ಶ್ರೀನಿವಾಸ ಅವರು ಸಂವಿಧಾನ ಪೀಠಿಕೆ ಓದಿದರು — ಪ್ರಜಾವಾಣಿ ಚಿತ್ರ

ಕೃಷಿ ಇಲಾಖೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ತಿರುಮಲೇಶ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ ಹುಲಿಕುಂಟೆ ಮೂರ್ತಿ ಹಾಗೂ ಜಾನಪದ ಕಲಾವಿದೆ ಮಂಜುಳಾ ಆಲದಹಳ್ಳಿ ಅವರನ್ನು ಸನ್ಮಾನಿಸಲಾಯಿತು.

ಕೃಷಿ ಇಲಾಖೆ ಆಯುಕ್ತ ವೈ.ಎಸ್.ಪಾಟೀಲ, ನಿರ್ದೇಶಕ ಜಿ.ಟಿ.ಪುತ್ರ, ಕೃಷಿ ಇಲಾಖೆಯ ನಿವೃತ್ತ ನಿರ್ದೇಶಕ ಬಿ.ವೈ.ಶ್ರೀನಿವಾಸ್, ನಿವೃತ್ತ ಹೆಚ್ಚುವರಿ ನಿರ್ದೇಶಕ ಬಿ.ಶಿವರಾಜು, ನಿವೃತ್ತ ಸಹಾಯಕ ನಿರ್ದೇಶಕ ಡಿ.ಶಿವಶಂಕರ್ ಹಾಜರಿದ್ದರು.

ಇದೇ ವೇಳೆ ಹವ್ಯಾಸಿ ಕೃಷಿ ರಂಗ ತಂಡದಿಂದ ಬುದ್ಧ, ಬಸವ, ಅಂಬೇಡ್ಕರ್ ಕುರಿತು ಕಿರುನಾಟಕ ಪ್ರದರ್ಶಿಸಿದರು.

‘ಸಮೀಕ್ಷೆ: ಮಾದಿಗ ಎಂದೇ ನಮೂದಿಸಿ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ಮಾದಿಗ, ಹೊಲಯ ಹಾಗೂ ಪರಿಶಿಷ್ಟರಲ್ಲಿರುವ ಇತರ 101 ಜಾತಿಗಳ ದತ್ತಾಂಶ ಸ್ಪಷ್ಟವಾಗಿ ಗೊತ್ತಾಗಬೇಕಾದರೆ ಒಳಮೀಸಲಾತಿಗೆ ಸಂಬಂಧಿಸಿದ ಜಾತಿ ಸಮೀಕ್ಷೆಯಲ್ಲಿ ಮಾದಿಗರು ‘ಮಾದಿಗ’ ಎಂದೇ ನಮೂದಿಸಿ’ ಎಂದು ರಾಜ್ಯ ಬಿಜೆಪಿ ವಕ್ತಾರ ಹಾಗೂ ಮಾದಿಗ ಮುಖಂಡ ವೆಂಕಟೇಶ್.ಎಚ್.ದೊಡ್ಡೇರಿ ತಿಳಿಸಿದರು.

‘ಸುಮಾರು 15 ಲಕ್ಷ ಜನಸಂಖ್ಯೆ ಇರುವ ಮಾದಿಗ, ಹೊಲಯ ಹಾಗೂ ಇತರರನ್ನು ಒಳಗೊಂಡಿರುವ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಇವು ಜಾತಿಗಳಲ್ಲ ಇವುಗಳನ್ನು ನಮೂದಿಸಬೇಡಿ’ ಎಂದು ಶುಕ್ರವಾರ ತಾಲ್ಲೂಕು ಮಾದಿಗ ವಕೀಲರ ವೇದಿಕೆ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಒಳಮೀಸಲಾತಿ ಜಾರಿಗಾಗಿ ರಾಜ್ಯ ಸರ್ಕಾರ ನೇಮಿಸಿರುವ ಎಚ್.ಎನ್.ನಾಗಮೋಹನದಾಸ್ ನೇತೃತ್ವದ ಆಯೋಗ ಜಾತಿ ಸಮೀಕ್ಷೆಯನ್ನು ಆರಂಭಿಸಿದೆ. ಪರಿಶಿಷ್ಟರಲ್ಲಿ ಬಲಾಢ್ಯರು ಮಾತ್ರ ಮೀಸಲಾತಿ ಸೌಲಭ್ಯ ಪಡೆಯುತ್ತಿದ್ದಾರೆ. ಸಣ್ಣ ಸಣ್ಣ ಜಾತಿಗಳು ಪಡೆಯಲು ಸಾಧ್ಯವಾಗಿಲ್ಲ. ಒಳಮೀಸಲಾತಿ ಜಾರಿಯಿಂದ ಸಣ್ಣ ಸಣ್ಣ ಜಾತಿಗಳಿಗೂ ಮೀಸಲಾತಿ ಸೌಲಭ್ಯ ದೊರೆಯುತ್ತದೆ. ಸಮೀಕ್ಷೆಯಲ್ಲಿ 61 ನೇ ಕಾಲಂ ನಲ್ಲಿ ಮಾದಿಗ ಎಂದೆ ಬರೆಸಿ’ ಎಂದರು. ವಕೀಲ ಕನಕರಾಜು, ‘ಮೀಸಲಾತಿ ಸೌಲಭ್ಯ ಪರಿಶಿಷ್ಟರಲ್ಲಿ ಸಮಾನವಾಗಿ ಎಲ್ಲರಿಗೂ ದೊರೆಯಬೇಕಾದರೆ ಸಮೀಕ್ಷೆಯಲ್ಲಿ ‘ಮಾದಿಗ’ ಎಂದೆ ಬರೆಸಿ. ಜಾತಿ ಸಮೀಕ್ಷೆಯಿಂದ ನಮ್ಮ ಭವಿಷ್ಯ ನಿರ್ಧಾರವಾಗಲಿದೆ’ ಎಂದರು.

ವಕೀಲರಾದ ಆಂಜನಮೂರ್ತಿ, ತಾಳೆಕೆರೆ ಗಂಗರಾಜು, ವಿಶ್ವೇಶ್ವರಪುರ ಯಲ್ಲಪ್ಪ, ಯುವರಾಜು, ವಿಜಯಕುಮಾರ್, ತ್ಯಾಮಗೊಂಡ್ಲು ಆಂಜನಮೂರ್ತಿ ಇದ್ದರು.

ವಿದ್ಯಾರ್ಥಿ ಸಹಾಯನಿಧಿ

ಬೆಂಗಳೂರು: ಜೆ.ಪಿ.ನಗರದ ಬ್ರಾಹ್ಮಣ ಸಭಾ ವತಿಯಿಂದ 2025ನೇ ಸಾಲಿನಲ್ಲಿ ನಡೆದ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಧಿ ಸಹಾಯ ನೀಡಲಾಗುವುದು.

ಶೇ 93ಕ್ಕಿಂತ ಹೆಚ್ಚು ಅಂಕ ಪಡೆದಿರುವ ಶಾಲಾ, ಕಾಲೇಜು ವಿದ್ಯಾರ್ಥಿಗಳು ಮೇ 31 ರೊಳಗೆ ಅರ್ಜಿ ಸಲ್ಲಿಸಬೇಕು. ಬೆಂಗಳೂರು ನಗರ ಜಿಲ್ಲೆಯಲ್ಲಿ ವಾಸವಿರಬೇಕು. ಮಾಹಿತಿಗೆ ಎಂ.ಎಸ್.ರಾಮಪ್ರಸಾದ್, ಜೆ.ಪಿ.ನಗರ ಬ್ರಾಹ್ಮಣ ಸಭಾ, 1298, 20ನೇ ಮುಖ್ಯ ರಸ್ತೆ, 9ನೇ ಅಡ್ಡ ರಸ್ತೆ, ಜೆ.ಪಿ.ನಗರ 2ನೇ ಹಂತ, ಬೆಂಗಳೂರು–560078, ಮೊ. 9448617964 ಸಂಪರ್ಕಿಸಬಹುದು.

ಉಗ್ರಾಣ ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧಿಕಾರ
ಭಾರತ ಸರ್ಕಾರ
ಎನ್‌ಸಿಯುಐ ಬಿಲ್ಡಿಂಗ್, 4ನೇ ಮಹಡಿ, 3, ಸಿರಿ ಇನ್‌ಸ್ಟಿಟ್ಯೂಷನಲ್ ಏರಿಯಾ, ಆಗಸ್ಟ್ ಕ್ರಾಂತಿ ಮಾರ್ಗ, ಹೌಜ್ ಖಾಸ್, ನವದೆಹಲಿ–110016, ಫೋನ್: 49536496, 49092978
ಎಫ್.ನಂ.ಎಲ್–11/1/2024–ಐಟಿ ದಿನಾಂಕ: 24.04.2025

ಉಗ್ರಾಣ ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧಿಕಾರದಲ್ಲಿ ಆರ್ಬಿಟ್ರೇಟರ್‌ಗಳ ಎಂಪಾನೆಲ್‌ಮೆಂಟ್‌ಗಾಗಿ ಅರ್ಜಿ ಆಹ್ವಾನ ಪ್ರಕಟಣೆ

ಉಗ್ರಾಣ (ಅಭಿವೃದ್ಧಿ ಮತ್ತು ನಿಯಮಾವಳಿ) ಕಾಯ್ದೆ, 2007ರ ಅಡಿಯಲ್ಲಿ ರೂಪಗೊಂಡಿರುವ ಒಂದು ಶಾಸನಬದ್ಧ ಸಂಸ್ಥೆಯಾಗಿರುವ, ಉಗ್ರಾಣ ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧಿಕಾರ (ಇಲ್ಲಿ ಇನ್ನುಮುಂದೆ ಡಬ್ಲ್ಯುಡಿಆರ್‌ಎ ಎನ್ನಲಾಗುವ) ಎಂಬ ಈ ಸಂಸ್ಥೆಯು ಐದು ವರ್ಷಗಳ ಅವಧಿಗೆ ಆರ್ಬಿಟ್ರೇಟರ್‌ಗಳನ್ನು ಎಂಪಾನೆಲ್ ಮಾಡಿಕೊಳ್ಳಲು ಉದ್ದೇಶಿಸಿರುತ್ತದೆ. ಅರ್ಜಿ ಆಹ್ವಾನ ಕುರಿತಾದ ವಿವರಗಳನ್ನು www.wdra.gov.in ವೆಬ್‌ಸೈಟ್‌ನಲ್ಲಿ ‘ಟೆಂಡರ್ಸ್/ಇಓಟಿ’ ಲಿಂಕ್‌ನಲ್ಲಿ ಪರಿಶೀಲಿಸಬಹುದು.

ಷರತ್ತುಗಳನ್ನು ಪೂರೈಸಬಲ್ಲ ಅರ್ಜಿದಾರರು, ತಮ್ಮ ಅರ್ಜಿಗಳನ್ನು ಅಗತ್ಯ ದಾಖಲಾತಿಗಳ ಸಮೇತ ಒಂದು ಲಕೋಟೆಯಲ್ಲಿ ಮೊಹರು ಹಾಕಿ, ಸದರಿ ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ “ಆರ್ಬಿಟ್ರೇಟರ್ ಎಂಪಾನೆಲ್‌ಮೆಂಟ್‌ಗಾಗಿ ಅರ್ಜಿ” ಎಂದು ನಮೂದಿಸಿ, ಈ ಪ್ರಕಟಣೆಯು ದಿನಪತ್ರಿಕೆಯಲ್ಲಿ ಪ್ರಕಟಗೊಂಡ ದಿನಾಂಕದಿಂದ 30 ದಿನಗಳೊಳಗೆ, ನಿರ್ದೇಶಕರು (ಎ&ಎಫ್), ವೇರ್‌ಹೌಸಿಂಗ್ ಡೆವಲಪ್‌ಮೆಂಟ್ ಅಂಡ್ ರೆಗ್ಯೂಲೇಟರಿ ಅಥಾರಿಟಿ, 4ನೇ ಮಹಡಿ, ಎನ್‌ಸಿಯುಐ ಬಿಲ್ಡಿಂಗ್, 3 ಸಿರಿ ಇನ್‌ಸ್ಟಿಟ್ಯೂಷನಲ್ ಏರಿಯಾ, ಆಗಸ್ಟ್ ಕ್ರಾಂತಿ ಮಾರ್ಗ, ಹೌಜ್ ಖಾಸ್, ನವದೆಹಲಿ 110016 ವಿಳಾಸಕ್ಕೆ ಸಲ್ಲಿಸುವುದು.

ಆಗಾಗ್ಗೆ ನಿಯಮಿತ ಅವಧಿಯಲ್ಲಿ ಡಬ್ಲ್ಯುಡಿಆರ್‌ಎ ವೆಬ್‌ಸೈಟ್ ಭೇಟಿ ನೀಡುತ್ತ, ಇದಕ್ಕೆ ಸಂಬಂಧಿತ ಯಾವುದೇ ಅಪ್‌ಡೇಟ್ / ತಿದ್ದುಪಡಿ ಕುರಿತಂತೆ ಮಾಹಿತಿ ಪಡೆದುಕೊಳ್ಳುತ್ತಿರಬೇಕು. ಯಾವುದೇ ಅರ್ಜಿದಾರರು ಡಬ್ಲ್ಯುಡಿಆರ್‌ಎ'ನಲ್ಲಿ ಎಂಪಾನೆಲ್‌ಮೆಂಟ್‌ಗಾಗಿ ಅರ್ಜಿ ಸಲ್ಲಿಸಿದ ಮಾತ್ರಕ್ಕೆ, ಡಬ್ಲ್ಯುಡಿಆರ್‌ಎ ಪಟ್ಟಿಗೆ ಸೇರ್ಪಡೆಗೊಂಡಿದ್ದೇವೆ ಎಂಬಂತಹ ಯಾವುದೇ ಹಕ್ಕು / ಭರವಸೆಯನ್ನು ಕಲ್ಪಿಸಿಕೊಳ್ಳಬಾರದು.

ಎಂಪಾನೆಲ್‌ಮೆಂಟ್ ಖಚಿತಪಡಿಸುವ ಪತ್ರಗಳನ್ನು ಪ್ರತ್ಯೇಕವಾಗಿ ರವಾನಿಸಲಾಗುತ್ತದೆ.

ಸಹಿ/–
CBC 08109/12/0001/2526 ಸಹಾಯಕ ನಿರ್ದೇಶಕರು (ಎ&ಎಫ್,ಸಿ)

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್
(ಭಾರತ ಸರ್ಕಾರದ ಅಧೀನ ಸಂಸ್ಥೆ–ಅಣುಶಕ್ತಿ ಇಲಾಖೆ)
ಮನವಲಕುರಿಚಿ, ತಮಿಳುನಾಡು, ಇ–ಮೇಲ್: purchase-mk@irel.co.in
ಐಎಸ್‌ಒ 9001, 14001 & 45001 ಪ್ರಮಾಣೀಕೃತ ಘಟಕ, ಫೋನ್: 04651–200402
ಸಿಐಎನ್: U15100MH1950GOI008187
ಉಲ್ಲೇಖ: ಎಂಕೆ/ಪಿ.ಜಾಹೀ/2025–26/01

ಟೆಂಡರ್ ಪ್ರಕಟಣೆ

ಐಆರ್‌ಇಎಲ್ ಮನವಲಕುರಿಚಿ ಇವರಿಂದ ಈ ಕೆಳಗಿನವುಗಳಿಗಾಗಿ ಟೆಂಡರ್ ಆಹ್ವಾನಿಸಲಾಗಿದೆ:

ಟೆಂಡರ್ ನಂ.	ವಿವರ
ಜಿಇಎಂ/2025/ಬಿ/6186960	400–450 ಕೆ.ಜಿ. ಸಾಮರ್ಥ್ಯದ ಸಿಲಿಂಡರ್‌ಗಳಲ್ಲಿ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಭರ್ತಿ ಮಾಡಿ ಪೂರೈಸುವುದು.
ಐಆರ್‌ಇಎಲ್/ಎಂಕೆ/ಇಟಿ/01/2526	ಎಂಕೆ ಪ್ಲಾಂಟ್‌ನಲ್ಲಿನ ವಿವಿಧ ಗೋದಾಮು ಮತ್ತು ಸ್ಟೋರ್ ಯಾರ್ಡ್‌ಗಳ ಪುನರ್ ನಿರ್ಮಾಣ.

ಆಸಕ್ತಿಯುಳ್ಳ ಬಿಡ್‌ದಾರರು https://gem.gov.in, https://www.irelc.co.in ಮತ್ತು ಸಿಪಿಪಿ ಪೋರ್ಟಲ್‌ನಿಂದ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಮೇಲ್ಕಂಡ ಟೆಂಡರ್‌ಗೆ ಸಂಬಂಧಿತ ಯಾವುದೇ ತಿದ್ದುಪಡಿ / ಮಾರ್ಪಾಡು ಸೂಚನೆಗಳನ್ನು ವೆಬ್‌ಸೈಟ್‌ಗಳಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
CBC 48147/12/0002/2526 ಸಿಜಿಎಂ & ಮುಖ್ಯಸ್ಥರು, ಎಂ.ಕೆ

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐ.ಎಫ್.ಟಿ)
ಸಂಖ್ಯೆ:02/2025–26 ದಿನಾಂಕ:06.05.2025

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರಸ್ತೆ/ಕಟ್ಟಡ–ನಿರ್ಮಾಣ, ಕಾಮಗಾರಿಗಳಿಗೆ ಕೆ.ಡಬ್ಲ್ಯು–1,3 & 4 ರಂತೆ ಕಾರ್ಯಪಾಲಕ ಇಂಜಿನಿಯರ್, ಲೋ.ಇ ರವರು ರಾಜ್ಯಪಾಲರ ಪರವಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು https://kppp.karnataka.gov.in ದಿನಾಂಕ: 07.05.2025 ರಿಂದ 14.05.2025 ಮತ್ತು 07.05.2025 ರಿಂದ 22.05.2025 ರವರೆಗೆ ಪಡೆದು ಸಂಜೆ 4.00 ಗಂಟೆಗಳ ಒಳಗಾಗಿ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ ಪೋರ್ಟಲ್ ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:48/ಕೆಎಸ್‌ಎಂಸಿಎ/2025–26

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110.

ಸಂ: ಬಿಐಎಎಪಿಎ/Auction/01/2025–26 ದಿನಾಂಕ: 08–05–2025

ಅಲ್ಪಾವಧಿ ಇ–ಹರಾಜು ಪ್ರಕಟಣೆ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದಲ್ಲಿ ಲಭ್ಯವಿರುವ ಹೆಚ್ಚುವರಿ ನಿಧಿ ರೂ. 20.00 ಕೋಟಿಗಳನ್ನು ಒಂದು ವರ್ಷದ ಅವಧಿಗೆ ಮೀರದಂತೆ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡುವ ಸಲುವಾಗಿ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ TPA/2025-26/AUCTION37 ರಲ್ಲಿ ಇ–ಹರಾಜು ಪ್ರಕ್ರಿಯೆ ಕೈಗೊಳ್ಳಲಾಗಿದ್ದು, ಆಸಕ್ತಿಯುಳ್ಳ ರಾಷ್ಟ್ರೀಕೃತ ಬ್ಯಾಂಕ್‌ನವರು ದಿನಾಂಕ: 08–05–2025 ರಿಂದ ದಿನಾಂಕ: 22–05–2025 ರ ಸಮಯ ಸಂಜೆ 4.00 ಗಂಟೆ ಒಳಗೆ ಇ–ಹರಾಜು ಪೋರ್ಟಲ್‌ನಲ್ಲಿ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಬಹುದು ಹಾಗೂ ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ ವಿಳಾಸ: https://kppp.karnataka.gov.in ನಲ್ಲಿ ಪರಿಶೀಲಿಸಿಕೊಳ್ಳಬಹುದು.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.
ವಾಸಾಸಂಇ/ವಾ.ಪ್ರ/575/ಅಡ್ವಟೋರ್/2025–26

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ.: CAO/CN/BNC/113/2025
ದಿನಾಂಕ: 05.05.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗ: ಹುಬ್ಬಳ್ಳಿ – ಬಳ್ಳಾರಿ ವಿಭಾಗ: ಕೊಪ್ಪಳ ಮತ್ತು ಗಿಣಿಗೇರ ನಿಲ್ದಾಣಗಳ ನಡುವೆ ಕಿಮೀ. 117/600–700 ರಲ್ಲಿ ಎಲ್‌ಸಿ ಸಂ. 66ಕ್ಕೆ ಬದಲಾಗಿ ಕಿಮೀ. 117/000–100 ರಲ್ಲಿ ಸಬ್‌ವೇಯ ನಿರ್ಮಾಣ. (ಉಳಿದಿರುವ ಕಾಮಗಾರಿ) (ಟೆಂಡರು ಉಲ್ಲೇಖ ಸಂ. KBL-LC-66-BAL-R)	ರೂ. 3,84,14,056/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27.05.2025, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾರ್ಯ/ಬೆಂಗಳೂರು ದಂಡು
PUB/96/AAMO/PRB/SWR/2025-26
South Western Railway - SWR | SWRRLY | SWRRLY

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ.: E-GSU-ELE-2025-26-OT-1
ದಿನಾಂಕ: 03.05.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
(ಎ) ಬಂಗಾರಪೇಟೆ ಮತ್ತು ಕೋಲಾರ ನಿಲ್ದಾಣಗಳ ನಡುವೆ ಕಿಮೀ. 147/400–500 ರಲ್ಲಿ ಎಲ್‌ಸಿ ಸಂ. 166 ಕ್ಕೆ ಬದಲಾಗಿ ಪ್ರಸ್ತಾವಿತ ಆರ್‌ಓಬಿ ಯ ನಿರ್ಮಾಣ, (ಬಿ) ಗುಡುಪಲ್ಲಿ – ಕುಪ್ಪಂ ನಿಲ್ದಾಣಗಳ ನಡುವೆ ಕಿಮೀ. 259/900–260/000 ರಲ್ಲಿ ಎಲ್‌ಸಿ ಸಂ. 103 ಕ್ಕೆ ಬದಲಾಗಿ ಸಬ್‌ವೇ ಸೇರಿದಂತೆ ಪ್ರಸ್ತಾವಿತ ಆರ್‌ಯುಬಿ ಯ ನಿರ್ಮಾಣ, ಈ ಮೇಲಿನ ಕಾಮಗಾರಿ ಗಳಿಗೆ ಸಂಬಂಧಿಸಿದಂತೆ ವಿದ್ಯುತ್‌ನ ವ್ಯವಸ್ಥೆ.	ರೂ. 45,50,385.33

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26.05.2025, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ಗತಿ ಶಕ್ತಿ ಘಟಕ/ಬೆಂಗಳೂರು
PUB/94/AAMO/PRB/SWR/2025-26
South Western Railway - SWR | SWRRLY | SWRRLY

ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತ
ನಂ.24, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು – 560024, ಫೋನ್ ನಂ. 8431235867/8431235858
ಇ–ಮೇಲ್ : : ifablimited@gmail.com, Website :-www.ifabindia.org

No.IFAB/2025-26/SE0024/CALL-1 DATE: 07.05.2025

ರಾಷ್ಟ್ರೀಯ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿ RIDF ಯೋಜನೆಯ ಅಡಿಯಲ್ಲಿ ಬೆಂಗಳೂರು ಅಂತರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರದ (IFAB) ಬಲವರ್ಧನೆ ಯೋಜನೆಯ ಯಶಸ್ವಿ ಅನುಷ್ಠಾನ ಮತ್ತು ಪರಿಶೀಲನೆಗಾಗಿ ಯೋಜನೆ ಸಂಯೋಜನಾ ಸಲಹೆಗಾರಿಕೆ (PCC) ಸೇವೆಗಳಿಗೆ ಟೆಂಡರ್ ಆಹ್ವಾನ

ಅಂತರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರ, ಬೆಂಗಳೂರು ಸಂಸ್ಥೆಯನ್ನು RIDF ಯೋಜನೆಯಡಿ ಮೂಲಸೌಕರ್ಯ ಬಲಪಡಿಸಲು, ಯೋಜನೆಯ ಯಶಸ್ವಿ ಅನುಷ್ಠಾನ ಮತ್ತು ಮೇಲ್ವಿಚಾರಣೆಗಾಗಿ ಯೋಜನಾ ಸಂಯೋಜನಾ ಸಲಹಾ (ಪಿಸಿಸಿ) ಸೇವೆಗಳ ಕುರಿತು ಆಸಕ್ತಿಯುಳ್ಳ ಸಂಸ್ಥೆಯಿಂದ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ವಿವರ ಮತ್ತು ದಾಖಲೆಗಳು ದಿ: 07.05.2025 ರಿಂದ ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಮಾತ್ರ ಲಭ್ಯವಿರುತ್ತದೆ. ಟೆಂಡರ್ ಸಲ್ಲಿಸಲು 21.05.2025 ರಂದು ಸಂಜೆ 5.00 ಗಂಟೆಗೆ ಕೊನೆಯ ದಿನಾಂಕ ಆಗಿರುತ್ತದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ವಾ.ಸಾ.ಸಂ.ಇ/ವಾಪ್ರ/589/ಎಸ್‌ಎಸ್‌ಸಿ/2025–26

ಭಾರತ ಸರ್ಕಾರ
ಬಾಹ್ಯಾಕಾಶ ಇಲಾಖೆ
ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ)
ಇಸ್ರೋ ಟೆಲಿಮೆಟ್ರಿ ಟ್ರ್ಯಾಕಿಂಗ್ & ಕಮಾಂಡ್ ನೆಟ್‌ವರ್ಕ್ (ಐಎಸ್‌ಟಿಆರ್‌ಎಸಿ)
ನಿರ್ಮಾಣ & ನಿರ್ವಹಣೆ ಸಮೂಹ
ಪ್ಲಾಟ್ ನಂ. 12 & 13, 3ನೇ ಮುಖ್ಯ ರಸ್ತೆ, 2ನೇ ಫೇಸ್, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು–58, ದೂರವಾಣಿ: 080–28094541/ 4178, ಫ್ಯಾಕ್ಸ್: 080–28094180

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ–ತಿದ್ದುಪಡಿ–I ದಿ: 09.05.2025

ಭಾರತದ ರಾಷ್ಟ್ರಪತಿಯವರ ಪರವಾಗಿ, ಸಮೂಹ ಮುಖ್ಯಸ್ಥರು, ಐಎಸ್‌ಟಿಆರ್‌ಎಸಿ, ಇಸ್ರೋ, ಪೀಣ್ಯ, ಬೆಂಗಳೂರು –58 (ದೂ: 2809 4541/4178) ಇವರು ಎನ್‌ಐಟಿ ಯಲ್ಲಿನ ಈ ಕೆಳಕಂಡ ಕಾಮಗಾರಿಗಾಗಿ ಸೂಕ್ತ ದರ್ಜೆ ಗುತ್ತಿಗೆದಾರರಿಂದ ಆನ್‌ಲೈನ್‌ನಲ್ಲಿ ಮೊಹರಾದ ಐಟಂ ದರದ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಎಸ್‌ಸಿಸಿ, ಎಂಓಎಕ್ಸ್ & ಐಡಿಎಸ್‌ಎನ್, ಐಎಸ್‌ಟಿಆರ್‌ಎಸಿ, ಪೀಣ್ಯ, ಬೆಂಗಳೂರು ಇಲ್ಲಿ ಸ್ಥಾಪಿಸಿರುವ ಸ್ಪ್ಲಿಟ್ ಎ.ಸಿ. ಯೂನಿಟ್‌ಗಳ ಸಮಗ್ರ ವಾರ್ಷಿಕ ನಿರ್ವಹಣೆ ಗುತ್ತಿಗೆ.
ಇ–ಟೆಂಡರ್ ನೋಟಿಸ್	ಐಎಸ್‌ಟಿಆರ್‌ಎಸಿ/ಸಿಎಂಜಿ/ಎಂಎಐಎನ್‌ಟಿ/ಎ.ಸಿ./ಇ–ಟೆಂಡರ್–15/2025–2026 ದಿ: 23.04.2025
ಟೆಂಡರ್‌ಗಿಟ್ಟ ಅಂದಾಜು ಮೊತ್ತ	ರೂ. 5.66 ಲಕ್ಷಗಳು
ಟೆಂಡರ್ ದಸ್ತಾವೇಜುಗಳ ವಿವರಗಳು	ಇ–ಟೆಂಡರ್
ಕಾರ್ಯಾದೇಶ ನೀಡಿದ 15ನೇ ದಿನದಿಂದ ಗಣನೆಗೆ ತೆಗೆದುಕೊಂಡು ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ	12 (ಹನ್ನೆರಡು) ತಿಂಗಳು, ಗುತ್ತಿಗೆಯನ್ನು ಅದೇ ನಿಯಮ ಮತ್ತು ಷರತ್ತುಗಳೊಂದಿಗೆ ಎರಡು ವರ್ಷದ ಅವಧಿಗೆ ವಿಸ್ತರಿಸಬಹುದಾದ ನಿಬಂಧನೆಗೆ ಒಳಪಟ್ಟಿದೆ.
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	26.04.2025 ಯಿಂದ 05.05.2025ರ 11.00 ಗಂಟೆಯವರೆಗೆ ಇರುವುದನ್ನು 17.05.2025ರ 16.00 ಗಂಟೆಯವರೆಗೆ ವಿಸ್ತರಿಸಲಾಗಿದೆ.
ಬಿಡ್ ಸ್ಪಷ್ಟನೆ	27.04.2025 ಯಿಂದ 06.05.2025ರ 16.00 ಗಂಟೆಯವರೆಗೆ. ಇರುವುದನ್ನು 18.05.2025ರ 16.00 ಗಂಟೆಯವರೆಗೆ ವಿಸ್ತರಿಸಲಾಗಿದೆ.
ಬಿಡ್ ಸ್ಪಷ್ಟನೆಗೆ ಪ್ರತ್ಯುತ್ತರ ನೀಡಲು ಕೊನೆಯ ದಿನಾಂಕ ಮತ್ತು ಸಮಯ	07.05.2025 ರಂದು 16.00 ಗಂಟೆಯವರೆಗೆ ಇರುವುದನ್ನು 19.05.2025ರ 16.00 ಗಂಟೆಯವರೆಗೆ ವಿಸ್ತರಿಸಲಾಗಿದೆ.
ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	08.05.2025 ರಂದು 16.00 ಗಂಟೆಯವರೆಗೆ ಇರುವುದನ್ನು 20.05.2025ರ 16.00 ಗಂಟೆಯವರೆಗೆ ವಿಸ್ತರಿಸಲಾಗಿದೆ.
ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	09.05.2025 ರಂದು 11.00 ಗಂಟೆಯ ನಂತರ ಇರುವುದನ್ನು 21.05.2025ರ 16.00 ಗಂಟೆಯನಂತರಕ್ಕೆ ವಿಸ್ತರಿಸಲಾಗಿದೆ.
ಇಎಂಡಿ	ರೂ. 11,320.00

ಆಸಕ್ತಿಯುಳ್ಳ ಟೆಂಡರ್‌ದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗಾಗಿ ವಿವರವಾದ ಟೆಂಡರ್ ಆಹ್ವಾನ ಪ್ರಕಟಣೆಯನ್ನು (ಎನ್‌ಐಟಿ) ವೆಬ್‌ಸೈಟ್: www.isro.gov.in ನಲ್ಲಿ ಪರಿವೀಕ್ಷಿಸಬಹುದು ಮತ್ತು ಟೆಂಡರ್ ದಸ್ತಾವೇಜುಗಳನ್ನು www.tenderwizard.com/ISRO ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ಸಮೂಹ ಮುಖ್ಯಸ್ಥರು, ಸಿಎಂಜಿ,

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.: ಬೆಂಅಪ್ರಾ/ನಯೋಸ/CLU–12/2024–25/520/2025–26 ದಿನಾಂಕ: 08.05.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–Aರ ಅಡಿಯಲ್ಲಿ ರ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಎಂ. ರಾಮಕೃಷ್ಣಪ್ಪ	ಬೆಂಗಳೂರು ಪೂರ್ವ	ಬಿದರಹಳ್ಳಿ	ಕಾಡ ಅಗ್ರಹಾರ	28	5–06	ವ್ಯವಸಾಯ	ವಸತಿ

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು ‘ವ್ಯವಸಾಯ ವಲಯ’ ದಿಂದ ‘ವಸತಿ ಉಪಯೋಗಕ್ಕೆ’ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-09/24–25/545/2025–26 ದಿನಾಂಕ: 09.05.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ರಾಮಕೃಷ್ಣಪ್ಪ ಮತ್ತು ಶಕುಂತಲಮ್ಮ	ಬೆಂಗಳೂರು ಪೂರ್ವ	ಬಿದರಹಳ್ಳಿ	ಕಾಡಅಗ್ರಹಾರ	64	5–00	ವ್ಯವಸಾಯ	ವಾಣಿಜ್ಯ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ ಹಾಗೂ ಪರಿಸರದಲ್ಲಿ ವಾಣಿಜ್ಯ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಾಣಿಜ್ಯ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾಬದ್ಧ ಅಭಿವೃದ್ಧಿ ಕಾರ್ಯಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ ಮತ್ತು ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಯಾಗುವುದು ಹಾಗೂ ಸರ್ಕಾರಕ್ಕೆ ಹೆಚ್ಚಿನ ತೆರಿಗೆಗಳು ಸಂಗ್ರಹವಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ‘ವ್ಯವಸಾಯ ವಲಯ’ ದಿಂದ ‘ವಾಣಿಜ್ಯ ಉಪಯೋಗಕ್ಕೆ’ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಜ್ಞಾನಭಾರತಿ: ಅಭಿವೃದ್ಧಿಗೆ ಅವಕಾಶ ಬೇಡ – ರಾಜ್ಯಪಾಲರಿಗೆ ಮನವಿ

‘ಪಾರಂಪರಿಕ ತಾಣ’ ಆಗಲಿ

● ಆರ್. ಮಂಜುನಾಥ್

ಬೆಂಗಳೂರು: ಜ್ಞಾನಭಾರತಿ ಆವರಣದಲ್ಲಿರುವ ಜೀವ ವೈವಿಧ್ಯ ಕಾಡಿನಲ್ಲಿ ಸಾವಿರಾರು ಮರಗಳನ್ನು ಕಡಿಯುವ ಯಾವುದೇ ರೀತಿಯ ಅಭಿವೃದ್ಧಿಗೆ ಅನುವು ಮಾಡಿಕೊಡದೆ, ‘ಜೈವಿಕ ವೈವಿಧ್ಯ ವನ’ ಅಥವಾ ‘ಪಾರಂಪರಿಕ ತಾಣ’ ಎಂದು ಘೋಷಿಸಲು ರಾಜ್ಯಪಾಲರಿಗೆ ಪರಿಸರ ಕಾರ್ಯಕರ್ತರು ಮನವಿ ಮಾಡಿದ್ದಾರೆ.

ಯುವಿಸಿಇ, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ ಹಾಗೂ ಬಿಬಿಎಂಪಿ ನಿರ್ಮಿಸಲು ಉದ್ದೇಶಿಸಿರುವ ಸ್ಕೈಡೆಕ್ ಸೇರಿ ಯಾವುದೇ ಸಂಸ್ಥೆಗಳಿಗೆ ಯಾವುದೇ ರೀತಿಯ ನಿರ್ಮಾಣಕ್ಕೆ ಜಮೀನು ನೀಡಬಾರದು ಎಂದು ಪರಿಸರ ಕಾರ್ಯಕರ್ತ ಎ.ಎನ್. ಯಲ್ಲಪ್ಪ ರೆಡ್ಡಿ ನೇತೃತ್ವದ ಪರಿಸರ ಕಾರ್ಯಕರ್ತರು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಪತ್ರ ಬರೆದಿದ್ದಾರೆ.

ಯಲ್ಲಪ್ಪ ರೆಡ್ಡಿ ಅವರು ಜ್ಞಾನಭಾರತಿ ಆವರಣವನ್ನು ಜೀವವೈವಿಧ್ಯ ತಾಣವನ್ನಾಗಿಸುವ ಕಾರ್ಯ ಆರಂಭಿಸಿದ್ದರು. ಆ ಕಾರ್ಯವನ್ನು ಪ್ರಾಧ್ಯಾಪಕ ಟಿ.ಜೆ.ರೇಣುಕಾ ಪ್ರಸಾದ್ ಮುಂದುವರಿಸಿಕೊಂಡು ಬಂದಿದ್ದು, 660 ಎಕರೆಯಲ್ಲಿ ನಗರದ ಅತಿದೊಡ್ಡ ‘ಜೀವ ವೈವಿಧ್ಯ ವನ’ ಸೃಷ್ಟಿ ಆಗಿದೆ. ನೂರಾರು ಜಾತಿಯ ಪಕ್ಷಿಗಳು ಹಾಗೂ ದುಂಬಿಗಳು ಆಶ್ರಯ ಪಡೆದಿವೆ. ಪಂಚವಟಿ ಹಾಗೂ ಪಂಚವಲ್ಕಲ, ಹಣ್ಣಿನ ತೋಟ, ಮಿಯಾವಾಕಿ, ಒತ್ತು ಅರಣ್ಯ, ಸಹಸ್ರಾರು ಶ್ರೀಗಂಧದ ಮರಗಳಿಂದ ಹಸಿರು ತುಂಬಿದೆ. ಭಾರತದ ವಿಶ್ವವಿದ್ಯಾಲಯಗಳಲ್ಲಿಯೇ ಅತಿದೊಡ್ಡ ಜೀವವೈವಿಧ್ಯ ವನ ಇದಾಗಿದ್ದು, ಕಟ್ಟೆ, ಕಲ್ಯಾಣಿಗಳಿಂದ ತುಂಬಿ ‘ಬಯೊ-ಜಿಯೊ-ಹೈಡ್ರೊ ಪಾರ್ಕ್’ ಆಗಿದೆ. ಇಂತಹ ವನವನ್ನು ನಾಶಮಾಡಿ ಹಲವು ಸಂಸ್ಥೆಗಳಿಗೆ ಜಮೀನು ನೀಡಿ, ಕಟ್ಟಡ ನಿರ್ಮಿಸಲು ಯೋಜಿಸಲಾಗಿದೆ. ಇದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ಕೋರಲಾಗಿದೆ.

‘ಜ್ಞಾನಭಾರತಿಯಲ್ಲಿ ರೋಟರಿ, ಲಯನ್ಸ್, ಸ್ಕಾಟ್, ಗ್ರೀನ್ಸ್ ಆರ್ಮಿ ಫೋರ್ಸ್, ಮಿಡಿತ ಫೌಂಡೇಷನ್, ಜೀವನ್ಮುಕ್ತಿ, ಅದಮ್ಯ ಚೇತನ, ನೆರವು, ಯೂತ್ ಫಾರ್ ಸೇವಾ ಸೇರಿ ಹಲವು ಸಂಘ ಸಂಸ್ಥೆಗಳು ಜತೆಗೂಡಿ 2 ದಶಕಗಳಲ್ಲಿ ವನ ನಿರ್ಮಾಣವಾಗಿದೆ. ವಾಯುವಿಹಾರಿಗಳಿಗೆ ನೆಚ್ಚಿನ ತಾಣವಾಗಿದೆ. ಅಪರೂಪದ ಮರಗಳನ್ನೂ ಹೊಂದಿರುವ ಇದನ್ನು ಅಭಿವೃದ್ಧಿ ಹೆಸರಿನಲ್ಲಿ ನಾಶಪಡಿಸಲು ಯೋಜಿಸಲಾಗಿದೆ’ ಎಂದು ಜ್ಞಾನಭಾರತಿ ವಾಯುವಿಹಾರಿಗಳ ಸಂಘದ ಕಾರ್ಯದರ್ಶಿ ಎಚ್.ಕೆ. ಗೌಡಯ್ಯ ದೂರಿದರು.

‘ಪರಿಸರಕ್ಕಾಗಿ ನಾವು’ ಸಂಘಟನೆಯ ಅಧ್ಯಕ್ಷ ಎ.ಟಿ. ರಾಮಸ್ವಾಮಿ ನೇತೃತ್ವದಲ್ಲಿ ಜ್ಞಾನಭಾರತಿಯಲ್ಲಿರುವ ವನ ಉಳಿಸಲು ಹೋರಾಟ ನಡೆಸಲಾಗುತ್ತದೆ’ ಎಂದು ಸಂಘಟನೆಯ ಪರಶುರಾಮಗೌಡ ತಿಳಿಸಿದರು.

ಯುವಿಸಿಇಯ ಬೃಹತ್ ಕಟ್ಟಡ ನಿರ್ಮಾಣಕ್ಕಾಗಿ ಗುರುತಿಸಲಾಗಿರುವ ಜ್ಞಾನಭಾರತಿ ಆವರಣದಲ್ಲಿರುವ ಸ್ಥಳ

ಸಿಂಡಿಕೇಟ್ ನಿರ್ಣಯ ಉಲ್ಲಂಘನೆ

‘ಸಿಂಡಿಕೇಟ್ ಸಭೆಯಲ್ಲಿ ಜ್ಞಾನಭಾರತಿ ಜಮೀನನ್ನು ಯಾರಿಗೂ ನೀಡದಂತೆ 2017ರಲ್ಲಿ ನಿರ್ಣಯಿಸಲಾಗಿದೆ. ‘ಜೀವ ವೈವಿಧ್ಯ ವನ’ವನ್ನಾಗಿ ಉಳಿಸಿಕೊಳ್ಳುವಂತೆ ಸರ್ಕಾರವೂ ಆದೇಶಿಸಿದೆ. ಯುಜಿಸಿ ಕೂಡ ‘ನಗರವನ ಬೆಳೆಸಿ ‘ಜೀವವೈವಿಧ್ಯ ಅರಣ್ಯ’ ಮಾಡಲು ಆದೇಶಿಸಿದೆ. ಬಿಬಿಎಂಪಿಯ ಜೀವವೈವಿಧ್ಯ ನಿರ್ವಹಣಾ ಸಮಿತಿ ತನ್ನ ಅಧ್ಯಯನ ವರದಿಯಲ್ಲಿ ‘ವರ್ಷದಲ್ಲಿ ಸುಮಾರು ₹16,500 ಕೋಟಿ ಮೌಲ್ಯದ ಆಮ್ಲಜನಕ ಉತ್ಪಾದನಾ ಕೇಂದ್ರ’ ಎಂದು ಹೇಳಿದೆ. ಇಂತಹ ವನದಲ್ಲಿ ಸುಮಾರು 300 ಎಕರೆಯನ್ನು ಇತರೆ ಸಂಸ್ಥೆಗಳಿಗೆ ನೀಡಲು ಸಚಿವರೊಬ್ಬರು ಸೂಚನೆ ನೀಡಿದ್ದಾರೆ. ಅದರಂತೆ, ವಿಶ್ವವಿದ್ಯಾಲಯದ ಕುಲಪತಿಯವರು, ‘ಒತ್ತಡಕ್ಕೆ ಒಳಗಾಗಿ ಜಮೀನು ನೀಡಲಾಗಿದೆ’ ಎಂದೂ ಹೇಳಿದ್ದಾರೆ. ಯಾವುದೇ ರೀತಿಯ ಒತ್ತಡಕ್ಕೆ ಮಣಿಯದೆ, ಜ್ಞಾನಭಾರತಿಯ ಆವರಣದಲ್ಲಿರುವ ವನವನ್ನು ಉಳಿಸಿಕೊಡಬೇಕು’ ಎಂದು ಪರಿಸರ ಕಾರ್ಯಕರ್ತರು ರಾಜ್ಯಪಾಲರಲ್ಲಿ ಮನವಿ ಮಾಡಿಕೊಂಡಿದ್ದಾರೆ.

‘ವರದಿ ಪರಿಶೀಲಿಸಿ’

‘ವಿಶ್ವವಿದ್ಯಾಲಯದ ಸಿಂಡಿಕೇಟ್‌ನಲ್ಲಿ 2017 ಮತ್ತು 2022ರಲ್ಲಿ ಜ್ಞಾನಭಾರತಿ ಆವರಣದಲ್ಲಿರುವ ಬಯೊಪಾರ್ಕ್ ಅನ್ನು ಸಂರಕ್ಷಿಸಲು ನಿರ್ಣಯ ಕೈಗೊಳ್ಳಲಾಗಿದೆ. ಎಲ್ಲ ರೀತಿಯ ನಿರ್ಮಾಣ ಚಟುವಟಿಕೆಗಳನ್ನು ನಿಷೇಧಿಸಬೇಕು ಎಂದು ನ್ಯಾಕ್ ಹೇಳಿದೆ. ಹೀಗಾಗಿ ಜ್ಞಾನಭಾರತಿ ಆವರಣವನ್ನು ಜೀವವೈವಿಧ್ಯ ಕಾಯ್ದೆ– 2002ರಂತೆ ‘ಪಾರಂಪರಿಕ ತಾಣ’ ಎಂದು ಘೋಷಿಸಬೇಕು’ ಎಂದು ಬೆಂಗಳೂರು ವಿ.ವಿ ರಚಿಸಿದ್ದ ಸಮಿತಿ ವರದಿ ನೀಡಿದೆ.

‘ಜ್ಞಾನಭಾರತಿ ವಾಯುವಿಹಾರಿಗಳ ಸಂಘ ಸಲ್ಲಿಸಿದ್ದ ದೂರಿನ ಮೇರೆಗೆ, ರಾಜ್ಯಪಾಲರಿಗೆ ವರದಿ ಸಲ್ಲಿಸಲು ಕುಲಸಚಿವರ (ಮೌಲ್ಯಮಾಪನ) ಅಧ್ಯಕ್ಷತೆಯಲ್ಲಿ 2024ರ ಸೆ.26ರಂದು ಸಮಿತಿ ರಚಿಸಲಾಗಿತ್ತು. ಈ ಸಮಿತಿ ವರದಿ ನೀಡಿದೆ. ರಾಜ್ಯಪಾಲರು ಈ ವರದಿಯನ್ನು ತರಿಸಿಕೊಂಡು, ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಪ್ರಾಧ್ಯಾಪಕ ಡಿ.ಜೆ. ರೇಣುಕಾಪ್ರಸಾದ್ ಒತ್ತಾಯಿಸಿದರು.

ವಿಧವೆ, ವಿಚ್ಛೇದಿತ ಮಹಿಳೆಯರಿಗೆ ವಂಚನೆ ಆರೋಪಿ ಬಂಧನ

ಚಿಕ್ಕಬಳ್ಳಾಪುರ: ವಿಧವೆಯೊಬ್ಬರನ್ನು ವಿವಾಹ ಆಗುವುದಾಗಿ ನಂಬಿಸಿ ₹2.80 ಲಕ್ಷ ವಂಚಿಸಿದ ಆರೋಪದ ಮೇಲೆ ಬೆಂಗಳೂರಿನ ಮಹದೇವಪುರದ ಇ. ಸುರೇಶ್ ನಾಯ್ಡು (61) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಡೈವರ್ಸಿ ಮ್ಯಾಟ್ರಿಮೊನಿಯಾ ಆ್ಯಪ್‌ನಲ್ಲಿ ಮಹಿಳೆ ತಮ್ಮ ಮಾಹಿತಿ ದಾಖಲಿಸಿದ್ದರು. ಅವರನ್ನು ಸುರೇಶ್ ಪರಿಚಯಿಸಿಕೊಂಡಿದ್ದರು. ಬಳಿಕ ನಿವೇಶನ ಖರೀದಿಗೆ ₹2.80ಲಕ್ಷ ಪಡೆದು ವಂಚಿಸಿದ್ದ.

ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. **ಸಾಲದ ಅನುಮೋದನೆಯು ಹಣಕಾಸುದಾರರ ಏಕಪಕ್ಷೀಯ ವಿವೇಚನೆಗೆ ಒಳಪಟ್ಟಿರುತ್ತದೆ ಮತ್ತು ಹೆಚ್ಚುವರಿ ಕಾಗದಪತ್ರ ಅಗತ್ಯವಿರಬಹುದು. **ಬಡ್ಡಿ ದರಗಳು, ಡೌನ್ ಪೇಮೆಂಟ್ ಮತ್ತು ಅವಧಿ ಆಯ್ಕೆಗಳು ಅರ್ಜಿದಾರರ ಸಾಲ ಪ್ರೊಫೈಲ್ ಅನ್ನು ಸಾಲದಾತರು ವಿಶ್ಲೇಷಣೆ ಮಾಡುವುದನ್ನು ಆಧರಿಸಿದೆ. **ಕೊಡುಗೆಗಳು/ವೈಶಿಷ್ಟ್ಯಗಳನ್ನು ಮೊದಲೇ ಸೂಚನೆ ನೀಡದೇ ಯಾವುದೇ ಸಮಯದಲ್ಲಿ ಮಾರ್ಪಾಡು ಮಾಡಬಹುದು ಅಥವಾ ಹಿಂಪಡೆಯಬಹುದು. #ಪೈನ್ ಲ್ಯಾಬ್ಸ್ ಮಶಿನ್‌ಗಳ ಮೂಲಕ IDFC FIRST ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿಕೊಂಡು ಮಾಡಿದ EMI ವಹಿವಾಟುಗಳಿಗೆ ಆಯ್ದ ಮಾಡೆಲ್‌ಗಳ ಮೇಲೆ ಕ್ಯಾಶ್‌ಬ್ಯಾಕ್ ಆಫರ್ ಲಭ್ಯವಿದೆ. #ಗ್ರಾಹಕರು 5% ಇನ್‌ಸ್ಟಂಟ್ ಕ್ಯಾಶ್‌ಬ್ಯಾಕ್ ಅನ್ನು ಗರಿಷ್ಠ ₹5000 ವರೆಗೆ ಪಡೆಯಬಹುದು. #ಕೊಡುಗೆ ಅವಧಿಯಲ್ಲಿ ಪ್ರತಿ ಕಾರ್ಡ್/ಆರ್ಡರ್ ಗೆ ಒಂದು ವಹಿವಾಟಿಗೆ ಮಾನ್ಯವಾಗಿದೆ. #ಸ್ಕೀಮ್ ಆಯ್ದ ಔಟ್‌ಲೆಟ್‌ಗಳಲ್ಲಿ ಮಾತ್ರ ಲಭ್ಯವಿದೆ. *3 ವರ್ಷಗಳ ಉಚಿತ ಸರ್ವೀಸ್ ಮೇಂಟೆನೆನ್ಸ್ ಪ್ಯಾಕೇಜ್ ಕೇವಲ Activa 110 ಮತ್ತು Activa 125 ಡಿಲಕ್ಸ್ ವೇರಿಯಂಟ್‌ನಲ್ಲಿ ಮಾತ್ರ ಲಭ್ಯವಿದೆ. *₹5500 ಮೌಲ್ಯದ 3 ವರ್ಷದ ಉಚಿತ ಸರ್ವೀಸ್ ಮೇಂಟೆನೆನ್ಸ್ ಪ್ಯಾಕೇಜ್‌ನ ವಿವರವಾದ ನಿಯಮ ಮತ್ತು ಷರತ್ತುಗಳ ಬಗ್ಗೆ ದಯವಿಟ್ಟು ಅಧಿಕೃತ ಮುಖ್ಯ ಡೀಲರ್‌ಗಳು ಮತ್ತು ಸಹ ಡೀಲರುಗಳನ್ನು ಸಂಪರ್ಕಿಸಿ. *ಈ ಮೇಲಿನ ಸ್ಕೀಮ್ ಅನ್ನು ಮೊದಲೇ ಸೂಚನೆ ನೀಡದೇ ಯಾವುದೇ ಸಮಯದಲ್ಲಿ ಹಿಂಪಡೆಯಬಹುದು. ಎಲ್ಲ ಕೊಡುಗೆಗಳು ಮೇ 31, 2025 ರವರೆಗೆ ಮಾನ್ಯವಾಗಿದೆ. ^ಸೀಮಿತ ಅವಧಿಯ ವಿಶೇಷ ದರವು ಕರ್ನಾಟಕ ರಾಜ್ಯದಲ್ಲಿ Activa 110cc ಸ್ಟಾಂಡರ್ಡ್ OBD2B ವೇರಿಯಂಟ್‌ಗಾಗಿದೆ. ಸೀಮಿತ ಅವಧಿಯ ವಿಶೇಷ ಬೆಲೆಯ ಬಗ್ಗೆ ವಿವರಗಳಿಗಾಗಿ, ಅಧಿಕೃತ ಮುಖ್ಯ ಡೀಲರ್‌ಗಳು ಮತ್ತು ಸಹ ಡೀಲರ್‌ಗಳನ್ನು ಸಂಪರ್ಕಿಸಿ. ಕ್ರಿಯೇಟಿವ್‌ನಲ್ಲಿ ತೋರಿಸಿದ ವೈಶಿಷ್ಟ್ಯಗಳು ಎಲ್ಲ ವೇರಿಯಂಟ್‌ಗಳಲ್ಲಿ ಲಭ್ಯವಿಲ್ಲದಿರಬಹುದು. ಚಿತ್ರದಲ್ಲಿ ತೋರಿಸಿದ ಉತ್ಪನ್ನಗಳು ಮಾರ್ಕೆಟ್‌ನಲ್ಲಿನ ಅಸಲಿ ಉತ್ಪನ್ನಕ್ಕಿಂತ ವಿಭಿನ್ನವಾಗಿರಬಹುದು. ಚಿತ್ರದಲ್ಲಿ ತೋರಿಸಿದ ಅಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಲ್ಲ.

Honda Motorcycle & Scooter India Pvt. Ltd., Registered Office: Plot No. 1 , Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda.hmsi.in

ಅನಧಿಕೃತ ಶೆಡ್‌ಗಳನ್ನು ಜೆಸಿಬಿ ಯಂತ್ರದಿಂದ ತೆರವುಗೊಳಿಸಲಾಯಿತು

3 ಕೋಟಿ ಮೌಲ್ಯದ ಬಿಡಿಎ ಸ್ವತ್ತು ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕಾರ್ಯಾಚರಣೆ ನಡೆಸಿ, ಆಸ್ಟಿನ್ ಟೌನ್, ಬಜಾಜ್ ಸ್ಟ್ರೀಟ್ ಮತ್ತು ನೀಲಸಂದ್ರದಲ್ಲಿ ಒತ್ತುವರಿ ಆಗಿದ್ದ ₹3 ಕೋಟಿ ಮೌಲ್ಯದ ಆಸ್ತಿ ವಶಪಡಿಸಿ-ಕೊಂಡಿದೆ.

ಆಸ್ಟಿನ್ ಟೌನ್, ಬಜಾಜ್ ಸ್ಟ್ರೀಟ್, ನೀಲಸಂದ್ರ ಮಳಿಗೆ ಸಂಖ್ಯೆ 31/1 ಮತ್ತು 42ರಲ್ಲಿ ನಿರ್ಮಾಣವಾಗಿದ್ದ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಿ, ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಪ್ರದೇಶವನ್ನು ಪ್ರಾಧಿಕಾರವು ವಶಪಡಿಸಿ-ಕೊಂಡಿತು.

ಪ್ರಾಧಿಕಾರಕ್ಕೆ ಸೇರಿದ ಜಾಗವನ್ನು ಅತಿಕ್ರಮಿಸಿಕೊಂಡು, ಶೆಡ್ ಹಾಗೂ ಮಳಿಗೆಗಳನ್ನು ನಿರ್ಮಿಸಿಕೊಂಡು ಕೆಲವರು ವ್ಯಾಪಾರ ಮಾಡುತ್ತಿದ್ದರು. ಶೆಡ್ ತೆರವು ಗೊಳಿಸುವಂತೆ ಒತ್ತುವರಿ ದಾರರಿಗೆ ನೋಟಿಸ್ ನೀಡಲಾಗಿತ್ತು. ಬಳಿಕ ಜೆಸಿಬಿ ಮೂಲಕ ಕಾರ್ಯಾಚರಣೆ ನಡೆಸಿ ತೆರವುಗೊಳಿಸಲಾಯಿತು ಎಂದು ಬಿಡಿಎ ಎಂಜಿನಿಯರ್ ತಿಳಿಸಿದರು.

ಬಿಡಿಎ ಕಾರ್ಯನಿರತ ಪಡೆಯ ಡಿವೈಎಸ್‌ಪಿ, ಪೂರ್ವ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಒಳಗೊಂಡಂತೆ ಸ್ಥಳೀಯ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಕಾರ್ಯಾಚರಣೆ ನೆರವೇರಿಸಲಾಯಿತು.

ಪಾದಚಾರಿ ಮಾರ್ಗ ಪರಿಶೀಲಿಸಿದ ಬಿಬಿಎಂಪಿ ಮುಖ್ಯ ಆಯುಕ್ತರ ಸೂಚನೆ

‘ಎಲ್ಲಾ ಕಡೆ ಒಂದೇ ರೀತಿ ಇರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಿಕರಿಗೆ ನಡೆಯಲು ಅನುಕೂಲಕರ ಆಗುವಂತೆ ಏಕರೂಪದಲ್ಲಿ ಪಾದಚಾರಿ ಮಾರ್ಗದ ಅಗಲವನ್ನು ಕಾಯ್ದುಕೊಳ್ಳುವಂತೆ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರು ಸೂಚಿಸಿದರು.

ಲಾಲ್‌ಬಾಗ್ ಪೂರ್ವದ್ವಾರದಿಂದ ಡಬಲ್ ರೋಡ್, ಸಿದ್ದಾಪುರ ವೃತ್ತ, ಅಶೋಕ್ ಪಿಲ್ಲರ್ ವೃತ್ತ, ಜಯನಗರ ಇಂದಿರಾ ಕ್ಯಾಂಟೀನ್‌ವರೆಗೆ 1.9 ಕಿ.ಮೀ ದೂರವನ್ನು ಶುಕ್ರವಾರ ಮುಂಜಾನೆ 6.20ರಿಂದ 7.45ರವರೆಗೆ ನಡಿಗೆ ಮೂಲಕ ಕ್ರಮಿಸಿದ ಮುಖ್ಯ ಆಯುಕ್ತರು, ಪಾದಚಾರಿ ಮಾರ್ಗದಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಆದೇಶಿಸಿದರು.

ಲಾಲ್‌ಬಾಗ್ ಪೂರ್ವ ದ್ವಾರದಿಂದ ಪರಿಶೀಲನೆ ಪ್ರಾರಂಭಿಸಿ, ಹಾಪ್ ಕಾಮ್ಸ್ ಬಳಿ ಒತ್ತುವರಿಯನ್ನು ತೆರವುಗೊಳಿಸಲು ಸೂಚಿಸಿದರು. ಬಸ್ ತಂಗುದಾಣ ಬಳಿ ಸ್ವಚ್ಛತೆ ಕಾಪಾಡಲು ತಿಳಿಸಿದರು. ಪಾದಚಾರಿ ಮಾರ್ಗದಲ್ಲಿರುವ ಮೂರು ವಿದ್ಯುತ್ ಕಂಬಗಳನ್ನು ತೆರವುಗೊಳಿಸಲು ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.

ಪಾದಚಾರಿ ಮಾರ್ಗದಲ್ಲಿ ವಿದ್ಯುತ್ ಪರಿವರ್ತಕ ಅಳವಡಿಸಿರುವುದರಿಂದ ನಾಗರಿಕರು ಓಡಾಡಲು ಸಾಧ್ಯವಾಗುತ್ತಿಲ್ಲ. ಸಾರ್ವಜನಿಕರಿಗೆ ತೊಂದರೆಯಾಗದಂತೆ ಅಳವಡಿಸುವಂತೆ ಬೆಸ್ಕಾಂ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಬೇಕು ಎಂದು ಬಿಬಿಎಂಪಿ ಅಧಿಕಾರಿಗಳಿಗೆ ತಿಳಿಸಿದರು.

ಸಿದ್ದಾಪುರ ವೃತ್ತದ ಕೊಳೆಗೇರಿಯಲ್ಲಿರುವ ಶೌಚಾಲಯ ನಿರ್ವಹಣೆಯಾಗಬೇಕು, ಬಸ್ ತಂಗುದಾಣಗಳ ಬಳಿ ಕಸದ ಬುಟ್ಟಿಗಳನ್ನು ಇರಿಸಬೇಕು.

ಲಾಲ್‌ಬಾಗ್ ಬಳಿ ಪಾದಚಾರಿ ಮಾರ್ಗವನ್ನು ವಿಸ್ತರಣೆ ಮಾಡಲು ಬಿಬಿಎಂಪಿಯ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು

ಪಾದಚಾರಿ ಮಾರ್ಗದಲ್ಲಿ ಸಸಿ ನೆಟ್ಟು ಪೋಷಿಸಬೇಕು ಎಂದು ಸೂಚನೆ ನೀಡಿದರು.

ಅಶೋಕ ಪಿಲ್ಲರ್ ಜಂಕ್ಷನ್ ಬಳಿ ಪಾದಚಾರಿ ಮಾರ್ಗದಲ್ಲಿ ಅನಾಥ ಆಟೊ ಇದ್ದು, ಅದನ್ನು ತೆರವುಗೊಳಿಸಲು ಸೂಚನೆ ನೀಡಿದರು. ಆ ಬಳಿಕ ಶಿವಳ್ಳಿ ಹೋಟೆಲ್ ಬಳಿ ಕಟ್ಟಡವೊಂದಕ್ಕೆ ವಿದ್ಯುತ್ ಪರಿವರ್ತಕದ ಸಂಪರ್ಕ ಕಲ್ಪಿಸಿದ್ದು, ಅದರಿಂದ ಪಾದಚಾರಿ ಮಾರ್ಗವು ಸಂಪೂರ್ಣ ಹಾಳಾಗಿದೆ. ಈ ಸಂಬಂಧ ಕಟ್ಟಡ ಮಾಲೀಕರಿಗೆ ನೋಟಿಸ್ ನೀಡಿ, ದುರಸ್ತಿ ಕಾರ್ಯಕ್ಕೆ ತಗಲುವ ವೆಚ್ಚ ವಸೂಲಿ ಮಾಡುವುದರ ಜೊತೆಗೆ ದಂಡ ವಿಧಿಸಬೇಕು ಎಂದು ತಾಕೀತು ಮಾಡಿದರು. ಲಾಲ್‌ಬಾಗ್ ಸುತ್ತಲೂ ಸ್ವಚ್ಛತೆ ಕಾಪಾಡಲು ತೋಟಗಾರಿಕಾ ಇಲಾಖೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಆ ನಂತರ ತಾತ್ಕಾಲಿಕವಾಗಿ ಗೃಹ ರಕ್ಷಕ ಸಿಬ್ಬಂದಿ ನಿಯೋಜಿಸಿ ಎಲ್ಲಿಯೂ ಸ್ವಚ್ಛತೆ ಹಾಳಾಗದಂತೆ ನೋಡಿಕೊಳ್ಳಬೇಕು ಎಂದರು.

ಮನೆ-ಮನೆಯಿಂದ ಆಟೊ ಟಿಪ್ಪರ್ ಮೂಲಕ ಸಂಗ್ರಹಿಸುವ ತ್ಯಾಜ್ಯವನ್ನು ಕಾಂಪ್ಯಾಕ್ಟರ್‌ಗಳಿಗೆ ರವಾನಿಸುವ ಟ್ರಾನ್ಸ್‌ಫರ್ ಪಾಯಿಂಟ್‌ಗಳು ಬಹುತೇಕ ರಸ್ತೆ ಬದಿಯೇ ಇವೆ. ಇದರಿಂದ ರಸ್ತೆಗಳು ಹಾಳಾಗಲಿದ್ದು, ಸ್ವಚ್ಛತೆ ಇರುವುದಿಲ್ಲ. ಹೀಗಾಗಿ ಬೇರೆ ಸ್ಥಳಗಳನ್ನು ಗುರುತಿಸಬೇಕು ಎಂದು ಸೂಚಿಸಿದರು.

₹1 ಲಕ್ಷ ಲಂಚ ಪಡೆಯುತ್ತಿದ್ದ ಬಿಬಿಎಂಪಿ ಎಇ ಬಂಧನ

ಬೆಂಗಳೂರು: ಮಳೆ ನೀರಿನ ಕಾಲುವೆಗೆ ಹಾನಿ ಮಾಡಿದ ಸಂಬಂಧ ನೀಡಲಾಗಿದ್ದ ನೋಟಿಸ್ ರದ್ದುಪಡಿಸಲು ₹1 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಬಿಬಿಎಂಪಿಯ ಸಹಾಯಕ ಎಂಜಿನಿಯರ್ ನರಸಿಂಹಮೂರ್ತಿ ನಾಯ್ಕ್ ಮತ್ತು ಭರತ್ ಎಂಬ ವ್ಯಕ್ತಿಯನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ನಗರದ ನಾಗದೇವನಹಳ್ಳಿ ನಿವಾಸಿಗಳಾದ ಸುನಿಲ್ ಪಟೇಲ್ ಅವರು ಬಿಬಿಎಂಪಿಯ ರಾಜರಾಜೇಶ್ವರಿ ನಗರ ವಲಯದ ಹೇರೋಹಳ್ಳಿ ಉಪ ವಿಭಾಗದ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಿಸುತ್ತಿದ್ದು, ನಿವೇಶನದ ಪಕ್ಕದಲ್ಲಿರುವ ಮಳೆ ನೀರಿನ ಕಾಲುವೆಗೆ ಹಾನಿಯಾಗಿದೆ.

ಈ ಸಂಬಂಧ ಸಹಾಯಕ ಎಂಜಿನಿಯರ್ ನರಸಿಂಹಮೂರ್ತಿ ನಾಯ್ಕ್ ಅವರು ಸುನಿಲ್ ಅವರಿಗೆ ನೋಟಿಸ್ ನೀಡಿದ್ದರು.

‘ಕಾಲುವೆಗೆ ಆಗಿರುವ ಹಾನಿಯನ್ನು ಸರಿಪಡಿಸುತ್ತವೆ ಎಂದು ಸುನಿಲ್ ಅವರು ನರಸಿಂಹಮೂರ್ತಿ ಅವರನ್ನು ಭೇಟಿ ಮಾಡಿ ತಿಳಿಸಿದ್ದರು. ನೋಟಿಸ್ ರದ್ದುಪಡಿಸಲು ₹10 ಲಕ್ಷ ಲಂಚ ನೀಡಬೇಕು ಎಂದು ನರಸಿಂಹಮೂರ್ತಿ ಅವರು ಬೇಡಿಕೆ ಇಟ್ಟಿದ್ದರು. ಮಾತುಕತೆಯ ನಂತರ ₹1 ಲಕ್ಷ ಲಂಚಕ್ಕೆ ಒಪ್ಪಿಕೊಂಡಿದ್ದರು’ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

‘ಈ ಬಗ್ಗೆ ಸುನಿಲ್ ಅವರು ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಎಸ್‌ಪಿ ವಂಶಿಕೃಷ್ಣ ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಲಾಗಿತ್ತು. ಅದರಂತೆ ಸುನಿಲ್ ಅವರು ಹೇರೋಹಳ್ಳಿಯ ಬಿಬಿಎಂಪಿ ಕಚೇರಿಯ ಬಳಿ ಹಣ ನೀಡಲು ತೆರಳಿದ್ದರು. ನರಸಿಂಹಮೂರ್ತಿ ಅವರು ಭರತ್ ಎಂಬ ವ್ಯಕ್ತಿ ಯೊಂದಿಗೆ ಅಲ್ಲಿಗೆ ಬಂದಿದ್ದರು. ಅವರು ಹಣ ಪಡೆದುಕೊಳ್ಳುವ ವೇಳೆ ದಾಳಿ ನಡೆಸಿ, ಬಂಧಿಸಲಾಯಿತು’ ಎಂದು ಮಾಹಿತಿ ನೀಡಿದೆ.

‘ಇಬ್ಬರನ್ನೂ ಬಂಧಿಸಿದ್ದು, ಹಣ ವಶಕ್ಕೆ ಪಡೆಯಲಾಗಿದೆ. ತನಿಖೆ ಮುಂದುವರೆಸಲಾಗಿದೆ’ ಎಂದು ತಿಳಿಸಿದೆ.

‘ಪರಿಹಾರ ಧನಕ್ಕೆ ಜಿಎಸ್‌ಟಿ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಭಿವೃದ್ಧಿ ಯೋಜನೆ ಗಳಿಗೆ ತಮ್ಮ ಜಮೀನು ಕಳೆದುಕೊಳ್ಳುವ ರೈತರಿಗೆ ಪರಿಹಾರ ರೂಪದಲ್ಲಿ ನೀಡಲಾಗುವ ಮೊತ್ತಕ್ಕೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಿಧಿಸುವಂತಿಲ್ಲ’ ಎಂದು ಹೈಕೋರ್ಟ್ ಆದೇಶಿಸಿದೆ.

ವಾಣಿಜ್ಯ ತೆರಿಗೆ ಇಲಾಖೆ ನೀಡಿದ್ದ ಷೋಕಾಸ್ ನೋಟಿಸ್‌ಗಳನ್ನು ಪ್ರಶ್ನಿಸಿ ನಗರದ ಆರ್.ಆಶಾ ಮತ್ತಿತರರು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಪ್ರಕರಣವೇನು?: ಬೆಂಗಳೂರು ಮೆಟ್ರೊ ರೈಲು ಯೋಜನೆಗಾಗಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಬೆಂಗಳೂರಿನ ಸುತ್ತಮುತ್ತಲ ಪ್ರದೇಶದಲ್ಲಿ ಜಮೀನು ಸ್ವಾಧೀನ ಮಾಡಿತ್ತು. ರೈತರು ಇದಕ್ಕೆ ಪರಿಹಾರ ಪಡೆದಿದ್ದರು. ‘ಈ ಪರಿಹಾರ ಧನಕ್ಕೆ ಜಿಎಸ್‌ಟಿ ಪಾವತಿಸಬೇಕು’ ಎಂದು ವಾಣಿಜ್ಯ ತೆರಿಗೆ ಇಲಾಖೆ ರೈತರಿಗೆ ಷೋಕಾಸ್ ನೋಟಿಸ್ ನೀಡಿತ್ತು.

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಿ.ಕೆ. ಶಿವಕುಮಾರ್ ಮತ್ತು ನಿರ್ಮಲಾನಂದನಾಥ ಸ್ವಾಮೀಜಿ ಅವರು ಜಾನಪದ ಕಲಾವಿದೆ ಮಂಜಮ್ಮ ಜೋಗತಿ ಅವರಿಗೆ ಜೆ.ಸಿ. ಸುರಾನ ಪ್ರಶಸ್ತಿ ನೀಡಿ ಗೌರವಿಸಿದರು

ಸಾಧಕರಿಗೆ ಸುರಾನ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪರಿವರ್ತನೆಗೆ ಮೂಲಸೌಕರ್ಯ ಮತ್ತು ಮಾನವ ಸಂಪನ್ಮೂಲಗಳ ಬಲವೇ ಕಾರಣ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುರಾನ ಸಮೂಹ ಶಿಕ್ಷಣ ಸಂಸ್ಥೆಯ ಪೀಣ್ಯ ಕ್ಯಾಂಪಸ್‌ನಲ್ಲಿ ಆಯೋಜಿಸಿದ್ದ ‘ಬದಲಾವಣೆಗಾಗಿ ಒಗ್ಗಟ್ಟು: ಶಿಕ್ಷಣ ಮತ್ತು ಕೈಗಾರಿಕೆ - ಸುಸ್ಥಿರ ಅಭಿವೃದ್ಧಿಗೆ ಚಾಲನೆ’ ಎಂಬ ವಿಷಯದ ಜಿಸಿಎಸ್ ಕಾನ್‌ಕ್ಲೇವ್ 2025ರಲ್ಲಿ ಸುರಾನ ಸಂಸ್ಥೆಯ ಜಿ.ಸಿ. ಸುರಾನ ಜೀವಮಾನ ಸಾಧನೆ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

‘ನನಗೆ ದೊರೆತಿರುವ ಶ್ರೇಷ್ಠ ಪ್ರಶಸ್ತಿ ಎಂದರೆ ಜನರ ಪ್ರೀತಿ. ಹುಟ್ಟಿನಿಂದ ನಾನು ಕೃಷಿಕ, ಉತ್ಸಾಹದಿಂದ ರಾಜಕಾರಣಿ ಮತ್ತು ಆಯ್ಕೆಯಿಂದ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೇನೆ. ಶಿಕ್ಷಣ ನನಗೆ ಫ್ಯಾಷನ್. ಕರ್ನಾಟಕ ಮಾನವ ಸಂಪನ್ಮೂಲಗಳ ಕೇಂದ್ರವಾಗಿದೆ. ಮೂರು ದಶಕದ ಹಿಂದೆ, ಜಾಗತಿಕ ನಾಯಕರು ಇತರ ಭಾರತೀಯ ನಗರಗಳಿಗೆ ಭೇಟಿ ನೀಡಿ ಬೆಂಗಳೂರನ್ನು ಆಯ್ಕೆಯಾಗಿ ಇಟ್ಟುಕೊಳ್ಳುತ್ತಿದ್ದರು. ಆದರೆ, ಇಂದು ಅದು ಬದಲಾಗಿದೆ. ಎಲ್ಲ ಜಾಗತಿಕ ನಾಯಕರು ಮೊದಲು ಬೆಂಗಳೂರಿಗೆ ಬರುತ್ತಿದ್ದಾರೆ’ ಎಂದರು.

ರಾಜ್ಯದಲ್ಲಿ 70 ವೈದ್ಯಕೀಯ ಕಾಲೇಜುಗಳಿವೆ. ನರ್ಸಿಂಗ್ ಸೇರಿದಂತೆ ಎಲ್ಲಾ ವಿಷಯಗಳಲ್ಲಿ ನುರಿತ ಮಾನವ ಶಕ್ತಿಯನ್ನು ರೂಪಿಸುತ್ತಿದ್ದೇವೆ ಎಂದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ‘ಶಿಕ್ಷಣ ಜ್ಞಾನ ನೀಡಿದರೆ, ಕೈಗಾರಿಕಾ ವಲಯ ಉದ್ಯೋಗ ನೀಡುತ್ತದೆ. ಈ ಎರಡೂ ವಲಯಗಳು ಸೂಕ್ತ ರೀತಿಯಲ್ಲಿ ಸಾಗಿದಾಗ ಬಹುದೊಡ್ಡ ಬದಲಾವಣೆ ಸಾಧ್ಯವಾಗಲಿದೆ’ ಎಂದು ಹೇಳಿದರು.

ನಿರ್ಮಲಾನಂದನಾಥ ಸ್ವಾಮೀಜಿ ಸಮ್ಮುಖದಲ್ಲಿ ಮಂಜಮ್ಮ ಜೋಗತಿ (ಜಾನಪದ ಅಕಾಡೆಮಿ), ಕೆ. ಗಾಯತ್ರಿ ರೆಡ್ಡಿ (ಎಂಜಿಐಆರ್‌ಇಡಿ), ಕಮಲ್ ಸಾಗರ್ (ಪರಿಸರ), ಜವಾಹರ್ ಗೋವಿಂದರಾಜ್ (ಪೆಂಟಗನ್ ಗಾರ್ಮೆಂಟ್ಸ್), ಕಾನ್ರಾಡ್ ಅಟಾರ್ಡ್ (ಮಾಲ್ಟಾ ವಿಶ್ವವಿದ್ಯಾಲಯ), ತರುಣ್ ಮೆಹ್ತಾ (ಅಥರ್ ಎನರ್ಜಿ) ಮತ್ತು ಆದಿತ್ಯ ಸಿರೋಯಾ (ರಿಪರ್ಪಸ್ ಗ್ಲೋಬಲ್) ಅವರಿಗೆ ಜಿ.ಸಿ. ಸುರಾನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸೇಂಟ್ ಜಾನ್ಸ್ ರಾಷ್ಟ್ರೀಯ ಆರೋಗ್ಯ ವಿಜ್ಞಾನ ಅಕಾಡೆಮಿಯ ನಿರ್ದೇಶಕ ಫಾದರ್ ಜೇಸುದಾಸ್ ರಾಜಮಾಣಿಕ್ಕಂ, ಸುರಾನ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪಕ ಟ್ರಸ್ಟಿ ಅರ್ಚನಾ ಸುರಾನ ಮತ್ತು ಮೈಕ್ರೊ ಲ್ಯಾಬ್ಸ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ದಿಲೀಪ್ ಸುರಾನ ಉಪಸ್ಥಿತರಿದ್ದರು.

ಬೆಂಗಳೂರು ಡ್ರೀಮ್‌ಗೆ ಜಯ

ಬೆಂಗಳೂರು: ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡವು ಬಿಡಿಎಫ್‌ಎ ಎ ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ ಶುಕ್ರವಾರ ಆದಾಯ ತೆರಿಗೆ ಎಫ್‌ಸಿ ತಂಡವನ್ನು 4–1 ಗೋಲುಗಳಿಂದ ಸೋಲಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ಡ್ರೀಮ್ ಪರ ಜೈ ಹರಿ ಬರ್ಮನ್ (59ನೇ ನಿ, 71ನೇ ಮತ್ತು 80ನೇ ನಿ.), ಮಿರವ್ ನವೀನ್ ಖಾಬಿಯಾ (63ನೇ ನಿ.) ಗೋಲು ಹೊಡೆದರು. ಆದಾಯ ತೆರಿಗೆ ತಂಡದ ಪರ ಅಕ್ಷಯ್ ಕೆ.ಎಸ್. (38ನೇ ನಿ.) ಗೋಲು ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಬಿಟಿಎಂ ಎಫ್‌ಸಿ 7–0 ಗೋಲುಗಳಿಂದ ಡಿವೈಇಎಸ್ ಫುಟ್‌ಬಾಲ್ ಕ್ಲಬ್ ತಂಡದ ಮೇಲೆ ಸುಲಭ ಜಯ ಸಾಧಿಸಿತು. ಬಿಟಿಎಂ ತಂಡದ ಪರ ಪುಯಿರಿಂಗ್‌ಶಾಂಗ್ ಖೊಡಾಂಗ್ (16ನೇ ನಿ. 53ನೇ ನಿ.), ಆಯುಷ್ ಡೇವಿಡ್ ಕೋಶಿ (26, 30ನೇ ನಿ.), ನಕ್ಷತ್ರ ಜೈನ್ (40ನೇ ನಿ.), ಮುಗಿಲನ್ ಎಂ. (84ನೇ ನಿ.) ಥೆಮ್ಮಗಾಮ್ ಹೆಚ್.ಆರ್ (90ನೇ ನಿ.) ಚೆಂಡನ್ನು ಗುರಿ ಸೇರಿಸಿದರು.

ಸೆಮಿಫೈನಲ್‌ಗೆ ಜಿಎಸ್‌ಟಿ ತಂಡ

ಬೆಂಗಳೂರು: ಜಿಎಸ್‌ಟಿ ಮತ್ತು ಕಸ್ಟಮ್ಸ್, ಭಾರತ್ ಎಸ್‌ಯು, ಐಬಿಬಿಸಿ ಮತ್ತು ಕೋರಮಂಗಲ ಎಸ್‌ಸಿ ತಂಡಗಳು ಎಂ.ಸಿ.ಶ್ರೀನಿವಾಸ್ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಬಿ ಡಿವಿಷನ್ ಬ್ಯಾಸ್ಕೆಟ್‌ಬಾಲ್ ಲೀಗ್ ಪಂದ್ಯದಲ್ಲಿ ಶುಕ್ರವಾರ ಸೆಮಿಫೈನಲ್ ಪ್ರವೇಶಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಜಿಎಸ್‌ಟಿ ಮತ್ತು ಕಸ್ಟಮ್ಸ್ ತಂಡ 77– 43 ಅಂಕಗಳಿಂದ ಕೋರಮಂಗಲ ಎಸ್‌ಸಿ ತಂಡದ ವಿರುದ್ಧ ಜಯ ಸಾಧಿಸಿತು. ಜಿಎಸ್‌ಟಿ ಪರ ನವೀನ್ (21 ಅಂಕ), ಆದರ್ಶ್ (12) ಗೆಲುವಿಗೆ ಶ್ರಮಿಸಿದರು.

ಅಮರ್ತ್ಯ (22) ಅವರ ಆಟದ ಬಲದ ನೆರವಿನಿಂದ ಮಂಡ್ಯ ಜಿಲ್ಲಾ ತಂಡವು ಎದುರಾಳಿ ಭಾರತ್ ಎಸ್.ಯು ತಂಡವನ್ನು 73–66 ಅಂಕಗಳಿಂದ ಮಣಿಸಿತು. ವಿಮಾನಪುರ ಎಸ್‌ಸಿ ತಂಡ 79–74 ಅಂಕಗಳಿಂದ ರಾಜಮಹಲ್ ಬಿ.ಸಿ ವಿರುದ್ಧ ಜಯಿಸಿತು. ಐಬಿಬಿಸಿ ತಂಡ 84– 53 ಅಂಕಗಳಿಂದ ಬೆಂಗಳೂರು ಸ್ಪೋರ್ಟಿಂಗ್ ತಂಡವನ್ನು ಸೋಲಿಸಿತು.

ಜಾತಿ ದತ್ತಾಂಶ: ಮುಂದಿನ ಸಂಪುಟ ಸಭೆಯಲ್ಲಿ ಚರ್ಚೆಗೆ ● ಆಪರೇಷನ್ ಸಿಂಧೂರ: ಭಾರತೀಯ ಸೇನೆಗೆ ಅಭಿನಂದನೆ

11 ಸಚಿವರಿಂದ ಲಿಖಿತ ಅಭಿಪ್ರಾಯ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ದತ್ತಾಂಶಗಳ ಅಧ್ಯಯನ ವರದಿಯ ಕುರಿತು 11 ಸಚಿವರು ತಮ್ಮ ಅಭಿಪ್ರಾಯವನ್ನು ಮುಖ್ಯಮಂತ್ರಿಗೆ ಲಿಖಿತವಾಗಿ ಸಲ್ಲಿಸಿದ್ದಾರೆ.

ಎಚ್‌.ಕೆ.ಪಾಟೀಲ್

ಎಲ್ಲ ಸಚಿವರು ಅಭಿಪ್ರಾಯ ನೀಡದೇ ಇರುವುದರಿಂದ ಮುಂದಿನ ವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಈ ವರದಿಯ ಬಗ್ಗೆ ಚರ್ಚಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ, 'ಈ ಸಮೀಕ್ಷಾ ವರದಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಸಭೆಗೆ ನೀಡಿದರು. ಸಮೀಕ್ಷೆಯ ತಾಲ್ಲೂಕುವಾರು ದತ್ತಾಂಶಗಳನ್ನು ಎಲ್ಲ ಸಚಿವರಿಗೆ ನೀಡಲಾಗಿದೆ. ಅಲ್ಲದೆ, ಉಳಿದ ಸಚಿವರಿಗೂ ತಮ್ಮ ಲಿಖಿತ ಅಭಿಪ್ರಾಯ ನೀಡಲು ಮುಖ್ಯಮಂತ್ರಿ ಸೂಚಿಸಿದರು' ಎಂದರು.

'ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾಯಂ ಸೂಪರ್ ಸ್ಪೆಷಾಲಿಟಿ ವೈದ್ಯರ ವಯೋನಿವೃತ್ತಿ ವಯಸ್ಸನ್ನು 60ರಿಂದ 65 ವರ್ಷಕ್ಕೆ ಹೆಚ್ಚಿಸಲು ಒಪ್ಪಿಗೆ ನೀಡಲಾಗಿದೆ. ಸೂಪರ್ ಸ್ಪೆಷಾಲಿಟಿ ವೈದ್ಯರ ಕೊರತೆ ನೀಗಿಸಲು ವಯೋಮಿತಿ ಹೆಚ್ಚಿಸಲಾಗಿದೆ. 500 ಸೂಪರ್ ಸ್ಪೆಷಾಲಿಟಿ ವೈದ್ಯರು ಬೇಕಾಗಿದ್ದಾರೆ. ಈಗ 260 ವೈದ್ಯರು ಮಾತ್ರ ಕರ್ತವ್ಯದಲ್ಲಿದ್ದಾರೆ' ಎಂದು ಪಾಟೀಲ ತಿಳಿಸಿದರು.

'ವೈದ್ಯಕೀಯ ಶಿಕ್ಷಣ ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವೆಯನ್ನು ನಗರಗಳಿಗೂ ವಿಸ್ತರಿಸುವ ಉದ್ದೇಶದಿಂದ 'ಕರ್ನಾಟಕ ವೈದ್ಯಕೀಯ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ (ತಿದ್ದುಪಡಿ) ಮಸೂದೆ-2025' ಸಿದ್ಧಪಡಿಸಲಾಗಿದೆ. ಈ ಮಸೂದೆಯ ಬಗ್ಗೆ ಆರೋಗ್ಯ ಮತ್ತು ವೈದ್ಯಕೀಯ ಸಚಿವರು ಸಮಾಲೋಚನೆ ನಡೆಸಿ, ಮುಂದಿನ ಸಭೆಗೆ ವಿಷಯ ಮಂಡಿಸುವಂತೆ ಮುಖ್ಯಮಂತ್ರಿ ಸಲಹೆ ನೀಡಿದರು' ಎಂದೂ ಅವರು ಹೇಳಿದರು.

'ಉಗ್ರರ ನೆಲೆಗಳ ಮೇಲೆ ದಾಳಿ ಮಾಡಿದ ದೇಶದ ಸೇನಾ ಪಡೆ, ಉಗ್ರರಿಗೆ ನೆರವು ನೀಡುತ್ತಿದ್ದ ಪಾಕಿಸ್ತಾನಕ್ಕೆ ತಕ್ಕ ಶಾಸ್ತಿ ಮಾಡಿದೆ. ಭಾರತ ಸೇನೆಗೆ ಸಚಿವ ಸಂಪುಟ ಸಭೆಯಲ್ಲಿ ಅಭಿನಂದನೆ ಸಲ್ಲಿಸಲಾಯಿತು' ಎಂದರು.

ಇತರ ನಿರ್ಣಯಗಳು:

- ಎಲ್ಲ ನಿಗಮಗಳು ಅನುಷ್ಠಾನ ಮಾಡುವ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಾಗಿ ಪಂಪ್, ಇತರ ಉಪಕರಣಗಳನ್ನು 17 ಪ್ಯಾಕೇಜುಗಳಲ್ಲಿ ಒಟ್ಟು ₹182 ಕೋಟಿ ಅಂದಾಜು ಮೊತ್ತದಲ್ಲಿ ಪೂರೈಕೆಗೆ ಟೆಂಡರ್ ಕರೆಯಲು ಅನುಮೋದನೆ
- ಬೆಳಗಾವಿ ಜಿಲ್ಲೆಯ ಬೆನಕನಹಳ್ಳಿ, ಹಿಂಡಲಗಾ ಮತ್ತು ಹಿರೇಬಾಗೇವಾಡಿ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಗಳಾಗಿ ಮೇಲ್ದರ್ಜೆಗೆ ಏರಿಸಲು ಒಪ್ಪಿಗೆ
- ಆಶಾ ಕಾರ್ಯಕರ್ತೆಯರಿಗೆ ₹1,000 ತಂಡ ಆಧಾರಿತ ಪ್ರೋತ್ಸಾಹಧನವನ್ನು ಪಾವತಿಸಲು ಅಗತ್ಯವಾದ ₹18 ಕೋಟಿ ವೆಚ್ಚ ಭರಿಸಲು ಒಪ್ಪಿಗೆ
- 'ಕರ್ನಾಟಕ ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈದ್ಯಕೀಯ) ಸೇವೆಗಳ (ನೇಮಕಾತಿ) ನಿಯಮಗಳು-2025'ಕ್ಕೆ ಅನುಮೋದನೆ
- ವಿವಿಧ ಕೇಂದ್ರ ಕಾರಾಗೃಹಗಳಲ್ಲಿರುವ 48 ಜೀವಾವಧಿ ಶಿಕ್ಷಾ ಬಂದಿಗಳನ್ನು ಸನ್ನಡತೆ ಆಧಾರದಲ್ಲಿ ಅವಧಿಪೂರ್ವ ಬಿಡುಗಡೆಗೆ ಒಪ್ಪಿಗೆ
- ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಆವಾಸ್ ಯೋಜನೆ (ನಗರ)- 2.0 ಅನುಷ್ಠಾನಗೊಳಿಸಲು ಒಪ್ಪಿಗೆ
- ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ನಿರ್ಮಿಸಿರುವ 450 ಹಾಸಿಗೆಗಳ ಹೊಸ ಆಸ್ಪತ್ರೆಗೆ ಅವಶ್ಯವಿರುವ ವೈದ್ಯಕೀಯ ಯಂತ್ರೋಪಕರಣಗಳು ಹಾಗೂ ಪೀಠೋಪಕರಣಗಳನ್ನು ₹26.98 ಕೋಟಿ ಮೊತ್ತದಲ್ಲಿ ಖರೀದಿಸಲು ಅಸ್ತು
- ಚಿಕ್ಕಬಳ್ಳಾಪುರ ಜಿಲ್ಲಾ ಕಾಂಗ್ರೆಸ್ ಭವನದ ಕಟ್ಟಡ ನಿರ್ಮಾಣ ಮಾಡುವ ಉದ್ದೇಶಕ್ಕೆ ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ ಅಣಕನೂರು ಗ್ರಾಮದ ಅನುಮೋದಿತ ಬಡಾವಣೆಯಲ್ಲಿ 3,404.26 ಚದರ ಮೀಟರ್ ವಿಸ್ತೀರ್ಣದ ನಾಗರಿಕ ಸೌಲಭ್ಯಗಳ ನಿವೇಶನವನ್ನು ಚಿಕ್ಕಬಳ್ಳಾಪುರ ಕಾಂಗ್ರೆಸ್ ಭವನದ ಟ್ರಸ್ಟ್‌ಗೆ ಉಚಿತವಾಗಿ ಮಂಜೂರು ಮಾಡಲು ಒಪ್ಪಿಗೆ.

ಮುಂಬಡ್ತಿ: ಅಂಗವಿಕಲರಿಗೆ ಶೇ 4 ಮೀಸಲು

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅಂಗವಿಕಲ ಅಧಿಕಾರಿ, ನೌಕರರಿಗೆ ಗ್ರೂಪ್ 'ಎ' (ಕಿರಿಯ ಶ್ರೇಣಿ) ಮತ್ತು ಗ್ರೂಪ್ 'ಬಿ' ವೃಂದಗಳಿಗೆ ನೀಡುವ ಮುಂಬಡ್ತಿಯಲ್ಲಿ ಶೇಕಡಾ 4 ಮೀಸಲಾತಿ ಕಲ್ಪಿಸಲು ಸರ್ಕಾರ ನಿರ್ಧರಿಸಿದೆ.

ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಗಿದೆ. ಸಭೆ ಬಳಿಕ ಮಾತನಾಡಿದ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ ಅವರು, 'ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯ್ದೆ 2016 ಅನ್ವಯ ಈ ಅವಕಾಶ ಕಲ್ಪಿಸಲಾಗಿದೆ. ಇದನ್ನು ಪುಷ್ಟೀಕರಿಸಿ ಸುಪ್ರೀಂ ಕೋರ್ಟ್ ಈ ಹಿಂದೆಯೇ ಆದೇಶ ಹೊರಡಿಸಿದೆ' ಎಂದರು.

ನೌಕರರ ವರ್ಗಾವಣೆ: '2025-26ರ ಸಾಲಿನಲ್ಲಿ ಗ್ರೂಪ್ 'ಎ', 'ಬಿ', 'ಸಿ' ಮತ್ತು 'ಡಿ' ವರ್ಗದ ನೌಕರರನ್ನು ಆಯಾ ವೃಂದಗಳ ಕಾರ್ಯನಿರತ ವೃಂದ ಬಲದ ಶೇ 6ರಷ್ಟನ್ನು ಮೀರದಂತೆ ಸಾರ್ವತ್ರಿಕ ವರ್ಗಾವಣೆಗೆ ಮೇ 15ರಿಂದ ಜೂನ್ 14ರವರೆಗೆ ಅವಕಾಶ ನೀಡುವ ಪ್ರಸ್ತಾವಕ್ಕೂ ಒಪ್ಪಿಗೆ ನೀಡಲಾಗಿದೆ' ಎಂದೂ ಅವರು ತಿಳಿಸಿದರು.

ಮಗು ಮಾರಾಟ: ಪ್ರಸೂತಿ ತಜ್ಞ ವಜಾ

'ಚಿಕ್ಕಮಗಳೂರು ಜಿಲ್ಲೆ ಕೊಪ್ಪ ಸಾರ್ವಜನಿಕ ಆಸ್ಪತ್ರೆಯ ಪ್ರಸೂತಿ ತಜ್ಞ ಡಾ. ಜಿ.ಎಸ್. ಬಾಲಕೃಷ್ಣ ಅವರನ್ನು ಕರ್ತವ್ಯದಿಂದ ವಜಾ ಮಾಡಲು ಸಚಿವ ಸಂಪುಟ ಸಭೆ ನಿರ್ಣಯಿಸಿದೆ' ಎಂದು ಎಚ್‌.ಕೆ. ಪಾಟೀಲ ತಿಳಿಸಿದರು.

'ಕಲ್ಪನಾ ಅವರಿಗೆ ಜನಿಸಿದ ಹೆಣ್ಣು ಮಗುವನ್ನು ₹50 ಸಾವಿರಕ್ಕೆ ಪ್ರೇಮಲತಾ ಎಂಬವರಿಗೆ ಮಾರಾಟ ಮಾಡಿದ್ದ ಬಾಲಕೃಷ್ಣ, ಪ್ರೇಮಲತಾ ಅವರಿಗೇ ಹೆರಿಗೆ ಆದಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ ಆರೋಪ ಎದುರಿಸುತ್ತಿದ್ದರು. ಆರೋಪ ಸಾಬೀತಾದ ಕಾರಣ ಈ ಕ್ರಮ ತೆಗೆದುಕೊಳ್ಳಲು ಸಭೆಗೆ ಒಪ್ಪಿಗೆ ನೀಡಿದೆ' ಎಂದರು.

2 ವರ್ಷದ ಸರ್ಕಾರದ ಸಾಧನಾ ಸಮಾವೇಶ ಮುಂದೂಡಿಕೆ

'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದು ಮೇ 20ಕ್ಕೆ ಎರಡು ವರ್ಷ ತುಂಬಲಿದೆ. ಈ ಸಂಬಂಧ ಸರ್ಕಾರದ ಸಾಧನೆಗಳ ಸಮಾವೇಶ ಹಮ್ಮಿಕೊಳ್ಳಲು ನಿರ್ಧರಿಸಲಾಗಿತ್ತು. ಆದರೆ, ಯುದ್ಧದ ವಾತಾವರಣ ಸೃಷ್ಟಿ ಆಗಿರುವುದರಿಂದ ಈ ಸಂಭ್ರಮಾಚರಣೆಯನ್ನು ಮುಂದೂಡಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. ಮುಂದಿನ ದಿನಾಂಕವನ್ನು ನಿರ್ಣಯಿಸಲು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗೆ ಅಧಿಕಾರ ನೀಡಲಾಗಿದೆ' ಎಂದೂ ಪಾಟೀಲ ತಿಳಿಸಿದರು.

'ತಪ್ಪಿತಸ್ಥರನ್ನು ಬೆಂಬಲಿಸಲ್ಲ'

ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣ

ಪ್ರಜಾವಾಣಿ ವಾರ್ತೆ

ಮಂಗಳೂರು: 'ತಪ್ಪು ಮಾಡಿದವರನ್ನು ಬೆಂಬಲಿಸುವ ಸ್ವಭಾವ ನನ್ನದಲ್ಲ ಎಂಬುದು ಜನರಿಗೆ ಗೊತ್ತಿದೆ. ಜಿಲ್ಲೆಯಲ್ಲಿ ಉದ್ವೇಗದ ವಾತಾವರಣ ಕಡಿಮೆಯಾಗಿ, ಸೋದರತೆಯ ವಾತಾವರಣ ಸೃಷ್ಟಿಯಾಗಲಿ ಎಂಬ ಉದ್ದೇಶದಿಂದ ನನಗೆ ಸಿಕ್ಕ ಮಾಹಿತಿಯನ್ನು ಜನರೆದುರು ಇಟ್ಟಿದ್ದೆ' ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು.

ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದಲ್ಲಿ ಸುರತ್ಕಲ್‌ನಲ್ಲಿ ಈ ಹಿಂದೆ ಹತ್ಯೆಯಾಗಿದ್ದ ಫಾಝಿಲ್ ಕುಟುಂಬದವರ ಪಾತ್ರ ಇಲ್ಲ ಎಂದು ಯು.ಟಿ. ಖಾದರ್ ಹೇಳಿಕೆ ನೀಡಿದ್ದರು. ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದಲ್ಲಿ ಫಾಝಿಲ್ ಸಹೋದರನನ್ನೂ ಪೊಲೀಸರು ಬಂಧಿಸಿದ್ದರು.

ಶುಕ್ರವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಖಾದರ್, 'ಸುಹಾಸ್ ಹತ್ಯೆ ಪ್ರಕರಣದ ಎಲ್ಲ ಆರೋಪಿಗಳನ್ನು ಪತ್ತೆ ಹಚ್ಚಿ, ಕಠಿಣ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು. ಮುಂದೆ ಇಂತಹ ಘಟನೆಗಳು ಜಿಲ್ಲೆಯಲ್ಲಿ ನಡೆಯದ ರೀತಿಯಲ್ಲಿ ಕ್ರಮವಾಗಬೇಕು' ಎಂದರು.

ಯು.ಟಿ. ಖಾದರ್

ಸುಹಾಸ್ ಹತ್ಯೆ ಪ್ರಕರಣದ ಆರೋಪಿಗೆ ಕೆಲಸ ನೀಡಿದ್ದ ಕಳಸದ ಹೋಟೆಲ್ ಉದ್ಯಮಿಯೊಬ್ಬರ ಜೊತೆ ಯು.ಟಿ.ಖಾದರ್ ಅವರಿಗೆ ಸಂಪರ್ಕ ಇದೆ ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷರು ಆರೋಪಿಸಿರುವ ಬಗ್ಗೆ ಕೇಳಿದ ಪ್ರಶ್ನೆಗೆ, 'ಇಂತಹ ಆರೋಪಗಳು ಇದೇ ಮೊದಲೇನಲ್ಲ. ರಾಜಕೀಯ ಹೇಳಿಕೆಗಳಿಗೆ ಪ್ರತಿಕ್ರಿಯಿಸುವುದಿಲ್ಲ. ಕಳಸದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಾನು ಭಾಗಿಯಾಗಿರಲಿಲ್ಲ' ಎಂದು ಅವರು ಹೇಳಿದರು.

ಎನ್‌ಐಎ ತನಿಖೆ: ರಾಜ್ಯಪಾಲರಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಹಾಸ್ ಶೆಟ್ಟಿ ಕೊಲೆ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ವಹಿಸಬೇಕು ಎಂದು ಕೋರಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಬಿಜೆಪಿ ಮುಖಂಡರು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಶುಕ್ರವಾರ ಮನವಿ ಸಲ್ಲಿಸಿದರು.

ನಂತರ ಸುದ್ದಿಗಾರರ ಜತೆ ಮಾತನಾಡಿದ ಅಶೋಕ,'ಇದು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸುಪಾರಿ ನೀಡಿರುವ ಪ್ರಕರಣ. ಮುಸ್ಲಿಂ ಹುಡುಗನ ಕೊಲೆಯಾಗಿದ್ದಕ್ಕೆ ಆ ಕುಟುಂಬಕ್ಕೆ ಕಾಂಗ್ರೆಸ್ ₹25 ಲಕ್ಷ ಪರಿಹಾರ ನೀಡಿತ್ತು. ಆ ಹಣವನ್ನು ಬಳಸಿಯೇ ಸುಪಾರಿ ನೀಡಲಾಗಿದೆ. ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದ ಮೇಲೆ ನಮಗೆ ವಿಶ್ವಾಸವಿಲ್ಲ. ಎನ್‌ಐಎಗೆ ವಹಿಸಲು ಕೋರಿದ್ದೇವೆ' ಎಂದರು.

ಗೇಲ್‌ನಿಂದ ₹5000 ಕೋಟಿ ಹೂಡಿಕೆ

ರಾಜ್ಯದಲ್ಲಿ 1,000 ಮೆಗಾವಾಟ್ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆಗೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ 1,000 ಮೆಗಾವಾಟ್ ಸಾಮರ್ಥ್ಯದ ನವೀಕರಿಸಬಹುದಾದ ಇಂಧನ ಉತ್ಪಾದನಾ ಘಟಕವನ್ನು, ₹5,000 ಕೋಟಿ ವೆಚ್ಚದಲ್ಲಿ ಸ್ಥಾಪಿಸಲು ಭಾರತೀಯ ಅನಿಲ ಪ್ರಾಧಿಕಾರ (ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್‌-ಗೇಲ್) ಮತ್ತು ರಾಜ್ಯ ಸರ್ಕಾರ ಒಪ್ಪಂದ ಮಾಡಿಕೊಂಡಿವೆ.

ವಿಧಾನಸೌಧದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ಇಂಧನ ಸಚಿವ ಕೆ.ಜೆ. ಜಾರ್ಜ್ ಮತ್ತು ಕ್ರೆಡೆಲ್ ಅಧ್ಯಕ್ಷ ಟಿ.ಡಿ. ರಾಜೇಗೌಡ ಸಮ್ಮುಖದಲ್ಲಿ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಹಾಗೂ ಗೇಲ್ ಕಾರ್ಯಕಾರಿ ನಿರ್ದೇಶಕ ಪರಿವೇಶ್ ಛುಗ್ ಸಿಂಗ್ ಒಪ್ಪಂದ ಪತ್ರಕ್ಕೆ ಸಹಿ ಹಾಕಿದರು.

ರಾಜ್ಯ ಇಂಧನ ಇಲಾಖೆ ಮತ್ತು ಗೇಲ್ ಅಧಿಕಾರಿಗಳ ಜತೆ ಸಚಿವರಾದ ಕೆ.ಜೆ. ಜಾರ್ಜ್ ಮತ್ತು ಎಂ.ಬಿ.ಪಾಟೀಲ ಅವರು ಮಾತುಕತೆ ನಡೆಸಿದರು

'ಯೋಜನೆ ಅನುಷ್ಠಾನಕ್ಕೆ ಅಗತ್ಯವಿರುವ ಭೂಮಿಯನ್ನು, ರೈತರಿಂದ ನೇರವಾಗಿ ಭೋಗ್ಯಕ್ಕೆ ಗೇಲ್ ಪಡೆದುಕೊಳ್ಳಬಹುದು. ಇಲ್ಲವೇ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ನಿಗಮದ ಮೂಲಕ ಅಗತ್ಯ ಜಮೀನನ್ನು ಒದಗಿಸಲಾಗುವುದು. ಇತರೆ ಸವಲತ್ತುಗಳನ್ನೂ ತ್ವರಿತವಾಗಿ ಒದಗಿಸಲಾಗುವುದು' ಎಂದರು.

'ನವೀಕರಿಸಬಹುದಾದ ಮತ್ತು ಮರುಬಳಕೆ ಇಂಧನ ಕ್ಷೇತ್ರದ ಹೂಡಿಕೆಯಲ್ಲಿ ರಾಜ್ಯವು ಅಗ್ರಸ್ಥಾನದಲ್ಲಿ ಇರುವಂತೆ ನೋಡಿಕೊಳ್ಳಲು ನಾವು ಬದ್ಧರಾಗಿದ್ದೇವೆ. ಇದು ರಾಜ್ಯದ ಕೈಗಾರಿಕಾ ಬೆಳವಣಿಗೆಗೆ ನಿರ್ಣಾಯಕವಾಗಿದೆ. ಇಲ್ಲಿನ ಕಾರ್ಯಪರಿಸರ, ಕೌಶಲಪೂರ್ಣ ಮಾನವ ಸಂಪನ್ಮೂಲವು ಪರಿಸರ ಸ್ನೇಹಿ ಇಂಧನ ಕ್ಷೇತ್ರದ ಹೂಡಿಕೆಗೆ ಕರ್ನಾಟಕವನ್ನು ಪ್ರಶಸ್ತ ತಾಣವಾಗಿಸಿವೆ' ಎಂದರು.

'ಈ ಒಪ್ಪಂದವು ಭಾರತದ ಪರಿಸರಸ್ನೇಹಿ ಇಂಧನ ವಲಯದ ಸಾಧನೆಗೆ ಬಲ ತುಂಬಲಿದೆ. ರಾಜ್ಯದಲ್ಲೂ ಈ ವಲಯದಲ್ಲಿ ಹೂಡಿಕೆಗೆ ವಿಪುಲ ಅವಕಾಶಗಳಿವೆ. ಪಾವಗಡದ ಸೋಲಾರ್ ಪಾರ್ಕ್‌ನಲ್ಲಿ ವಾರ್ಷಿಕ 2,500 ಮೆಗಾವಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಯೋಜನೆ ವಿಸ್ತರಿಸುವುದಾದರೆ, ಅಲ್ಲಿ ರೈತರು ಜಮೀನು ಬಿಟ್ಟುಕೊಡಲು ಮುಂದೆ ಬಂದಿದ್ದಾರೆ. 10,000 ಎಕರೆಗಳಷ್ಟು ಜಮೀನು ದೊರೆತರೆ ಅಲ್ಲಿ ಯೋಜನೆ ವಿಸ್ತರಿಸಲಾಗುವುದು' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

ಕೈಗಾರಿಕಾ ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ, ಗೇಲ್ ಕಾರ್ಯ ನಿರ್ವಾಹಕ ನಿರ್ದೇಶಕ (ಮಾರುಕಟ್ಟೆ) ಸುಮಿತ್ ಕಿಶೋರ್, ಕ್ರೆಡೆಲ್ ವ್ಯವಸ್ಥಾಪಕ ನಿರ್ದೇಶಕ ರುದ್ರಪ್ಪಯ್ಯ ಅವರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಜೂ.15ರಂದು ರಾಜ್ಯಮಟ್ಟದ ವಚನ ಕಂಠಪಾಠ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಹೊಸದುರ್ಗ (ಚಿತ್ರದುರ್ಗ ಜಿಲ್ಲೆ): 'ಒಲಿದಂತೆ ಹಾಡುವೆ' ವಚನ ಕಂಠಪಾಠ ಸ್ಪರ್ಧೆಯನ್ನು ತಾಲ್ಲೂಕಿನ ಸಾಣೇಹಳ್ಳಿಯಲ್ಲಿ ಜೂನ್ 15ರಂದು ಹಮ್ಮಿಕೊಳ್ಳಲಾಗಿದೆ ಎಂದು ಸಾಣೇಹಳ್ಳಿಯ ತರಳಬಾಳು ಶಾಖಾಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ಲಿಂಗ, ಜಾತಿ, ವಯಸ್ಸಿನ ಭೇದವಿಲ್ಲದೆ ಯಾರೂ ಬೇಕಾದರೂ ಸ್ಪರ್ಧೆಯಲ್ಲಿ ಭಾಗವಹಿಸಬಹುದು. 500 ವಚನಗಳನ್ನು ತಪ್ಪಿಲ್ಲದೆ ಸ್ಪಷ್ಟವಾಗಿ, ವ್ಯಾಕರಣ ದೋಷವಿಲ್ಲದೇ ಭಾವಪೂರ್ಣವಾಗಿ ಹೇಳಬೇಕು. ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭು,ಸೇರಿದಂತೆ ಪ್ರಮುಖ ವಚನಕಾರರ ಕನಿಷ್ಠ 20 ವಚನಗಳನ್ನಾದರೂ ಹೇಳಬೇಕು.

ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿರುವ 'ಸಮಗ್ರ ವಚನ ಸಂಪುಟ'ದ ವಚನಗಳನ್ನು ಮಾತ್ರ ಹೇಳಬೇಕು. ಸ್ಪರ್ಧಿಗಳು ವಚನ ಕಂಠಪಾಠಕ್ಕೆ ಆನ್‌ಲೈನ್‌ನಲ್ಲಿ ಸಿಗುವ 'ವಚನ ಸಂಪುಟ' ಮತ್ತು 'ವಚನ ಸಂಚಯ' ಜಾಲತಾಣ ಬಳಕೆ ಮಾಡಿಕೊಳ್ಳಬಹುದು.

ಪ್ರಥಮ ಬಹುಮಾನ ₹30,000, ದ್ವಿತೀಯ ₹ 25,000, ತೃತೀಯ ₹20,000, ನಾಲ್ಕನೇ ₹15,000 ಹಾಗೂ ಐದನೇ ಬಹುಮಾನ ₹10,000 ಹಾಗೂ ಪ್ರಶಸ್ತಿ ಪತ್ರ, ಪುಸ್ತಕ ನೀಡಿ ಗೌರವಿಸಲಾಗುವುದು. 200 ವಚನಗಳನ್ನು ಹೇಳಿದವರಿಗೆ ಪ್ರಶಸ್ತಿಪತ್ರ, ಪುಸ್ತಕ ನೀಡಲಾಗುವುದು.

ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ಮಠಾಧೀಶರಿಗೂ ಅವಕಾಶ: ಸ್ಪರ್ಧೆಗೆ ಮಠಾಧೀಶರಿಗೂ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ವಚನ ಕಂಠಪಾಠ ಸ್ಪರ್ಧೆಯಲ್ಲಿ ವಿಜೇತರಾದ ಮಠಾಧೀಶರಿಗೆ ಪ್ರಥಮ ಬಹುಮಾನ ₹40,000 ನೀಡಲಾಗುವುದು ಎಂದು ಚಿತ್ರದುರ್ಗ ಮಾದಾರ ಚನ್ನಯ್ಯ ಗುರುಪೀಠದ ಮಾದಾರ ಚನ್ನಯ್ಯ ಸ್ವಾಮೀಜಿ ತಿಳಿಸಿದ್ದಾರೆ.

ಜೂನ್ 10ರ ಒಳಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ಟಿ.ಎಂ ಮರುಳಸಿದ್ದಯ್ಯ, ತರಳಬಾಳು ಜಗದ್ಗುರು ಶಾಖಾಮಠ, ಸಾಣೇಹಳ್ಳಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಮೊಬೈಲ್: 9663177254 ಸಂಪರ್ಕಿಸಬಹುದು ಎಂದು ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲಕಿ ಮೇಲೆ ಅತ್ಯಾಚಾರ ಚಿಕ್ಕಪ್ಪನಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಹತ್ತು ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪ ಸಾಬೀತಾಗಿದ್ದರಿಂದ ತಾಲ್ಲೂಕಿನ ತಾಂಡಾವೊಂದರ ನಿವಾಸಿ ಸೋನು ತಾರಾಸಿಂಗ್ ಜಾಧವ್ (19) ಎಂಬಾತನಿಗೆ ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ (ವಿಶೇಷ ಪೋಕ್ಸೊ) ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ ₹ 30 ಸಾವಿರ ದಂಡ ವಿಧಿಸಿದೆ.

'2024ರ ಆಗಸ್ಟ್ 9ರಂದು ಮನೆಯಲ್ಲಿ ಜೋಕಾಲಿ ಆಡುತ್ತಿದ್ದ ಬಾಲಕಿಯನ್ನು 'ಗಿಡಗಳಿಗೆ ನೀರು ಹಾಕೋಣ' ಎಂದು ಪುಸಲಾಯಿಸಿ ಆಕೆಯ ಚಿಕ್ಕಪ್ಪನಾದ ಸೋನು ಮನೆಯ ಮೇಲಿನ ಕೊಠಡಿಗೆ ಕರೆದೊಯ್ದು ಬಾಯಿಗೆ ಬಟ್ಟೆ ತುರುಕಿ ಅತ್ಯಾಚಾರ ಎಸಗಿದ್ದಾನೆ' ಎಂದು ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

'ನನ್ನ ಮಗನಿಂದ ತಪ್ಪಾಗಿದೆ. ಬಾಲಕಿಗೆ ತಾಳಿ ಕಟ್ಟಿ ಕರೆದುಕೊಂಡು ಹೋಗಲು ತಯಾರಿದ್ದೇವೆ' ಎಂದು ಸೋನು ಪೋಷಕರು ಹೇಳಿದ್ದರು. 'ಸೋನುಗೆ ಬಾಲಕಿ ಅಣ್ಣನ ಮಗಳಾಗಬೇಕು. ಆತನೊಂದಿಗೆ ಹೇಗೆ ಮದುವೆ ಮಾಡಲು ಸಾಧ್ಯ' ಎಂದು ಪ್ರಶ್ನಿಸಿದ್ದ ಬಾಲಕಿಯ ಪೋಷಕರು ದೂರು ದಾಖಲಿಸಿದ್ದರು.

ಪಿಎಸ್‌ಐ ರೇಣುಕಾದೇವಿ ಹಾಗೂ ಪಿಐ ಸುಶೀಲಕುಮಾರ್ ಅವರು ಸೋನು ಜಾಧವ್ ವಿರುದ್ಧ ಬಿಎನ್‌ಎಸ್ ಕಾಯ್ದೆ ಹಾಗೂ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಾಧೀಶ ಯಮನಪ್ಪ ಬಮ್ಮಣಗಿ ಅವರು, ಅಪರಾಧಿಗೆ ಶಿಕ್ಷೆ ವಿಧಿಸಿದ್ದಾರೆ. ದಂಡದ ಮೊತ್ತವನ್ನು ಪಾವತಿಸಲು ವಿಫಲನಾದರೆ ಆರು ತಿಂಗಳು ಹೆಚ್ಚುವರಿ ಜೈಲು ಶಿಕ್ಷೆ ಅನುಭವಿಸಬೇಕು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಸಂತ್ರಸ್ತ ಬಾಲಕಿಗೆ ಕಾನೂನು ಸೇವಾ ಪ್ರಾಧಿಕಾರದಿಂದ ₹ 7 ಲಕ್ಷ ಪರಿಹಾರವನ್ನು ಒಂದು ತಿಂಗಳ ಒಳಗೆ ನೀಡಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಶಾಂತವೀರ ಬಿ. ತುಪ್ಪದ ವಾದ ಮಂಡಿಸಿದ್ದರು.



ಯತ್ನಾಳಗೆ ಸೀರೆ, ಬಳೆ ಉಡುಗೊರೆ

ವಿಜಯಪುರ: ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಮನೆಗೆ ಕಾಂಗ್ರೆಸ್ ಮುಖಂಡರು ಶುಕ್ರವಾರ ಇಳಕಲ್ ಸೀರೆ ಮತ್ತು ಬಳೆಯನ್ನು ಕೊರಿಯರ್ ಮಾಡಿದರು.

'ಶಾಸಕ ಯತ್ನಾಳ ಅವರ ಸವಾಲನ್ನು ಸ್ವೀಕರಿಸಿ, ಚುನಾವಣೆಗೆ ಸಚಿವ ಶಿವಾನಂದ ಪಾಟೀಲ ಸಿದ್ಧರಾಗಿದ್ದಾರೆ. ಆದರೆ, ಯತ್ನಾಳ ಅವರೇ ಈಗ ಮೌನವಾಗಿದ್ದಾರೆ. ಸ್ತ್ರೀಯರು ಶೌರ್ಯ ಮತ್ತು ಸಾಹಸದ ಪ್ರತೀಕ. ಅವರಿಗೆ ಸ್ಫೂರ್ತಿ ಸಿಗಲೆಂದೇ ಸೀರೆ ಮತ್ತು ಬಳೆಯನ್ನು ಉಡುಗೊರೆಯಾಗಿ ಕಳುಹಿಸಿದ್ದೇವೆ' ಎಂದು ಕೆಪಿಸಿಸಿ ವಕ್ತಾರ ಎಸ್‌.ಎಂ.ಪಾಟೀಲ ಗಣಿಹಾರ ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

'ಯತ್ನಾಳ ಬಿಜೆಪಿಯಿಂದ ಉಚ್ಚಾಟನೆಗೊಂಡಿದ್ದರೂ, ತಮ್ಮ ಮೇಲೆ ಇಡಿ-ಐಟಿ ದಾಳಿ ಆಗದಿರಲಿಯೆಂದು ಬಿಜೆಪಿ-ಮೋದಿ ಜಪ ಮಾಡುತ್ತಾರೆ. ಬಿಜೆಪಿ ನಾಯಕರ ಓಲೈಕೆಯಲ್ಲಿ ತೊಡಗಿದ್ದಾರೆ' ಎಂದು ಅವರು ಆರೋಪಿಸಿದರು.

ವಂಚನೆ: ಡಿ.ಕೆ. ಸಿದ್ರಾಮ ಬಂಧನ

ಪ್ರಜಾವಾಣಿ ವಾರ್ತೆ

ಬೀದರ್: ಡಿಸಿಸಿ ಬ್ಯಾಂಕಿಗೆ ಸುಳ್ಳು ಮಾಹಿತಿ ಕೊಟ್ಟು, ಸಾರ್ವಜನಿಕರ ಹಣ ವಂಚಿಸಿರುವ ಆರೋಪದಡಿ ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆಯ (ಎನ್‌ಎಸ್‌ಎಸ್‌ಕೆ) ಅಧ್ಯಕ್ಷ ಡಿ.ಕೆ. ಸಿದ್ರಾಮ ಅವರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಜನವಾಡ ಠಾಣೆ ಪೊಲೀಸರು ಶುಕ್ರವಾರ ಬೆಳಿಗ್ಗೆ ಭಾಲ್ಕಿಗೆ ತೆರಳಿ, ಡಿ.ಕೆ. ಸಿದ್ರಾಮ ಅವರನ್ನು ಅವರ ನಿವಾಸದಲ್ಲಿ ವಶಕ್ಕೆ ಪಡೆದು, ಬಳಿಕ ಬೀದರ್ ಜಿಲ್ಲಾ ನ್ಯಾಯಾಲಯದ ಎದುರು ಹಾಜರುಪಡಿಸಿದರು. ನ್ಯಾಯಾಲಯವು 14 ದಿನ ನ್ಯಾಯಾಂಗ ಬಂಧನ ವಿಧಿಸಿದೆ.

ಕಾರ್ಖಾನೆಯ ಗೋದಾಮಿನಲ್ಲಿ ₹56.20 ಕೋಟಿ ಸಕ್ಕರೆ ಕೊರತೆಯಿದ್ದರೂ ₹78 ಕೋಟಿ ಸಾಲ ಪಡೆದು ವಂಚಿಸಿದ್ದಾರೆ ಎಂದು ಡಿಸಿಸಿ ಬ್ಯಾಂಕಿನ ಸಿಇಒ ಮಂಜುಳಾ ಎಸ್. ಅವರು ಗುರುವಾರ (ಮೇ 8) ಜನವಾಡ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರು.

ಡಿ.ಕೆ. ಸಿದ್ರಾಮ

ಹಣ ವಂಚನೆಗೆ ಸಂಬಂಧಿಸಿದಂತೆ ಎನ್‌ಎಸ್‌ಎಸ್‌ಕೆ ಅಧ್ಯಕ್ಷ ಡಿ.ಕೆ. ಸಿದ್ರಾಮ, ಮಾಜಿ ವ್ಯವಸ್ಥಾಪಕ ಅಪರಂಜಿ ಬಿ.ಎಸ್., ಡಿಸಿಸಿ ಬ್ಯಾಂಕಿನ ಮಾಜಿ ಸಿಇಒ ಮಹಾಜನ್ ಮಲ್ಲಿಕಾರ್ಜುನ, ಬ್ಯಾಂಕಿನ ಮಾಜಿ ಪ್ರಧಾನ ವ್ಯವಸ್ಥಾಪಕ ಚನ್ನಬಸಯ್ಯ ಸ್ವಾಮಿ, ಬ್ಯಾಂಕಿನ ಉಪ ಪ್ರಧಾನ ವ್ಯವಸ್ಥಾಪಕ ಸದಾಶಿವ ಪಾಟೀಲ, ಇಮಾಮಪುರ ಡಿಸಿಸಿ ಬ್ಯಾಂಕಿನ ಶಾಖೆ ಮಾಜಿ ವ್ಯವಸ್ಥಾಪಕ ಸೈಯದ್ ರಾಹಿಲ್ ಅಹಮ್ಮದ್, ಎನ್‌ಎಸ್‌ಎಸ್‌ಕೆ ಇತರೆ ನಿರ್ದೇಶಕರ ವಿರುದ್ಧ ಜನವಾಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಇದರಲ್ಲಿ ರಾಜಕೀಯ ದುರುದ್ದೇಶ ಇದೆ. ಸಚಿವ ಈಶ್ವರ ಬಿ. ಖಂಡ್ರೆಯವರು ಪೊಲೀಸರ ಮೇಲೆ ಒತ್ತಡ ಹಾಕಿಸಿ ನನ್ನನ್ನು ಬಂಧಿಸಿದ್ದಾರೆ' ಎಂದು ಡಿ.ಕೆ. ಸಿದ್ರಾಮ ಆರೋಪಿಸಿದ್ದಾರೆ.

ಜೋಯಾಲುಕ್ಕಾಸ್‌ನಿಂದ ಚಿನ್ನ ವಿನಿಮಯ ಮೇಳ

ಬೆಂಗಳೂರು: ಜೋಯಾಲುಕ್ಕಾಸ್‌ನಿಂದ ಮೇ 25ರವರೆಗೆ ಚಿನ್ನ ವಿನಿಮಯ ಮೇಳ ಹಮ್ಮಿಕೊಳ್ಳಲಾಗಿದೆ.

ಗ್ರಾಹಕರು ವಿನಿಮಯ ಮಾಡಿಕೊಳ್ಳುವ ಹಳೆಯ ಚಿನ್ನಕ್ಕೆ ಪ್ರತಿ ಗ್ರಾಂಗೆ ಹೆಚ್ಚುವರಿಯಾಗಿ ₹100 ಪಾವತಿಸಲಾಗುವುದು. ಇದರಿಂದ ಹೊಸ ಚಿನ್ನಾಭರಣ ಖರೀದಿಗೆ ಹೆಚ್ಚಿನ ಅನುಕೂಲ ಆಗಲಿದೆ. ಗ್ರಾಹಕರು ವಿವಿಧ ವಿನ್ಯಾಸದ ಆಭರಣಗಳನ್ನು ಖರೀದಿಸಲು ಇದು ಸಹಕಾರಿ ಆಗಲಿದೆ ಎಂದು ಜೋಯಾಲುಕ್ಕಾಸ್ ತಿಳಿಸಿದೆ.

‘ಗ್ರಾಹಕರಿಗೆ ಅನುಕೂಲ ಕಲ್ಪಿಸುವುದು ಕಂಪನಿಯ ಉದ್ದೇಶವಾಗಿದೆ. ಹಳೆಯ ಚಿನ್ನ ವಿನಿಮಯದ ಮೂಲಕ ಹೊಸ ಆಭರಣಗಳ ಖರೀದಿಗೆ ವೇದಿಕೆ ಕಲ್ಪಿಸುವ ಈ ಮೇಳದ ಪ್ರಯೋಜನವನ್ನು ಗ್ರಾಹಕರು ಪಡೆದುಕೊಳ್ಳಬಹುದು’ ಎಂದು ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಜೋಯ್ ಅಲುಕ್ಕಾಸ್ ತಿಳಿಸಿದ್ದಾರೆ.

ವಿಮಾನ ನಿಲ್ದಾಣಕ್ಕೆ ಹೆಚ್ಚಿನ ಭದ್ರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಮತ್ತು ಪಾಕಿಸ್ತಾನದ ನಡುವೆ ಉದ್ವಿಗ್ನ ಪರಿಸ್ಥಿತಿ ತಲೆದೋರಿರುವ ಕಾರಣ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ನಗರದ ಮೆಜೆಸ್ಟಿಕ್ ಹಾಗೂ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಹೆಚ್ಚಿನ ಭದ್ರತೆ ಒದಗಿಸಲಾಗಿದೆ.

ಜತೆಗೆ ಪ್ರಯಾಣಿಕರು ತಮ್ಮ ವಿಮಾನ ನಿರ್ಗಮನದ ಕನಿಷ್ಠ ಮೂರು ಗಂಟೆ ಮೊದಲು ಕೆಂಪೇಗೌಡ ಅಂತರರಾಷ್ಟ್ರೀಯ ನಿಲ್ದಾಣಕ್ಕೆ ತಲುಪುವಂತೆ ವಿಮಾನ ನಿಲ್ದಾಣ ಆಡಳಿತ ಮಂಡಳಿ ಮನವಿ ಮಾಡಿದೆ.

ಈ ಕುರಿತು ‘ಎಕ್ಸ್’ನಲ್ಲಿ ಮಾಹಿತಿ ನೀಡಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಆಡಳಿತ ಮಂಡಳಿ, ‘ವಿಮಾನ ನಿಲ್ದಾಣದಲ್ಲಿ ಭದ್ರತಾ ತಪಾಸಣೆ ಹೆಚ್ಚಿಸಲಾಗಿದೆ. ಭದ್ರತಾ ಪಡೆ, ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಸಿಬ್ಬಂದಿಯಿಂದ ಭದ್ರತೆ ಒದಗಿಸಲಾಗಿದೆ. ವಿಮಾನ ನಿಲ್ದಾಣದಲ್ಲಿ ಶಸ್ತ್ರಸಜ್ಜಿತವಾಗಿ ಭದ್ರತಾ ಪಡೆಗಳು ನಿಲ್ದಾಣದ ಸುತ್ತಮುತ್ತ ಹದ್ದಿನ ಕಣ್ಣಿಟ್ಟಿವೆ. ನಿಲ್ದಾಣಕ್ಕೆ ಬೇಗನೇ ಪ್ರಯಾಣಿಕರು ಬಂದರೆ ಚೆಕ್‌-ಇನ್, ಭದ್ರತಾ ತಪಾಸಣೆ ಸುಗಮವಾಗಿ ಕೈಗೊಳ್ಳಬಹುದು’ ಎಂದು ಹೇಳಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.

ಸಂಖ್ಯೆ: ಬೆಂಅಪ್ರಾ/ನಯೋಸ/CLU-08/2024–25/545/2025–26 ದಿನಾಂಕ: 09–05–2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕೆ** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಪರಿಷ್ಕೃತ ಮಹಾಯೋಜನೆ 2015 ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
ಚಿಕ್ಕ ಕೆಂಪಮ್ಮ, ನಾಗಿರೆಡ್ಡಿ, ನಾರಪ್ಪ, ರಾಮಕೃಷ್ಣಪ್ಪ, ನಾಗರಾಜರೆಡ್ಡಿ, ವೆಂಕಟರಾಮರೆಡ್ಡಿ, ನಾರಾಯಣಸ್ವಾಮಿ	ಬೆಂಗಳೂರು ಪೂರ್ವ	ಬಿದರಹಳ್ಳಿ	ಬಂಡಬೊಮ್ಮಸಂದ್ರ	100	12–00	ವ್ಯವಸಾಯ	ವಾಣಿಜ್ಯ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ ಹಾಗೂ ಪರಿಸರದಲ್ಲಿ ವಾಣಿಜ್ಯ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನುಗಳನ್ನು **ವ್ಯವಸಾಯ ವಲಯದಿಂದ ವಾಣಿಜ್ಯ ವಲಯಕ್ಕೆ** ಭೂಉಪಯೋಗ ಬದಲಾವಣೆಗೊಂಡ ನಂತರ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ ಮತ್ತು ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಯಾಗುವುದು ಹಾಗೂ ಸರ್ಕಾರಕ್ಕೆ ಹೆಚ್ಚಿನ ತೆರಿಗೆಗಳು ಸಂಗ್ರಹವಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **‘ವ್ಯವಸಾಯ ವಲಯ’** ದಿಂದ **‘ವಾಣಿಜ್ಯ ಉಪಯೋಗಕ್ಕೆ’** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಡ್ರಗ್ಸ್ ಮಾರಾಟ 59 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಪೂರೈಕೆದಾರರ ವಿರುದ್ಧ ನಗರ ಪೊಲೀಸರು ಕಾರ್ಯಾಚರಣೆ ಮುಂದುವರೆಸಿದ್ದು, ಏಪ್ರಿಲ್ ತಿಂಗಳಲ್ಲಿ 59 ಆರೋಪಿಗಳನ್ನು ಬಂಧಿಸಿದ್ದಾರೆ.

ಬಂಧಿತರಿಂದ 208 ಕೆ.ಜಿ. ಗಾಂಜಾ, 22 ಗ್ರಾಂ. ಹೆರಾಯಿನ್, 1 ಕೆ.ಜಿ. ಎಂಡಿಎಂಎ, 38 ಟೈಡಲ್ ಮಾತ್ರೆಗಳನ್ನು ಜಪ್ತಿ ಮಾಡಲಾಗಿದೆ.

ಕಾನೂನು ಬಾಹಿರ ಚಟುವಟಿಕೆ ನಡೆಸುತ್ತಿದ್ದವರ ವಿರುದ್ಧ 188 ಪ್ರಕರಣ ದಾಖಲಿಸಿಕೊಂಡು 366 ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಡಕಾಯಿತಿ, ಸುಲಿಗೆ, ಕಳ್ಳತನ ಎಸಗಿ ತಲೆಮರೆಸಿಕೊಂಡಿದ್ದ 12 ಮಂದಿಯನ್ನು ಬಂಧಿಸಲಾಗಿದೆ. ರೌಡಿ ಚಟುವಟಿಕೆಯಲ್ಲಿ ತೊಡಗಿದ್ದ 10 ಮಂದಿ ವಿರುದ್ಧವೂ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಹಣ ಸುಲಿಗೆ ಪ್ರಕರಣ: ಬಾಗಲೂರು ಪೊಲೀಸರ ಕಾರ್ಯಾಚರಣೆ

ಮೂವರು ಕಾನ್‌ಸ್ಟೆಬಲ್ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಹಣ ಸುಲಿಗೆ ಮಾಡಿದ್ದ ಪ್ರಕರಣದಲ್ಲಿ ಚಿಕ್ಕಜಾಲ ಪೊಲೀಸ್ ಠಾಣೆಯ ಮೂವರು ಕಾನ್‌ಸ್ಟೆಬಲ್‌ಗಳು ಹಾಗೂ ಒಬ್ಬ ಯುಟ್ಯೂಬರ್‌ನನ್ನು ಬಾಗಲೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಜಾಲ ಪೊಲೀಸ್ ಠಾಣೆ ಹೆಡ್ ಕಾನ್‌ಸ್ಟೆಬಲ್ ವಿಜಯ್ ಕುಮಾರ್, ಕಾನ್‌ಸ್ಟೆಬಲ್‌ಗಳಾದ ಸಂತೋಷ ಮತ್ತು ಮಂಜುನಾಥ ಹಾಗೂ ಟಾರ್ಗೆಟ್ ನ್ಯೂಸ್ ಯುಟ್ಯೂಬ್ ವಾಹಿನಿಯ ಪ್ರವೀಣ್ ಬಂಧಿತರು.

ಇತರೆ ಆರೋಪಿಗಳಾದ ಪುನೀತ್, ರಕ್ಷಿತ್, ಚಂದನ್ ಪತ್ತೆಗೆ ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಸಹಕಾರ ನಗರದ ‘ಎ’ ಬ್ಲಾಕ್‌ನ ನಿವಾಸಿ ನಾಗರಾಜ್ ಬಂಡಾರು ಎಂಬುವರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

‘ದೂರುದಾರ ನಾಗರಾಜ್ ಅವರು ಆದಾಯ ತೆರಿಗೆ ರಿಟರ್ನ್ಸ್ ಫೈಲಿಂಗ್ ಕೆಲಸ ಮಾಡುತ್ತಿದ್ದಾರೆ. ಹನುಮಂತರಾಯಪ್ಪ ಅವರ ಮೂಲಕ ನಾಗರಾಜ್ ಅವರಿಗೆ ರಕ್ಷಿತ್ ಎಂಬಾತನ ಪರಿಚಯವಾಗಿತ್ತು. ಅದಾನಿ ಗ್ರೀನ್ ಎನರ್ಜಿ ಸಂಸ್ಥೆಗೆ ರಕ್ಷಿತ್ ಜಿಎಸ್‌ಟಿ ಬಿಲ್ ಕೇಳಿದ್ದ. ಅಲ್ಲದೇ ಪುನೀತ್ ಎಂಬಾತನಿಂದ ಸಂಸ್ಥೆಗೆ ಕ್ರಿಪ್ಟೊ ಕರೆನ್ಸಿ (ಯುಎಸ್‌ಡಿಟಿ) ಖರೀದಿಸಲು ₹50 ಲಕ್ಷ ಹಣ ಬೇಕಾಗಿದ್ದು, ಹಣ ಹೊಂದಿಸುವಂತೆ ರಕ್ಷಿತ್ ಕೇಳಿಕೊಂಡಿದ್ದ. ಆ ಹಣಕ್ಕೆ ಟ್ರಾನ್ಸಿಷನ್ ಹಣ ಸೇರಿಸಿ ₹65 ಲಕ್ಷವನ್ನು ಪುನೀತ್ ಬ್ಯಾಂಕ್ ಖಾತೆಗೆ ಪಾವತಿಸುವಂತೆ ತಿಳಿಸಿ ಜಿಎಸ್‌ಟಿ ಬಿಲ್ ನೀಡುವಂತೆ ಕೇಳಿಕೊಂಡಿದ್ದ. ಗೋವಿಂದಪ್ಪ ₹40.40 ಲಕ್ಷ ಹೊಂದಿಸಿದ್ದರು. ನಾಗರಾಜ್ ₹9.60 ಲಕ್ಷ ಹೊಂದಿಸಿದ್ದರು. ಆ ಹಣವನ್ನು ತೆಗೆದುಕೊಂಡು ನಾಗರಾಜ್ ಹಾಗೂ ಗೋವಿಂದಪ್ಪ ಅವರು ರಕ್ಷಿತ್, ಚಂದನ್ ಹಾಗೂ ಪುನೀತ್ ಭೇಟಿ ಮಾಡಲು ತೆರಳಿದ್ದರು. ಅಲ್ಲಿಗೆ ಚಿಕ್ಕಜಾಲ ಪೊಲೀಸರು ಬಂದು, ‘ಇದು ಅಕ್ರಮ ಹಣ. ₹6 ಲಕ್ಷ ಕೊಟ್ಟರೆ ಬಿಡುತ್ತೇವೆ’ ಎಂದು ಹೇಳಿ ಹಣ ಪಡೆದುಕೊಂಡು ಹೋಗಿದ್ದರು’ ಎಂದು ಮೂಲಗಳು ಹೇಳಿವೆ.

‘ರಕ್ಷಿತ್ ಹಾಗೂ ಪುನೀತ್‌ಗೆ ಕರೆ ಮಾಹಿತಿ ನೀಡಿದಾಗ ಅವರು ಸ್ಥಳಕ್ಕೆ ಬರಲು ಒಪ್ಪಿರಲಿಲ್ಲ. ಮರುದಿನ ಬಂದಿದ್ದ ಆರೋಪಿ ಪುನೀತ್ ದೂರುದಾರ ನಾಗರಾಜ್ ಅವರ ಬಳಿಯಿದ್ದ ಹಣ ಹಾಗೂ ಚಿನ್ನಾಭರಣ ಕಸಿದುಕೊಂಡು ಪರಾರಿ ಆಗಿದ್ದಾನೆ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

‘ಹಣ ಸುಲಿಗೆ ಮಾಡುವ ಉದ್ದೇಶದಿಂದಲೇ ಮೂವರು ಪೊಲೀಸರು, ಯುಟ್ಯೂಬರ್ ಜತೆಗೆ ಸೇರಿಕೊಂಡು ಕೃತ್ಯ ಎಸಗಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಪ್ರಕರಣದ ತನಿಖೆ ಮುಂದುವರೆದಿದೆ. ತನಿಖೆ ಪೂರ್ಣಗೊಂಡ ಬಳಿಕವೇ ಪೊಲೀಸರು ಹಾಗೂ ಇತರೆ ಆರೋಪಿಗಳ ಪಾತ್ರ ಗೊತ್ತಾಗಲಿದೆ. ಹಣ ದ್ವಿಗುಣ ಮಾಡುವ ದಂಧೆ ನಡೆಸಲಾಗುತ್ತಿತ್ತೇ ಎಂಬುದರ ಕುರಿತೂ ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ಅಪರಾಧದಲ್ಲಿ ಪೊಲೀಸ್ ಸಿಬ್ಬಂದಿ’

ಮಾಸಿಕ ಕವಾಯತಿನಲ್ಲಿ ಭಾಗಿಯಾಗಿದ್ದ ಕಮಿಷನರ್ ದಯಾನಂದ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಮೀನು ವ್ಯಾಜ್ಯ, ತಗಾದೆಗಳಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗಿಯಾಗಿರುವ ಬಗ್ಗೆ ದೂರುಗಳು ಬಂದರೆ ಕ್ರಮ ಕೈಗೊಳ್ಳಲಾಗುವುದು ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಎಚ್ಚರಿಕೆ ನೀಡಿದರು.

ನಗರದ ಆಡುಗೋಡಿಯಲ್ಲಿರುವ ನಗರ ಸಶಸ್ತ್ರ ಮೀಸಲು ಪಡೆ (ದಕ್ಷಿಣ) ಕವಾಯತು ಮೈದಾನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಮಾಸಿಕ ಕವಾಯತಿನಲ್ಲಿ ಗೌರವ ವಂದನೆ ಸ್ವೀಕರಿಸಿ ಮಾತನಾಡಿದರು.

ಪೊಲೀಸರಿಂದ ಗೌರವ ವಂದನೆ ಸ್ವೀಕರಿಸಿದ ಪೊಲೀಸ್ ಕಮಿಷನರ್ ಬಿ.ದಯಾನಂದ

‘ಪೊಲೀಸ್ ಸಿಬ್ಬಂದಿಯೇ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಗಮನಕ್ಕೆ ಬಂದಿದೆ. ಎರಡು ದಿನಗಳ ಹಿಂದೆಯಷ್ಟೇ ನಮ್ಮ ಸಿಬ್ಬಂದಿ ವಿರುದ್ಧ ಎರಡು, ಮೂರು ಪ್ರಕರಣ ದಾಖಲಾಗಿವೆ. ಇದರಲ್ಲಿ ಪ್ರಮುಖವಾಗಿ ಅಧಿಕಾರಿಗಳ ಪಾತ್ರವೂ ಬರುತ್ತದೆ. ಸಿಬ್ಬಂದಿ ಹೇಗೆ ಕೆಲಸ ನಿರ್ವಹಿಸುತ್ತಿದ್ದಾರೆ ಎಂಬುದರ ಬಗ್ಗೆ ನಿಗಾವಹಿಸಬೇಕು. ಠಾಣಾ ಮಟ್ಟದಲ್ಲಿ ಶಿಸ್ತು, ಸಂಯಮದ ಬಗ್ಗೆ ಗಮನಹರಿಸಬೇಕು’ ಎಂದು ಹೇಳಿದರು.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಅಪರಾಧ ಪ್ರಕರಣಗಳು ಗಣನೀಯವಾಗಿ ಇಳಿಮುಖ ಆಗುತ್ತಿರುವುದು ಸಮಾಧಾನದ ಸಂಗತಿ. ಸೈಬರ್ ಅಪರಾಧಗಳಲ್ಲೂ ಗಣನೀಯ ಇಳಿಕೆ ಕಂಡು ಬಂದಿದೆ. ಜಾಗೃತಿ ಮೂಡಿಸುವ ಕಾರ್ಯಕ್ರಮಗಳಿಂದ ಜನರಲ್ಲಿ ತಿಳಿವಳಿಕೆ ಬಂದಿದೆ. ಮನೆಗಳ್ಳತನ, ವಾಹನ ಕಳ್ಳತನಗಳು ಕಡಿಮೆಯಾಗುತ್ತಿವೆ. ಆದರೆ, ಪತ್ತೆ ಕಾರ್ಯವನ್ನು ಇನ್ನಷ್ಟು ಚುರುಕುಗೊಳಿಸಬೇಕು ಎಂದು ಸೂಚನೆ ನೀಡಿದರು.

‘ಸಾಮಾಜಿಕ ಸಾಮರಸ್ಯ ಹಾಗೂ ಕಾನೂನು ಸುವ್ಯವಸ್ಥೆಗೆ ಯಾವುದೇ ರೀತಿಯಲ್ಲಿ ಧಕ್ಕೆ ಬಾರದಂತೆ ನೋಡಿಕೊಳ್ಳುವುದು ಜವಾಬ್ದಾರಿಯಾಗಿದೆ. ಸಹಾಯಕ ಪೊಲೀಸ್ ಕಮಿಷನರ್, ಉಪ ಪೊಲೀಸ್ ಕಮಿಷನರ್ ಮನವರಿಕೆ ಮಾಡಿಕೊಂಡು ಸ್ಥಳೀಯವಾಗಿ ನಿಮ್ಮ ವ್ಯಾಪ್ತಿಯ ಅಧಿಕಾರಿಗಳು, ಠಾಣಾ ಸಿಬ್ಬಂದಿಗೆ ಮನವರಿಕೆ ಮಾಡಬೇಕು. ಹಿರಿಯ ಅಧಿಕಾರಿಗಳು ಠಾಣೆಗಳಿಗೆ ಭೇಟಿ ನೀಡಿ, ಸಿಬ್ಬಂದಿಗೆ ವಾಸ್ತವ ತಿಳಿಸಿಕೊಡಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಬರುವ ಸೂಚನೆಗಳು ಪಾಲನೆ ಆಗುವಂತೆ ನೋಡಿಕೊಳ್ಳಬೇಕು’ ಎಂದು ತಿಳಿಸಿದರು.

ಇದೇ ವೇಳೆ ಪೊಲೀಸ್ ಪಡೆಗಳಿಂದ ಕಮಿಷನರ್ ಗೌರವ ವಂದನೆ ಸ್ವೀಕರಿಸಿದರು. ಉತ್ತಮ ಕೆಲಸ ನಿರ್ವಹಿಸಿದ ಅಧಿಕಾರಿ ಮತ್ತು ಸಿಬ್ಬಂದಿಗೆ ಪ್ರಶಂಸಾ ಪತ್ರ ನೀಡಿ ಅಭಿನಂದಿಸಲಾಯಿತು.

ಸಿಸಿಬಿ ಜಂಟಿ ಪೊಲೀಸ್ ಕಮಿಷನರ್ ಚಂದ್ರಗುಪ್ತ, ಹೆಚ್ಚುವರಿ ಪೊಲೀಸ್ ಕಮಿಷನರ್ ವಿಕಾಸ್ ಕುಮಾರ್ ವಿಕಾಸ್ ಉಪಸ್ಥಿತರಿದ್ದರು.

ಕಳ್ಳತನ: ಸಂಪಂಗಿರಾಮನಗರ ಠಾಣೆ ಪೊಲೀಸರಿಂದ ಇಬ್ಬರ ಬಂಧನ

₹40 ಲಕ್ಷ ಮೌಲ್ಯದ ಆಭರಣ, ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬಿಣದ ರಾಡ್, ಕಟರ್, ಸ್ಕ್ರೂ ಡ್ರೈವರ್ ಬಳಸಿ ಮನೆ ಕಳ್ಳತನ ಮಾಡುತ್ತಿದ್ದ ಹಾಗೂ ರಸ್ತೆಯ ಬದಿಯಲ್ಲಿ ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನಗಳನ್ನು ನಕಲಿ ಕೀ ಬಳಸಿ ಕಳ್ಳತನ ಮಾಡುತ್ತಿದ್ದ ಇಬ್ಬರನ್ನು ಸಂಪಂಗಿರಾಮನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಗೊಲ್ಲರಹಟ್ಟಿ ಕೊಡಿಗೇಹಳ್ಳಿ ಲೇಔಟ್‌ನ ಅಶೋಕ ಅಲಿಯಾಸ್ ‘ಆ್ಯಪಲ್’(34) ಹಾಗೂ ತುಮಕೂರಿನ ಚಿಕ್ಕಪೇಟೆಯ ರೇಣುಕಾ ಪ್ರಸಾದ್ (31) ಬಂಧಿತರು.

ಬಂಧಿತರಿಂದ ₹40 ಲಕ್ಷ ಮೌಲ್ಯದ 384 ಗ್ರಾಂ. ಚಿನ್ನಾಭರಣ, 108 ಗ್ರಾಂ. ಬೆಳ್ಳಿಯ ಸಾಮಗ್ರಿ, ಒಂದು ಕಾರು ಹಾಗೂ ಎರಡು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ. ಬಂಧಿತರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ ಹೆಚ್ಚಿನ ವಿಚಾರಣೆಗೆ 11 ದಿನ ಪೊಲೀಸ್ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಠಾಣಾ ವ್ಯಾಪ್ತಿಯ ಒಕ್ಕಲಿಗರ ಭವನದ ಬಳಿ ಇಬ್ಬರು ಅನುಮಾನಾಸ್ಪದವಾಗಿ ಓಡಾಟ ನಡೆಸುತ್ತಿದ್ದರು. ಗಸ್ತಿನಲ್ಲಿದ್ದ ಪೊಲೀಸರು, ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೃತ್ಯ ಎಸಗಿರುವುದು ಗೊತ್ತಾಗಿತ್ತು.

ಕಳವು ಮಾಡಿದ್ದ ದ್ವಿಚಕ್ರ ವಾಹನಗಳನ್ನು ಆರೋಪಿಗಳು ಮನೆ ಕಳ್ಳತನ ಮಾಡಲು ಬಳಸುತ್ತಿದ್ದರು. ಬ್ಯಾಡರಹಳ್ಳಿ ಭರತ್‌ನಗರದ ಎರಡು ಮನೆಗಳಲ್ಲಿ ಮೊದಲ ಆರೋಪಿ ಅಶೋಕ್ ಚಿನ್ನ ಹಾಗೂ ಬೆಳ್ಳಿಯ ಆಭರಣ ಕಳ್ಳತನ ಮಾಡಿದ್ದ. ಇನ್ನೊಬ್ಬ ಆರೋಪಿ ಚಂದ್ರಾಲೇಔಟ್‌ನಲ್ಲಿ ದ್ವಿಚಕ್ರ ವಾಹನ ಕದ್ದಿದ್ದ. ಕದ್ದ ವಾಹನಗಳನ್ನು ಗೋವಿಂದರಾಜನಗರದ ಪಟ್ಟೇಗಾರ ಪಾಳ್ಯದ ರಸ್ತೆಬದಿಯ ಖಾಲಿ ಪ್ರದೇಶದಲ್ಲಿ ನಿಲುಗಡೆ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

‘ಚಿನ್ನ–ಬೆಳ್ಳಿ ಕೆಲಸ ಮಾಡುವ ವ್ಯಕ್ತಿಗೆ ಕದ್ದ ಚಿನ್ನವನ್ನು ಆರೋಪಿಗಳು ಮಾರಾಟ ಮಾಡಿದ್ದರು. ಸ್ವಲ್ಪ ಚಿನ್ನವನ್ನು ಕಾರಿನಲ್ಲಿ ಬಚ್ಚಿಟ್ಟಿದ್ದರು. ಅಲ್ಲಿಂದ ಚಿನ್ನವನ್ನು ಜಪ್ತಿ ಮಾಡಲಾಗಿದೆ’ ಎಂದು ಮೂಲಗಳು ಹೇಳಿವೆ.

‘ಇಬ್ಬರು ಆರೋಪಿಗಳ ಬಂಧನದಿಂದ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಎರಡು, ಚನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆ ಹಾಗೂ ಚಂದ್ರಾಲೇಔಟ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ತಲಾ ಒಂದು ಪ್ರಕರಣಗಳು ಪತ್ತೆಯಾಗಿವೆ’ ಎಂದು ಪೊಲೀಸರು ಹೇಳಿದರು.

₹10.80 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ

ಮನೆಗಳಿಗೆ ಹಾಕಿದ್ದ ಬೀಗ ಒಡೆದು ಚಿನ್ನಾಭರಣ ಹಾಗೂ ನಗದು ಕಳ್ಳತನ ಮಾಡಿ ಪರಾರಿ ಆಗಿದ್ದ ಆರೋಪಿಯನ್ನು ಚನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ದೇವಸಂದ್ರದ ಜೆ.ಸಿ.ಲೇಔಟ್‌ನ ರಫೀಕ್(30) ಬಂಧಿತ ಆರೋಪಿ. ತಲೆಮರೆಸಿಕೊಂಡಿರುವ ಮತ್ತೊಬ್ಬ ಆರೋಪಿಗೆ ಶೋಧ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಆರೋಪಿಯಿಂದ ₹10.80 ಲಕ್ಷ ಮೌಲ್ಯದ 120 ಗ್ರಾಂ. ಚಿನ್ನಾಭರಣ ಜಪ್ತಿ ಮಾಡಿಕೊಳ್ಳಲಾಗಿದೆ. ಇಟ್ಟುಮಡುವಿನಲ್ಲಿ ವಾಸವಿರುವ ವ್ಯಕ್ತಿಯೊಬ್ಬರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ದೂರುದಾರರು ಡಿಸೆಂಬರ್ 12ರಂದು ತಮ್ಮ ಮನೆಯ ಬಾಗಿಲಿಗೆ ಬೀಗ ಹಾಕಿಕೊಂಡು ಹನುಮಂತ ನಗರದಲ್ಲಿ ಆಯೋಜಿಸಿದ್ದ ಕರುನಾಡ ಸಂಭ್ರಮಾಚರಣೆಗೆ ತೆರಳಿದ್ದರು. ಮರು ದಿನ ವಾಪಸ್ ಬಂದು ನೋಡಿದಾಗ ಮನೆಯ ಬಾಗಿಲಿಗೆ ಹಾಕಿದ್ದ ಬೀಗ ಒಡೆದು ಚಿನ್ನಾಭರಣ ಕಳ್ಳತನ ಮಾಡಿರುವುದು ಗೊತ್ತಾಗಿತ್ತು ಎಂದು ಹೇಳಿದರು.

ಕತ್ರಿಗುಪ್ಪೆ ತ್ಯಾಗರಾಜ ಸಹಕಾರ ಬ್ಯಾಂಕ್‌ನ ಹಿಂಭಾಗದ ರಸ್ತೆಯಲ್ಲಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ತನ್ನ ಸಹಚರರ ಜತೆಗೆ ಸೇರಿಕೊಂಡು ಕೃತ್ಯ ಎಸಗಿರುವುದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದರು.

‘ಕಳ್ಳತನ ಮಾಡಿದ್ದ ಚಿನ್ನಾಭರಣಗಳನ್ನು ಮುಂಬೈನಲ್ಲಿ ನೆಲಸಿದ್ದ ತನ್ನ ಸಂಬಂಧಿಗೆ ಮಾರಾಟ ಮಾಡಿದ್ದ. ಆರೋಪಿಯಿಂದ ಚಿನ್ನಾಭರಣ ಖರೀದಿಸಿದ್ದ ವ್ಯಕ್ತಿಗೆ ನೋಟಿಸ್ ಜಾರಿ ಮಾಡಿ ಠಾಣೆಗೆ ಬರುವಂತೆ ಸೂಚಿಸಲಾಗಿತ್ತು. ಖರೀದಿ ಮಾಡಿದ್ದ ವ್ಯಕ್ತಿ ಚಿನ್ನವನ್ನು ತಂದು ಒಪ್ಪಿಸಿದ್ದಾರೆ’ ಎಂದು ಪೊಲೀಸರು ಹೇಳಿದರು.

ಅಂಗವಿಕಲರ ನಗದು ಬಹುಮಾನಕ್ಕೆ ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆನಡಾದಲ್ಲಿ 2017ರ ಆಗಸ್ಟ್‌ನಲ್ಲಿ ನಡೆದ ಏಳನೇ ವಿಶ್ವ ಕುಬ್ಜ ಕ್ರೀಡಾಕೂಟದಲ್ಲಿ ಭಾಗವಹಿಸಿ ಪದಕ ಗೆದ್ದಿರುವ ಅಂಗವಿಕಲ ಕ್ರೀಡಾಪಟುಗಳಿಗೆ 2013ರ ಮಾರ್ಗಸೂಚಿಗಳಿಗೆ ಅನುಗುಣವಾಗಿ ನಗದು ಬಹುಮಾನ ನೀಡಬೇಕು’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಕೆನಡಾದಲ್ಲಿ ನಡೆದ ಏಳನೇ ವಿಶ್ವ ಕುಬ್ಜ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ಬೆಂಗಳೂರಿನವರಾದ ಸಿ.ವಿ.ರಾಜಣ್ಣ ಮತ್ತು ಬೆಂಗಳೂರಿನ ಸುನೀತಾ, ಬೆಂಗಳೂರು ಗ್ರಾಮಾಂತರ ಅಜಗೊಂಡನಹಳ್ಳಿಯ ಮುನಿರಾಜು ಪ್ರಕಾಶ್, ಧಾರವಾಡದ ದೇವಪ್ಪ ಮಹದೇವಪ್ಪ ಮೋರೆ, ಬಂಗಾರಪೇಟೆಯ ಎನ್. ನಾಗೇಶ್, ಹಾಸನ ಜಿಲ್ಲೆ ಅಬ್ಬೂರು ಮಾಚಗೊಂಡನಹಳ್ಳಿಯ ಕೆ.ಆರ್.ಶಾಂತಕುಮಾರ ಹಾಗೂ ಬೆಳಗಾವಿಯ ಸಿಮ್ರಾನ್ ಗೌಂಡಲ್ಕರ್ ಸಲ್ಲಿಸಿದ್ದ ರಿಟ್ ಅರ್ಜಿ ಪುರಸ್ಕರಿಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ವಿಶ್ವ ಕುಬ್ಜ ಕ್ರೀಡಾಕೂಟದಲ್ಲಿ ಭಾಗವಹಿಸಿ ಚಿನ್ನದ ಪದಕ ಗೆದ್ದವರಿಗೆ ₹10 ಲಕ್ಷ, ಬೆಳ್ಳಿ ಪದಕ ಗೆದ್ದವರಿಗೆ ₹7 ಲಕ್ಷ ಮತ್ತು ಕಂಚಿನ ಪದಕ ಗೆದ್ದವರಿಗೆ ₹5 ಲಕ್ಷ ನೀಡುವುದಾಗಿ ಸರ್ಕಾರ ತನ್ನ ಆದೇಶದಲ್ಲಿ ಹೇಳಿತ್ತು. ಹೀಗಾಗಿ, ಅರ್ಜಿದಾರರು ನಗದು ಬಹುಮಾನಕ್ಕೆ ಅರ್ಹರಾಗಿದ್ದು, ಮುಂದಿನ ಎಂಟು ವಾರಗಳಲ್ಲಿ ನ್ಯಾಯಾಲಯದ ಈ ಆದೇಶವನ್ನು ಜಾರಿಗೊಳಿಸಬೇಕು’ ಎಂದು ನ್ಯಾಯಪೀಠ ನಿರ್ದೇಶಿಸಿದೆ.

ಮಲ್ಲಸಂದ್ರ ಹೆರಿಗೆ ಆಸ್ಪತ್ರೆ ತಿಂಗಳಿನಿಂದ ಬಂದ್

ಆಸ್ಪತ್ರೆ ಅವ್ಯವಸ್ಥೆ: ವೈದ್ಯರಿಗೆ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಿ.ದಾಸರಹಳ್ಳಿಯ ಮಲ್ಲಸಂದ್ರ ಹೆರಿಗೆ ಆಸ್ಪತ್ರೆಯಲ್ಲಿನ ಅವ್ಯವಸ್ಥೆ ಕಂಡು ಆಕ್ರೋಶ ವ್ಯಕ್ತಪಡಿಸಿದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ, ವೈದ್ಯರು ಮತ್ತು ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು.

ಹೆರಿಗೆ ಆಸ್ಪತ್ರೆಗೆ ಶುಕ್ರವಾರ ಭೇಟಿ ನೀಡಿದ ಅವರು, ರೋಗಿಗಳ ಆರೋಗ್ಯ ವಿಚಾರಿಸಿದರು. ಆಸ್ಪತ್ರೆಯಲ್ಲಿ ದೊರೆಯುತ್ತಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

ಹೆರಿಗೆ ವಾರ್ಡ್‌ಗೆ ಭೇಟಿ ನೀಡಿದಾಗ, ಇರುವೆಗಳು, ದೂಳು ಹಿಡಿದ ಉಪಕರಣಗಳು, ಬಳಸಿರುವ ಸಿರಿಂಜ್‌ಗಳು ಕಂಡು ಬಂತು. ವೈದ್ಯರ ಕೊರತೆಯಿಂದಾಗಿ ತಿಂಗಳಿನಿಂದ ಹೆರಿಗೆ ವಾರ್ಡ್ ಬಂದ್ ಆಗಿರುವ ವಿಚಾರ ತಿಳಿದು, ವೈದ್ಯಾಧಿಕಾರಿಯ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಅವರು ಮಲ್ಲಸಂದ್ರ ಹೆರಿಗೆ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದರು

ಈ ವೇಳೆ ಮಾತನಾಡಿದ ನಾಗಲಕ್ಷ್ಮೀ ಚೌಧರಿ, ‘ಮಲ್ಲಸಂದ್ರ ಹೆರಿಗೆ ಆಸ್ಪತ್ರೆ ಅವ್ಯವಸ್ಥೆಯಿಂದ ಕೂಡಿದೆ. ತಿಂಗಳಿನಿಂದ ಬಂದ್ ಆಗಿದೆ. ಕೆ.ಸಿ.ಜನರಲ್ ಆಸ್ಪತ್ರೆ ಅಥವಾ ಸಪ್ತಗಿರಿ ಆಸ್ಪತ್ರೆಗೆ ಗರ್ಭಿಣಿಯರನ್ನು ಕಳುಹಿಸುತ್ತಿದ್ದಾರೆ’ ಎಂದು ಹೇಳಿದರು.

‘ಡಿ ದರ್ಜೆ ನೌಕರರು ಇಲ್ಲದ ಕಾರಣ ಸ್ವಚ್ಛತೆ ಕಾಪಾಡುತ್ತಿಲ್ಲ. ಹೆರಿಗೆ ವಾರ್ಡ್‌ನಲ್ಲಿ ಇರುವೆಗಳು ತುಂಬಿವೆ. ವೈದ್ಯಕೀಯ ಉಪಕರಣಗಳು ದೂಳು ಹಿಡಿದಿವೆ. ಹತ್ತು ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಯಲ್ಲಿ ಇಬ್ಬರು ವೈದ್ಯರು ಮತ್ತು ಇಬ್ಬರು ಶುಶ್ರೂಷಕಿಯರು ಇದ್ದಾರೆ. ಸ್ಕ್ಯಾನಿಂಗ್ ವ್ಯವಸ್ಥೆ ಇಲ್ಲ. ಮಕ್ಕಳ ತಜ್ಞ ಹಾಗೂ ಸ್ತ್ರೀರೋಗ ತಜ್ಞೆಯನ್ನು ತಕ್ಷಣ ನೇಮಕ ಮಾಡಬೇಕಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಲಾಗುವುದು’ ಎಂದರು.

ಬಳಿಕ ಟಿ.ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಮಂಜುನಾಥನಗರ, ಕಾಟರಾಯನ ನಗರ, ಕರೇಕಲ್ಲು ಹಾಗೂ ಮಹಾಲಕ್ಷ್ಮೀ ನಗರಕ್ಕೆ ಭೇಟಿ ನೀಡಿ ಮಹಿಳೆಯರು ಮತ್ತು ಸಾರ್ವಜನಿಕರ ಸಮಸ್ಯೆ ಆಲಿಸಿದರು.

ಬಾಗಲಗುಂಟೆಯಲ್ಲಿ ನಡೆದ ಸಭೆಯಲ್ಲಿ ಪಿಂಚಣಿ, ಪತಿಯ ದೌರ್ಜನ್ಯ, ಗೃಹಲಕ್ಷ್ಮೀ ಹಣ ಬಾರದಿರುವುದು, ಹಕ್ಕು ಪತ್ರ ನೀಡದಿರುವುದು ಹಾಗೂ ಮದ್ಯದಂಗಡಿಗೆ ಪರವಾನಗಿ ನೀಡಿರುವ ಕುರಿತು ಸ್ಥಳೀಯರು ದೂರು ನೀಡಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

CAUTION NOTICE

This is to notify to the General Public that, we M/s.CITILIGHTS ESTATES PRIVATE LTD., a company incorporated under the company's Act 1956, having its branch office at No. 876, 3rd Cross, 7th Main, HAL 2nd Stage, Bangalore 560038 are the absolute owners of all that piece and parcel of the converted landed property bearing Survey No. 31/1,situated at Chikkadunnasandra Village, Sarjapur Hobli, Anekal Taluk, (Bikkanahosahalli Dakhele)duly approved by the Anekal Planning Authority vide No.APA/LAO/36/2008-09,dated 11.09.2009 and Revised Sanctioned Plan No.APA/LAO/36/2008- 09_1 dated 20.01.2020.

This being the fact, it is reliably learnt that some third parties claiming to have rights over the said converted lands are making attempts to sell or create third party interest in respect of the plots formed in the above-mentioned converted lands by supressing the facts that there are several cases pending against them.

Wherefore the General Public is hereby cautioned through this Caution Notice that, if any person/s enter/s into any such transactions, in respect of the plots formed in the above-mentioned converted lands, such transactions are not binding on us in any manner and the same will be done at their own costs and risks and M/s. Citilights Estates Private Ltd will take appropriate criminal and legal action against such acts.

Sd/- Chandrakala S.K, Advocate
M/s. CITILIGHTS ESTATES PRIVATE LTD.,
No. 876, 3rdCross, 7thMain, HAL 2nd Stage,
Bangalore 560038 Mobile: 9741993578

PERSONAL

Change of Name

I, ARUNAKUMARI, daughter of Mr.Narayana Reddy and wife of Mr.Venkatesh, aged about 42 years, having Aadhar No.8682-3889-2754, residing #350,2nd Stage, Madhuranagar, Varthur, Bengaluru-560087 have changed by name as N.ARUNAKUMARI for all purposes. vide affidavit dated 05/05/2025 Before Notary T.C.Thimmaraja Bangalore

CHANGE OF NAME
I , **K S VIJAYALAKSHMI** W/o D Madhusudhana Rao, R/a # Flat No. 208, B Block, D S Max Supreme Apartment, Dr. Vishnuvardhana Road, Sy No. 81/10, Kodipalya Cross, Kengeri, Bengaluru - 560060, have changed my name as **SANDHYA DHARMAVARAM**, vide affidavit dated 23.04.2025 sworn to before notary Ravi, Bengaluru

I, ANDAL, R/a #8/30, Shanbhog Krishnappa Lane, Chikkamavalli, Bengaluru -560004 Have Changed My Name From ANDAL To ANDAL SATISH vide Affidavit Dated 08/05/2025 before Notary Mamatha N.K Bangalore

CHANGE OF NAME
ನಾನು, **ಮಂಜುಳ ಕುಮಾರ್. ಎನ್. ಕೆ,** ವಯಸ್ಸು 49 ವರ್ಷ, ಶ್ರೀ ನರೇಂದ್ರ ಕುಮಾರ್. ಕೆ.ವಿ, ಅವರ ಪತ್ನಿ ವಾಸ ನಂ.312, 2ನೇ ಬಿ'ಕ್ರಾಸ್, ಒ.ಎಂ.ಬಿ.ಆರ್ ಲೇಔಟ್, ಬೆಂಗಳೂರು -43, ನನ್ನ ಎಲ್ಲಾ ದಾಖಲೇಗಳಲ್ಲಿ ನನ್ನ ಹೆಸರು **ಎಸ್ ಮಂಜುಳ ಬಾಯಿ** ಇಂದ **ಮಂಜುಳ ಕುಮಾರ್ .ಎನ್.ಕೆ** ಎಂದು ಸಲ್ಲಿಸಿ ಮತ್ತು ಘೋಷಿಸುತ್ತೇನೆ ಅಫಿಡವಿಟ್ ಮೂಲಕ ದಿನಾಂಕ : 09–05–2025 ಸ್ಥಳ: ಬೆಂಗಳೂರು ವೈ.ಆರ್ ಚಂದ್ರಶೇಖರ್, ಅವರ ಮುಂದೆ ಪ್ರಮಾಣವಚನ, ಇನ್ನು ಮುಂದೆ ನಾನು ಭವಿಷ್ಯದ ಎಲ್ಲಾ ಉದ್ದೇಶಗಳಿಗಾಗಿ **ಮಂಜುಳ ಕುಮಾರ್.ಎನ್.ಕೆ.** ಎಂದು ಕರೆಯಲ್ಪಡುತ್ತೆನೆ

BUSINESS

Business to Business

Business

FOR BUSINESS
Takeovers Solutions, Arranging Funds for Mega Projects in Bangalore. Contact: Dr. Swamy Naidu, MBA (U.S.A) Anika Project Consultants, Bangalore:- 9342247637.

JOB OPPORTUNITIES

General

WANTED ENGLISH speaking Female warden For Girls Hostel @ Kengeri with food accommodation,sal 20k,6363288544,

Marketing & Sales

MARKETING & Sales Executive for Top Brand Kids and Ladies wear in Sheshadripuram, Bangalore.Candidates with experience and scooter preferred.Call: 8217039220

Security & Detectives

SECURITY AGENCY
Required Experience Manager, Marketing-Manager, Fd-Exe, Tally Clerk, R.T.Nagar Bangalore Ph.080-23437474 23437797 Mob.8892073262

Wanted

WANTED COMPUTER
Operator with designing Degree with 5 years experience Panchasheela degree college, Rajarajeshwarinagar, Bangalore-98. Contact 9591844464

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

WEEKEND CORNER

DH DECCAN HERALD ಪ್ರಜಾವಾಣಿ
Classifieds
More value, more impact
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
+91 9731810277 | +91 9886213331
+91 9845114560 | +91 9900428036
080- 45557163/164

EDUCATION CORNER

R.E.S. POLYTECHNIC
Estd: 1986 - Recognised by Govt. of Karnataka & AICTE
10th Pass / What Next ???
JOIN DIPLOMA IN: ♦ Computer Science ♦ IS ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
EVENING / WEEKEND CLASSES
Available for working Professionals to EE
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466
RES-25603

ಟ್ಯಾಂಕರ್‌ಗಳಿಗೆ ಹಸಿರು ನಿಶಾನೆ, ಸಣ್ಣ ಮನೆಗಳಿಗೆ 'ಪ್ರಮಾಣ ಪತ್ರ' ವಿತರಿಸಿದ ಡಿ.ಕೆ.ಶಿವಕುಮಾರ್

'ಸಂಚಾರಿ – ಸರಳ ಕಾವೇರಿ'ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆ್ಯಪ್ ಮತ್ತು ಜಾಲತಾಣದ ಮೂಲಕ ಬೇಡಿಕೆ ಸಲ್ಲಿಸಿ ಟ್ಯಾಂಕರ್ ನೀರು ಪಡೆಯುವ 'ಸಂಚಾರಿ ಕಾವೇರಿ', ಕಂತುಗಳ ಮೂಲಕ ಠೇವಣಿ ಪಾವತಿಸಿ ಕಾವೇರಿ ನೀರಿನ ಸಂಪರ್ಕ ಪಡೆಯುವ 'ಸರಳ ಕಾವೇರಿ' ಯೋಜನೆಗಳಿಗೆ ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶುಕ್ರವಾರ ಚಾಲನೆ ನೀಡಿದರು.

ವಿಧಾನಸೌಧದ ಮುಂಭಾಗದಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಟ್ಯಾಂಕರ್ ನೀರು ಕುಡಿದು, ಟ್ಯಾಂಕರ್‌ಗಳಿಗೆ ಹಸಿರು ನಿಶಾನೆ ತೋರಿಸಿ, ಸಣ್ಣ ಮನೆಗಳ ಮಾಲೀಕರಿಗೆ ಕಾವೇರಿ ಸಂಪರ್ಕ 'ಪ್ರಮಾಣ ಪತ್ರ' ನೀಡುವ ಮೂಲಕ ಎರಡೂ ಯೋಜನೆಗಳಿಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ನಗರದಲ್ಲಿ ಮೂರು ಸಾವಿರ ಮಂದಿ ಕೊಳವೆಬಾವಿ ಕೊರೆಸಿ, ಟ್ಯಾಂಕರ್‌ಗಳನ್ನಿಟ್ಟುಕೊಂಡು ನೀರಿನ ಸಂಕಷ್ಟ ಎದುರಾದಾಗ ₹500 ರಿಂದ ₹3ಸಾವಿರದವರೆಗೂ ದರ ನಿಗದಿಪಡಿಸಿ ಮಾರಾಟ ಮಾಡುತ್ತಿದ್ದಾರೆ. ಇದೊಂದು ಮಾಫಿಯವಾಗಿದ್ದು, ಇದನ್ನು ಹತ್ತಿಕ್ಕಿ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ನೀರು ಪೂರೈಸಲು ದೇಶದಲ್ಲೇ ಮೊದಲ ಬಾರಿಗೆ ಸಂಚಾರಿ ಕಾವೇರಿ ಯೋಜನೆ ಜಾರಿಗೊಳಿಸಲಾಗಿದೆ' ಎಂದು ತಿಳಿಸಿದರು.

'ಬೇಡಿಕೆ ಸಲ್ಲಿಸಿದ 24 ಗಂಟೆಗಳೊಳಗೆ ಕಡಿಮೆ ಬೆಲೆಯಲ್ಲಿ ಬಿಐಎಸ್ ಪ್ರಮಾಣಿತ ಶುದ್ಧ ಕುಡಿಯುವ ನೀರು ಗ್ರಾಹಕರ ಮನೆ ಬಾಗಿಲಿಗೆ ತಲುಪುತ್ತದೆ. ಈ ಯೋಜನೆ ಮೂಲಕ ಪೂರೈಸುವ 4 ಸಾವಿರ ಲೀಟರ್ ನೀರಿಗೆ ₹660 ಹಾಗೂ 6 ಸಾವಿರ ಲೀಟರ್ ನೀರಿಗೆ ₹740 ದರ ನಿಗದಿ ಮಾಡಲಾಗಿದೆ. ಇದು ಕೊಳವೆ ಬಾವಿ ನೀರಲ್ಲ. ಇದು ಜಲಮಂಡಳಿ ಪೂರೈಸುತ್ತಿರುವ ಶುದ್ಧ ಕಾವೇರಿ ನೀರು' ಎಂದರು.

'ಕಾವೇರಿ ನೀರಿನ ಸಂಪರ್ಕಕ್ಕಾಗಿ ನಿಗದಿಪಡಿಸಿರುವ ಶುಲ್ಕವನ್ನು ಒಮ್ಮೆಲೇ ಪಾವತಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಅಪಾರ್ಟ್‌ಮೆಂಟ್‌ನವರು ಹೇಳುತ್ತಿದ್ದರು. ಅದಕ್ಕಾಗಿಯೇ ಕಂತುಗಳ ಮೂಲಕ ಠೇವಣಿ ಪಾವತಿಸುವ 'ಸರಳ ಕಾವೇರಿ' ಯೋಜನೆಗೆ ಚಾಲನೆ ನೀಡಿದ್ದೇವೆ. ಒಟ್ಟು ಠೇವಣಿಯ ಶೇಕಡಾ 20ರಷ್ಟನ್ನು ಪಾವತಿಸಿ ಕಾವೇರಿ ಸಂಪರ್ಕ ಪಡೆದುಕೊಂಡು, ಉಳಿದ ಹಣವನ್ನು 12 ಕಂತುಗಳಲ್ಲಿ ಪಾವತಿಸಬಹುದು' ಎಂದರು.

'ಈಗಾಗಲೇ 600 ಚದರ ಅಡಿ ವಿಸ್ತೀರ್ಣದ ಮನೆಯವರಿಗೆ ₹1 ಸಾವಿರ ಪಾವತಿಸಿ ಕಾವೇರಿ ಸಂಪರ್ಕ ಪಡೆದು, ಉಳಿದಿದ್ದನ್ನು ಕಂತುಗಳಲ್ಲಿ ಪಾವತಿಸುವ ವ್ಯವಸ್ಥೆಯನ್ನು ಆರಂಭಿಸಲಾಗಿದೆ' ಎಂದರು.

ಬೆಂಗಳೂರು ಜಲಮಂಡಳಿ ಅಧ್ಯಕ್ಷ ವಿ.ರಾಮ್‌ಪ್ರಸಾತ್ ಮನೋಹರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಸಕರಾದ ರಿಜ್ವಾನ್ ಅರ್ಷದ್, ಎಸ್.ಟಿ.ಸೋಮಶೇಖರ್ ಮಾತನಾಡಿದರು. ಶಾಸಕ ಎ.ಸಿ.ಶ್ರೀನಿವಾಸ್ ಹಾಜರಿದ್ದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಟ್ಯಾಂಕರ್ ನೀರು ಕುಡಿಯುವ ಮೂಲಕ 'ಸಂಚಾರಿ ಕಾವೇರಿ' ಯೋಜನೆಗೆ ಚಾಲನೆ ನೀಡಿದರು

'ಟ್ಯಾಂಕರ್‌ಗಳು' ವಿಧಾನಸೌಧದ ಆವರಣದಲ್ಲಿ ಸಾಲಾಗಿ ನಿಂತಿದ್ದವು

'ಸಂಚಾರಿ ಕಾವೇರಿ' ನೋಂದಣಿ

ಕ್ಯೂಆರ್‌ಕೋಡ್ ಸ್ಕ್ಯಾನ್ ಮಾಡಿ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ. ಆ್ಯಪ್ ಮೂಲಕ ಅಥವಾ ಜಲಮಂಡಳಿ ಜಾಲತಾಣದ (https://kaverionwheels.bwssb.gov.in/#/tankerownerregistration) ಮೂಲಕ ಗ್ರಾಹಕರು ನೊಂದಣಿ ಮಾಡಿಕೊಳ್ಳಬಹುದು. ನೋಂದಣಿ ನಂತರ ಗ್ರಾಹಕರು ತಮ್ಮ ಅಗತ್ಯಕ್ಕೆ ತಕ್ಕಂತಹ ಸಾಮರ್ಥ್ಯದ ಟ್ಯಾಂಕರ್ ಬುಕ್ಕಿಂಗ್ ಮಾಡಬೇಕು. ಬುಕ್ಕಿಂಗ್ ನಂತರ ಆನ್‌ಲೈನ್‌ಲ್ಲೇ ಹಣ ಪಾವತಿಸಬೇಕು. ನಂತರ ಬುಕ್ಕಿಂಗ್ ಖಚಿತವಾಗುತ್ತದೆ. 24 ಗಂಟೆಗಳ ಒಳಗಾಗಿ ನೀರು ಟ್ಯಾಂಕರ್ ಮೂಲಕ ಮನೆಬಾಗಿಲಿಗೆ ಬರುತ್ತದೆ. ಗ್ರಾಹಕರು ಟ್ಯಾಂಕರ್ ಚಲನೆಯನ್ನು ಮೊಬೈಲ್‌ನಲ್ಲಿ ಟ್ರ್ಯಾಕ್ ಮಾಡಬಹುದು.

ವಿ.ರಾಮ್‌ಪ್ರಸಾತ್ ಮನೋಹರ್, ಅಧ್ಯಕ್ಷ, ಜಲಮಂಡಳಿ

'ಕಾವೇರಿ ಆರತಿ: ರಾಮ್‌ಪ್ರಸಾತ್ ಅಧ್ಯಕ್ಷ'

ಬೆಂಗಳೂರು ಜಲಮಂಡಳಿ ಸ್ಯಾಂಕಿ ಕೆರೆಯಲ್ಲಿ ಆಯೋಜಿಸಿದ್ದ 'ಕಾವೇರಿ ಆರತಿ' ಕಾರ್ಯಕ್ರಮ ಯಶಸ್ವಿಯಾಯಿತು. ರಾಜ್ಯ ಸರ್ಕಾರ ಕೆಆರ್‌ಎಸ್ ಬಳಿ ದಸರಾ ಸಂದರ್ಭದಲ್ಲಿ ಇದೇ ಕಾರ್ಯಕ್ರಮ ಆಯೋಜಿಸುತ್ತಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

'ಕಾರ್ಯಕ್ರಮಕ್ಕಾಗಿ ಜಲ ಸಂಪನ್ಮೂಲ ಇಲಾಖೆಯಿಂದ ₹100 ಕೋಟಿ ಮೀಸಲಿಡಲಾಗಿದೆ. ಪ್ರವಾಸೋದ್ಯಮ, ಧಾರ್ಮಿಕ ದತ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳನ್ನು ಸಹಯೋಗದೊಂದಿಗೆ ಈ ಕಾರ್ಯಕ್ರಮ ನಡೆಸಲಾಗುತ್ತಿದೆ. ಇದಕ್ಕಾಗಿ ಸಮಿತಿ ರಚಿಸಲಾಗಿದ್ದು, ವಿ. ರಾಮ್‌ಪ್ರಸಾತ್ ಮನೋಹರ್ ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ' ಎಂದು ತಿಳಿಸಿದರು.

ಉಪಮುಖ್ಯಮಂತ್ರಿ ನೀಡಿದ ಭರವಸೆ

- 'ಮನೆ ಬಾಗಿಲಿಗೆ ಕಾವೇರಿ ನೀರು ತಲುಪಿಸಿದಂತೆ, ಆಸ್ತಿ ಖಾತೆಗಳನ್ನು ಮನೆ ಬಾಗಿಲಿಗೆ ತಲುಪಿಸುವಂತಹ ಯೋಜನೆ ಶೀಘ್ರದಲ್ಲೇ ಜಾರಿಗೆ
- ನಗರದಲ್ಲಿ ಕೆಲವೆಡೆ ಕೊಳಚೆ ನೀರು ಮಿಶ್ರಣವಾಗುತ್ತಿರುವ ಪ್ರಕರಣಗಳು ಗಮನಕ್ಕೆ ಬಂದಿವೆ. ಇದನ್ನು ಸರಿಪಡಿಸಲು ಕ್ರಮ
- ಕೊಳಚೆ ನೀರು ಸಂಸ್ಕರಿಸಲು ಕೇಂದ್ರ ಸರ್ಕಾರ ಹಾಗೂ ವಿಶ್ವ ಬ್ಯಾಂಕ್‌ಗಳ ನೆರವು ಪಡೆಯಲಾಗುವುದು. ಒಳಚರಂಡಿ ನೀರಿನ ಶುದ್ಧೀಕರಣ ಮತ್ತು ಬಳಕೆ ಕುರಿತು ಜಲಮಂಡಳಿ ಅಧಿಕಾರಿಗಳೊಂದಿಗೆ ಶೀಘ್ರವೇ ಸಭೆ

ಬೆಳ್ಳಂದೂರು ಕೆರೆ ಅಭಿವೃದ್ಧಿಗೆ ₹79.67 ಕೋಟಿ: ಸಂಪುಟ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳ್ಳಂದೂರು ಕೆರೆಯ ಅಭಿವೃದ್ಧಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹೆಚ್ಚುವರಿಯಾಗಿ ಅಗತ್ಯ ಇರುವ ₹79.67 ಕೋಟಿಯ ಪೈಕಿ ಶೇಕಡಾ 25ರಷ್ಟು ಮೊತ್ತವನ್ನು ಬಿಡಿಎ ಕೆರೆ ಪುನಶ್ಚೇತನ ಶುಲ್ಕ ಒಳಗೊಂಡಂತೆ ಇತರ ಸ್ವಂತ ಆರ್ಥಿಕ ಸಂಪನ್ಮೂಲಗಳಿಂದ ಭರಿಸಲು ಸೂಚಿಸಿ, ಶೇ 75ರಷ್ಟು ಅನುದಾನವನ್ನು ಸರ್ಕಾರದಿಂದ ಮಂಜೂರು ಮಾಡಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

'ಬೆಳ್ಳಂದೂರು ಕೆರೆಯ ಸಮಗ್ರ ಅಭಿವೃದ್ಧಿಗೆ ಹೆಚ್ಚುವರಿ ಹಣ ಅಗತ್ಯ ಇದ್ದರೆ ಪ್ರತ್ಯೇಕವಾಗಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬೇಕು ಎಂದು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಸೂಚಿಸಿತ್ತು. ಬೆಳ್ಳಂದೂರು ಕೆರೆಯ ಪುನಶ್ಚೇತನ ಮತ್ತು ಅಭಿವೃದ್ಧಿ ಕಾಮಗಾರಿಗೆ ₹79.67 ಕೋಟಿ ಹೆಚ್ಚುವರಿ ಅನುದಾನ ಅಗತ್ಯವಿದೆ ಎಂದು ನಗರಾಭಿವೃದ್ಧಿ ಇಲಾಖೆಯು ಪ್ರಸ್ತಾವ ಸಲ್ಲಿಸಿತ್ತು' ಎಂದು ಸಚಿವ ಸಂಪುಟ ಸಭೆಯ ಬಳಿಕ ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

'ಬೆಂಗಳೂರು ನಗರದ ವೃಷಭಾವತಿ ವ್ಯಾಲಿಯಿಂದ ದ್ವಿತೀಯ ಹಂತದಲ್ಲಿ ಸಂಸ್ಕರಿಸಿದ 308 ಎಂಎಲ್‌ಡಿ ನೀರಿನಿಂದ 259 ಕೆರೆಗಳನ್ನು ತುಂಬಿಸುವ ಮೂಲ ಯೋಜನೆಯ ಪೈಕಿ, ಲಿಫ್ಟ್-4 ಗೋಪಾಲಪುರ ಕೆರೆಯಿಂದ ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ 41 ಕೆರೆಗಳಿಗೆ ನೀರು ತುಂಬಿಸುವ ₹280 ಕೋಟಿ (ವಿಶ್ವಬ್ಯಾಂಕ್ ಠೇವಣಿ ಕೊಡುಗೆ ₹250 ಕೋಟಿ, ರಾಜ್ಯ ಸರ್ಕಾರದ ₹30 ಕೋಟಿ) ಅಂದಾಜು ಮೊತ್ತದ ಯೋಜನೆಗೂ ಸಭೆ ಅನುಮೋದನೆ ನೀಡಿದೆ' ಎಂದು ಅವರು ತಿಳಿಸಿದರು.

'ಐಎಂಎಫ್‌ನಿಂದ ಸಾಲ: ಪಾಕ್

ಇಸ್ಲಾಮಾಬಾದ್/ ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಹಣಕಾಸು ನಿಧಿಯು (ಐಎಂಎಫ್) ಪಾಕಿಸ್ತಾನಕ್ಕೆ 100 ಕೋಟಿ ಡಾಲರ್ (ಅಂದಾಜು ₹8,540 ಕೋಟಿ) ಸಾಲ ತಕ್ಷಣ ಬಿಡುಗಡೆ ಮಾಡಲು ಒಪ್ಪಿದೆ ಎಂದು ಪಾಕ್ ಪ್ರಧಾನ ಮಂತ್ರಿ ಕಚೇರಿ ಶುಕ್ರವಾರ ತಿಳಿಸಿದೆ.

'ಪಾಕಿಸ್ತಾನಕ್ಕೆ ಐಎಂಎಫ್ 100 ಕೋಟಿ ಡಾಲರ್ ಸಾಲ ವಿತರಿಸಲು ಅನುಮೋದನೆ ನೀಡಿರುವುದು ಮತ್ತು ಅದನ್ನು ತಪ್ಪಿಸಲು ಭಾರತವು ಮಾಡಿದ್ದ ತಂತ್ರಗಳು ವಿಫಲ ಆಗಿರುವುದಕ್ಕೆ ಪ್ರಧಾನಿ ಶೆಹಬಾಜ್ ಷರೀಫ್ ಸಂತಸ ವ್ಯಕ್ತಪಡಿಸಿದ್ದಾರೆ' ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಐಎಂಎಫ್ ಪಾಕಿಸ್ತಾನಕ್ಕೆ ಕಳೆದ ವರ್ಷ 700 ಕೋಟಿ ಡಾಲರ್ ಸಾಲ ಮಂಜೂರು ಮಾಡಿತ್ತು. ಅದರ ಒಂದು ಕಂತು ಶುಕ್ರವಾರ ಬಿಡುಗಡೆ ಮಾಡಿದೆ.

ವಿರೋಧಿಸಿದ್ದ ಭಾರತ: ಐಎಂಎಫ್ ಹಣಕಾಸಿನ ನೆರವು ನೀಡಿದರೆ ಪಾಕಿಸ್ತಾನವು ಅದನ್ನು ಗಡಿಯಾಚೆಗಿನ ಭಯೋತ್ಪಾದನೆಗೆ ದುರುಪಯೋಗ ಪಡಿಸಿಕೊಳ್ಳಬಹುದು ಎಂದು ಭಾರತ ಆತಂಕ ವ್ಯಕ್ತಪಡಿಸಿತ್ತು.

ಸಾಲ ನೀಡುವ ಪ್ರಸ್ತಾವವನ್ನು ಶುಕ್ರವಾರ ನಡೆದ ಐಎಂಎಫ್ ಆಡಳಿತ ಮಂಡಳಿ ಸಭೆಯಲ್ಲಿ ವಿರೋಧಿಸಿದ್ದ ಭಾರತ, ಮತದಾನದಿಂದ ದೂರ ಉಳಿದಿತ್ತು.

ತರಹುಣಿಸೆ: ಪ್ರತಿಷ್ಠಾಪನಾ ಮಹೋತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: 'ದೇವಾಲಯಗಳು ಕಷ್ಟದಲ್ಲಿರುವವರ ಮನಸ್ಸಿಗೆ ಶಾಂತಿ-ನೆಮ್ಮದಿ ಮತ್ತು ಪರಿಹಾರಗಳನ್ನು ನೀಡುವ ತಾಣಗಳಾಗಿವೆ' ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

'ಗ್ರಾಮಗಳಲ್ಲಿ ದೇವಾಲಯಗಳನ್ನು ನಿರ್ಮಿಸುವುದರಿಂದ ಜನರು ಒಂದೆಡೆ ಬೆರೆತು, ಒಗ್ಗಟ್ಟು ಮೂಡುವುದರ ಜೊತೆಗೆ ನಮ್ಮ ಸನಾತನ ಹಿಂದೂ ಧರ್ಮ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಸಹಕಾರಿಯಾಗುತ್ತದೆ' ಎಂದರು.

ಬ್ಯಾಟರಾಯನಪುರ ಕ್ಷೇತ್ರದ ತರಹುಣಿಸೆ ಗ್ರಾಮದಲ್ಲಿ ಮಹಾಗಣಪತಿ, ಬಸವೇಶ್ವರಸ್ವಾಮಿ, ಮಹದೇಶ್ವರಸ್ವಾಮಿ, ವಿಮಾನಗೋಪುರ ಹಾಗೂ ನಾಗರ ದೇವತಾ ಪ್ರತಿಷ್ಠಾಪನಾ ಮಹೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಸಚಿವ ಕೃಷ್ಣಬೈರೇಗೌಡ, ಶಾಸಕ ಎಸ್.ಆರ್. ವಿಶ್ವನಾಥ್, ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಟಿ.ಪಿ.ಪ್ರಕಾಶ್, ಉಪಾಧ್ಯಕ್ಷ ಟಿ.ಪಿ. ಮುನೇಗೌಡ, ಕಾರ್ಯದರ್ಶಿ ಟಿ.ಎಸ್. ನಾಗರಾಜರಾವ್, ಖಜಾಂಚಿ ಟಿ.ಎಂ. ಶ್ರೀರಾಮ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ವಾರ್ಷಿಕ ಅಥ್ಲೆಟಿಕ್ ಕ್ರೀಡಾಕೂಟ: ಉದ್ಘಾಟನೆ: ಗಂಗರಾಜು, ಅಧ್ಯಕ್ಷತೆ: ಶುಭಾ, ಉಪಸ್ಥಿತಿ: ಈಶ್ವರ್ ನಾಯಕ್, ಶ್ರೀನಿವಾಸ್, ಆಯೋಜನೆ: ವಿಜಯನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯದ ಸಾಯಿ ಗ್ರೌಂಡ್, ಬೆಳಿಗ್ಗೆ 9

ಬ್ರಹ್ಮರಥೋತ್ಸವ-ಗಂಗಾನಯನ, ಧ್ವಜಾರೋಹಣ: ಆಯೋಜನೆ ಮತ್ತು ಸ್ಥಳ: ಅನ್ನಪೂರ್ಣೇಶ್ವರಿ ಸಮೇತ ಶ್ರೀ ನಗರೇಶ್ವರ ಸ್ವಾಮಿ ದೇವಸ್ಥಾನ, ನಗರ್ತ ಪೇಟೆ, ಬೆಳಿಗ್ಗೆ 9ರಿಂದ

'ಆಲ್ಟರ್ನೇಟಿವ್-25, ಗ್ರ್ಯಾಂಡ್ ಇಂಪಾಕ್ಟಥಾನ್: ಅತಿಥಿಗಳು: ರಂದೀಪ್ ಡಿ., ರೇವತಿ ಕಾಮತ್, ಸಂಯುಕ್ತಾ ಹೊರನಾಡು, ವಿನಯ್ ಶಿಂಧೆ, ಸ್ಥಳ: ಕೆಎಸ್‌ಎಲ್‌ಟಿಎ ಕ್ಲಬ್, ಕಬ್ಬನ್ ಪಾರ್ಕ್, ಬೆಳಿಗ್ಗೆ 9.30

ವೀರಶೈವ ಶತಕ ಸಾಹಿತ್ಯ ಕೃತಿ ಬಿಡುಗಡೆ, ಎಸ್.ಆರ್. ಸದಾಶಿವಯ್ಯರ 73ನೇ ಜನ್ಮ ದಿನೋತ್ಸವ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಅಧ್ಯಕ್ಷತೆ: ಮಂಜುನಾಥ ಮಳಿಮಠ, ಅತಿಥಿಗಳು: ಶೈಲಜಾ ಸೋಮಣ್ಣ, ರಾಗಂ, ಪಾಲನೇತ್ರ, ಭದ್ರಾವತಿ ರಾಮಾಚಾರಿ, ಗುಂಡಿಗೆರೆ ವಿಶ್ವನಾಥ್, ಪಿ. ದಿವಾಕರ ನಾರಾಯಣ, ದೇವಿಕಾ ಎಸ್., ಆಯೋಜನೆ: ಸುಮಾ ಪ್ರಕಾಶನ, ಜ್ಞಾನ ಸಂಬುದ್ಧ ಪ್ರಕಾಶನ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

ಉಪನ್ಯಾಸ, ಭರತನಾಟ್ಯ, ಹಿಂದೂಸ್ತಾನಿ ಗಾಯನ: ಉಪನ್ಯಾಸ: ಲಕ್ಷ್ಮೀಕಾಂತ ಹೆಗಡೆ, ಭರತನಾಟ್ಯ: ಪೂಜಾ ಲೋಕೇಶ್, ಗಾಯನ: ಮನು ಹೆಗಡೆ, ಆಯೋಜನೆ ಮತ್ತು ಸ್ಥಳ: ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿ ಭವನ, ಆನಂದರಾವ್ ವೃತ್ತ, ಬೆಳಿಗ್ಗೆ 10

ಬಸವ ಜಯಂತಿ: ಉದ್ಘಾಟನೆ: ಆಶೋಕ ಸಂಗಪ್ಪ ಆಲೂರ, ಉಪನ್ಯಾಸ: ಸಿ. ವೀರಣ್ಣ, ಅತಿಥಿಗಳು: ಎಸ್. ಷಡಕ್ಷರಿ, ಎಚ್.ಎಲ್. ಪುಷ್ಪಾ, ಕೆ.ವಿ. ನಾಗರಾಜಮೂರ್ತಿ, ಅಧ್ಯಕ್ಷತೆ: ಸಿ. ಸೋಮಶೇಖರ, ಆಯೋಜನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬೆಂಗಳೂರು ನಗರ ಘಟಕ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಸ್ಥಳ: ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, ಶಿವರಾತ್ರೀಶ್ವರ ವೃತ್ತ, 1ನೇ ಮುಖ್ಯರಸ್ತೆ, ಜಯನಗರ, ಬೆಳಿಗ್ಗೆ 11

ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್ 75ನೇ ವರ್ಷಾಚರಣೆ: ಅಧ್ಯಕ್ಷತೆ: ಎಂ.ಎಸ್. ಶ್ರೀನಿವಾಸನ್, ಉದ್ಘಾಟನೆ: ಸಿ.ಎಚ್. ವೆಂಕಟಾಚಲಂ. ಅತಿಥಿಗಳು: ಕೆ. ಸತ್ಯನಾರಾಯಣ ರಾಜು, ಎಂ. ಜಯನಾಥ್, ಅನಿರುದ್ಧ ಕುಮಾರ್, ಕೆ. ಶ್ರೀಕೃಷ್ಣ, ರಿಚಾ ಗಾಂಧಿ, ಬಿ. ವೆಂಕಟರಾವ್, ಆಯೋಜನೆ: ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್, ಸ್ಥಳ: ಬೆಂಗಳೂರು ಸೆಂಟ್ರಲ್ ಕಾಲೇಜು ಆವರಣದ ಜ್ಞಾನಜ್ಯೋತಿ ಆಡಿಟೋರಿಯಂ, ಬೆಳಿಗ್ಗೆ 10

ಟಿ.ವಿ. ದ್ವಾರಕನಾಥ್ ಶತಮಾನೋತ್ಸವ, ಪುತ್ಥಳಿ ಅನಾವರಣ: ಅತಿಥಿಗಳು: ಅರಳುಮಲ್ಲಿಗೆ ಪಾರ್ಥಸಾರತಿ, ಶ್ರೀನಿವಾಸ ವರಖೇಡಿ, ಅನಾವರಣ: ಎಸ್. ಆರ್. ರಾಮಸ್ವಾಮಿ, ಸನ್ಮಾನಿತರು: ಬಿ.ಸಿ. ಶಿವಕುಮಾರ್, ಆಯೋಜನೆ ಮತ್ತು ಸ್ಥಳ: ಅಭಿನವ ಡ್ಯಾನ್ಸ್ ಕಂಪನಿ ಆವರಣ, ಬಸವನಗುಡಿ ಡಿವಿಜಿ ರಸ್ತೆ, ಬೆಳಿಗ್ಗೆ 10.30

ಸುಸ್ಥಿರ ಜೀವನಕ್ಕಾಗಿ ಉದ್ಯಾನನಗರಿಯ ಪುನಶ್ಚೇತನ: ಉದ್ಘಾಟನೆ: ರಿಜ್ವಾನ್ ಅರ್ಷದ್, ಅಧ್ಯಕ್ಷತೆ: ಎ.ಬಿ. ಪಾಟೀಲ, ಅತಿಥಿಗಳು: ಅಶೋಕ್ ದಳವಾಯಿ, ರಾಜೇಂದ್ರ ಹೆಗಡೆ, ಚಂದ್ರಶೇಖರ ಬಿರಾದಾರ್, ಆಯೋಜನೆ: ಹಸಿರು ಬೆಂಗಳೂರು: ಸ್ಥಳ: ಕೃಷಿ ತಂತ್ರಜ್ಞರ ಸಂಸ್ಥೆ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 10.30

ಆರ್. ಕಲ್ಯಾಣಮ್ಮ, ಕೆ.ಟಿ. ಬನಶಂಕರಮ್ಮ ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ: ಕೆ. ಮೋಹನ್ ದೇವ್ ಆಳ್ವ, ಪುರಸ್ಕೃತರು: ಬೈರಮಂಗಲ ರಾಮೇಗೌಡ, ಎಚ್.ಎಸ್. ವೇಣುಗೋಪಾಲ್, ಆಯೋಜನೆ ಮತ್ತು ಸ್ಥಳ: ಅಖಿಲ ಕರ್ನಾಟಕ ಮಕ್ಕಳ ಕೂಟ, ಕೋಟೆ, ಬೆಳಿಗ್ಗೆ 10.30

ಹೇಮರೆಡ್ಡಿ ಮಲ್ಲಮ್ಮ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ವೇಮನಾನಂದ ಸ್ವಾಮೀಜಿ, ಉಪಸ್ಥಿತಿ: ಶಿವರಾಜ ಎಸ್. ತಂಗಡಗಿ, ಅಧ್ಯಕ್ಷತೆ: ಉದಯ ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಎಂ. ಚಿದಾನಂದಮೂರ್ತಿ -95: ಉಪನ್ಯಾಸ: ಹಿ.ಚಿ. ಬೋರಲಿಂಗಯ್ಯ, ಆರ್ ಶೇಷಶಾಸ್ತ್ರಿ, ಆಶಯನುಡಿ: ರಾ.ನಂ. ಚಂದ್ರಶೇಖರ, ಅಧ್ಯಕ್ಷತೆ: ವ.ಚ. ಚನ್ನೇಗೌಡ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಬಿಎಂಶ್ರೀ ಪ್ರತಿಮೆ ಎದುರು, ಬಸವನಗುಡಿ ನ್ಯಾಷನಲ್ ಹೈಸ್ಕೂಲ್ ವೃತ್ತ, ಬೆಳಿಗ್ಗೆ 11

ಒಂದು ಸಂಜೆ 'ರೋಮಾಂಚಕ ಸ್ತ್ರೀ ಕಥೆಗಳು': ಸಂವಾದ: ಶೈನಿ ಆಂಥೋನಿ, ಆಯೋಜನೆ ಮತ್ತು ಸ್ಥಳ: ಎಚ್‌ಎಸ್‌ಆರ್- ಗೋಸ್ವಾಪ್ ಬೆಂಗಳೂರು, ಸಂಜೆ 4

ಬ್ರಾಹ್ಮಣ ಸಂಘದ ಅಧ್ಯಕ್ಷ ಎಸ್, ರಘುನಾಥ್, ಹಿರಿಯ ಉಪಾಧ್ಯಕ್ಷ ಆರ್. ಲಕ್ಷ್ಮೀಕಾಂತ್‌ಗೆ ಅಭಿನಂದನಾ ಸಮಾರಂಭ: ಪ್ರವಚನ: ಪಾವಗಡ ಪ್ರಕಾಶ್ ರಾವ್, ಅಧ್ಯಕ್ಷತೆ: ಭಾಸ್ಕರ ರಾವ್, ಆಮಂತ್ರಿತರು: ವಲ್ಲಭ ಕೆ.ಎಸ್., ಆಯೋಜನೆ: ಮಲ್ಲೇಶ್ವರಂ ಬ್ರಾಹ್ಮಣ ಸಭಾ ಟ್ರಸ್ಟ್, ಸ್ಥಳ ಹಿಮಾಂಶು ಜ್ಯೋತಿ ಕಲಾ ಪೀಠ, 4ನೇ ಮುಖ್ಯರಸ್ತೆ, ಮಲ್ಲೇಶ್ವರ, ಸಂಜೆ 5

ಮುನೇಶ್ವರ ಸ್ವಾಮಿ 94ನೇ ವಾರ್ಷಿಕೋತ್ಸವ: ಸಾನ್ನಿಧ್ಯ: ನಾರಾಯಣಾಚಾರ್ಯ ಸ್ವಾಮೀಜಿ, ಅತಿಥಿ: ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ ಮತ್ತು ಸ್ಥಳ: ಮುನೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್, ರಂಗನಾಥಪುರ, 17ನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 5,30

ಬೇಸಿಗೆ ಶಿಬಿರ ಸಮಾರೋಪ: ಅತಿಥಿಗಳು: ಶಂಕರ ಬಿದರಿ, ಎಂ.ವಿ.ಸಿ. ಹನುಮಂತಯ್ಯ, ಆಯೋಜನೆ: ರಂಗಾಭರಣ, ಸ್ಥಳ: ಚಂದ್ರಪ್ರಿಯ ರಂಗಮಂದಿರ, ರಂಗಾಭರಣ ಕಲಾಕೇಂದ್ರ, ಕೆಇಬಿ ಬಡಾವಣೆ, ಸಂಜಯನಗರ, ಸಂಜೆ 6.30

ಮೇ 15ಕ್ಕೆ ಗ್ರೇಟರ್ ಬೆಂಗಳೂರು ಜಾರಿ

ಒಂದನೇ ಪುಟದಿಂದ...

ಬಿಬಿಎಂಪಿ ವಿಸರ್ಜನೆಯಾಗಿ ಅಧಿಕಾರಕ್ಕೆ ಬರುವ ಆಡಳಿತಾಧಿಕಾರಿ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುವ ಕಾರ್ಯಗಳನ್ನು ನಿರ್ವಹಿಸುವಾಗ, ಸರ್ಕಾರದ ನಿರ್ದೇಶನ, ಮಾರ್ಗದರ್ಶನ ಪಡೆಯಬೇಕು. ಯಾವುದೇ ಕಾರ್ಯನೀತಿಯ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಉದ್ಭವಿಸಿದರೆ ಸರ್ಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ ಎಂದು ಕಲಂ 131ರಲ್ಲಿ ಹೇಳಲಾಗಿದೆ. ಅಂದರೆ, ಬಿಬಿಎಂಪಿ ಆಡಳಿತ ಮೇ 15 ನಂತರ 'ಗ್ರೇಟರ್ ಬೆಂಗಳೂರು ಪ್ರದೇಶ'ವಾಗಲಿದ್ದು, ಆಡಳಿತಾಧಿಕಾರಿ ಮೂಲಕ ಸರ್ಕಾರವೇ ಎಲ್ಲವನ್ನೂ ನಿಯಂತ್ರಿಸಲಿದೆ.

'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ-2024' ಜಾರಿಯಾದ ಮೇಲೆ ಮುಖ್ಯಮಂತ್ರಿಯವರ ನೇತೃತ್ವದ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' 120 ದಿನಗಳಲ್ಲಿ ರಚನೆಯಾಗಬೇಕು. ಪ್ರಾಧಿಕಾರದಲ್ಲಿ ಬೆಂಗಳೂರು ಅಭಿವೃದ್ಧಿ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಶಾಸಕರು- ಸಚಿವರು, ನಗರಾಭಿವೃದ್ಧಿ ಸಚಿವರು, ಪಾಲಿಕೆಗಳ ಮೇಯರ್‌ಗಳು, ಬಿಡಿಎ ಆಯುಕ್ತ, ಬೆಂಗಳೂರು ಜಲಮಂಡಳಿ ಅಧ್ಯಕ್ಷ, ಬಿಎಂಟಿಸಿ, ವ್ಯವಸ್ಥಾಪಕ ನಿರ್ದೇಶಕ, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ, ಕಂದಾಯ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಪೊಲೀಸ್ ಕಮಿಷನರ್, ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ, ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ನಿರ್ದೇಶಕ, ನಗರ ಭೂಸಾರಿಗೆ ನಿರ್ದೇಶನಾಲಯದ ಆಯುಕ್ತ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮಹಾನಗರ ಆಯುಕ್ತ ಸದಸ್ಯರಾಗಿರುತ್ತಾರೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

ಕಾಯ್ದೆ ಹಾದಿ

ವಿಧಾನ ಮಂಡಲದಲ್ಲಿ ಮಾರ್ಚ್ 13ರಂದು ಅಂಗೀಕಾರವಾಗಿದ್ದ 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ-2024'ಯನ್ನು ರಾಜ್ಯಪಾಲರ ಅಂಕಿತಕ್ಕಾಗಿ 2025ರ ಮಾರ್ಚ್ 17ರಂದು ಕಳುಹಿಸಲಾಗಿತ್ತು. ಮಸೂದೆಯು ಸಂವಿಧಾನದ 74ನೇ ತಿದ್ದುಪಡಿಗೆ ವಿರುದ್ಧವಾಗಿದೆ ಮತ್ತು ದೆಹಲಿ ಮಹಾನಗರ ಪಾಲಿಕೆಯ ವಿಭಜನೆ ಸಂದರ್ಭದಲ್ಲಿ ಆದಂತೆ ಸಮಸ್ಯೆಗಳು ಸೃಷ್ಟಿಯಾಗುತ್ತವೆ' ಎಂದು ಬೆಂಗಳೂರು ಟೌನ್ ಹಾಲ್ ಸಂಘಟನೆ ಹಾಗೂ ಬಿಜೆಪಿ ನಾಯಕರ ನಿಯೋಗಗಳು ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದವು. ಮಸೂದೆಯನ್ನು ತಡೆ ಹಿಡಿಯುವಂತೆಯೂ ಒತ್ತಾಯಿಸಿದ್ದವು.

'ಎರಡೂ ಮನವಿಗಳನ್ನು ನಾನು ಪರಿಶೀಲಿಸಿದ್ದೇನೆ. ಈ ಮಸೂದೆಯು ಕಾನೂನಾತ್ಮಕ ಮತ್ತು ಸಾರ್ವಜನಿಕ ಹಿತಾಸಕ್ತಿಯ ವಿಷಯಗಳನ್ನು ಒಳಗೊಂಡಿದೆ. ಆದ್ದರಿಂದ ಎರಡೂ ಮನವಿ ಪತ್ರಗಳಲ್ಲಿ ಪ್ರಸ್ತಾಪಿಸಿರುವ ಪ್ರಮುಖ ವಿಷಯಗಳ ಕುರಿತು ಸ್ಪಷ್ಟನೆ ಅಗತ್ಯವಿದೆ' ಎಂದು ರಾಜ್ಯಪಾಲರು ಮಾರ್ಚ್ 25ರಂದು ಮಸೂದೆಯನ್ನು ಹಿಂದಿರುಗಿಸಿದ್ದರು. ಅದಕ್ಕೆ ಅಗತ್ಯ ಸ್ಪಷನೆಯನ್ನು ರಾಜ್ಯ ಸರ್ಕಾರ ನೀಡಿತ್ತು. ಏಪ್ರಿಲ್ 24ರಂದು ಮಸೂದೆಗೆ ರಾಜ್ಯಪಾಲರು ಒಪ್ಪಿಗೆ ನೀಡಿದ್ದರು. ಅಂದು ಸಂಜೆಯೇ 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ- 2024' ಅನ್ನು ಅಧಿಸೂಚಿಸಿ, ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿತ್ತು.

ಮತ ಮಾರಿಕೊಳ್ಳಬೇಡಿ: ನಟ ವಸಿಷ್ಠ ಸಿಂಹ ಸಲಹೆ

ರಾಜರಾಜೇಶ್ವರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಿದ್ದ ವಾರ್ಷಿಕ ಸಾಂಸ್ಕತಿಕ ಹಾಗೂ ಕ್ರೀಡಾ ಉತ್ಸವವನ್ನು ನಟ ವಸಿಷ್ಠ ಸಿಂಹ ಉದ್ಘಾಟಿಸಿದರು

ಪ್ರಜಾವಾಣಿ ವಾರ್ತೆ

ಕೆಂಗೇರಿ: ಜನರ ಮತ ಭಿಕ್ಷೆಯಿಂದ ಜನಪ್ರತಿನಿಧಿಗಳು ಸೃಷ್ಟಿಯಾಗುತ್ತಾರೆ. ಅವರಿಂದ ಪುಡಿಗಾಸನ್ನು ನಿರೀಕ್ಷೆ ಮಾಡಿ, ಅನರ್ಹರನ್ನು ಆಯ್ಕೆ ಮಾಡಬೇಡಿ ಎಂದು ಬಹು ಭಾಷ ನಟ ವಸಿಷ್ಠ ಸಿಂಹ ಹೇಳಿದರು.

ಆರ್. ಆರ್. ಎಂಜಿನಿಯರಿಂಗ್ ಕಾಲೇಜಿನ ಕಲಾ ಸೌರಭ 2K25 ಕ್ರೀಡಾ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರತಿ ಯುವಕ, ಯುವತಿಯರು ಕಡ್ಡಾಯವಾಗಿ ಮತದಾನ ಮಾಡಬೇಕು. ಆ ಮೂಲಕ ಸಮರ್ಥ ಸರ್ಕಾರವನ್ನು ಆಯ್ಕೆ ಮಾಡಬೇಕು ಎಂದರು.

ಗಾರ್ಡನ್ ಸಿಟಿ ಎಂದು ಹೆಸರು ವಾಸಿಯಾಗಿದ್ದ ಬೆಂಗಳೂರಿನ ಹಿರಿಮೆಯನ್ನು ಮರುಸ್ಥಾಪಿಸಬೇಕಿದೆ. ಸ್ಥಳೀಯ ಭಾಷೆಯನ್ನು ಅಚ್ಚು ಕಟ್ಟಾಗಿ ಕಲಿತು ಮಾತನಾಡುವ ಮೂಲಕ ಮಾತ್ರ ಯಾವುದೇ ನೆಲಕ್ಕೆ ನಾವು ಗೌರವ ಸಲ್ಲಿಸಬಹುದಾಗಿದೆ ಎಂದು ಅಭಿಪ್ರಾಯಪಟ್ಟರು. ಅನ್ಯ ಭಾಷಿಕರು ಪ್ರೀತಿಯಿಂದ ಕನ್ನಡ ಕಲಿಕೆಗೆ ಮುಂದಾಗಬೇಕು ಎಂದು ಹೇಳಿದರು.

ಇದೇ ವೇಳೆ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ವಶಿಷ್ಠ ಸಿಂಹ ಬಹುಮಾನ ವಿತರಿಸಿದರು.

ಆರ್. ಆರ್. ಸಮೂಹ ಸಂಸ್ಥೆಗಳ ಅಧ್ಯಕ್ಷ ಎಸಿಎಸ್ ಅರುಣ್ ಕುಮಾರ್, ಕಾರ್ಯ ನಿರ್ವಾಹಕ ನಿರ್ದೇಶಕ ಎಸ್. ವಿಜಯಾನಂದ ಪ್ರಾಂಶುಪಾಲ ಡಾ.ಆರ್.ಬಾಲಕೃಷ್ಣ, ವಿಶ್ರಾಂತ ಕುಲಪತಿ ಡಾ.ಎ.ಕೆ. ಮರಿಯಪ್ಪನ್, ಸಾಂಸ್ಕೃತಿಕ ಮುಖ್ಯಸ್ಥೆ ಡಾ.ದೀಪಿಕಾ ಜೆ., ಕ್ರೀಡಾ ಮುಖ್ಯಸ್ಥ ಪ್ರೊ.ರಾಧಾಕೃಷ್ಣ ಆರ್.ಕೆ., ದೈಹಿಕ ಶಿಕ್ಷಣ ನಿರ್ದೇಶಕ ಮಲ್ಲಿಕಾರ್ಜುನ್, ಮತ್ತಿತರರು ಉಪಸ್ಥಿತರಿದ್ದರು.

ಹೆಗ್ಗುಂದ ಮಾರಮ್ಮನ ಜಾತ್ರೆಗೆ ಚಾಲನೆ

ಉತ್ಸವ ಮೂರ್ತಿ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನೆಲಮಂಗಲದ ಪ್ರಸಿದ್ಧ 18 ಹಳ್ಳಿಗಳ 'ಹೆಗ್ಗುಂದ ಮಾರಮ್ಮ' ಜಾತ್ರೆಗೆ ಶುಕ್ರವಾರ ಪ್ರಥಮ ಪೂಜೆಯೊಂದಿಗೆ ಅದ್ದೂರಿಯಾಗಿ ಚಾಲನೆ ದೊರೆತಿದೆ. ಮಂಗಳವಾರದವರೆಗೆ ಜಾತ್ರೆ ನಡೆಯಲಿದೆ.

ದೇವಾಲಯದಲ್ಲಿ ಧಾರ್ಮಿಕ ಕಾರ್ಯಗಳೊಂದಿಗೆ ದೇವಿಗೆ ವಿಶೇಷ ಪೂಜೆ ನೆರವೇರಿಸಿದ ನಂತರ ತಮಟೆ ಹಾಗೂ ಅರೆ ವಾದ್ಯಗಳೊಂದಿಗೆ ದೇವಿಯ ಮೂರ್ತಿಯನ್ನು ಮೆರವಣಿಗೆಯಲ್ಲಿ ಕರೆದೊಯ್ದು ಹಳೆ ಊರು ಆಂಜನೇಯ ದೇವರಿಗೆ ಪೂಜೆ ಮಾಡಿಸಲಾಯಿತು.

ಶುಕ್ರವಾರದಿಂದ ಮಂಗಳವಾರದವರೆಗೆ ದೇವಿಯನ್ನು ಊರು ಊರುಗಳಿಗೆ ಮಡ್ಲಕ್ಕಿ ಹಾಗೂ ಪೂಜೆಗೆ ಕರೆದೊಯ್ಯಲಾಗುತ್ತದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ: ಮಾತೃಭಾಷೆಯಲ್ಲಿ 1.32 ಲಕ್ಷ ಮಂದಿ ನಪಾಸು

ವಿದ್ಯಾರ್ಥಿಗಳಿಗೆ ಕನ್ನಡ 'ಕಬ್ಬಿಣದ ಕಡಲೆ'

● ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ರಾಜ್ಯದಲ್ಲಿ 2024-25ನೇ ಸಾಲಿನಲ್ಲಿ ನಡೆದಿದ್ದ ಎಸ್‌ಎಸ್‌ಎಲ್‌ಸಿಯ 'ಕನ್ನಡ' ಭಾಷೆ ಪರೀಕ್ಷೆಯಲ್ಲಿ ಬರೋಬ್ಬರಿ 1.32 ಲಕ್ಷ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಅವರಿಗೆ ಮಾತೃಭಾಷೆಯೇ 'ಕಬ್ಬಿಣದ ಕಡಲೆ'ಯಾಗಿದೆ.

ಈ ಬಾರಿ ಕನ್ನಡ ಭಾಷೆ ಪರೀಕ್ಷೆ ಬರೆದಿದ್ದ 6.28 ಲಕ್ಷ ವಿದ್ಯಾರ್ಥಿಗಳ ಪೈಕಿ, 4.96 ಲಕ್ಷ (ಶೇ 79ರಷ್ಟು) ಮಂದಿ ತೇರ್ಗಡೆಯಾಗಿದ್ದಾರೆ. ಶೇ 21ರಷ್ಟು ವಿದ್ಯಾರ್ಥಿಗಳು ನಪಾಸಾಗಿದ್ದಾರೆ. 'ಅತಿ ಹೆಚ್ಚು ಕನ್ನಡ ಮಾತನಾಡುವ ಜಿಲ್ಲೆ' ಎನಿಸಿರುವ ಮಂಡ್ಯದಲ್ಲಿ 3,101 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ.

ಇಂಗ್ಲಿಷ್ ವಿಷಯದಲ್ಲೂ ಶೇ 21ರಷ್ಟು ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಹಿಂದಿ ವಿಷಯದಲ್ಲಿ ಶೇ 80ರಷ್ಟು ಮಂದಿ ಪಾಸಾಗಿದ್ದಾರೆ. ಕನ್ನಡಕ್ಕಿಂತ ಹಿಂದಿ ಪರೀಕ್ಷೆಯಲ್ಲೇ ಹೆಚ್ಚಿನ ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಕನ್ನಡ ಮಾಧ್ಯಮದಲ್ಲೂ ಹಿನ್ನಡೆ: 'ಕನ್ನಡ ಮಾಧ್ಯಮ'ದಲ್ಲಿ ಪರೀಕ್ಷೆ ಬರೆದ 4.27 ಲಕ್ಷ ವಿದ್ಯಾರ್ಥಿಗಳಲ್ಲಿ 2.46 ಲಕ್ಷ ಮಕ್ಕಳು (ಶೇ 57.61ರಷ್ಟು) ಉತ್ತೀರ್ಣರಾಗಿದ್ದಾರೆ. 'ಇಂಗ್ಲಿಷ್ ಮಾಧ್ಯಮ'ದಲ್ಲಿ ಪರೀಕ್ಷೆ ಬರೆದ 3.35 ಲಕ್ಷ ವಿದ್ಯಾರ್ಥಿಗಳಲ್ಲಿ 2.63 ಲಕ್ಷ ವಿದ್ಯಾರ್ಥಿಗಳು (ಶೇ 78.38ರಷ್ಟು) ಪಾಸಾಗಿದ್ದಾರೆ. ಅಂದರೆ, ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಹೋಲಿಸಿದರೆ ಇಂಗ್ಲಿಷ್ ಮಾಧ್ಯಮ ವಿದ್ಯಾರ್ಥಿಗಳು ಶೇ 21ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಉತ್ತೀರ್ಣರಾಗಿದ್ದಾರೆ.

ವಿಶೇಷವೆಂದರೆ, ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗಿಂತ, ತೆಲುಗು ಮಾಧ್ಯಮ ವಿದ್ಯಾರ್ಥಿಗಳೇ (ಶೇ 74.56) ಹೆಚ್ಚಿನ ಸಂಖ್ಯೆಯಲ್ಲಿ ಪಾಸಾಗಿದ್ದಾರೆ. ಹಿಂದಿ ಮಾಧ್ಯಮ ವಿದ್ಯಾರ್ಥಿಗಳ ಉತ್ತೀರ್ಣದ ಪ್ರಮಾಣ ಶೇ 53.72ರಷ್ಟಿದೆ.

ಕನ್ನಡವೇ ಪ್ರಧಾನವಾಗಿರುವ 'ಪ್ರಥಮ ಭಾಷೆ' ಪತ್ರಿಕೆಯಲ್ಲಿ 9,573 ವಿದ್ಯಾರ್ಥಿಗಳು ಪೂರ್ಣಾಂಕ (ನೂರಕ್ಕೆ ನೂರು ಅಂಕ) ಪಡೆದರೆ, ಹಿಂದಿಯೇ ಪ್ರಧಾನವಾಗಿರುವ 'ತೃತೀಯ ಭಾಷೆ' ಪತ್ರಿಕೆಯಲ್ಲಿ 17,909 ವಿದ್ಯಾರ್ಥಿಗಳು ಪೂರ್ಣಾಂಕ ಪಡೆದಿದ್ದಾರೆ.

ಸರ್ಕಾರಿ ಶಾಲೆಗಳಿಗೆ ಹಿನ್ನಡೆ: 'ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳು ಶೇ 62.7ರಷ್ಟು, ಅನುದಾನಿತ ಶಾಲೆಗಳ ವಿದ್ಯಾರ್ಥಿಗಳು 58.97ರಷ್ಟು ಹಾಗೂ ಅನುದಾನರಹಿತ ಶಾಲೆಗಳ ವಿದ್ಯಾರ್ಥಿಗಳು ಶೇ 75.59ರಷ್ಟು ಪ್ರಮಾಣದಲ್ಲಿ ತೇರ್ಗಡೆ ಆಗಿದ್ದಾರೆ. ಫಲಿತಾಂಶದಲ್ಲಿ ಸರ್ಕಾರಿ ಶಾಲೆಗಳಿಗೆ ತೀವ್ರ ಹಿನ್ನಡೆಯಾಗಿದ್ದು, ಸರ್ಕಾರ ಗುಣಮಟ್ಟದ ಶಿಕ್ಷಣಕ್ಕೆ ಮತ್ತು ಪರಿಣಾಮ ಕಾರಿ ಬೋಧನೆಗೆ ಒತ್ತು ನೀಡಬೇಕಿದೆ' ಎನ್ನುತ್ತಾರೆ ಕನ್ನಡ ಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ಮಂಜುನಾಥ್.

'ಸರಳವಾಗಲಿ ಪಠ್ಯಕ್ರಮ'



ಪುರುಷೋತ್ತಮ ಬಿಳಿಮಲೆ

'ಕನ್ನಡ ವಿಷಯದಲ್ಲಿ ಇಷ್ಟೊಂದು ವಿದ್ಯಾರ್ಥಿಗಳು ಅನುತ್ತೀರ್ಣ ಆಗಿರುವುದು ಆತಂಕಕಾರಿ ಬೆಳವಣಿಗೆ. ಹಿಂದಿ, ಸಂಸ್ಕೃತಕ್ಕೆ ಹೋಲಿಸಿದರೆ ಕನ್ನಡ ಪಠ್ಯಕ್ರಮ ಕಷ್ಟಕರ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಪ್ರತಿಕ್ರಿಯಿಸಿದರು.

'ಕನ್ನಡ ಹೇಳಿಕೊಡಲು ಕಷ್ಟವೆಂದು ಪೋಷಕರೇ ಅಳಲು ತೋಡಿಕೊಳ್ಳುತ್ತಾರೆ. ಹೀಗಾಗಿ ಪಠ್ಯಕ್ರಮ ಸರಳವಾಗಿರಬೇಕು. ಬೋಧನಾ ಕ್ರಮ ಬದಲಾಗಬೇಕು, ಅಧ್ಯಾಪಕರಿಗೆ ತರಬೇತಿ ನೀಡಬೇಕು, ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ನೀಡುವ ಅನುದಾನ ಹೆಚ್ಚಬೇಕು. ಶಿಕ್ಷಣದ ಅಭಿವೃದ್ಧಿ ಸರ್ಕಾರದ 6ನೇ ಗ್ಯಾರಂಟಿಯಾಗಬೇಕು' ಎಂದು ಹೇಳಿದರು.

ಫಲಿತಾಂಶದಲ್ಲಿ ಸರ್ಕಾರಿ ಶಾಲೆಗಳಿಗೆ ಹಿನ್ನಡೆ ಮತ್ತು 'ಕನ್ನಡ'ದಲ್ಲಿ ಹೆಚ್ಚು ವಿದ್ಯಾರ್ಥಿಗಳು ಅನುತ್ತೀರ್ಣ ಆಗಿರುವುದಕ್ಕೆ ಕಾರಣ ಪತ್ತೆ ಹಚ್ಚುತ್ತೇವೆ. ಶಿಕ್ಷಕರಿಗೆ ವಿಶೇಷ ತರಬೇತಿ ನೀಡುತ್ತೇವೆ

ಎಚ್.ಶಿವರಾಮೇಗೌಡ, ಡಿಡಿಪಿಐ, ಮಂಡ್ಯ

Swiggy

ಸ್ವಿಗ್ಗಿ ಲಿಮಿಟೆಡ್

(ಈ ಮೊದಲು ಸ್ವಿಗ್ಗಿ ಪ್ರೈವೇಟ್ ಲಿಮಿಟೆಡ್ ಮತ್ತು ಬಂಡಲ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ನೋಂದಾಯಿತ ಕಚೇರಿ: ನಂ.55, ಕ್ರಮ ಸಂಖ್ಯೆ.8-14, ನೆಲ ಮಹಡಿ, I&J ಬ್ಲಾಕ್, ಎಂಬಸ್ಸಿ ಟೆಕ್ ವಿಲೇಜ್, ಔಟರ್ ರಿಂಗ್ ರಸ್ತೆ, ದೇವರಬೀಸನಹಳ್ಳಿ, ಬೆಂಗಳೂರು-560103, ಕರ್ನಾಟಕ, ಭಾರತ

ದೂರವಾಣಿ: 080-68422422 | ಈಮೇಲ್ ಐಡಿ: ir@swiggy.in | ವೆಬ್‌ತಾಣ: www.swiggy.com

ಮಾರ್ಚ್ 31, 2025ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಆರ್ಥಿಕ ವರ್ಷದ ಹಣಕಾಸು ಫಲಿತಾಂಶಗಳ ಹೇಳಿಕೆ (ಪ್ರತ್ಯೇಕ ಮತ್ತು ಕ್ರೂಢೀಕೃತ)

ಮೇ 09, 2025 ರಂದು ನಡೆದ ಸಭೆಯಲ್ಲಿ ಕಂಪನಿಯ ನಿರ್ದೇಶಕರ ಮಂಡಳಿಯು ಮಾರ್ಚ್ 31, 2025ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವರ್ಷದ ಕಂಪನಿಯ ಹಣಕಾಸು ವಿವರಗಳನ್ನು ("ಹಣಕಾಸು ವಿವರಗಳು") ಅನುಮೋದಿಸಿದೆ.

ಲೆಕ್ಕಪರಿಶೋಧಕರ ವರದಿಯ ಜೊತೆಗೆ ಹಣಕಾಸು ವಿವರಗಳನ್ನು ಈ ಕೆಳಗೆ ಕಂಪನಿಯ ವೆಬ್‌ತಾಣದಲ್ಲಿ ಒದಗಿಸಲಾಗಿದೆ https://www.swiggy.com/corporate/investor-relations/financial-results ಈ ವೆಬ್‌ತಾಣಗೆ QR ಕೋಡ್‌ನ್ನು ಸ್ಕ್ಯಾನ್ ಮಾಡುವ ಮೂಲಕ ಪ್ರವೇಶಿಸಬಹುದು.

ನಿರ್ದೇಶಕರ ಮಂಡಳಿಯ ಪರವಾಗಿ,
ಸ್ವಿಗ್ಗಿ ಲಿಮಿಟೆಡ್ (ಈ ಮೊದಲು "ಸ್ವಿಗ್ಗಿ ಪ್ರೈವೇಟ್ ಲಿಮಿಟೆಡ್" ಮತ್ತು "ಬಂಡಲ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್" ಎಂದು ಕರೆಯಲಾಗುತ್ತಿತ್ತು)

ಸಹಿ,
ಶ್ರೀಹರ್ಷ ಮಾಜೇಟಿ
ವ್ಯವಸ್ಥಾಪಕ ನಿರ್ದೇಶಕ & ಸಮೂಹದ ಮುಖ್ಯ ಕಾರ್ಯಕಾರಿ ಅಧಿಕಾರಿ
DIN: 06680073

ಸ್ಥಳ: ಬೆಂಗಳೂರು
ದಿನಾಂಕ: ಮೇ 09, 2025

ಸೂಚನೆ: ಈ ಮೇಲಿನ ಸೂಚನೆಯನ್ನು ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಅಂಡ್ ಡಿಸ್‌ಕ್ಲೋಶರ್ ರಿಕ್ವೈರ್‌ಮೆಂಟ್ಸ್) ನಿಯಮಗಳು 2015 ರ ನಿಯಮ 33 ರೊಂದಿಗೆ ಉಲ್ಲೇಖಿಸಲಾದ ನಿಯಮ 47 (1) ರ ಪ್ರಕಾರ ನೀಡಲಾಗಿದೆ.

ಮೇ 11 ವಿಶ್ವ ತಾಯಂದಿರ ದಿನ

ಅತಿಯಾದ ಭೌತಿಕ ಸೌಕರ್ಯಗಳಿಂದ ಮಕ್ಕಳಲ್ಲಿ ಆಕ್ರಮಣಕಾರಿ ನಡವಳಿಕೆಗಳು ಕಾಣಿಸಿಕೊಳ್ಳುತ್ತವೆ. ಮಕ್ಕಳಲ್ಲಿ ಭಾವನಾತ್ಮಕ ಅಸಮತೋಲನ, ಆತ್ಮವಿಶ್ವಾಸದ ಕೊರತೆ ಉಂಟಾಗಬಹುದು

ಅಮ್ಮನಿಗಿಲ್ಲ ಬದಲಿ

ಸುಶೀಲಾ ಡೋಣೂರ

ಅಮ್ಮ ಎಂದರೆ ಅಮ್ಮ, ಅಮ್ಮನ ಜಾಗಕ್ಕೆ ಬದಲಿ ಇಲ್ಲವೇ ಇಲ್ಲ. ಹಾಗಿದ್ದರೂ, ನವಯುಗದ ಉದ್ಯೋಗಸ್ಥ ಅಮ್ಮಂದಿರು ಮಕ್ಕಳ ಜೀವನದಲ್ಲಿ ತಮ್ಮ ಅನುಪಸ್ಥಿತಿಯನ್ನು, ಸಮಯದ ಅಭಾವವನ್ನು ಸರಿದೂಗಿಸಲು ಭೌತಿಕ ಸೌಕರ್ಯಗಳನ್ನು, ಅನುಕೂಲಗಳನ್ನು ತುಂಬಿಕೊಡುವ ಪ್ರವೃತ್ತಿ ಹೆಚ್ಚುತ್ತಿದೆ. ಇದು ಸರ್ವೆಸಾಮಾನ್ಯವಾದರೂ ಅಸಹಜವಾದುದು. ಮಕ್ಕಳ ಭಾವನಾತ್ಮಕ, ಬೌದ್ಧಿಕ ಹಾಗೂ ಸಾಮಾಜಿಕ ಬೆಳವಣಿಗೆಯನ್ನು ಇದು ಪ್ರಭಾವಿಸುತ್ತದೆ ಎನ್ನುತ್ತಾರೆ ತಜ್ಞರು.

ಹೌದು, ಭೌತಿಕ, ಐಷಾರಾಮಿ ಸೌಕರ್ಯಗಳ ಅತಿಯಾದ ಹಾಗೂ ಅನಗತ್ಯ ಲಭ್ಯತೆ ಮಕ್ಕಳಲ್ಲಿ ಮಾನಸಿಕ ಹಾಗೂ ವರ್ತನೆಯ ಅಸಮತೋಲವನ್ನು ಸೃಷ್ಟಿಸುತ್ತದೆ. ಸಂಬಂಧಗಳ ಜಾಗಗಳಲ್ಲಿ ಐಷಾರಾಮಿ ವಸ್ತುಗಳು ಹಾಗೂ ಆತ್ಮೀಯತೆ, ಸ್ನೇಹ, ಮಮಕಾರಗಳಂತಹ ಭಾವ ಬೆಸುಗೆಯ ಜಾಗಗಳಲ್ಲಿ ಗ್ಯಾಜೆಟ್‌ಗಳು ಆಕ್ರಮಿಸಿಕೊಳ್ಳುತ್ತಿರುವುದು ಉತ್ತಮ ಬೆಳವಣಿಗೆಯಂತೂ ಅಲ್ಲ. ಈ ಅನುಕೂಲಗಳು, ಅವಕಾಶಗಳು ಅವರನ್ನು ಸಂತುಷ್ಟರನ್ನಾಗಿಯಂತೂ ಮಾಡುತ್ತಿಲ್ಲ. ಮತ್ತಷ್ಟು ಅತೃಪ್ತಿ, ಜಡತ್ವ, ಖಾಲಿತನ, ಹಪಾಹಪಿ, ಕೊಳ್ಳುಬಾಕುತನವನ್ನು ಹೆಚ್ಚಿಸುತ್ತಿದೆ. ಆತಂಕ ಮತ್ತು ಖಿನ್ನತೆಯಂತಹ ಮಾನಸಿಕ ಅಸಮತೋಲನಗಳನ್ನು ಸೃಷ್ಟಿಸುತ್ತಿದೆ. ಪೋಷಕರು, ಅದರಲ್ಲೂ ದುಡಿಯುವ ಅಮ್ಮಂದಿರು ಈ ಬಗ್ಗೆ ಹೆಚ್ಚು ಎಚ್ಚರಿಕೆಯ, ಮುತುವರ್ಜಿಯ ಹೆಜ್ಜೆಗಳನ್ನಿಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ಒಬ್ಬ ತಾಯಿಯಾಗಿ ತಾನು ಸರಿಯಾಗಿ ಜವಾಬ್ದಾರಿ ನಿರ್ವಹಿಸುತ್ತಿಲ್ಲ, ಮಕ್ಕಳೊಂದಿಗೆ ಸಾಕಷ್ಟು ಸಮಯ ಕಳೆಯುತ್ತಿಲ್ಲ ಎನ್ನುವ ಆತಂಕ, ಸಾಮಾಜಿಕ ಒತ್ತಡ, ಔದ್ಯೋಗಿಕ ಅನಿವಾರ್ಯತೆಗಳು ಹಾಗೂ ಭಾವನಾತ್ಮಕ ಜಿಜ್ಞಾಸೆ ಉದ್ಯೋಗಸ್ಥ ತಾಯಂದಿರಲ್ಲಿ ತಪ್ಪಿತಸ್ಥ ಭಾವನೆಗಳನ್ನು ಉಳಿಸುತ್ತವೆ. ಈ ಅಪರಾಧಿ ಭಾವದಿಂದ ತಪ್ಪಿಸಿಕೊಳ್ಳಲು ಮಕ್ಕಳಿಗೆ ಎಲ್ಲಾ ರೀತಿಯ ಭೌತಿಕ, ಜಡವಾದ ಹಾಗೂ ಪ್ರಾಪಂಚಿಕ ವಸ್ತುಗಳನ್ನು ತುಂಬಿಕೊಡುತ್ತಾಳೆ. ಅದು ಮಗುವಿನ ಬೆಳವಣಿಗೆಗೆ ಎಷ್ಟು ಪೂರಕ, ಎಷ್ಟು ಅಗತ್ಯ ಎನ್ನುವುದನ್ನೂ ವಿಶ್ಲೇಷಿಸದೆ... ಇದರಿಂದಾಗಿ ಮಕ್ಕಳು ಸಂಬಂಧಗಳಿಗಿಂತ ವಸ್ತುಗಳಿಗೆ ಹೆಚ್ಚು ಪ್ರಾಧಾನ್ಯತೆ ನೀಡುವ; ಮನೆಮಂದಿಯ ಜಾಗಗಳಲ್ಲಿ, ಸಹಜ ಮಾತು-ಸಂವಹನ, ಒಡನಾಟಗಳ ಜಾಗಗಳಲ್ಲಿ ಐಷಾರಾಮಿ ವಸ್ತುಗಳನ್ನು, ಸವಲತ್ತುಗಳನ್ನು, ಗ್ಯಾಜೆಟ್ ಗಳನ್ನು ಭರ್ತಿಮಾಡುವ ಅಪಾಯಕಾರಿ ಪ್ರವೃತ್ತಿಗೆ ಒಳಗಾಗುತ್ತಾರೆ.

> ಸೌಕರ್ಯ ಸಿಗದೇ ಇರುವಾಗಲು ಖುಷಿಯಾಗಿರುವ ಮನಸ್ಥಿತಿಗೆ ಸಿದ್ಧಗೊಳಿಸಿ

ಎಲ್ಲಾ ರೀತಿಯ ವ್ಯವಸ್ಥೆಗಳು, ಸೌಕರ್ಯಗಳು ಹಾಗೂ ಅನುಕೂಲಗಳೊಂದಿಗೆ ಬೆಳೆಯುವ ಮಕ್ಕಳು ಯಾವುದೇ ಸಣ್ಣ ಕೊರತೆ, ಅಲಭ್ಯತೆ ಅಥವಾ ಅನಾನುಕೂಲವನ್ನು ಎದುರಿಸುವ ದೃಢತೆಯನ್ನು ಕಲಿಯದೇ ಹೋಗಬಹುದು. ನಾಳಿನ ಅನಿರೀಕ್ಷಿತ ಬೆಳವಣಿಗೆಗಳನ್ನು ಎದುರುಗೊಳ್ಳುವ ಮನೋಬಲವನ್ನು ಬೆಳೆಸಿಕೊಳ್ಳದೇ ಇರಬಹುದು. ಇಂದಿನ ಮಕ್ಕಳು ಐದು ನಿಮಿಷ ವಿದ್ಯುತ್ ಕಡಿತಗೊಂಡರೂ ಕಂಗಾಲಾಗುತ್ತಾರೆ, ಹತ್ತು ನಿಮಿಷ ನೆಟ್ವರ್ಕ್ ಲಭಿಸದಿದ್ದರೆ ಆತಂಕಗೊಳ್ಳುತ್ತಾರೆ. ತಮಗೆ ಬೇಕಾದ ಗೇಮ್ ಸಿಗದೇ ಹೋದರೆ ಉದ್ವಿಗ್ನರಾಗುತ್ತಾರೆ. ಶಾಲೆಯ ಗೇಟಿನಿಂದ ಹೊರಗೆ ಬರುಷ್ಟರಲ್ಲಿ ಶಾಲೆಯ ಅಥವಾ ವೈಯಕ್ತಿಕ ವಾಹನ ಕಣ್ಣಿಗೆ ಕಾಣದಿದ್ದರೆ ಕಕ್ಕಾಬಿಕ್ಕಿಯಾಗುತ್ತಾರೆ, ಕೇಳಿದ್ದು, ಕೇಳಿದಾಕ್ಷಣ ಸಿಗದೇ ಹೋದರೆ ಖಿನ್ನರಾಗುತ್ತಾರೆ, ಪ್ರತಿಭಟಿಸುತ್ತಾರೆ...

ಇಂತಹ ವರ್ತನೆಗಳನ್ನು ಹತೋಟಿಯಲ್ಲಿಡಲು ಮನೋವೈದ್ಯರ, ತಜ್ಞರ ನೆರವು ಬೇಕು ಅಂತೇನೂ ಇಲ್ಲ. ಪೋಷಕರು ಮೊದಲು ತಮ್ಮ ದೃಷ್ಟಿಕೋನವನ್ನು ಬದಲಿಸಿಕೊಳ್ಳಬೇಕು, ನಂತರ ಮಕ್ಕಳ ಮನೋಭಾವವನ್ನು ರೂಪಿಸಬೇಕು. ತಾವು ಮಕ್ಕಳಿಗೆ ಎಷ್ಟು ಸಮಯ ನೀಡುತ್ತೇವೆ ಎನ್ನುವುದು ಮುಖ್ಯವಲ್ಲ. ಹೇಗೆ ಮತ್ತು ಎಷ್ಟು ಮೌಲ್ಯಯುತ ಕ್ಷಣಗಳನ್ನು ಅವರೊಂದಿಗೆ ಹಂಚಿಕೊಳ್ಳುತ್ತೇವೆ ಎನ್ನುವುದರತ್ತ ಗಮನ ಹರಿಸಬೇಕು ಎನ್ನುತ್ತಾರೆ ಮಕ್ಕಳ ಮಾನಸಿಕ ತಜ್ಞೆ ಡಾ. ಆಶಾ ಎಚ್. ಎನ್. ಮಕ್ಕಳು ಕೇಳಲಿ ಬಿಡಲಿ, ಅವರಿಗೆ ಅಗತ್ಯವಿರಲಿ, ಇಲ್ಲದೇ ಇರಲಿ ಭೌತಿಕ ವಸ್ತುಗಳನ್ನು ಒದಗಿಸಿಕೊಡುವುದೊಂದೇ ಆಯ್ಕೆಯಲ್ಲ. ಅವರಿಗೆ ನಿಮ್ಮ ಪರಿಸ್ಥಿತಿಯನ್ನು, ಜವಾಬ್ದಾರಿಗಳನ್ನು, ವಾಸ್ತವ ಸಂಗತಿಯನ್ನು ಮನದಟ್ಟು ಮಾಡಿ. ಅವರ ಜವಾಬ್ದಾರಿಯನ್ನೂ ಅವರಿಗೆ ತಿಳಿಸಿಕೊಡಿ. ವಸ್ತುಗಳ ಮೌಲ್ಯಗಳನ್ನು ಅರ್ಥಮಾಡಿಸಿ, ಸಾಧ್ಯವಾದಷ್ಟೂ ಸರಳವಾಗಿ, ಸ್ವಾಭಾವಿಕವಾಗಿ ಬದುಕುವುದನ್ನು ರೂಢಿಸಿ. ಅವರ ಚಟುವಟಿಕೆಗಳ ಮೇಲೆ, ಬೆಳವಣಿಗೆಗಳ ಮೇಲೆ, ನಡವಳಿಕೆಗಳ ಮೇಲೆ ಕಣ್ಣಿಡಿ ಹಾಗೂ ಅದನ್ನೆಲ್ಲಾ ನೀವು ಗಮನಿಸುತ್ತಿರುವಿರಿ ಎನ್ನುವುದನ್ನು ಅವರಿಗೆ ಮನವರಿಕೆ ಮಾಡಿ. ಅಗತ್ಯವಿದ್ದಾಗ ಅವರೊಂದಿಗಿರಲು ಪ್ರಯತ್ನಿಸಿ. ನಿಮ್ಮ ಉದ್ಯೋಗ-ಭವಿಷ್ಯ ಎಷ್ಟು ಮುಖ್ಯವೊ, ಅವರ ಬೆಳವಣಿಗೆ ಹಾಗೂ ಭವಿಷ್ಯವೂ ಅಷ್ಟೇ ಮುಖ್ಯ. ಇಲ್ಲಿ ಪಾಪಪ್ರಜ್ಞೆ, ತಪ್ಪಿತಸ್ಥ ಭಾವನೆಗಿಂತಲೂ ಪ್ರಾಯೋಗಿಕ, ವಾಸ್ತವ, ಕಾರ್ಯಸಾಧ್ಯವಾದ ಕ್ರಮಗಳತ್ತ ಗಮನಹರಿಸಿ. ಇದನ್ನೇ ಉದ್ಯೋಗ-ಕುಟುಂಬ ಸಮತೋಲನ ಎನ್ನುವುದು ಎನ್ನುತ್ತಾರೆ ಡಾ. ಆಶಾ.

ಅತಿಯಾದ ಭೌತಿಕ ಸೌಕರ್ಯಗಳಿಂದ ಮಕ್ಕಳಲ್ಲಿ ಸಾಮಾಜಿಕ ಮತ್ತು ಆಕ್ರಮಣಕಾರಿ ನಡವಳಿಕೆಗಳು ಕಾಣಿಸಿಕೊಳ್ಳುತ್ತವೆ. ಮಕ್ಕಳಲ್ಲಿ ಭಾವನಾತ್ಮಕ ಅಸಮತೋಲನ, ಆತ್ಮವಿಶ್ವಾಸದ ಕೊರತೆ, ಸಾಮಾಜಿಕ ಸಂವಹನದಲ್ಲಿ ಸಮಸ್ಯೆ ಹಾಗೂ ಬೆಳವಣಿಗೆಯ ತೊಡಕುಗಳಿಗೂ ಇದು ಕಾರಣವಾಗುತ್ತದೆ ಎನ್ನುತ್ತಾರೆ ಅವರು.

ಕೇಳಿದ ಅಥವಾ ಬೇಕಿರುವ ವಸ್ತುಗಳು ದೊರಕದೇ ಇರುವ ಅನುಭವವೂ ಆಗಬೇಕು. ಅಂತಹ ಸಂದರ್ಭವನ್ನು ಎದುರಿಸುವ ಮನಸ್ಥಿತಿ ಬೆಳೆಯಬೇಕು. ಅಂತಹ ವಸ್ತುಗಳು ಅಥವಾ ಅನುಕೂಲಗಳು ಇಲ್ಲದೆಯೂ ಜೀವನ ಸಾಗುತ್ತದೆ ಎನ್ನುವ ವಾಸ್ತವ ಅರಿವಾಗಬೇಕು. ಇಲ್ಲದೇ ಇರುವುದು ಸಹ ಜೀವನದ ಒಂದು ಭಾಗ ಎನ್ನುವುದನ್ನು ಮನದಟ್ಟು ಮಾಡಬೇಕು. ಆ ಸೌಕರ್ಯ ಅಥವಾ ವಸ್ತು ಸಿಗದೇ ಇರುವಾಗಿನ ಸಂದರ್ಭವನ್ನು ಎದುರಿಸುವಂತಹ ಮನಸ್ಥಿತಿಗೆ ಅವರನ್ನು ಸಿದ್ಧಗೊಳಿಸುವುದು ಮುಖ್ಯ.

ಮಕ್ಕಳಿಗೆ ಬೇಕಾಗಿರುವುದು ದುಬಾರಿ ಹಾಗೂ ಐಷಾರಾಮಿ ವಸ್ತುಗಳಲ್ಲ, ಸೌಕರ್ಯಗಳಲ್ಲ, ಅನಗತ್ಯ ಗಿಫ್ಟ್ ಗಳೂ ಅಲ್ಲ... ಅಮ್ಮನ ಬೊಗಸೆ ಪ್ರೀತಿ, ಹಿಡಿಯಷ್ಟಾದರೂ ಅಕ್ಕರೆ-ಆರೈಕೆ... ನಿಮ್ಮೊಂದಿಗಿನ ಸವಿ ಸವಿ ಕ್ಷಣಗಳ ನೆನಪಿನ ಬುತ್ತಿ. ಪಾಪಪ್ರಜ್ಞೆಯನ್ನು ಪಕ್ಕಕ್ಕಿಡಿ, ನೀವು ಅವರಿಗೆ ಎಷ್ಟು ಸಮಯ ನೀಡುತ್ತೀರಿ ಎನ್ನುವುದಕ್ಕಿಂತ, ಎಷ್ಟು ಮಹತ್ವದ ಗಳಿಗೆಗಳನ್ನು ಕಳೆಯುತ್ತೀರಿ ಎನ್ನುವುದೇ ಮುಖ್ಯ.

ದುಡಿಯುವ ತಾಯಂದಿರು ತಮ್ಮ ಅನುಪಸ್ಥಿತಿ ಹಾಗೂ ಸಮಯದ ಅಭಾವವನ್ನು ಸರಿದೂಗಿಸಲು ಮಕ್ಕಳಿಗೆ ಭೌತಿಕ ಐಷಾರಾಮಿ ವಸ್ತುಗಳನ್ನು ಹಾಗೂ ಸೌಕರ್ಯಗಳನ್ನು ದಂಡಿಯಾಗಿ ಸುರಿಯುತ್ತಿದ್ದಾರೆ. ಬೇಡಿದೊಡನೆಯೇ ಬೇಡಿದ್ದೆಲ್ಲ ಸಿಗುವುದು ಮಕ್ಕಳ ಬೆಳವಣಿಗೆಗೆ ಪೂರಕವಲ್ಲ. ಅಮ್ಮ-ಅಪ್ಪನ ಜಾಗದಲ್ಲಿ ಗ್ಯಾಜೆಟ್ ಗಳನ್ನು ತುಂಬಿಕೊಡುವುದು ಪರಿಹಾರವೂ ಅಲ್ಲ. ಮಕ್ಕಳಿಗೆ ನಿಮ್ಮ ಮೌಲ್ಯಯುತ ಕ್ಷಣಗಳನ್ನು ಮೀಸಲಿಡಿ, ಮಮಕಾರ ನೀಡಿ, ಮಾನವೀಯ ಗುಣಗಳನ್ನು ಬೆಳೆಸಿ. ನಿಮ್ಮ ಕಂದ ಬೇಬಿಡಾಲ್ ಆಗುವುದು ಬೇಡ, ಸಮಾಜದ, ಕುಟುಂಬದ ಜವಾಬ್ದಾರಿಯುತ ಹಾಗೂ ವಿಚಾರವಂತ ಸದಸ್ಯನಾಗಿ ಬೆಳೆಯಲಿ...

ಸೌಕರ್ಯಗಳನ್ನು ಒದಗಿಸಿಕೊಡುವ ಮುನ್ನ

- ಮಕ್ಕಳಿಗೆ ಅಗತ್ಯವಿದೆಯೋ ಇಲ್ಲವೊ ಚಿಂತಿಸಿ
- ಅವರಿಗೆ ಅದರಿಂದ ಏನು ಪ್ರಯೋಜನ ಎನ್ನುವುದನ್ನು ಯೋಚಿಸಿ
- ಜನರೊಂದಿಗೆ ಬೆರೆಯಲು ಬಿಡಿ. ವ್ಯವಹರಿಸಲು ಬಿಡಿ
- ಮನೆಯ ಕೆಲ ಜವಾಬ್ದಾರಿಗಳನ್ನು ಅವರಿಗೆ ವಹಿಸಿ
- ನಿಮ್ಮ ಉದ್ಯೋಗ ಹಾಗೂ ಭವಿಷ್ಯ ನಿಮಗೆ ಹಾಗೂ ಕುಟುಂಬಕ್ಕೆ ಎಷ್ಟು ಮುಖ್ಯ ಎನ್ನುವುದನ್ನು ತಿಳಿಸಿ
- ಅವರ ಎಲ್ಲಾ ಅಗತ್ಯಗಳನ್ನು ನೀವೇ ಪೂರೈಸಬೇಡಿ
- ನಿರ್ಧಾರಗಳನ್ನು ಅವರಿಗೇ ತೆಗೆದುಕೊಳ್ಳಲು ಬಿಡಿ

ಡಾ. ಆಶಾ ಎಚ್.ಎನ್.
ಮಕ್ಕಳ ಮಾನಸಿಕ ತಜ್ಞೆ
ಎಸ್.ಎಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ದಾವಣಗೆರೆ

ನೀರಿನಲ್ಲಿ ಹೆರಿಗೆ ಸರಾಗ

ರೂಪಾ ಕೆ.ಎಂ

ಕಾಳಜಿ

ಜಲಪ್ರಸವವೆಂಬುದು ಬಹಳ ಹಿಂದೆಯೇ ಅಸ್ತಿತ್ವದಲ್ಲಿದ್ದರೂ ಈಗೀಗ ಜನಪ್ರಿಯವಾಗುತ್ತಿದೆ. ಸಹಜ ಹೆರಿಗೆಯ ವಿಧಾನಗಳಲ್ಲಿ ನೀರಿನಲ್ಲಿ ಆಗುವ ಹೆರಿಗೆಯೂ ಒಂದಾಗಿದೆ. ಆಧುನಿಕ ಕಾಲಘಟ್ಟದಲ್ಲಿ ಶಸ್ತ್ರಚಿಕಿತ್ಸೆಯ ಮೂಲಕ ಹೆರಿಗೆ ಮಾಡಿಸಿಕೊಳ್ಳುವವರ ಸಂಖ್ಯೆ ಹೆಚ್ಚುತ್ತಿದ್ದು, ಜಲಪ್ರಸವವು ಪರ್ಯಾಯ ಆಯ್ಕೆಯಾಗಬಲ್ಲದು.

ಬಹಳ ಹಿಂದೆ ಮನೆಗಳಲ್ಲಿಯೇ ಹೆರಿಗೆ ಆಗುತ್ತಿತ್ತು. ನಂತರ ವೈದ್ಯಕೀಯ ಸೇವೆ ಆರಂಭಗೊಂಡಿತು. ಅವಳಿ ಗರ್ಭಧಾರಣೆ, ಫೈಬ್ರಾಯ್ಡ್‌ಗಳು, ಬ್ರೀಚ್ ಪ್ರಸೆಂಟೇಷನ್ ಮತ್ತು ಪ್ಲೆಸೆಂಟಾ ಪ್ರೀವಿಯಾದಂಥ ಸಂಕೀರ್ಣ ಪರಿಸ್ಥಿತಿಗಳನ್ನು ಸೂಕ್ತವಾಗಿ ನಿಭಾಯಿಸಿ ಸುರಕ್ಷಿತ ಹೆರಿಗೆ ಮಾಡಿಸುವಷ್ಟರ ಮಟ್ಟಿಗೆ ವೈದ್ಯಕೀಯ ವಿಜ್ಞಾನ ಬೆಳೆದಿದೆ. ಈಗೀಗ ಜಲಪ್ರಸವಕ್ಕೆ ಹೆಚ್ಚು ಆದ್ಯತೆ ಸಿಗುತ್ತಿದೆ.

ಏನಿದು ಜಲಪ್ರಸವ?

ಹೆರಿಗೆ ನೋವು ಕಾಣಿಸಿಕೊಂಡ ಗರ್ಭಿಣಿಯನ್ನು ಬೆಚ್ಚಗಿನ ನೀರಿನಲ್ಲಿಯೇ ಇರುವಂತೆ ನೋಡಿಕೊಳ್ಳಲಾಗುತ್ತದೆ. ಬೆಚ್ಚಗಿನ ನೀರು ಗರ್ಭಿಣಿಯ ನರಗಳನ್ನು ಶಾಂತಗೊಳಿಸಿ, ಹೆರಿಗೆ ನೋವಿನ ಒತ್ತಡವನ್ನು ಕಡಿಮೆ ಮಾಡುತ್ತದೆ. ದೇಹ ವಿಶ್ರಾಂತಿ ಪಡೆಯಲು ಸಹಾಯ ಮಾಡುವುದಲ್ಲದೇ. ಪ್ರಸವವೇದನೆ ಗಣನೀಯವಾಗಿ ಕಡಿಮೆಯಾಗಿ ಹೆರಿಗೆ ಸುಸೂತ್ರವಾಗುತ್ತದೆ. ಇಂಥ ಸಂದರ್ಭದಲ್ಲಿ ಹೆಚ್ಚುವರಿಯಾಗಿ ನೋವುನಿವಾರಕಗಳನ್ನು ಬಳಸುವ ಅಗತ್ಯವಿರುವುದಿಲ್ಲ.

ಈ ಬಗ್ಗೆ ಮಾಹಿತಿ ನೀಡಿದ ಬೆಂಗಳೂರಿನ ಹೆಬ್ಬಾಳದ ಮದರ್‌ಹುಡ್ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ. ಸಿರೀಷಾ ರೆಡ್ಡಿ, 'ಸಾಮಾನ್ಯವಾಗಿ 100 ಗರ್ಭಿಣಿಯರಲ್ಲಿ 80 ಮಂದಿ ಸಮರ್ಪಕ ತಯಾರಿ ಮಾಡಿಕೊಂಡರೆ ಸಹಜ ಹೆರಿಯಾಗುತ್ತದೆ. 20ರಷ್ಟು ಮಂದಿಗೆ ಮಾತ್ರ ಶಸ್ತ್ರಚಿಕಿತ್ಸೆಯ ಅಗತ್ಯವಿರುತ್ತದೆ. ಸಹಜ ಪ್ರಸವವಾದರೆ ತಾಯಿ ಮತ್ತು ಮಗು ಬೇಗನೇ ಚೇತರಿಸಿಕೊಳ್ಳಬಹುದು. ಸ್ತನ್ಯಪಾನಕ್ಕ ತೊಂದರೆಯಾಗದು. ತಾಯಿ–ಮಗುವಿನ ಬಾಂಧವ್ಯ ಗಟ್ಟಿಯಾಗಿರುತ್ತದೆ. ಸದ್ಯಕ್ಕೆ ಹಲವು ಆಸ್ಪತ್ರೆಗಳಲ್ಲಿ ಈ ವಿಧಾನವು ಲಭ್ಯವಿದೆ' ಎಂದು ಹೇಳಿದರು.

ಗರ್ಭದಲ್ಲಿರುವ ಮಗುವಿನ ಸುರಕ್ಷತೆಯ ಬಗ್ಗೆ ಅರಿಯಲು ಅಂಡರ್ ವಾಟರ್ ಫೀಟಲ್ ಡಾಪ್ಲರ್, ವೈರ್‌ಲೆಸ್ ಎನ್‌ಎಸ್‌ಟಿಯಂಥ ಆಧುನಿಕ ಪರಿಕರಗಳನ್ನು ಬಳಸಲಾಗುತ್ತದೆ. ಇವುಗಳಿಂದ ಹೆರಿಗೆ ಸಮಯದಲ್ಲಿ ಮಗುವಿನ ಹೃದಯದ ಬಡಿತದ ಮೇಲೆ ನಿಗಾ ವಹಿಸಲಾಗುತ್ತದೆ. ಜಲಪ್ರಸವದ ಸಂದರ್ಭದಲ್ಲಿ ಆರೋಮಾಥೆರಪಿ, ಸಂಗೀತ ಥೆರಪಿಯಂಥ ಕ್ರಮಗಳನ್ನು ಬಳಸಲಾಗುತ್ತದೆ. ಲಮಾಜ್ ಸೆಷನ್‌ಗಳು ಮತ್ತು ಹಿಪ್ನೋಥೆರಪಿಯನ್ನು ಬಳಸುತ್ತಾರೆ. ಇದೇ ಸಂದರ್ಭದಲ್ಲಿ ಸಂಗಾತಿ ಹೇಗೆ ನಡೆದುಕೊಳ್ಳಬೇಕು ಎಂದು ತರಬೇತಿ ನೀಡಲಾಗುತ್ತದೆ. ಗರ್ಭಿಣಿಯರಿಗೆ ನೋವನ್ನು ನಿಭಾಯಿಸುವ ಕಲೆಯನ್ನು ಹೇಳಿಕೊಡಲಾಗುತ್ತದೆ.

'ಅತಿಯಾದ ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಇರುವವರು ಜಲಪ್ರಸವ ವಿಧಾನವನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಿಲ್ಲ. ಜತೆಗೆ ಹೃದ್ರೋಗ ಸಮಸ್ಯೆ ಇರುವವರಿಗೆ ಜಲಪ್ರಸವ ಉತ್ತಮ ಆಯ್ಕೆಯಲ್ಲ. ಜಲಪ್ರಸವ ಆಯ್ಕೆ ಮಾಡಿಕೊಳ್ಳುವವರು ಕಾಲ ಕಾಲಕ್ಕೆ ಸೂಕ್ತ ರೀತಿಯ ವ್ಯಾಯಾಮಗಳನ್ನು ಮಾಡಿಕೊಳ್ಳಬೇಕು. ಸಮತೋಲಿತ ಆಹಾರ ಸೇವಿಸಬೇಕು. ವಿಶೇಷವಾಗಿ ತೂಕವನ್ನು ನಿರ್ವಹಣೆ ಮಾಡಿಕೊಳ್ಳಬೇಕು.

ಎಲ್ಲ ಆರೋಗ್ಯವಂತ ಗರ್ಭಿಣಿಯರು ಜಲಪ್ರಸವವನ್ನು ಆಯ್ಕೆ ಮಾಡಿಕೊಳ್ಳಬಹುದು. ಆದರೆ, ತಾಯಿ ಮತ್ತು ಮಗುವಿನ ಸುರಕ್ಷತೆಗಾಗಿ ವೈದ್ಯರ ಜತೆ ಮಾತುಕತೆ ನಡೆಸುವುದು ಮುಖ್ಯ. ❖

ಗರ್ಭಿಣಿಯರಲ್ಲಿ ಮೈಕಡಿತ ಅಪಾಯವೇ?

ಸ್ಪಂದನ

ಡಾ. ವೀಣಾ ಎಸ್. ಭಟ್

- **ನಾಲ್ಕು ವರ್ಷದ ಮಗಳಿದ್ದಾಳೆ. ಅವಳು ಗರ್ಭದಲ್ಲಿದ್ದಾಗ ಆರೂವರೆ ತಿಂಗಳಿಗೆ ಮೈಕಡಿತ ಉಂಟಾಯಿತು. ಹಲವು ಚಿಕಿತ್ಸೆ ನೀಡಿದ್ದರೂ ಕಡಿತ ಕಡಿಮೆಯಾಗಲಿಲ್ಲ. ಎಂಟೂವರೆ ತಿಂಗಳಿಗೆ ಮಗುವನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆಯಲಾಯಿತು. ಇದಾಗಿ ಸ್ವಲ್ಪ ದಿನಗಳಿಗೆ ಮೈಕಡಿತ ಕಡಿಮೆಯಾಯಿತು. ಮತ್ತೆ ಮರುಕಳಿಸಬಹುದೆಂಬ ಎಚ್ಚರಿಕೆ ನೀಡಿದ್ದರು. ಈಗ ಮತ್ತೊಂದು ಮಗು ಬೇಕು ಎನಿಸಿದೆ. ಆದರೆ, ಮೈ ಕಡಿತದ ಭಯಕ್ಕೆ ಹೆದರಿದ್ದೇನೆ. ಏನು ಮಾಡಲಿ ಮೇಡಂ?**

ಗರ್ಭಧಾರಣೆ ಸಂದರ್ಭದಲ್ಲಿ ಮೈ ಕಡಿತ ಉಂಟಾಗಲು ಹಲವಾರು ಕಾರಣಗಳಿವೆ. ಶೇಕಡ 20 ರಿಂದ 22ರಷ್ಟು ಒಣಚರ್ಮದಿಂದ ಮೈ ಕಡಿತ ಉಂಟಾಗಬಹುದು. ಉಬ್ಬುತ್ತಿರುವ ಹೊಟ್ಟೆ ಹಾಗೂ ಸ್ತನಗಳ ಬೆಳವಣಿಗೆಯಿಂದಲೂ ಚರ್ಮ ಹಿಗ್ಗಿದಂತಾಗಿ ಸಹಜವಾಗಿ ಮೈಕಡಿಯಬಹುದು. ಹಾರ್ಮೋನ್‌ಗಳ ಸ್ರವಿಸುವಿಕೆಯಿಂದಲೂ ಹಸ್ತಪಾದಗಳು ಕೆಂಪಾಗಾಗಿ, ಮೈಕಡಿತ ಉಂಟಾಗಬಹುದು. ಈ ಮೊದಲೇ ಗರ್ಭಿಣಿಯರಲ್ಲಿ ಕಜ್ಜಿ (ಸೋರಿಯಾಸಿಸ್) ಇದ್ದರೆ, ಸಮಸ್ಯೆ ಉಲ್ಬಣಗೊಳ್ಳಬಹುದು.

ಚಿಕ್ಕಪ್ರಾಯದಲ್ಲೇ ಮೊದಲ ಬಾರಿಗೆ ಗರ್ಭ ಧರಿಸಿದವರಲ್ಲಿ ಹೆಚ್ಚು ಕಾಣಿಸಿಕೊಳ್ಳಬಹುದು. ಇದರಲ್ಲಿ ಸಣ್ಣದಾಗಿ ಗುಳ್ಳೆಗಳು ಉಬ್ಬಿದ ರೀತಿಯಲ್ಲಿ ಹುಳುಕಡಿತದ ಹಾಗೆ ಕಾಣಿಸಿಕೊಂಡು ನಂತರ ಗಾಯವಾಗಿ ಮೇಲ್ಭಾಗ ಗಟ್ಟಿಯಾಗುತ್ತಾ ಹೋಗಬಹುದು. ಇದರಲ್ಲಿಯೂ ತಾಯಿ ಮಗುವಿಗೆ ಯಾವ ಸಮಸ್ಯೆಯೂ ಉಂಟಾಗಲಾರದು (ಕಡಿತದ ಹೊರತಾಗಿ). ಸೂಕ್ತ ಚಿಕಿತ್ಸೆಯಿಂದ ಇವುಗಳನ್ನು ನಿರ್ವಹಣೆ ಮಾಡಬಹುದು.

ಇನ್ನು ಗರ್ಭಿಣಿಯರಲ್ಲಿ ಬಹುರೂಪಿ ಗುಳ್ಳೆಗಳು (ಪಿ.ಯು.ಪಿ.ಪಿ.ಪಿ) ಶೇಕಡ 11ಕ್ಕೂ ಹೆಚ್ಚು ಸಂದರ್ಭಗಳಲ್ಲಿ ಬಿಳಿ ಬಣ್ಣದವರಲ್ಲಿ, ಗರ್ಭಾವಸ್ಥೆಯಲ್ಲಿ ಹೆಚ್ಚು ತೂಕ ಗಳಿಸಿದವರಲ್ಲಿ, ಗಂಡು ಮಗುವಿದ್ದಾಗ ಹೆಚ್ಚು ಕಂಡುಬರುತ್ತದೆ. ಇದಕ್ಕೆ ಕಾರಣ ತೂಕ ಹೆಚ್ಚಾಗಿ ಹೊಟ್ಟೆಬಿರಿತ ಹೆಚ್ಚಾದಾಗ ಸಂಯೋಜಿತ ಅಂಗಾಂಶದ ಬಿರಿತ ಉಂಟಾಗಿ ಅಲರ್ಜಿ ಉಂಟಾಗಬಹುದು. ಹೆಚ್ಚಾಗಿ ಸ್ಟ್ರೆಚ್‌ಮಾರ್ಕ್ ಮೇಲೆ ಇವು ಆರಂಭವಾಗಿ ಸಣ್ಣ ಸಣ್ಣ ಗುಳ್ಳೆಗಳಾಗುತ್ತವೆ. ಇನ್ನೊಂದು ವಿಶೇಷತೆ ಏನೆಂದರೆ ಕುತ್ತಿಗೆ, ಮುಖ, ಕೈಕಾಲುಗಳಿಗೆ ಇವು ಹರಡುವುದಿಲ್ಲ. ಹೊಕ್ಕಳ ಸುತ್ತವು ಇರುವುದಿಲ್ಲ. ತಾಯಿ ಹಾಗೂ ಶಿಶುವಿಗೆ ಇದರಿಂದ ಯಾವ ತೊಂದರೆಯೂ ಉಂಟಾಗುವುದಿಲ್ಲ.

ಕೆಲವು ಗರ್ಭಿಣಿಯರಲ್ಲಿ ಹೊಕ್ಕಳಸುತ್ತ ಜೇನುಗೂಡುಗಳ ಹಾಗೆ ನೀರು ತುಂಬಿದ ಗುಳ್ಳೆಗಳು ಕಾಣಿಸಿಕೊಂಡು, ಆಮೇಲೆ ಎಲ್ಲಾ ಕಡೆ ಕೈಕಾಲು ಪಾದ ಹಸ್ತಗಳಿಗೂ ಹರಡಬಹುದು ಮತ್ತು ಹೆರಿಗೆ ನಂತರವೂ ಹೆಚ್ಚಾಗಬಹುದು. ಮಗುವಿಗೂ ಗುಳ್ಳೆಗಳಾಗಬಹುದು ಇದನ್ನ ಗರ್ಭಧಾರಣೆಯ ಪೆಂಪಿಗಾಯಿಡ್ ಎನ್ನುತ್ತೇವೆ. ಈ ಸ್ಥಿತಿಯಲ್ಲೂ ಅತಿಯಾಗಿ ಕಾಳಜಿಯಿಂದ ಇರುವುದು ಮುಖ್ಯ. ಯಾಕೆಂದರೆ ಹೊಟ್ಟೆಯೊಳಗಿನ ಮಗುವಿನ ತೂಕ ಕಡಿಮೆಯಾಗಿ ಪ್ರಾಣಕ್ಕೆ ಅಪಾಯ ಎದುರಾಗಬಹುದು.

ಗರ್ಭಧಾರಣೆಯ ಮೂರರಿಂದ ಆರು ತಿಂಗಳ ನಂತರ ಲಿವರ್‌ನಲ್ಲಿ ಸಣ್ಣ ನಾಳಗಳಲ್ಲಿ ಬೈಲ್‌ದ್ರವವು ಸರಿಯಾಗಿ ಪ್ರವಹಿಸದೆ ಬೈಲ್ ಆಮ್ಲಗಳು ಶೇಖರಣೆಯಾಗಿ ಕಡಿತ ಉಂಟಾಗಬಹುದು. ಇದು ಮೊದಲು ಪಾದ ಮತ್ತು ಹಸ್ತಗಳಲ್ಲಿ ಕಾಣಿಸಿಕೊಂಡು ನಂತರ ದೇಹದಲ್ಲೆಡೆ ಮೈಕಡಿತ ಹರಡುತ್ತದೆ. ರಾತ್ರಿ ಹೊತ್ತು ಹೆಚ್ಚಾಗುತ್ತದೆ. ಕೆಲವರಲ್ಲಿ ವಾಕರಿಕೆ, ಸುಸ್ತು, ಊಟ ಸೇರದೇ ಇರಬಹುದು. ಈ ಸ್ಥಿತಿಯಲ್ಲಿ ಬಹಳ ಜಾಗರೂಕರಾಗಿರುವುದು ಮುಖ್ಯ. ಯಾಕೆಂದರೆ ತಾಯಿ ಹಾಗೂ ಮಗು ಇಬ್ಬರಿಗೂ ಇದು ಅಪಾಯವನ್ನುಂಟು ಮಾಡಬಹುದು.

ಈ ಸ್ಥಿತಿ ಮತ್ತೆ ಗರ್ಭಧಾರಣೆಯಾದಾಗ ಮರುಕಳಿಸುವ ಸಾಧ್ಯತೆ ಹೆಚ್ಚಿದೆ. ಭಯಪಡಬೇಡಿ. ತಜ್ಞರ ಮೇಲ್ವಿಚಾರಣೆಯಲ್ಲಿರಿ. ಸಾಮಾನ್ಯ ಕಡಿತಕ್ಕೆ ಗರ್ಭಿಣಿಯರು ಪಾಲಿಸಬೇಕಾದ ಕಟ್ಟುನಿಟ್ಟಿನ ನಿಯಮಗಳೆಂದರೆ ಉಗುರುಗಳನ್ನ ಚಿಕ್ಕದಾಗಿ ಕತ್ತರಿಸಿಕೊಳ್ಳುವುದು, ಉಗುರು ಬೆಚ್ಚಗಿನ ನೀರಿನಿಂದ ಸ್ನಾನ ಮಾಡುವುದು, ಸೋಪು ಮತ್ತೆ ಇತರ ರಾಸಾಯನಿಕಗಳನ್ನ ಕಡಿಮೆ ಮಾಡುವುದು. ಸ್ನಾನವಾದ ತಕ್ಷಣ ಮಾಯಿಶ್ಚರೈಸರ್ ಬಳಸುವುದು, ಸಡಿಲವಾದ ಹತ್ತಿ ಬಟ್ಟೆ ಧರಿಸುವುದು, ಅತಿಯಾದ ಬಿಸಿಲಿಗೆ ಮೈಒಡ್ಡದಿರುವುದು, ಆ್ಯಂಟಿಇನ್‌ಸ್ಟಮಿನ್, ಕೋಲ್ಡ್ ಕಂಪ್ರೆಸ್‌ಗಳನ್ನು ಗಾಯದ ಮೇಲೆ ಉಪಯೋಗಿಸಬೇಕು. ❖

ವೈವಿಧ್ಯಮಯ ಉಪ್ಪಿನಕಾಯಿ

ಮಳೆಗಾಲ ಹತ್ತಿರ ಬರುತ್ತಿದ್ದಂತೆ ತರಹೇವಾರಿ ಉಪ್ಪಿನಕಾಯಿಗಳನ್ನು ಮಾಡಿ, ಅದನ್ನು ಭರಣಿಯಲ್ಲಿ ತುಂಬಿಡುವುದು ಎಂದಿನಂತೆ ಬೇಸಿಗೆಯಲ್ಲಿ ನಡೆಯುವ ಸಂಪ್ರದಾಯ. ಉಪ್ಪಿನಕಾಯಿ ರೆಸಿಪಿಗಳನ್ನು ನೀಡಿದ್ದಾರೆ ಕೆ.ವಿ.ರಾಜಲಕ್ಷ್ಮಿ

ರಸಾಸ್ವಾದ

ಅವಕಾಯಿ

ಬೇಕಾಗುವ ಸಾಮಗ್ರಿ: ಮಧ್ಯಮ ಗಾತ್ರಕ್ಕೆ ಹೆಚ್ಚಿದ ಹುಳಿ ಮಾವಿನಕಾಯಿ ಹೋಳುಗಳು 3 ಕಪ್, ಎಣ್ಣೆ 2 ಕಪ್, ಅಚ್ಚ ಮೆಣಸಿನ ಪುಡಿ 1 ಕಪ್, ಕಲ್ಲುಪ್ಪು 3/4 ಕಪ್, ಸಾಸಿವೆ 4 ಚಮಚ ಮೆಂತ್ಯ 1 ಚಮಚ, ಅರಿಶಿನ 1 ಚಮಚ, ಇಂಗು 2 ಚಮಚ.

ಮಾಡುವ ವಿಧಾನ: ಅಗಲದ ಪಾತ್ರೆಯಲ್ಲಿ ಮಾವಿನ ಹೋಳುಗಳನ್ನು ಹರಡಿ ಅದರ ಮೇಲೆ 1/4 ಕಪ್ ಎಣ್ಣೆ ಹಾಕಿ ಕಲಸಿ ಬದಿಗಿಡಿ. ಸಾಸಿವೆ ಮತ್ತು ಮೆಂತ್ಯೆ ಡ್ರೈ ರೋಸ್ಟ್ ಮಾಡಿ ಪುಡಿ ಮಾಡಿಕೊಳ್ಳಿ. ಮತ್ತೊಂದು ಮಿಕ್ಸಿಂಗ್ ಬೌಲ್ ನಲ್ಲಿ ಮೆಣಸಿನಪುಡಿ, ಪುಡಿಮಾಡಿದ ಕಲ್ಲುಪ್ಪು ಸಾಸಿವೆ, ಮೆಂತ್ಯೆ ಪುಡಿ, ಅರಿಸಿನ, ಇಂಗು ಇವೆಲ್ಲ ಹಾಕಿ ಉಳಿದ ಎಣ್ಣೆ ಸೇರಿಸಿ ಮಿಶ್ರಣ ಮಾಡಿ, ಮಾವಿನ ಹೋಳುಗಳ ಜತೆ ಸೇರಿಸಿ ಖಾರ ಎಲ್ಲ ಕಡೆ ಹರಡುವಂತೆ ಮಿಶ್ರಣ ಮಾಡಿ ಒಂದು ಜಾಡಿಯಲ್ಲಿ ಶೇಖರಿಸಿಟ್ಟುಕೊಳ್ಳಿ.

ಮಿಕ್ಸೆಡ್ ಉಪ್ಪಿನಕಾಯಿ

ಬೇಕಾಗುವ ಸಾಮಗ್ರಿ: ಹೆಚ್ಚಿದ ಕ್ಯಾರೆಟ್, ಹಾಗಲಕಾಯಿ, ಶುಂಠಿ, ಮಧ್ಯಮ ಖಾರದ ಹಸಿಮೆಣಸಿನಕಾಯಿ ತಲಾ 1/2 ಕಪ್, ಎಣ್ಣೆ 1 ಕಪ್, ಅಚ್ಚ ಮೆಣಸಿನ ಪುಡಿ 1/2 ಕಪ್, ಕಲ್ಲುಪ್ಪು 1/2 ಕಪ್, ಸಾಸಿವೆ 2 ಚಮಚ, ಮೆಂತ್ಯ 1 ಚಮಚ, ಜೀರಿಗೆ 1 ಚಮಚ, ಇಂಗು 2 ಚಮಚ.

ಮಾಡುವ ವಿಧಾನ: ಮೊದಲಿಗೆ ಸಾಸಿವೆ, ಜೀರಿಗೆ, ಮೆಂತ್ಯ ಹುರಿದು ಪುಡಿಮಾಡಿಕೊಳ್ಳಿ. ಬಾಣಲಿಯಲ್ಲಿ ಎಣ್ಣೆ ಬಿಸಿ ಮಾಡಿ ಸಾಸಿವೆ ಸಿಡಿಸಿ ಹೆಚ್ಚಿದ ಹೋಳುಗಳನ್ನು ಐದು ನಿಮಿಷ ಬಾಡಿಸಿ.
ನಂತರ ಅರೆದ ಮಸಾಲೆ ಪುಡಿ ಅಚ್ಚಮೆಣಸಿನಪುಡಿ, ಉಪ್ಪು ಸೇರಿಸಿ ಮಗುಚುತ್ತಿರಿ. ಮಿಶ್ರಣ ಚೆನ್ನಾಗಿ ಬೆರೆತು ಎಣ್ಣೆ ಬಿಡುವಾಗ ಬಂದಾಗ ಉರಿ ಆರಿಸಿ, ತಣಿಸಿ ಗಾಳಿಯಾಡದ ಡಬ್ಬದಲ್ಲಿ ಸಂಗ್ರಹಿಸಿಕೊಳ್ಳಿ.

ನಿಂಬೆಕಾಯಿ

ಬೇಕಾಗುವ ಸಾಮಗ್ರಿ: ನಿಂಬೆ ಹೋಳುಗಳು 2 ಕಪ್, ಅಚ್ಚ ಮೆಣಸಿನ ಪುಡಿ 3/4 ಕಪ್, ಕಲ್ಲುಪ್ಪು 1/2 ಕಪ್, ಸಾಸಿವೆ 4, ಚಮಚ ಮೆಂತ್ಯ 1 ಚಮಚ, ಇಂಗು 2 ಚಮಚ, ಎಣ್ಣೆ ಎರಡು ಚಮಚ.

ಮಾಡುವ ವಿಧಾನ: ಹೆಚ್ಚಿದ ನಿಂಬೆ ಹೋಳುಗಳಿಗೆ ಉಪ್ಪು ಸೇರಿಸಿ ಮಿಶ್ರಣ ಮಾಡಿ, ಒಂದು ಜಾಡಿಯಲ್ಲಿ ಮೂರರಿಂದ ನಾಲ್ಕು ದಿನಗಳ ಕಾಲ ಊರಲು ಬಿಡಿ. ನಂತರ ಸ್ವಲ್ಪ ಮೆತ್ತಗಾದ ನಿಂಬೆ ಹೋಳುಗಳಿಗೆ ಪುಡಿ ಮಾಡಿದ ಸಾಸಿವೆ, ಮೆಂತ್ಯ, ಅಚ್ಚ ಮೆಣಸಿನಪುಡಿ, ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ,

ಹೇರಳೆಕಾಯಿ

ಬೇಕಾಗುವ ಸಾಮಗ್ರಿ: ಹೆಚ್ಚಿದ ಹೇರಳೆ ಕಾಯಿ ಹೋಳುಗಳು 2 ಕಪ್, ಅಚ್ಚ ಮೆಣಸಿನ ಪುಡಿ 3/4 ಕಪ್, ಕಲ್ಲುಪ್ಪು 1/2 ಕಪ್, ಸಾಸಿವೆ 4 ಚಮಚ ಮೆಂತ್ಯ 1 ಚಮಚ, ಇಂಗು 2 ಚಮಚ.

ಮಾಡುವ ವಿಧಾನ: ಹೇರಳೆಕಾಯಿಗೆ ಉಪ್ಪು ಸೇರಿಸಿ ಒಂದು ಜಾಡಿಯಲ್ಲಿ ಎಂಟು ದಿನಗಳ ಕಾಲ ನೆನೆಯಲು ಬಿಡಿ. ಉಪ್ಪು ಹೀರಿದ ಕಾಯಿ ಸ್ವಲ್ಪ ಮೆತ್ತಗಾದಾಗ ಪುಡಿ ಮಾಡಿದ ಸಾಸಿವೆ, ಮೆಂತ್ಯ, ಅಚ್ಚ ಮೆಣಸಿನಪುಡಿ, ಉಪ್ಪು,ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ.

ಮಾಕಳಿ ಬೇರಿನ ಉಪ್ಪಿನ ಕಾಯಿ

ಬೇಕಾಗುವ ಸಾಮಗ್ರಿ: ಮಾಕಳಿ ಬೇರು 10-12, ನಿಂಬೆ ಹಣ್ಣು 3, ಸಾಸಿವೆ 2 ಚಮಚ ಮೆಂತ್ಯ 2 ಚಮಚ, ಅಚ್ಚ ಮೆಣಸಿನಪುಡಿ 1/4 ಕಪ್, 1/4 ಉಪ್ಪು,

ಮಾಡುವ ವಿಧಾನ: ಮಾಕಳಿ ಬೇರಿನ ಸಿಪ್ಪೆ ತೆಗೆದು ನಡುವಿನ ಬೇರು/ಕಡ್ಡಿ ತೆಗೆದು ಸಣ್ಣಗೆ ಹೆಚ್ಚಿಕೊಳ್ಳಿ. (ಇದರ ಅಳತೆ ಅಂದಾಜು 1 ಕಪ್) ನಂತರ ನೀರಿನಲ್ಲಿ ಚೆನ್ನಾಗಿ ತೊಳೆದು ಒಂದು ಬಟ್ಟೆಯಿಂದ ಒರೆಸಿಕೊಳ್ಳಿ. ನಿಂಬೆಹಣ್ಣುಗಳನ್ನು ಸಣ್ಣದಾಗಿ ಹೆಚ್ಚಿಕೊಳ್ಳಿ. ಒಂದು ಅಗಲದ ಪಾತ್ರೆಯಲ್ಲಿ ಹೆಚ್ಚಿದ ಪದಾರ್ಥಗಳು ಮತ್ತು ಉಪ್ಪು ಸೇರಿಸಿ ಕಲೆಸಿಡಿ. ಸಾಸಿವೆ ಮತ್ತು ಮೆಂತ್ಯವನ್ನು ಡ್ರೈ ರೋಸ್ಟ್ ಮಾಡಿ ಪುಡಿಮಾಡಿಕೊಳ್ಳಿ. ಕಲಸಿದ ಹೋಳುಗಳಿಗೆ ಸಾಸಿವೆ, ಮೆಂತ್ಯ ಪುಡಿ, ಮೆಣಸಿನಪುಡಿ, ಸೇರಿಸಿ ಎಲ್ಲ ಹೋಳುಗಳಿಗೆ ಹರಡುವಂತೆ ಮಿಶ್ರಣ ಮಾಡಿ, ಜಾಡಿಗೆ ವರ್ಗಾಯಿಸಿ ಮುಚ್ಚಳ ಮುಚ್ಚಿಡಿ. ಮೂರು ದಿನಗಳ ನಂತರ ಉಪ್ಪಿನಕಾಯಿ ಚೆನ್ನಾಗಿ ಹೊಂದಿಕೊಂಡು ಬಳಸಲು ಯೋಗ್ಯವಾಗಿರುತ್ತದೆ.

ದಿಢೀರ್ ಉಪ್ಪಿನಕಾಯಿ

ಬೇಕಾಗುವ ಸಾಮಗ್ರಿ: ಸಣ್ಣಗೆ ಹೆಚ್ಚಿದ ತೋತಾಪುರಿ ಮಾವಿನಕಾಯಿ 2 ಕಪ್, ಅಚ್ಚ ಖಾರದ ಪುಡಿ 4 ಚಮಚ, ಸಕ್ಕರೆ 1 ಚಮಚ, ಎಣ್ಣೆ 1/4 ಕಪ್, ಸಾಸಿವೆ 1 ಚಮಚ, ಇಂಗು 1/2 ಚಮಚ, ರುಚಿಗೆ ತಕ್ಕಷ್ಟು ಪುಡಿ ಉಪ್ಪು.

ಮಾಡುವ ವಿಧಾನ: ಸಣ್ಣಗೆ ಹೆಚ್ಚಿದ ಮಾವಿನಕಾಯಿಯನ್ನು ಅಗಲವಾದ ಬೇಸಿನ್‌ನಲ್ಲಿ ಹಾಕಿ ಖಾರದ ಪುಡಿ, ಉಪ್ಪು, ಇಂಗು, ಸಕ್ಕರೆ ಬೆರೆಸಿ ಒಂದು ಬದಿಗಿಡಿ. ಎಣ್ಣೆಯಲ್ಲಿ ಸಾಸಿವೆ ಸಿಡಿಸಿ ಮಾವಿನಕಾಯಿ ಮಿಶ್ರಣವನ್ನು ಸೇರಿಸಿ, ಸಣ್ಣ ಉರಿಯಲ್ಲಿ ಚೆನ್ನಾಗಿ ಹೊಂದಿಕೊಳ್ಳುವಂತೆ ಕೈಯಾಡಿ, ಉರಿ ಆರಿಸಿ. ಎಣ್ಣೆ, ಉಪ್ಪು ಮುಂದಿದ್ದರೆ ಉಪ್ಪಿನಕಾಯಿಯನ್ನು ಹೆಚ್ಚು ದಿನ ಬಾಳುತ್ತದೆ.

ಸಂಕ್ಷಿಪ್ತ ಸುದ್ದಿ

ಕಾಲೇಜು ಹಾಸ್ಟೆಲ್‌ನಲ್ಲಿ ಪ್ರಚೋದನಕಾರಿ ಬರಹ ಪ್ರಕರಣ ದಾಖಲು

ಉಡುಪಿ: ಕಾರ್ಕಳದ ನಿಟ್ಟೆ ಎಂಜಿನಿಯರಿಂಗ್ ಕಾಲೇಜಿನ ಕ್ಯಾಂಪಸ್‌ನಲ್ಲಿಯ ವಿದ್ಯಾರ್ಥಿನಿಯರ ಹಾಸ್ಟೆಲ್‌ನ ಶೌಚಾಲಯದಲ್ಲಿ ಪ್ರಚೋದನಕಾರಿ ಬರಹ ಬರೆದಿರುವ ದೂರಿಗೆ ಸಂಬಂಧಿಸಿ ಕಾರ್ಕಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಶೌಚಾಲಯದ ಗೋಡೆಯಲ್ಲಿ ಪೆನ್‌ನಲ್ಲಿ ಪ್ರಚೋದನಕಾರಿ ಬರಹ ಬರೆದಿರುವ ಕುರಿತು ಹಾಸ್ಟೆಲ್‌ನ ಮ್ಯಾನೇಜರ್ ಶುಕ್ರವಾರ ಮಾಹಿತಿ ನೀಡಿದ್ದಾರೆ. ಅದರಂತೆ ಅಪರಿಚಿತ ವಿದ್ಯಾರ್ಥಿಗಳ ವಿರುದ್ಧ ಪ್ರಕರಣ ದಾಖಲಾಗಿದೆ. ಹಿಂದೂ ಮತ್ತು ಮುಸ್ಲಿಂ ಧರ್ಮಗಳಿಗೆ ಧಕ್ಕೆ ತರುವ ರೀತಿಯಲ್ಲಿ ಬರಹ ಬರೆದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಕೆ. ಅರುಣ್ ತಿಳಿಸಿದ್ದಾರೆ.

ಎಂಜಿನಿಯರಿಂಗ್ ಶುಲ್ಕ: ಶೇ 7 ಹೆಚ್ಚಳ?

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲೂ ಶೇ 10ರಷ್ಟು ಶುಲ್ಕ ಹೆಚ್ಚಳಕ್ಕೆ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಬೇಡಿಕೆ ಸಲ್ಲಿಸಿದ್ದು, ಶೇ 7ರಷ್ಟು ಹೆಚ್ಚಳಕ್ಕೆ ಸರ್ಕಾರ ಸಮ್ಮತಿಸುವ ಸಾಧ್ಯತೆ ಇದೆ.

ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ನೇತೃತ್ವದಲ್ಲಿ ವಿವಿಧ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳ ಜತೆ ಸಭೆ ನಡೆಸಿದ ನಂತರ ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಶುಲ್ಕವನ್ನು 2024–25ನೇ ಶೈಕ್ಷಣಿಕ ಸಾಲಿನಲ್ಲಿ ಶೇ 10ರಷ್ಟು ಹೆಚ್ಚಳ ಮಾಡಲಾಗಿತ್ತು.

ಅಧ್ಯಾಪಕರ ವೇತನ ಹೆಚ್ಚಳ, ಕಾಲೇಜುಗಳ ಮೂಲಸೌಕರ್ಯ ಸುಧಾರಣೆ, ನಿರ್ವಹಣೆ ಮತ್ತು ಗುಣಮಟ್ಟವನ್ನು ಪರಿಗಣಿಸಿ 2025–26ನೇ ಸಾಲಿನಲ್ಲೂ ಶೇ10ರಷ್ಟು ಹೆಚ್ಚಳಕ್ಕೆ ಅವಕಾಶ ನೀಡಬೇಕು ಎಂದು ಕರ್ನಾಟಕ ಅನುದಾನರಹಿತ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಸಂಘ ಮನವಿ ಸಲ್ಲಿಸಿದೆ.

'ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಸಂಘ ಮನವಿ ಕುರಿತು ಪೂರ್ವಭಾವಿ ಸಭೆಯಲ್ಲಿ ಚರ್ಚೆ ಮಾಡಿದ್ದೇವೆ. ಶೇ 7ರಷ್ಟು ಹೆಚ್ಚಳ ಮಾಡಲು ಅವಕಾಶ ನೀಡುವುದಾಗಿ ಹೇಳಿದ್ದೇವೆ' ಎಂದು ಸಚಿವ ಸುಧಾಕರ್ ತಿಳಿಸಿದರು. ಪ್ರಸ್ತುತ ಸರ್ಕಾರಿ ಕೋಟಾದ ಸೀಟುಗಳಿಗೆ ಖಾಸಗಿ ಕಾಲೇಜುಗಳ ಶುಲ್ಕ ₹1.06 ಲಕ್ಷ, ಕಾಮೆಡ್–ಕೆ (ಟೈಪ್–1) ಶುಲ್ಕ ₹1.86 ಲಕ್ಷ ಹಾಗೂ (ಟೈಪ್–2) ₹2.61 ಲಕ್ಷ ಇದೆ.

ಕಾಮೆಡ್–ಕೆ ಪರೀಕ್ಷೆ: 13 ನಗರಗಳಲ್ಲಿ ಮುಂದೂಡಿಕೆ

ಬೆಂಗಳೂರು: ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ವಿವಿಧ ಕೋರ್ಸ್‌ಗಳ ಪ್ರವೇಶಕ್ಕಾಗಿ ಕರ್ನಾಟಕದ ವೈದ್ಯಕೀಯ ಎಂಜಿನಿಯರಿಂಗ್ ಮತ್ತು ದಂತ ಕಾಲೇಜುಗಳ ಒಕ್ಕೂಟ (ಕಾಮೆಡ್–ಕೆ) ಮೇ 10ರಂದು ನಿಗದಿಪಡಿಸಿದ್ದ ಪ್ರವೇಶ ಪರೀಕ್ಷೆಯನ್ನು ಉತ್ತರ ಭಾರತದ 13 ನಗರಗಳಲ್ಲಿ ಮುಂದೂಡಿದೆ.

'ಆಪರೇಷನ್ ಸಿಂಧೂರ್'ನಿಂದ ಉಂಟಾಗಿರುವ ತುರ್ತು ಪರಿಸ್ಥಿತಿಯಿಂದಾಗಿ ಕೇಂದ್ರ ಸರ್ಕಾರದ ನಿರ್ದೇಶನದಂತೆ ಗಡಿ ರಾಜ್ಯಗಳ ನಗರಗಳಲ್ಲಿ ಮಾತ್ರ ಪರೀಕ್ಷೆ ಮುಂದೂಡಲಾಗಿದೆ. ಬೆಂಗಳೂರು ಸೇರಿದಂತೆ ಉಳಿದ ನಗರಗಳಲ್ಲಿ ಮೇ 10ರಂದೇ ಪರೀಕ್ಷೆ ನಡೆಯಲಿದೆ' ಎಂದು ಕಾಮೆಡ್–ಕೆ ಹೇಳಿದೆ.

ಗುಜರಾತ್‌ನ ಜಾಮ್‌ನಗರ, ಜಮ್ಮು ಮತ್ತು ಕಾಶ್ಮೀರದ ಶ್ರೀನಗರ, ಜಮ್ಮು, ಪಂಜಾಬ್‌ನ ಲೂಧಿಯಾನ, ಬಠಿಂಡಾ ಜಲಂಧರ್, ಮೊಹಾಲಿ, ಪಟಿಯಾಲ, ಅಮೃತಸರ, ರಾಜಸ್ಥಾನದ ಜೋಧಪುರ, ಬಿಕನೇರ್, ಶ್ರೀಗಂಗಾನಗರ, ಹರಿಯಾಣದ ಅಂಬಾಲ ನಗರಗಳಲ್ಲಿ ಮೇ 10ರಂದು ಪರೀಕ್ಷೆ ಇರುವುದಿಲ್ಲ.

ತರಗತಿಗಳಿಗೆ ತಿಲಾಂಜಲಿ • ಬೋಧಕೇತರ ಹುದ್ದೆಗಳತ್ತ ಒಲವು: ಕೋರ್ಟ್ ಆದೇಶಕ್ಕಿಲ್ಲ ಮನ್ನಣೆ

ಯುಜಿಸಿ ಶ್ರೇಣಿ ವೇತನ; ಕೆಲಸ ಗೌಣ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಲಕ್ಷಗಳ ಲೆಕ್ಕದಲ್ಲಿ ಯುಜಿಸಿ (ವಿಶ್ವವಿದ್ಯಾಲಯ ಅನುದಾನ ಆಯೋಗ) ಶ್ರೇಣಿಯ ವೇತನ ಪಡೆಯುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಹಲವು ಪ್ರಾಧ್ಯಾಪಕರು, ಕಡಿಮೆ ಸಂಬಳದ ಬೋಧಕೇತರ ಹುದ್ದೆಗಳಲ್ಲೇ ಸೇವಾವಧಿ ಪೂರ್ಣಗೊಳಿಸುತ್ತಿದ್ದಾರೆ.

ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರ ಕಚೇರಿ, ನಿರ್ದೇಶಕರ ಕಚೇರಿ, ಪ್ರಾದೇಶಿಕ ಜಂಟಿ ನಿರ್ದೇಶಕರ ಕಚೇರಿಗಳು, ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ವ್ಯವಸ್ಥೆ (ಯುಯುಸಿಎಂಎಸ್), ಶಿಕ್ಷಣ ನೀತಿ ವಿಭಾಗ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತುಗಳಲ್ಲಿ ಆಡಳಿತಾಧಿಕಾರಿ, ನೋಡಲ್ ಅಧಿಕಾರಿ, ವಿಶೇಷ ಕರ್ತವ್ಯಾಧಿಕಾರಿ, ಸಂಯೋಜಕರಾಗಿ ಕೆಲಸ ಮಾಡುತ್ತಿದ್ದಾರೆ. ವಿವಿಧ ಪ್ರಾಧಿಕಾರಗಳ ವ್ಯವಸ್ಥಾಪಕ ನಿರ್ದೇಶಕರು, ಆಯುಕ್ತರ ಹುದ್ದೆಗಳಿಗೂ ನಿಯೋಜನೆಗೊಂಡಿದ್ದಾರೆ. ನೇಮಕಾತಿ ವಿಭಾಗ, ದಾಖಲೆಗಳ ಪರಿಶೀಲನಾ ವಿಭಾಗಗಳಲ್ಲೂ ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರಿಗೆ ಮೀಸಲಾದ ಶ್ರೇಣಿಯ ಹುದ್ದೆಗಳಿಗೂ ನಿಯೋಜನೆ ಪಡೆದಿದ್ದಾರೆ.

1996ನೇ ಬ್ಯಾಚ್ ಸೇರಿದಂತೆ ಇದುವರೆಗೂ ನೇಮಕವಾದ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ನಿಯೋಜನೆಯ ಸೌಲಭ್ಯ ಬಳಸಿಕೊಂಡಿದ್ದಾರೆ. 2024ರಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡವರೂ ನಿಯೋಜನೆ ಮೇಲೆ ತೆರಳಿದ್ದಾರೆ. ಕೆಲವರು ಎರಡು ದಶಕಕ್ಕೂ ಹೆಚ್ಚು ಸಮಯ ನಿಯೋಜನೆಗೊಂಡ ಬೋಧಕೇತರ ಹುದ್ದೆಗಳಲ್ಲೇ ಪೂರ್ಣ ಸಮಯ ಕಳೆದಿದ್ದಾರೆ.

ಹೈಕೋರ್ಟ್ ಆದೇಶಕ್ಕೂ ಇಲ್ಲ ಮನ್ನಣೆ: ಯುಜಿಸಿ ವೇತನ ಶ್ರೇಣಿ ಪಡೆಯುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅಧ್ಯಾಪಕರು, ಪ್ರಾಂಶುಪಾಲರನ್ನು ಬೋಧಕೇತರ ಹುದ್ದೆಗಳಿಗೆ ನಿಯೋಜನೆ ಮಾಡಬಾರದು. 'ಇದು ಯುಜಿಸಿ ನಿಯಮಗಳಿಗೆ ವಿರುದ್ಧ. ನಿಯೋಜನೆ ಮಾಡುವುದು ಸಾರ್ವಜನಿಕ ಹಣದ ದುರುಪಯೋಗವೂ ಆಗುತ್ತದೆ. ಹಾಗಾಗಿ, ನಿಯೋಜನೆ ರದ್ದು ಮಾಡಬೇಕು' ಎಂದು ವಸಂತರಾಜು ಶೆಟ್ಟಿ ವರ್ಸಸ್ ಕರ್ನಾಟಕ ಸರ್ಕಾರದ ಪ್ರಕರಣದಲ್ಲಿ ಕರ್ನಾಟಕ ಹೈಕೋರ್ಟ್ ವಿಭಾಗೀಯ ಪೀಠ ಜುಲೈ 2011ರಲ್ಲಿ ಆದೇಶ ನೀಡಿತ್ತು. ಆದೇಶ ನೀಡಿದ ನಂತರವೂ ಕೆಲವರು ನಿಯೋಜನೆಗೊಂಡ ಹುದ್ದೆಗಳಲ್ಲೇ ಇಂದಿಗೂ ಕೆಲಸ ಮಾಡುತ್ತಿದ್ದಾರೆ. ರಾಜಕೀಯ ಒತ್ತಡಗಳಿಗೆ ಮಣಿದು ನಿಯೋಜನೆಗಳು ನಡೆಯುತ್ತಲೇ ಇವೆ.

'ಕೆಲ ಪ್ರಾಧ್ಯಾಪಕರು ಐಎಎಸ್ ಅಧಿಕಾರಿಗಳಿಗಿಂತ ಅಧಿಕ ವೇತನ ಪಡೆಯುತ್ತಾರೆ. ಒಂದು ದಿನವೂ ತರಗತಿಗಳಿಗೆ ತೆರಳಿ ಪಾಠ ಮಾಡಿಲ್ಲ. ಕಾಲೇಜು ಶಿಕ್ಷಣ ಇಲಾಖೆಯ ಬೋಧಕೇತರ ಹುದ್ದೆಗಳಿಗೆ ರಾಜ್ಯ ಸರ್ಕಾರದ ವೇತನ ಶ್ರೇಣಿ ಅನ್ವಯವಾಗುತ್ತದೆ. ಬೋಧಕೇತರ ಹುದ್ದೆಗಳಿಗೆ ನಿಯೋಜನೆಗೊಂಡವರಿಗೆ ಯುಜಿಸಿ ವೇತನ ಶ್ರೇಣಿ ಸ್ಥಗಿತಗೊಳಿಸಬೇಕು. ರಾಜ್ಯ ವೇತನ ಶ್ರೇಣಿ ನೀಡಬೇಕು. ಅವರ ವೇತನದಿಂದಲೇ ಅವರ ಬದಲು ಪಾಠ ಮಾಡುವ ಅತಿಥಿ ಉಪನ್ಯಾಸಕರಿಗೆ ಗೌರವಧನ ನೀಡಬೇಕು' ಎಂದು ಒತ್ತಾಯಿಸಿ ಅಧ್ಯಾಪಕರ ಒಂದು ವರ್ಗ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅವರಿಗೆ ಪತ್ರ ಬರೆದಿದೆ.

ಬೋಧಕೇತರರ ರಜೆ ಸೌಲಭ್ಯ

ಯುಜಿಸಿ ಶ್ರೇಣಿಯ ವೇತನ ಪಡೆದು ಬೋಧಕೇತರ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕರು ಬೋಧಕೇತರರಿಗೆ ನೀಡುವ 30 ಗಳಿಕೆ ರಜೆ (ಇ.ಎಲ್) 10 ಅರ್ಧ ದಿನದ ರಜೆಯ ಸೌಲಭ್ಯ ಪಡೆದಿದ್ದಾರೆ. ಕಾಲೇಜು ಶಿಕ್ಷಣ ಇಲಾಖೆಯ ಈ ದಾಖಲೆಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುವ ಬೋಧಕ ಸಿಬ್ಬಂದಿಗೆ ದಸರಾ ರಜೆಯ ಸೌಲಭ್ಯ ಇರುವ ಕಾರಣ ಅವರಿಗೆ ಗಳಿಕೆ ರಜೆ, ಅರ್ಧ ದಿನದ ರಜೆಯ ಸೌಲಭ್ಯ ಇರುವುದಿಲ್ಲ. ಬೋಧಕೇತರರಿಗೆ ಮಾತ್ರ ಈ ಸೌಲಭ್ಯ ನೀಡಲಾಗುತ್ತದೆ.

ಪಾಠ ಮಾಡದಿದ್ದರೂ ಪ್ರೊಫೆಸರ್

ತರಗತಿಗಳಲ್ಲಿ ಪಾಠ ಮಾಡದ ಬೋಧಕೇತರ ಹುದ್ದೆಗಳಲ್ಲೇ ಸೇವಾವಧಿ ಮುಗಿಸಿದ ಅಧ್ಯಾಪಕರಿಗೂ ಕಾಲಕಾಲಕ್ಕೆ ಬಡ್ತಿ, ವೇತನ ಸೌಲಭ್ಯ ನೀಡಲಾಗಿದೆ. ಸಹಾಯಕ ಪ್ರಾಧ್ಯಾಪಕರಾಗಿ ನೇಮಕವಾದ ಕೆಲವರು ಒಂದು ದಿನವೂ ಪಾಠ ಮಾಡಿಲ್ಲ. ಹಾಗಿದ್ದರೂ, ಈಗ 'ಪ್ರೊಫೆಸರ್' ಎನಿಸಿಕೊಂಡಿದ್ದಾರೆ.

2024ರಲ್ಲಿ ನೇಮಕಾತಿ ಆದೇಶ ಪಡೆದ ಕೆಲ ಸಹಾಯಕ ಪ್ರಾಧ್ಯಾಪಕರು ಇನ್ನೂ ಪ್ರೊಬೆಷನರಿ ಅವಧಿ ಮುಗಿಸಿಲ್ಲ. ಅಂಥವರನ್ನೂ ಕಾಲೇಜು ಶಿಕ್ಷಣ ಇಲಾಖೆಯ ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ಸಲಹಾ ಸಮಿತಿಗೆ ಸಹಾಯಕ ಪ್ರಾಧ್ಯಾಪಕರು

ಯುಜಿಸಿ ನಿಯಮ, ಮಾರ್ಗಸೂಚಿಗಳನ್ನು ಪರಾಮರ್ಶಿಸಿ, ಅಭಿಪ್ರಾಯ ನೀಡಲು ಕಾಲೇಜು ಶಿಕ್ಷಣ ಇಲಾಖೆ ರಚಿಸಿರುವ ಸಲಹಾ ಸಮಿತಿಗೆ ಸಹಾಯಕ ಪ್ರಾಧ್ಯಾಪಕರನ್ನು ನೇಮಿಸಲಾಗಿದೆ.

'ಇಂತಹ ಸಮಿತಿಗಳಿಗೆ ವಿಶ್ವವಿದ್ಯಾಲಯಗಳ ಕುಲಪತಿಗಳು, ಅನುಭವಿ ಪ್ರಾಧ್ಯಾಪಕರು, ವಿಷಯ ತಜ್ಞರು, ಯುಜಿಸಿ ನಾಮ ನಿರ್ದೇಶಿತ ಸದಸ್ಯರು ಇರಬೇಕು. ಆದರೆ, 2009, 2017ರಲ್ಲಿ ನೇಮಕವಾದ ಸಹಾಯಕ ಪ್ರಾಧ್ಯಾಪಕರನ್ನು ಸಮಿತಿಗೆ ನೇಮಿಸಲಾಗಿದೆ.

ಸರ್ಕಾರ ಅಗತ್ಯವಿರುವ ಬೋಧಕೇತರ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು. ಗುಣಮಟ್ಟ ಕಾಯ್ದುಕೊಳ್ಳಲು ಬೋಧಕ ವರ್ಗದ ನಿಯೋಜನೆಗಳನ್ನು ರದ್ದು ಮಾಡಬೇಕು

ಅರುಣ್ ಶಹಾಪುರ, ವಿಧಾನಪರಿಷತ್ ಮಾಜಿ ಸದಸ್ಯ

'ಅರಣ್ಯ ಗ್ರಾಮಗಳಿಗೆ ಕಂದಾಯ ಸ್ಥಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಹಕ್ಕು ಕಾಯ್ದೆ-2006ರ ಪ್ರಕಾರ ಅರಣ್ಯ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಸೂಚಿಸಿದರು.

ಶರಾವತಿ ಹಾಗೂ ಇತರೆ ಯೋಜನೆಗಳ ಮುಳುಗಡೆ ಸಂತ್ರಸ್ತರು, ಪಾರಂಪರಿಕ ಅರಣ್ಯ ವಾಸಿಗಳು ಮತ್ತು ಅರಣ್ಯ-ಕಂದಾಯ ಭೂ ಹಕ್ಕುಗಳ ಸಮಸ್ಯೆಗಳ ಪರಿಹಾರಕ್ಕಾಗಿ ಕರೆಯಲಾಗಿದ್ದ ಜನಪ್ರತಿನಿಧಿಗಳು, ಉನ್ನತಾಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಕರ್ನಾಟಕ ಅರಣ್ಯ ಕಾಯ್ದೆ 1963ರ ಪ್ರಕಾರ ಮೀಸಲು ಅರಣ್ಯದ ಅಂತಿಮ ಅಧಿಸೂಚನೆಗೆ ಕಾಲಮಿತಿ ನಿಗದಿಪಡಿಸಬೇಕು. ಅನುಮೋದನೆ ನೀಡಬೇಕು. ಶಿವಮೊಗ್ಗ ಜಿಲ್ಲೆಯ ಸೊಪ್ಪಿನ ಬೆಟ್ಟ, ಕಾನು ಭೂಮಿಗಳ ಅನಧಿಕೃತ ಸಾಗುವಳಿ ಸಕ್ರಮಗೊಳಿಸುವಿಕೆ, ಹಂಗಾಮಿ ಮನೆಗಳಿಗೆ ಕಾಯಂ ಹಕ್ಕುಪತ್ರ ನೀಡಲು ಅಗತ್ಯ ಕ್ರಮ ಕೈಗೊಳ್ಳಬೇಕು. ಕಂದಾಯ ದಾಖಲೆಗಳಲ್ಲಿ ತಪ್ಪಾಗಿ ನಮೂದಿಸಲಾಗಿರುವ ಸೂಚಿತ ಅರಣ್ಯ ಉಲ್ಲೇಖವನ್ನು ಕೈಬಿಡಬೇಕು ಎಂದು ಹೇಳಿದರು.

ಹಿಂದೆ ಮೈಸೂರು ಸರ್ಕಾರ ನೀಡಿದ್ದ ಹಕ್ಕುಪತ್ರಗಳಿಗೆ ಇ-ಸ್ವತ್ತು ದಾಖಲೆ ಸೃಜಿಸುವುದು, ಶರಾವತಿ ಸೇರಿದಂತೆ ಸರ್ಕಾರದ ವಿವಿಧ ನೀರಾವರಿ ಹಾಗೂ ವಿದ್ಯುತ್ ಯೋಜನೆಗಳ ಮುಳುಗಡೆ ಸಂತ್ರಸ್ತರ ಪುನರ್ವಸತಿ ಜಮೀನುಗಳನ್ನು ಅರಣ್ಯ ಭೂಮಿ ಇಂಡೀಕರಣ ಪ್ರಸ್ತಾವನೆಯಿಂದ ಕೈಬಿಡುವುದು, 1978ರ ಪೂರ್ವದ ಮೂರು ಎಕರೆ ಅರಣ್ಯ ಭೂಮಿಯನ್ನು ಸಕ್ರಮಗೊಳಿಸುವ ಕುರಿತು ತ್ವರಿತ ಕ್ರಮಕೈಗೊಳ್ಳುವಂತೆ ಸೂಚಿಸಿದರು.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ದಶಕಗಳಿಂದ ನನೆಗುದಿಗೆ ಬಿದ್ದಿರುವ ಮುಳುಗಡೆ ಸಂತ್ರಸ್ತರು, ಅರಣ್ಯವಾಸಿಗಳ ಸಮಸ್ಯೆಗೆ ಪರಿಹಾರ ಸಿಗಲಿದೆ

ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ

ವಾರಾಹಿ, ಚಕ್ರ, ಸಾವೆಹಕ್ಲು, ಭದ್ರಾ, ತುಂಗಾ ಹಾಗೂ ಇತರೆ ಯೋಜನೆಗಳ ಮುಳುಗಡೆ ಸಂತ್ರಸ್ತರ ಭೂ ಹಕ್ಕಿನ ಸಮಸ್ಯೆಗಳು ಹಾಗೂ 5 ಗುಂಟೆ ಒಳಗಿನ ವಿಸ್ತೀರ್ಣದ ಕಂದಾಯ ನಿವೇಶನವನ್ನು ಭೂ ಪರಿವರ್ತನೆ ಮಾಡುವ ಕುರಿತು ಸೂಕ್ತ ಪ್ರಸ್ತಾವ ಸಲ್ಲಿಸುವಂತೆ ಸಲಹೆ ನೀಡಿದರು.

ಶಾಸಕರಾದ ಗೋಪಾಲಕೃಷ್ಣ ಬೇಳೂರು, ಶಾರದಾ ಪೂರ್‍ಯಾ ನಾಯ್ಕ, ವಿಧಾನ ಪರಿಷತ್ ಸದಸ್ಯೆ ಬಲ್ಕೀಸ್ ಬಾನು, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಗ್ರಾಮೀಣಾಭಿವೃದ್ಧಿ ಇಲಾಖೆ ಮುಖ್ಯಕಾರ್ಯದರ್ಶಿ ಅಂಜುಂ ಪರ್ವೇಜ್ ಉಪಸ್ಥಿತರಿದ್ದರು.

ಕಲುಷಿತ ಆಹಾರ ಪ್ರಕರಣ: ಗೋಕುಲ ವಿದ್ಯಾಸಂಸ್ಥೆಯ ಮಾನ್ಯತೆ ರದ್ದು

ಪ್ರಜಾವಾಣಿ ವಾರ್ತೆ

ಮಳವಳ್ಳಿ (ಮಂಡ್ಯ): ಕಲುಷಿತ ಆಹಾರ ಸೇವಿಸಿ ಇಬ್ಬರು ವಿದ್ಯಾರ್ಥಿಗಳು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿ, ತಾಲ್ಲೂಕಿನ ಟಿ.ಕಾಗೇಪುರದ ಗೋಕುಲ ವಿದ್ಯಾಸಂಸ್ಥೆಯ ಮೂರು ಶಾಲೆಗಳ ಮಾನ್ಯತೆಯನ್ನು ಡಿಡಿಪಿಐ ಎಚ್. ಶಿವರಾಮೇಗೌಡ ರದ್ದುಪಡಿಸಿದ್ದಾರೆ.

ಮಾ.16ರಂದು ಉದ್ಯಮಿಯೊಬ್ಬರು ನೀಡಿದ್ದ ಆಹಾರ ಸೇವಿಸಿ ಮೇಘಾಲಯ ಮೂಲದ ವಿದ್ಯಾರ್ಥಿಗಳಾದ ಕೇರ್ಲಾಂಗ್ (13) ಮತ್ತು ನಮೀಬ್ ಮಾಂತೆ (14) ಮೃತಪಟ್ಟಿದ್ದರು. 40ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಸ್ವಸ್ಥಗೊಂಡಿದ್ದರು.

'ಶಿಕ್ಷಣ ಇಲಾಖೆಯ ನಿಯಮಗಳನ್ನು ಉಲ್ಲಂಘಿಸಿರುವುದರಿಂದ ಟಿ.ಕಾಗೇಪುರ ಹಾಗೂ ಕಿರುಗಾವಲು ಗೋಕುಲ ವಿದ್ಯಾಸಂಸ್ಥೆಯ ಮಾನ್ಯತೆ ಹಿಂಪಡೆದು ಆ ಮೂರು ಶಾಲೆಗಳ ವಿದ್ಯಾರ್ಥಿಗಳಿಗೆ ಪರ್ಯಾಯ ದಾಖಲಾತಿ ವ್ಯವಸ್ಥೆ ಕಲ್ಪಿಸಬೇಕು' ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ವಿ.ಇ. ಉಮಾ ಅವರಿಗೆ ಡಿಡಿಪಿಐ ಆದೇಶಿಸಿದ್ದಾರೆ.

2024-25ನೇ ಸಾಲಿನಲ್ಲಿ ಕಿರುಗಾವಲು ಗೋಕುಲ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 126, ಕನ್ನಡ ಮಾಧ್ಯಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 202 ಹಾಗೂ ಇಂಗ್ಲಿಷ್ ಮಾಧ್ಯಮದ ಗೋಕುಲ ಪಬ್ಲಿಕ್ ಶಾಲೆಯಲ್ಲಿ 15 ವಿದ್ಯಾರ್ಥಿಗಳು ದಾಖಲಾಗಿದ್ದರು.

'ಮೇಘಾಲಯ ಮೂಲದ 24ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಅಕ್ರಮವಾಗಿ ವ್ಯಾಸಂಗಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಬೇರೆ ಶಾಲೆಯ ಹೆಸರಿನಲ್ಲಿ ಅನಧಿಕೃತವಾಗಿ ಎಸ್‌ಎಸ್‌ಎಲ್‌ಸಿ ವರೆಗೆ ತರಗತಿ ನಡೆಸುತ್ತಿದ್ದರು' ಎಂಬ ಆರೋಪ ಕೇಳಿಬಂದಿದೆ.

ಸಮೀಕ್ಷೆ... ಪರಿಶಿಷ್ಟ ಜಾತಿಗಳ ಒಳಮೀಸಲಾತಿಯ ಸಮೀಕ್ಷೆಯ ಅಂಗವಾಗಿ ಕಲಬುರಗಿಯ ಬುಡ್ಗ ಜಂಗಮ ಕಾಲೊನಿಯಲ್ಲಿ ಗಣತಿದಾರರು ಮನೆ-ಮನೆಗೆ ತೆರಳಿ ಮಾಹಿತಿ ಸಂಗ್ರಹಿಸಿದರು ಚಿತ್ರ: ತಾಜುದ್ದೀನ್ ಆಜಾದ್

ನವೋದಯ 'ರಜತ ಸಂಭ್ರಮ' ಇಂದು

ಮಂಗಳೂರು: ನವೋದಯ ಸ್ವಸಹಾಯ ಗುಂಪುಗಳ 25ನೇ ವರ್ಷಾಚರಣೆ ಅಂಗವಾಗಿ ನವೋದಯ ಗ್ರಾಮ ವಿಕಾಸ ಚಾರಿಟಬಲ್ ಟ್ರಸ್ಟ್ ಇದೇ 10ರಂದು ಬೆಳಿಗ್ಗೆ 10ಕ್ಕೆ ನಗರದ ಬಂಗ್ರಕೂಳೂರಿನ ಗೋಲ್ಡ್ ಫಿಂಚ್ ಸಿಟಿಯಲ್ಲಿ 'ರಜತ ಸಂಭ್ರಮ' ಸಮಾವೇಶ ಹಮ್ಮಿಕೊಂಡಿದೆ.

ಎಂ. ಎನ್. ರಾಜೇಂದ್ರ ಕುಮಾರ್

ನವೋದಯ ಸ್ವಸಹಾಯ ಗುಂಪುಗಳ 1.5 ಲಕ್ಷ ಸದಸ್ಯೆಯರು ಒಂದೇ ರೀತಿಯ ಸಮವಸ್ತ್ರ ಧರಿಸಿ ಭಾಗವಹಿಸಲಿದ್ದು, ಇದೊಂದು ಮಾದರಿ ಸಮಾವೇಶವಾಗಲಿದೆ ಎಂದು ಟ್ರಸ್ಟ್‌ನ ಸಂಸ್ಥಾಪಕ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಎಂ.ಎನ್. ರಾಜೇಂದ್ರ ಕುಮಾರ್ ತಿಳಿಸಿದ್ದಾರೆ.

'ಮಹಿಳೆಯರ ಆರ್ಥಿಕ ಸಬಲೀಕರಣದ ಧ್ಯೇಯದೊಂದಿಗೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಸೀಮಿತವಾಗಿ 25 ವರ್ಷಗಳ ಹಿಂದೆ ನವೋದಯ ಸ್ವಸಹಾಯ ಗುಂಪುಗಳನ್ನು ಆರಂಭಿಸಿದ್ದೆವು. ಈಗ ಅವು 8 ಜಿಲ್ಲೆಗಳಿಗೆ ವಿಸ್ತರಿಸಿದ್ದು, 5 ಲಕ್ಷಕ್ಕೂ ಅಧಿಕ ಕುಟುಂಬಗಳು ಆರ್ಥಿಕವಾಗಿ ಸಬಲವಾಗಿವೆ. ಮಹಿಳೆಯರಿಗೆ ಯಾವುದೇ ಆಸ್ತಿ ಅಡಮಾನ ಅಥವಾ ಭದ್ರತೆ ಪಡೆಯದೆಯೇ ಗುಂಪು ಸಾಲ, ಮನೆ ನಿರ್ಮಾಣಕ್ಕಾಗಿ ಸಾಲ, ವ್ಯಾಪಾರಕ್ಕಾಗಿ ಸಾಲ, ವಿದ್ಯಾಭ್ಯಾಸಕ್ಕಾಗಿ ಸಾಲ ನೀಡಲಾಗುತ್ತಿದ್ದು, ಶೇ 100ರಷ್ಟು ಮರುಪಾವತಿ ಆಗುತ್ತಿದೆ. ಪಕ್ಷ, ಜಾತಿ ಧರ್ಮಗಳನ್ನು ಮೀರಿದ ಸಂಘಟನೆ ನಮ್ಮದು' ಎಂದರು.

'ಬೇಡ ಜಂಗಮ' ಪ್ರಕಟಣೆಗೆ ಆಕ್ರೋಶ

• ಎಂ.ಎನ್.ಯೋಗೇಶ್

ಚಿತ್ರದುರ್ಗ: ಒಳಮೀಸಲಾತಿ ಸಂಬಂಧ ದತ್ತಾಂಶ ಸಂಗ್ರಹಿಸಲು ಸಿಬ್ಬಂದಿ ಬಂದಾಗ ನೀಡಬೇಕಾದ ಮಾಹಿತಿ ಕುರಿತು ಚಿತ್ರದುರ್ಗ ಜಿಲ್ಲಾ ಬೇಡ ಜಂಗಮ ಸಮಾಜ ಸಂಸ್ಥೆ ಹೊರಡಿಸಿರುವ ಪ್ರಕಟಣೆ ಆಕ್ರೋಶಕ್ಕೆ ಗುರಿಯಾಗಿದೆ.

'ವೀರಶೈವ ಲಿಂಗಾಯತರು 'ಜಂಗಮ' ಹೆಸರಿನ ನೆಪದಲ್ಲಿ ನಮ್ಮ ಸಮುದಾಯಗಳ ಹಕ್ಕು ಕಬಳಿಸಲು ಯತ್ನಿಸುತ್ತಿದ್ದಾರೆ' ಎಂದು ಪರಿಶಿಷ್ಟ ವರ್ಗದ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಬೇಡ ಜಂಗಮ/ ಬುಡ್ಗ ಜಂಗಮ ಹೆಸರಿನಲ್ಲಿ ಜಂಗಮರು ಪರಿಶಿಷ್ಟ ಜಾತಿ ದೃಢೀಕರಣ ಪತ್ರ ಪಡೆದಿದ್ದಾರೆ. ಪ್ರಕರಣದ ವಿಚಾರಣೆ ನ್ಯಾಯಾಲಯಗಳಲ್ಲಿದೆ. ಈಗ ಸಂಸ್ಥೆ ಹೊರಡಿಸಿರುವ ಪ್ರಕಟಣೆ ಈ ಚರ್ಚೆಯನ್ನು ಮುನ್ನೆಲೆಗೆ ತಂದಿದೆ.

'ಜಂಗಮ ಬಂಧುಗಳಲ್ಲಿ ಮನವಿ' ಎಂದು ಆರಂಭವಾಗುವ ಪ್ರಕಟಣೆ 7 ಪ್ರಶ್ನೆಗಳನ್ನು ನೀಡಿ ಉತ್ತರಗಳನ್ನೂ ನೀಡಿದೆ. ನೀವು ಪರಿಶಿಷ್ಟ ಜಾತಿಯವರೇ ಎಂದು ಕೇಳಿದಾಗ ಹೌದು ಎನ್ನಬೇಕು ಎಂದು ಸೂಚಿಸಿದೆ.

ದತ್ತಾಂಶ ಸಂಗ್ರಾಹಕರು ಜಾತಿ ಪ್ರಮಾಣಪತ್ರ ಕೇಳಿದರೆ, ಜಾತಿ ಪ್ರಮಾಣಪತ್ರ ಕಡ್ಡಾಯವಲ್ಲ ಎಂಬ ಉತ್ತರ ಕೊಡಬೇಕು. ಮಾಹಿತಿ ಪರಿಗಣಿಸದಿದ್ದರೆ ಒಪ್ಪಿಗೆ ಸೂಚಿಸಿ ಸಹಿ ಮಾಡಬೇಡಿ ಎಂಬ ವಿವರ ಗೊಂದಲ ಮೂಡಿಸುವಂತಿದೆ.

ಕಡೆಯಲ್ಲಿ, 'ದತ್ತಾಂಶ ಸಂಗ್ರಾಹಕರ ಗುರುತಿನ ಚೀಟಿ ಪಡೆದುಕೊಳ್ಳಿ, ಗಣತಿದಾರರ ಫೋಟೊ ತೆಗೆದುಕೊಳ್ಳಿ, ಅವರ ಸಂಪರ್ಕ ಸಂಖ್ಯೆಯನ್ನೂ ಪಡೆಯಿರಿ' ಎಂದು ಸೂಚಿಸಿರುವುದು ಅನುಮಾನಾಸ್ಪದವಾಗಿದೆ. 'ಅನಧಿಕೃತ ಸಂಘವು ಜಂಗಮ ಸಮುದಾಯದ ಜನರನ್ನು ಬೆದರಿಸುತ್ತಿದೆ. ಆ ಮೂಲಕ ಪರಿಶಿಷ್ಟ ಜಾತಿ ಸೌಲಭ್ಯಗಳನ್ನು ಪಡೆಯಲು ಷಡ್ಯಂತ್ರ ಮಾಡುತ್ತಿದೆ' ಎಂದು ಪರಿಶಿಷ್ಟ ಮುಖಂಡರು ಆರೋಪಿಸಿದ್ದಾರೆ.

'ಬೇಟೆಯಾಡುವ ಬೇಡ ಜಂಗಮ/ ಬುಡ್ಗ ಜಂಗಮ ಸಮುದಾಯದ 150 ಕುಟುಂಬಗಳಷ್ಟೇ ಕಲ್ಯಾಣ ಕರ್ನಾಟಕ ಭಾಗದಲ್ಲಿವೆ. ಕೆಲವರು ಜಂಗಮ ಪದ ಬಳಸಿ ಪರಿಶಿಷ್ಟರ ಹಕ್ಕು ಕಸಿಯುತ್ತಿದ್ದಾರೆ. ಇದಕ್ಕೆ ಅವಕಾಶ ಕೊಡುವುದಿಲ್ಲ. ಈ ಕುರಿತು ಆಯೋಗಕ್ಕೆ ದೂರು ನೀಡುತ್ತಿದ್ದೇವೆ' ಎಂದು ಕೆಪಿಸಿಸಿ ಉಪಾಧ್ಯಕ್ಷ ಎಚ್.ಆಂಜನೇಯ ಹೇಳಿದ್ದಾರೆ.

ಪ್ರಮಾಣಪತ್ರದೊಂದಿಗೆ ಮಾಹಿತಿ ದಾಖಲು: ಡಿಸಿ

'ಯಾರಾದರೂ ಬೇಡ ಜಂಗಮ/ ಬುಡ್ಗ ಜಂಗಮ ಎಂದು ಬರೆಸಿದರೆ ಅವರು ಕೊಟ್ಟ ಮಾಹಿತಿಯನ್ನು ಪರಿಶೀಲನೆಗೆ ಒಳಪಡಿಸಿದ ನಂತರವಷ್ಟೇ ಪರಿಗಣಿಸುವುದಾಗಿ ಪ್ರಮಾಣಪತ್ರ (ಅಫಿಡವಿಟ್) ಪಡೆಯುತ್ತೇವೆ' ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ರಾಜ್ಯ ಬೇಡ ಜಂಗಮ ಸಂಸ್ಥೆಗಳ ಒಕ್ಕೂಟದ ಸೂಚನೆ ಪಾಲಿಸಿದ್ದೇವೆ. ಇದರಲ್ಲಿ ತಪ್ಪು ಹುಡುಕುವುದು ಬೇಡ. ನಾವೇ ಬೇಡ ಜಂಗಮರು ಎಂದು ಸುಪ್ರೀಂ ಕೋರ್ಟ್ ಖಾತ್ರಿಪಡಿಸಿದೆ' ಎಂದು ಜಿಲ್ಲಾ ಬೇಡ ಜಂಗಮ ಸಮಾಜ ಸಂಸ್ಥೆ ಕಾರ್ಯದರ್ಶಿ ಎಸ್. ಷಡಾಕ್ಷರಯ್ಯ ಸ್ಪಷ್ಟಪಡಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಕನ್ನಡ 'ಕಬ್ಬಿಣದ ಕಡಲೆ'!

ಒಂದನೇ ಪುಟದಿಂದ...

ಕನ್ನಡವೇ ಪ್ರಧಾನವಾಗಿರುವ 'ಪ್ರಥಮ ಭಾಷೆ' ಪತ್ರಿಕೆಯಲ್ಲಿ 9,573 ವಿದ್ಯಾರ್ಥಿಗಳು ಪೂರ್ಣಾಂಕ (ನೂ ರ ಕ್ಕೆ ನೂರು ಅಂಕ) ಪಡೆದರೆ, ಹಿಂದಿಯೇ ಪ್ರಧಾನವಾಗಿರುವ 'ತೃತೀಯ ಭಾಷೆ' ಪತ್ರಿಕೆಯಲ್ಲಿ ಬರೋಬ್ಬರಿ 17,909 ವಿದ್ಯಾರ್ಥಿಗಳು ಪೂರ್ಣಾಂಕ ಪಡೆದಿದ್ದಾರೆ.

ಸರ್ಕಾರಿ ಶಾಲೆಗಳಿಗೆ ಹಿನ್ನಡೆ: 'ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳು ಶೇ 62.7ರಷ್ಟು, ಅನುದಾನಿತ ಶಾಲೆಗಳ ವಿದ್ಯಾರ್ಥಿಗಳು 58.97ರಷ್ಟು ಹಾಗೂ ಅನುದಾನರಹಿತ ಶಾಲೆಗಳ ವಿದ್ಯಾರ್ಥಿಗಳು ಶೇ 75.59ರಷ್ಟು ಪ್ರಮಾಣದಲ್ಲಿ ತೇರ್ಗಡೆ ಆಗಿದ್ದಾರೆ. ಫಲಿತಾಂಶದಲ್ಲಿ ಸರ್ಕಾರಿ ಶಾಲೆಗಳಿಗೆ ತೀವ್ರ ಹಿನ್ನಡೆಯಾಗಿದ್ದು, ಸರ್ಕಾರ ಗುಣಮಟ್ಟದ ಶಿಕ್ಷಣಕ್ಕೆ ಮತ್ತು ಪರಿಣಾಮಕಾರಿ ಬೋಧನೆಗೆ ಒತ್ತು ನೀಡಬೇಕಿದೆ' ಎನ್ನುತ್ತಾರೆ ಕನ್ನಡ ಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ಮಂಜುನಾಥ್.

ಕರ್ನಾಟಕ ಸರಕಾರ

ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ, ಉಡುಪಿ. ರಜತಾದ್ರಿ, ಮಣಿಪಾಲ

Email ID: ad@udupitourism.com ದೂರವಾಣಿ ಸಂಖ್ಯೆ: 0820-2574868

ಸೆಕ್ಷನ್ 1. ಟೆಂಡರ್ ಆಹ್ವಾನ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ತ್ರಾಸಿ ಕಡಲ ತೀರ ನಿರ್ವಹಣೆಯನ್ನು ಹಾಗೂ ಜಲಸಾಹಸ ಕ್ರೀಡೆ ಚಟುವಟಿಕೆಯನ್ನು ನಡೆಸಲು ಗುತ್ತಿಗೆ ಆಧಾರದಲ್ಲಿ 03+02 ವರ್ಷಗಳ ಅವಧಿಗೆ ಖಾಸಗಿಯವರಿಗೆ ನೀಡಲು ದ್ವಿ-ಲಕೋಟೆಯಲ್ಲಿ ಟೆಂಡರ್ ಕರೆಯಲಾಗಿದೆ.

(1) ಟೆಂಡರ್ ಉಲ್ಲೇಖ: ಪ್ರಇ/ಸನಿಕ/ಉಜಿ/ಮ/68/2024–25/ ದಿನಾಂಕ: 05–05–2025 (2) ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್ ಸಲ್ಲಿಸುವ ಪ್ರಾರಂಭ ದಿನಾಂಕ: 08–05–2025 (3)ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಯನ್ನು ಸಲ್ಲಿಸುವ ಕೊನೆಯ ದಿನಾಂಕ 22–05–2025 ಸಂಜೆ 4.45 ಗಂಟೆ (4) ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 23–05–2025 ಸಂಜೆ 5.00 ಗಂಟೆ (5) ಆರ್ಥಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 27–05–2025 ಬೆಳಿಗ್ಗೆ 11.15 ಗಂಟೆ (6)ಟೆಂಡರ್ ತೆರೆಯುವ ಸ್ಥಳ: ಸಹಾಯಕ ನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ, ಉಡುಪಿ ರಜತಾದ್ರಿ, (7) EMD ಮೊತ್ತ: ರೂ.87,500 (8) ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್ ವಿಳಾಸ: https:kppp.karnataka.gov.in (9) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ: ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ರಜತಾದ್ರಿ, ಮಣಿಪಾಲ "ಎ" ಬ್ಲಾಕ್, ಎರಡನೇ ಮಹಡಿ, ಕೊಠಡಿ ಸಂಖ್ಯೆ: 303 ದೂರವಾಣಿ: 0820–2574868

ಸಹಿ/– (ಡಾ.ಕೆ.ವಿದ್ಯಾ ಕುಮಾರಿ. ಭಾ.ಆ.ಸೇ)
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,
ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಉಡುಪಿ ಜಿಲ್ಲೆ, ಮಣಿಪಾಲ

ವಾಸಾಇ/ಉಡುಪಿ/ಕೆಎಸ್‌ಎಂಸಿಎ/91/ 25–26 ದಿ: 09.05.2025

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿವಮೊಗ್ಗ.

ಟೆಂಡರ್ ಸಂಖ್ಯೆ:– ಟೆಂಡರ್ ಸಂಖ್ಯೆ: ಕಾಇಂ/ಪಂರಾಇಂ/ವಿಶಿ/ಕಿಇಂ/ಟೆಂಡರ್/ 2024–25/206 Date: 07.05.2025

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಶಿವಮೊಗ್ಗ ವ್ಯಾಪ್ತಿಯ, ಭದ್ರಾವತಿ ತಾಲ್ಲೂಕಿನ ಲೆಕ್ಕ ಶೀರ್ಷಿಕೆ: 2024–25ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿಯ ಬೂದುನೀರು ನಿರ್ವಹಣಾ ಘಟಕ ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ ವೀರಾಪುರ ಕಾಮಗಾರಿಗೆ ಬೇಕಾಗುವ ಸಾಮಾಗ್ರಿಗಳ ಪೂರೈಕೆ ಕಾಮಗಾರಿಯ ಟೆಂಡರ್‌ನ ಒಟ್ಟು ಮೊತ್ತ ರೂ.62.52 ಲಕ್ಷಗಳು ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ಈ ವೆಬ್‌ಸೈಟ್‌ನಲ್ಲಿ ದಿನಾಂಕ: 03.05.2025 ರಿಂದ ಪಡೆಯಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ:20.05.2025 ಸಂಜೆ 4:00 ರವರೆಗೆ ನಿಗದಿ ಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/24–25/49/05/211

ಕರ್ನಾಟಕ ಸರ್ಕಾರ

ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ

ಪಿಹೆಚ್‌ಐ ಕಾಂಪೌಂಡ್, ಶೇಷಾದ್ರಿ ರಸ್ತೆ, ಬೆಂಗಳೂರು–560001
ಇ–ಮೇಲ್: cfskarnataka@gmail.com

No: FSSD/WP/CB/16/2025-WPA Date: 09.05.2025

ಟೆಂಡರ್ ಪ್ರಕಟಣೆ

ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ, ಬೆಂಗಳೂರು NABL ಮಾನ್ಯತೆ ಪಡೆದ ಪ್ರಯೋಗಾಲಯಗಳಿಂದ, ಪ್ಯಾಕೇಜ್ಡ್ ಕುಡಿಯುವ ನೀರಿನ ಮಾದರಿ ಮತ್ತು ಪನ್ನೀರ್ ಆಹಾರ ಮಾದರಿಯಲ್ಲಿ ಮೈಕ್ರೋಬಯೋಲಜಿ ಪ್ಯಾರಾಮೀಟರ್ ವಿಶ್ಲೇಷಣೆಯನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ಸ್ಪರ್ಧಾತ್ಮಕ ದರಗಳಲ್ಲಿ ಇ–ಟೆಂಡರ್ ಅನ್ನು ಆಹ್ವಾನಿಸುತ್ತದೆ. ಆಸಕ್ತ NABL ಮಾನ್ಯತೆ ಪಡೆದ ಪ್ರಯೋಗಾಲಯಗಳು ತಮ್ಮ ಬಿಡ್‌ಗಳನ್ನು ಸಲ್ಲಿಸುವ ಮೂಲಕ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗಾಗಿ, https://kppp.karnataka.gov.in ಗೆ ಭೇಟಿ ನೀಡಿ.

ಸಹಿ/–
ಉಪ ಆಯುಕ್ತರು (ಆಡಳಿತ)
ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ, ಬೆಂಗಳೂರು.

DIPR/CP/588/Zen/2025-26

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಜಲಭವನ, ನಂ. 6, 1ನೇ ಘಟ್ಟ, 1ನೇ ಹಂತ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು – 560 029. ದೂ: 080–41106504 – 18
ಇ–ಮೇಲ್: cekwbbng@gmail.com ವೆಬ್‌ಸೈಟ್: https://kppp.karnataka.gov.in

ಅಲ್ಪಾವಧಿ ಟೆಂಡರ್ ಪ್ರಕಟಣೆ
(KPPP ಮೂಲಕ ಮಾತ್ರ)

ಸಂಖ್ಯೆ: KWB/TEC/CE(B)/Chintamani DC Works/180/2025-26 Dated: 09.05.2025

ಕಾಮಗಾರಿಯ ಹೆಸರು: ಚಿಂತಾಮಣಿ ನಗರಸಭೆಯ ಠೇವಣಿ ಕೊಡುಗೆ ಕಾಮಗಾರಿ–ಯಡಿಯಲ್ಲಿ ಟಿಪ್ಪು ನಗರದಲ್ಲಿ ಹಾಲಿ ಇರುವ ಒಳಚರಂಡಿ ಕೊಳವೆಮಾರ್ಗವನ್ನು ತೆರವುಗೊಳಿಸಿ ಬದಲಾಯಿಸುವ ಮತ್ತು ಹೊಸ ಚರಂಡಿ ಕೊಳವೆಮಾರ್ಗ ಗೃಹ ಸಂಪರ್ಕದೊಂದಿಗೆ ಒದಗಿಸಿ ಅಳವಡಿಸುವ ಕಾಮಗಾರಿ.

ಇಂಡೆಂಟ್ ಸಂಖ್ಯೆ:KUWSDB/2025-26/WORK_INDENT/337/CALL-2

ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಸಂಪರ್ಕಿಸಬಹುದು.

ಸಹಿ/– ಮುಖ್ಯ ಅಭಿಯಂತರರು (ಬೆಂ),
ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು

ಡಿಐಪಿಆರ್/ಸಿಪಿ/593/ಸಿಸಿಎಲ್/2025–26

ಇ–ಆಡಳಿತ ಕೇಂದ್ರ

(ಇ–ಆಡಳಿತ ಇಲಾಖೆ, DPARಯ ಅಧೀನದಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಸ್ಥಾಪಿಸಿರುವ ಮತ್ತು ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ಅಧಿನಿಯಮ, 1960ರ ಅನ್ವಯ ನೋಂದಣಿಯಾಗಿರುವ ಒಂದು ಸಂಸ್ಥೆ)
ಕೊಠಡಿ ಸಂಖ್ಯೆ: 141, ಮೊದಲ ಮಹಡಿ, ಎರಡನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560 001. ದೂರವಾಣಿ ಸಂಖ್ಯೆ: 080–22371090

No: DPAR-CEG0ADM/51/2023-CEG-ADMN(E:1215751) ದಿನಾಂಕ: 09.05.2025

ಅಧಿಸೂಚನೆ

ಇ–ಆಡಳಿತ ಇಲಾಖೆ, DPAR (e-Governance) ಯ ಅಧೀನದಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಸ್ಥಾಪಿಸಿರುವ ಮತ್ತು ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ಅಧಿನಿಯಮ, 1960ರ ಅನ್ವಯ ನೋಂದಣಿಯಾಗಿರುವ ಒಂದು ಸಂಸ್ಥೆ. ಇ–ಆಡಳಿತ ಕೇಂದ್ರದ ಕೆಸ್ವಾನ್ (PD, KSWAN) ಘಟಕದಲ್ಲಿ ಒಂದು ಯೋಜನಾ ನಿರ್ದೇಶಕರ ಹುದ್ದೆಯನ್ನು ನಿಯೋಜನೆ ಆಧಾರದ ಮೇಲೆ ಟೆಲಿಕಮ್ಯೂನಿಕೇಶನ್ ಸೇವೆಗಳು/ನೆಟ್‌ವರ್ಕಿಂಗ್/ಇಂಟರ್‌ನೆಟ್ ಸೇವೆಗಳು/ಐಟಿ ಯಲ್ಲಿ ಸಂಬಂಧಿಸಿದ ಅನುಭವ ಇರುವ ಭಾರತೀಯರಿಂದ ಭರ್ತಿ ಮಾಡಲು ಪ್ರಸ್ತಾವಿಸಿದೆ. ವಿದ್ಯಾರ್ಹತೆ ಹಾಗೂ ಅನುಭವ, ಇತರೆ ವಿವರಗಳಿಗೆ ಅಭ್ಯರ್ಥಿಗಳು ವೆಬ್‌ಸೈಟ್: https://ceg.karnataka.gov.in ನೋಡಬಹುದು. ಈ ಜಾಹೀರಾತು ಪ್ರಕಟವಾದ ದಿನಾಂಕದಿಂದ 7 ದಿನಗಳವರೆಗೆ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ.

ಸಹಿ/–
ಆಡಳಿತಾಧಿಕಾರಿ
ಇ–ಆಡಳಿತ ಕೇಂದ್ರ

ವಾಸಾಸಂಇ/ವಾ.ಪ್ರ/572/ಎಂಎಎ/25–26

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಅಲ್ಪಸಂಖ್ಯಾತರ ನಿರ್ದೇಶನಾಲಯ,
ನಂ.16ಸಿ, ಮೌಲಾನಾ ಅಬುಲ್ ಕಲಾಂ ಅಜಾದ್ ಭವನ,
ಮಿಲ್ಲರ್ ಟ್ಯಾಂಕ್‌ಬಂಡ್ ರಸ್ತೆ, ವಸಂತನಗರ, ಬೆಂಗಳೂರು–560052.

Website: https://dom.karnataka.gov.in

ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ

ವಸತಿ ಸಹಿತ Police Sub Inspector (PSI) ನೇಮಕಾತಿ ಪರೀಕ್ಷಾ ಪೂರ್ವ ತರಬೇತಿ ಪಡೆಯಲು ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ ಪ್ರಕಟಣೆ.

ಅರ್ಜಿ ಸಲ್ಲಿಕೆ

2024–25ನೇ ಸಾಲಿಗೆ ಮಂಜೂರಾದ ವಸತಿ ಸಹಿತ ಕರ್ನಾಟಕ ರಾಜ್ಯದ Police Sub Inspector (PSI) ನೇಮಕಾತಿ ಪರೀಕ್ಷಾ ಪೂರ್ವ ತರಬೇತಿಯನ್ನು ಪುರುಷ & ಮಹಿಳಾ ಅಭ್ಯರ್ಥಿಗಳಿಗೆ ನೀಡಲಾಗುತ್ತಿದ್ದು, ಸದರಿ ತರಬೇತಿಗೆ ಅರ್ಹ ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪ್ರಾರಂಭ ದಿನಾಂಕ

ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ: **10.05.2025.**
ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **23.05.2025.**

ಅರ್ಹತೆಗಳು

- ಅಭ್ಯರ್ಥಿಯು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿರಬೇಕು. (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ).
- ಅಭ್ಯರ್ಥಿಯು ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಪದವಿ ಹೊಂದಿರಬೇಕು.
- ಅಭ್ಯರ್ಥಿಯ ವಯೋಮಿತಿ ಕನಿಷ್ಠ 21 ಹಾಗೂ ಗರಿಷ್ಠ 30 ವರ್ಷಗಳು ಮೀರಿರಬಾರದು. (ಅರ್ಜಿ ಸಲ್ಲಿಸುವ ಅಂತಿಮ ದಿನಾಂಕದೊಳಗೆ).
- ಸದರಿ ಯೋಜನೆಯಡಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಪದವಿಯಲ್ಲಿ ಗಳಿಸಿದ ಅಂಕಗಳ ಮೆರಿಟ್ ಆಧಾರದ ಮೇಲೆ ಹಾಗೂ PSI ನೇಮಕಾತಿಯ ಅರ್ಹತೆಗಳಾದ **ಎತ್ತರ:–** ಪುರುಷರಿಗೆ ಕನಿಷ್ಠ 168 ಸೆಂ.ಮೀ. ಮತ್ತು ಮಹಿಳೆಯರಿಗೆ ಕನಿಷ್ಠ 157 ಸೆಂ.ಮೀ. **ತೂಕ:–** ಪುರುಷರಿಗೆ ಕನಿಷ್ಠ 50 ಕೆ.ಜಿ. ಮತ್ತು ಮಹಿಳೆಯರಿಗೆ ಕನಿಷ್ಠ 45 ಕೆ.ಜಿ. **ಎದೆಯ ಸುತ್ತಳತೆ(ಪುರುಷರಿಗೆ):–** ಕನಿಷ್ಠ 76 ಸೆಂ.ಮೀ. ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.
- ಕೇಂದ್ರ ಮತ್ತು ರಾಜ್ಯ ಸರ್ಕಾರದ ನೌಕರಿಯಲ್ಲಿರುವ ಅಭ್ಯರ್ಥಿಗಳು ಅರ್ಹರಿರುವುದಿಲ್ಲ.

ತರಬೇತಿ ಸ್ಥಳಗಳು: ಬೆಳಗಾವಿ & ಮೈಸೂರು.

ಅರ್ಜಿದಾರರಿಗೆ ಸೂಚನೆಗಳು

- ಅರ್ಜಿದಾರರು https://sevasindhu.karnataka.gov.in/Sevasindhu/DepartmentServices ಈ ಲಿಂಕ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.
- ಆನ್‌ಲೈನ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡಲು ವಿವರವಾದ ಸೂಚನೆಗಳು/ವಿಧಾನಗಳು https://dom.karnataka.gov.in ಇಲ್ಲಿ ಲಭ್ಯವಿದೆ.

ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಜಿಲ್ಲಾ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ **ಸಹಾಯವಾಣಿ ಸಂಖ್ಯೆ: 8277799990** ಇವರನ್ನು ಸಂಪರ್ಕಿಸಬಹುದು.

ದಿನಾಂಕ : 10.05.2025
ಸ್ಥಳ : ಬೆಂಗಳೂರು

ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ,
ಬೆಂಗಳೂರು

ವಾಸಾಸಂಇ/ವಾಪ್ರ/594/25–26

ಸುಭಾಷಿತ

ನೀನು ನಿನ್ನೊಳಗಿನ ಶಕ್ತಿಯಿಂದಲೇ ಬೆಳೆಯಬೇಕು.

–ಸ್ವಾಮಿ ವಿವೇಕಾನಂದ

ಭಾರತ– ಬ್ರಿಟನ್ ವ್ಯಾಪಾರ ಒಪ್ಪಂದ ಆರ್ಥಿಕತೆಗೆ ದೊರೆಯಲಿದೆ ಪುಷ್ಟಿ

ಭಾರತ– ಬ್ರಿಟನ್ ನಡುವಣ ಮುಕ್ತ ವ್ಯಾಪಾರ ಒಪ್ಪಂದ ಅಂತಿಮಗೊಂಡಿದ್ದು ಸಹಿ ಹಾಕುವುದಷ್ಟೇ ಬಾಕಿ ಇದೆ. ಎರಡೂ ದೇಶಗಳ ಅರ್ಥವ್ಯವಸ್ಥೆಗೆ ಅನುಕೂಲಕರವಾದ ಈ ಒಪ್ಪಂದಕ್ಕೆ ಮುಂಚೆ ಸುದೀರ್ಘ ಮಾತುಕತೆ ಮತ್ತು ಕಠಿಣ ಚೌಕಾಸಿ ನಡೆದಿದೆ. ಭಾರತದ ಆರ್ಥಿಕತೆಯು ಬ್ರಿಟನ್‌ಗಿಂತ ದೊಡ್ಡದು. ಭಾರತ ಜಗತ್ತಿನಲ್ಲಿ ನಾಲ್ಕನೇ ಅತಿ ದೊಡ್ಡ ಅರ್ಥವ್ಯವಸ್ಥೆಯನ್ನು ಹೊಂದಿದ್ದರೆ, ಬ್ರಿಟನ್‌ಗೆ ಆರನೇ ಸ್ಥಾನ ಇದೆ. ಆದರೆ ಬ್ರಿಟನ್‌ನ ಅರ್ಥವ್ಯವಸ್ಥೆಯು ಹೆಚ್ಚು ಅಭಿವೃದ್ಧಿ ಹೊಂದಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಆರಂಭಿಸಿರುವ ಸುಂಕ ಸಮರದ ಕಾರಣಕ್ಕೆ ಈ ವ್ಯಾಪಾರ ಒಪ್ಪಂದ ಹೆಚ್ಚು ಮಹತ್ವ ಪಡೆದುಕೊಂಡಿದೆ. ವಿಶ್ವ ವ್ಯಾಪಾರ ಸಂಘಟನೆಯು (ಡಬ್ಲ್ಯುಟಿಒ) ನಿಷ್ಕ್ರಿಯವಾದ ಬಳಿಕ ಇಂತಹ ಒಪ್ಪಂದಗಳು ಮುಖ್ಯವಾಗಿವೆ. ಭಾರತ–ಬ್ರಿಟನ್ ಮುಕ್ತ ವ್ಯಾಪಾರ ಒಪ್ಪಂದವು ಈಚೆಗೆ ಪ್ರಮುಖ ದೇಶಗಳೊಂದಿಗೆ ಮಾಡಿಕೊಂಡ ಒಪ್ಪಂದಗಳಿಗಿಂತ ಹೆಚ್ಚು ಸಮಗ್ರವಾಗಿದೆ. ಆಸ್ಟ್ರೇಲಿಯಾ ಮತ್ತು ಅರಬ್ ಸಂಯುಕ್ತ ಸಂಸ್ಥಾನ (ಯುಎಇ) ಜೊತೆಗೆ ಭಾರತವು ಪ್ರಮುಖ ಒಪ್ಪಂದಗಳನ್ನು ಮಾಡಿಕೊಂಡಿದೆ. ಅಮೆರಿಕ, ಐರೋಪ್ಯ ಒಕ್ಕೂಟ ಮತ್ತು ಇತರ ದೇಶಗಳೊಂದಿಗೆ ಮಾತುಕತೆ ನಡೆಯುತ್ತಿದೆ. ಜಾಗತಿಕ ವ್ಯಾಪಾರ ವಲಯದಲ್ಲಿ ಭಾರತದ ವರ್ಚಸ್ಸು ಹೆಚ್ಚಲು ಈ ಒಪ್ಪಂದಗಳು ನೆರವಾಗಲಿವೆ. ಭಾರತ–ಬ್ರಿಟನ್ ಒಪ್ಪಂದವು ಅಂತಿಮಗೊಳ್ಳಲು ಮೂರು ವರ್ಷಗಳು ಬೇಕಾದವು. 'ಐತಿಹಾಸಿಕ ಮೈಲಿಗಲ್ಲು' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಒಪ್ಪಂದವನ್ನು ಬಣ್ಣಿಸಿದ್ದಾರೆ.



ಪ್ರಮುಖ ದೇಶಗಳೊಂದಿಗೆ ಈಚೆಗೆ ಮಾಡಿಕೊಂಡಿರುವ ಒಪ್ಪಂದಗಳಿಗಿಂತ ಹೆಚ್ಚು ಸಮಗ್ರವಾಗಿದೆ ಈ ಒಪ್ಪಂದ

ಭಾರತ– ಬ್ರಿಟನ್ ನಡುವಣ ದ್ವಿಪಕ್ಷೀಯ ವ್ಯಾಪಾರದ ಮೊತ್ತವು ಸುಮಾರು ಆರು ಸಾವಿರ ಕೋಟಿ ಡಾಲರ್ (ಸುಮಾರು ₹5.12 ಲಕ್ಷ ಕೋಟಿ) ಇದ್ದು, 2030ರ ಹೊತ್ತಿಗೆ ಇದು ದುಪ್ಪಟ್ಟಾಗಬಹುದು ಎಂದು ಅಂದಾಜಿಸಲಾಗಿದೆ. ಭಾರತದ ರಫ್ತುಗಳಿಗೆ ಬ್ರಿಟನ್‌ನ ಮಾರುಕಟ್ಟೆಯಲ್ಲಿ ಮುಕ್ತ ಅವಕಾಶ ದೊರಕಲಿದ್ದು, ಇದು ಬಹುತೇಕ ಸುಂಕಮುಕ್ತವಾಗಿ ರಲಿದೆ. ಹಾಗೆಯೇ ಬ್ರಿಟನ್‌ನಿಂದ ಭಾರತಕ್ಕೆ ಬರುವ ಸರಕುಗಳು ಕ್ರಮೇಣ ಸುಂಕಮುಕ್ತವಾಗಲಿವೆ. ಇದರ ಪ್ರಯೋಜನ ಗ್ರಾಹಕರಿಗೆ ದೊರೆಯಲಿದೆ. ಬ್ರಿಟನ್‌ನಿಂದ ಆಮದು ಮಾಡಿಕೊಳ್ಳಲಾಗುವ ಶೇ 99ರಷ್ಟು ಸರಕುಗಳ ಮೇಲಿನ ಸುಂಕ ರದ್ದಾಗಲಿದೆ. ಜವಳಿ, ಪಾದರಕ್ಷೆ, ಯಂತ್ರೋಪಕರಣದಂತಹ ಸರಕುಗಳು ಇದರಲ್ಲಿ ಸೇರಿವೆ. ಸೇವಾ ವಲಯದಲ್ಲಿ ಭಾರತಕ್ಕೆ ಹೆಚ್ಚಿನ ಅನುಕೂಲಗಳು ದೊರೆಯಬಹುದು. ಹಲವು ಕ್ಷೇತ್ರಗಳನ್ನು ಸೇವಾ ವಲಯಕ್ಕೆ ಬ್ರಿಟನ್ ತೆರೆದಿಡಬಹುದು. ವೃತ್ತಿಪರರು ಅಲ್ಲಿಗೆ ಹೋಗಿ ಬರುವುದು ಸುಗಮವಾಗಬಹುದು. ಆದರೆ, ಈ ವಿಚಾರದಲ್ಲಿ ಭಾರತದ ನಿರೀಕ್ಷೆಯಷ್ಟು ಪ್ರಗತಿ ಸಾಧ್ಯವಾಗಿಲ್ಲ. ದೇಶದಲ್ಲಿ ಪ್ರಸಕ್ತ ಇರುವ ಜನಪ್ರಿಯತಾವಾದಿ ಒತ್ತಡದಿಂದಾಗಿ ಹೆಚ್ಚಿನ ರಿಯಾಯಿತಿಗಳನ್ನು ನೀಡಲು ಬ್ರಿಟನ್ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಬ್ರಿಟನ್‌ನಲ್ಲಿರುವ ಭಾರತದ ವೃತ್ತಿಪರರು ಮತ್ತು ಅವರ ಉದ್ಯೋಗದಾತರಿಗೆ ಸಾಮಾಜಿಕ ಸುರಕ್ಷತೆ ದೇಣಿಗೆ ಪಾವತಿಸುವುದರಿಂದ ಮೂರು ವರ್ಷ ವಿನಾಯಿತಿ ನೀಡಲಾಗಿದೆ. ಭಾರತವು ಬ್ರಿಟನ್‌ನ ವಿಸ್ಕಿ ಮತ್ತು ಜಿನ್ ಮೇಲಿನ ಸುಂಕವನ್ನು ಶೇ 75ರಷ್ಟು ಇಳಿಸಿದೆ. ಮುಂದಿನ 10 ವರ್ಷಗಳಲ್ಲಿ ಶೇ 40ಕ್ಕೆ ಇಳಿಸುವ ಭರವಸೆ ಕೊಟ್ಟಿದೆ. ವಾಹನಗಳ ಮೇಲಿನ ಸುಂಕವನ್ನು ಕೂಡ ಕಡಿತಗೊಳಿಸಲಾಗಿದೆ. ಸೌಂದರ್ಯವರ್ಧಕಗಳು, ವೈಮಾನಿಕ ಉಪಕರಣಗಳು, ವೈದ್ಯಕೀಯ ಉಪಕರಣಗಳು ಇತ್ಯಾದಿ ಮೇಲಿನ ಸುಂಕವೂ ಕಡಿಮೆಯಾಗಲಿದೆ. ಈ ಒಪ್ಪಂದದಿಂದಾಗಿ ಬ್ರಿಟನ್ ಅರ್ಥವ್ಯವಸ್ಥೆಯು ಮುಂದಿನ ವರ್ಷಗಳಲ್ಲಿ ಶೇ 0.1ರಷ್ಟು ಹೆಚ್ಚಿನ ಪ್ರಗತಿ ಕಾಣಬಹುದು ಎಂಬ ನಿರೀಕ್ಷೆ ಇದೆ.

ಬ್ರಿಟನ್ ಪ್ರಸ್ತಾವಿಸಿರುವ ಇಂಗಾಲ ತೆರಿಗೆಗೆ ಪ್ರತಿರೋಧ ಹೇರುವುದಕ್ಕೆ ಒಪ್ಪಂದದಲ್ಲಿ ಅವಕಾಶ ಇಲ್ಲ. ಆದರೆ, ಈ ತೆರಿಗೆಯಿಂದ ದೇಶಿ ಕೈಗಾರಿಕೆ ಮೇಲೆ ಪರಿಣಾಮವಾದರೆ ಅದನ್ನು ಸರಿದೂಗಿಸಲು ರಿಯಾಯಿತಿಗಳನ್ನು ಪರಿಷ್ಕರಿಸುವ ಅವಕಾಶವನ್ನು ಭಾರತವು ಉಳಿಸಿಕೊಂಡಿದೆ. ದ್ವಿಪಕ್ಷೀಯ ಹೂಡಿಕೆ ಒಪ್ಪಂದ ಕುರಿತು ಮಾತುಕತೆ ನಡೆಯುತ್ತಿದೆ. ಮುಕ್ತ ವ್ಯಾಪಾರ ಒಪ್ಪಂದದ ಜೊತೆಗೆ ಈ ಒಪ್ಪಂದಕ್ಕೂ ಸಹಿ ಬೀಳುವ ಸಾಧ್ಯತೆ ಇದೆ. ಕೆಲವು ವಿಚಾರಗಳಲ್ಲಿ ಅಭಿಪ್ರಾಯಭೇದವಿದ್ದು ಅವುಗಳನ್ನು ಪರಿಹರಿಸಿಕೊಳ್ಳಬೇಕಿದೆ. ಈ ಒಪ್ಪಂದ ಅಂತಿಮಗೊಂಡರೆ ಎರಡೂ ದೇಶಗಳಲ್ಲಿ ಪರಸ್ಪರರ ಹೂಡಿಕೆ ಹೆಚ್ಚಳವಾಗಿ ಆರ್ಥಿಕತೆಗೆ ಪುಷ್ಟಿ ದೊರೆಯಲಿದೆ. ಈ ಒಪ್ಪಂದವು ಮುಕ್ತ ವ್ಯಾಪಾರ ಒಪ್ಪಂದಕ್ಕೆ ಪೂರಕವಾಗಿ ಇರಲಿದೆ.

ಎಸ್‌ಎಸ್‌ಎಲ್‌ಸಿ ಫಲಿತಾಂಶದ ವಿಶ್ಲೇಷಣೆಯಿಂದ ಸಿಗುವ ಒಳನೋಟ ಸುಧಾರಣಾ ಕ್ರಮಕ್ಕೆ ಪೂರಕ

ಫಲಿತಾಂಶ ವಿಶ್ಲೇಷಣೆಯ ಒಳನೋಟ

ವಿಶ್ಲೇಷಣೆ

ಎಚ್.ಬಿ.ಚಂದ್ರಶೇಖರ್

ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟವಾಗಿದೆ. ಯಾವುದೇ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡ ನಂತರ ಆ ಶೈಕ್ಷಣಿಕ ವರ್ಷದ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡವು ಎಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ. ಆದರೆ ಫಲಿತಾಂಶ ಪ್ರಕಟಣೆಯ ನಂತರ ಫಲಿತಾಂಶದ ವಿಶ್ಲೇಷಣೆ ನಡೆಸಿ, ಅದರ ಆಧಾರದ ಮೇಲೆ ಮುಂದಿನ ಸಾಲಿನ ಅಥವಾ ಮುಂಬರುವ ವರ್ಷಗಳ ಶೈಕ್ಷಣಿಕ ಪ್ರಕ್ರಿಯೆಗಳಲ್ಲಿ ಯಾವ ರೀತಿಯ ಮಾರ್ಪಾಡುಗಳನ್ನು ಮಾಡಬಹುದು ಎಂಬುದರ ಬಗ್ಗೆ ಚಿಂತನ– ಮಂಥನ ನಡೆಸಲು ಫಲಿತಾಂಶವು ಅಗತ್ಯ ದತ್ತಾಂಶಗಳನ್ನು ನಮ್ಮ ಕೈಯಲ್ಲಿ ಇಡುತ್ತದೆ. ಆತ್ಮಾವಲೋಕನಕ್ಕೆ, ಪರಿಹಾರೋಪಾಯ ಕಂಡುಕೊಳ್ಳಲು ಪೂರಕವಾಗಿ ಒದಗಿಬರುತ್ತದೆ.

ರಾಜ್ಯ, ಜಿಲ್ಲಾ, ತಾಲ್ಲೂಕು ಮತ್ತು ಶಾಲಾ ಹಂತಗಳಲ್ಲಿ ಇಂತಹ ವಿಶ್ಲೇಷಣೆಯನ್ನು ಕೈಗೊಂಡು ಸೂಕ್ತ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಬಹುದಾಗಿದೆ. ಈ ಸಾಲಿನ ರಾಜ್ಯ ಹಂತದ ಫಲಿತಾಂಶದ ವಿಶ್ಲೇಷಣೆಯಲ್ಲಿ ಅನೇಕ ಒಳನೋಟಗಳು ನಮಗೆ ಕಾಣಸಿಗುತ್ತವೆ. ವಿವಿಧ ಸಾಮಾಜಿಕ ವರ್ಗಗಳಿಗೆ ಸೇರಿದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಯಾವ ರೀತಿ ಸಾಧನೆ ಮಾಡಿದ್ದಾರೆ ಎಂಬುದನ್ನು ಕಂಡುಕೊಂಡು, ಫಲಿತಾಂಶದಲ್ಲಿ ಹಿನ್ನಡೆ ಹೊಂದಿರುವ ಸಾಮಾಜಿಕ ವರ್ಗಗಳ ಮಕ್ಕಳಿಗೆ ಯಾವ ರೀತಿಯ ಬೆಂಬಲ ನೀಡಬಹುದು ಎಂಬುದನ್ನು ಯೋಜಿಸಲು ಸಾಧ್ಯವಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಮುಸ್ಲಿಂ ಸಮುದಾಯದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಶೇಕಡಾವಾರು ಫಲಿತಾಂಶವು ಕ್ರಮವಾಗಿ ಶೇ 59, ಶೇ 58 ಹಾಗೂ ಶೇ 57ರಷ್ಟು ಇದ್ದು, ರಾಜ್ಯದ ಒಟ್ಟಾರೆ ಶೇಕಡಾವಾರು ಫಲಿತಾಂಶಕ್ಕಿಂತ (ಶೇ 66) ಕಡಿಮೆ ಇರುವುದನ್ನು ಗಮನಿಸಬಹುದು. ಮುಸ್ಲಿಂ ಸಮುದಾಯದ ವಿದ್ಯಾರ್ಥಿಗಳು ಶಾಲೆಗೆ ಗೈರು ಹಾಜರಾಗುವುದು ಹಾಗೂ ಚಿಕ್ಕ ವಯಸ್ಸಿನಲ್ಲಿ ವಿವಿಧ ಉದ್ಯೋಗಗಳಲ್ಲಿ ನಿರತರಾಗುವುದು ಸಾಮಾನ್ಯ. ಅದರಲ್ಲೂ ಈ ಸಮುದಾಯದ ಬಾಲಕರ ಶಾಲಾ ಹಾಜರಿಯ ಪ್ರಮಾಣ ಕಡಿಮೆ ಇರುತ್ತದೆ. ಇವರ ಫಲಿತಾಂಶವು ಶೇ 47ರಷ್ಟು ಇದ್ದು, ಒಟ್ಟಾರೆ ಈ ಸಮುದಾಯದವರ ಶೇಕಡಾವಾರು ಫಲಿತಾಂಶಕ್ಕಿಂತ (ಶೇ 57) ಬಹಳಷ್ಟು ಕಡಿಮೆ ಇದೆ.

ಇದನ್ನು ಅವಲೋಕಿಸಿದಾಗ, ಮುಸ್ಲಿಂ ಸಮುದಾಯದ ಬಾಲಕರು ಶಾಲೆಗೆ ನಿಯಮಿತವಾಗಿ ಹಾಜರಾಗುವಂತೆ ಹಾಗೂ ಕಲಿಕೆಯಲ್ಲಿ ಉತ್ತಮವಾಗಿ ತೊಡಗುವಂತೆ ಮಾಡಲು ಪೋಷಕರ ಸಹಭಾಗಿತ್ವ, ಶಿಕ್ಷಣದ ಮಹತ್ವವನ್ನು ವಿವರಿಸುವ ಪ್ರೇರಣಾತ್ಮಕ ಕ್ರಮಗಳು, ಸಮುದಾಯದ ಸಾಧಕರ ಯಶೋಗಾಥೆಗಳ ಪರಿಚಯ ಹಾಗೂ ಇನ್ನಿತರ ಕಾರ್ಯತಂತ್ರಗಳನ್ನು ಹೊಂದಬೇಕಾಗುತ್ತದೆ. ಜೊತೆಗೆ ಈ ಸಮುದಾಯದ ಬಾಲಕಿಯರ ಶಿಕ್ಷಣಕ್ಕೂ ಒತ್ತು ನೀಡಬೇಕಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶೇಕಡಾವಾರು ಫಲಿತಾಂಶವನ್ನು ಉತ್ತಮಪಡಿಸಲು ಪೋಷಕರಲ್ಲಿ ಜಾಗೃತಿ, ವಿದ್ಯಾರ್ಥಿಗಳಿಗೆ ಪ್ರೇರಣೆ ಹಾಗೂ ಸ್ಥಳೀಯವಾಗಿ ಸೂಕ್ತವಾಗುವ ಇನ್ನಿತರ ಕಾರ್ಯತಂತ್ರಗಳನ್ನು ಯೋಜಿಸಿ ಜಾರಿಗೊಳಿಸಬೇಕಾಗುತ್ತದೆ. ಈ ಸಮುದಾಯಗಳ ಹೆಚ್ಚಿನ ವಿದ್ಯಾರ್ಥಿಗಳು ಶಿಕ್ಷಣ ಪಡೆದ ಮೊದಲ ಪೀಳಿಗೆಯವರಾಗಿರುವ ಸಾಧ್ಯತೆಯಿದ್ದು, ಕುಟುಂಬದ ಸಂಕಷ್ಟಗಳು ಇಂತಹ ಮಕ್ಕಳನ್ನು ಶಿಕ್ಷಣದಿಂದ ವಿಮುಖರನ್ನಾಗಿ ಮಾಡಿಸುವ ಸಾಧ್ಯತೆ ಇರುತ್ತದೆ. ಈ ಕಾರಣದಿಂದ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶಿಕ್ಷಣದ ಮುಂದುವರಿಕೆ ಹಾಗೂ ಕಲಿಕಾ ಪ್ರಗತಿಯ ಬಗ್ಗೆ ಹೆಚ್ಚಿನ ನಿಗಾ ಇಡುವುದರ ಜೊತೆಗೆ ಶಿಕ್ಷಕರು ಅವರಿಗೆ ಒತ್ತಾಸೆಯಾಗಿ ನಿಲ್ಲಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಸಂಬಂಧಿಸಿದ ಸಮುದಾಯಗಳ ಶಿಕ್ಷಣ ತಜ್ಞರು, ಅಧಿಕಾರಿಗಳು, ಉದ್ಯಮಿಗಳು, ಉದ್ಯೋಗಿಗಳು ಹಾಗೂ ಇತರ ಸಾಧಕರ ನೆರವನ್ನು ಪಡೆಯಬಹುದು.

ರಾಜ್ಯ ಹಂತದಲ್ಲಿ ಬಾಲಕರ ಶೇಕಡಾವಾರು ಫಲಿತಾಂಶವು 58ರಷ್ಟಿದ್ದು, ಬಾಲಕಿಯರ ಶೇಕಡಾವಾರು ಫಲಿತಾಂಶಕ್ಕಿಂತ (74) ಶೇ 16ರಷ್ಟು ಕಡಿಮೆ ಇದೆ. ಬಾಲಕರ ಫಲಿತಾಂಶವು ಇಷ್ಟೊಂದು ಕಡಿಮೆ ಆಗಿರುವುದು ಒಟ್ಟಾರೆ ಫಲಿತಾಂಶದ ಕುಸಿತಕ್ಕೆ ಪ್ರಮುಖ ಕಾರಣವಾಗಿದೆ. ಇದನ್ನು ಗಮನಿಸಿ, ಬಾಲಕರನ್ನು ಕಲಿಕಾ ಪ್ರಕ್ರಿಯೆಯಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳುವ ಕಾರ್ಯವಿಧಾನವನ್ನು ಅನುಷ್ಠಾನ ಮಾಡಬೇಕಾಗಿದೆ.

ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಫಲಿತಾಂಶ ಕ್ರಮವಾಗಿ ಶೇ 63 ಮತ್ತು ಶೇ 59ರಷ್ಟು ಇದ್ದು, ಅನುದಾನರಹಿತ ಶಾಲೆಗಳ ಫಲಿತಾಂಶಕ್ಕಿಂತ (ಶೇ 75) ಕಡಿಮೆ ಇರುವುದನ್ನು ಗಮನಿಸಬಹುದು. ಅನುದಾನ ರಹಿತ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಸಾಮಾಜಿಕ ಮತ್ತು ಕೌಟುಂಬಿಕ ಹಿನ್ನೆಲೆಯು ಉತ್ತಮವಾಗಿರುವುದು ಫಲಿತಾಂಶ ಹೆಚ್ಚಳಕ್ಕೆ ಕಾರಣವಾಗಿರಬಹುದು. ಆದಾಗ್ಯೂ ಗ್ರಾಮೀಣ ಮತ್ತು ನಗರ ಪ್ರದೇಶಗಳ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳ ಹಿನ್ನೆಲೆಯನ್ನು ಗಮನದಲ್ಲಿ ಇಟ್ಟುಕೊಂಡು, ಅವರ ಶೈಕ್ಷಣಿಕ ಅಭಿವೃದ್ಧಿಗೆ ಅಗತ್ಯವಾದ, ಸ್ಥಳೀಯ ಸನ್ನಿವೇಶಗಳಿಗೆ ಸೂಕ್ತವಾದ ನಿರ್ದಿಷ್ಟ ಕಾರ್ಯಯೋಜನೆಯನ್ನು ಹಾಕಿಕೊಳ್ಳಬಹುದು.

ಮಾಧ್ಯಮವಾರು ಫಲಿತಾಂಶವನ್ನು ಗಮನಿಸಿದಾಗ, ಉರ್ದು ಮಾಧ್ಯಮದ ಶೇಕಡಾವಾರು ಫಲಿತಾಂಶವು 46ರಷ್ಟಿದ್ದು, ಇತರ ಪ್ರಮುಖ ಮಾಧ್ಯಮಗಳ ಫಲಿತಾಂಶಕ್ಕಿಂತ ಕಡಿಮೆ ಇದೆ. ಉರ್ದು ಮಾಧ್ಯಮ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ಖಾತರಿಪಡಿಸುವಲ್ಲಿ ಇನ್ನಷ್ಟು ಬೆಂಬಲಾತ್ಮಕ ಕಾರ್ಯತಂತ್ರಗಳು ಅಗತ್ಯ ಎಂಬುದನ್ನು ಈ ಅಂಶವು ತೋರಿಸುತ್ತದೆ.

ಜಿಲ್ಲಾವಾರು ಫಲಿತಾಂಶವನ್ನು ಗಮನಿಸಿದಾಗ, ವಿಜಯನಗರ ಜಿಲ್ಲೆ ಹೊರತುಪಡಿಸಿ ಕಲ್ಯಾಣ ಕರ್ನಾಟಕದ ಜಿಲ್ಲೆಗಳು ಫಲಿತಾಂಶದ ಪಟ್ಟಿಯಲ್ಲಿ ಕೊನೆಯಲ್ಲಿ ಇರುವುದನ್ನು ಗಮನಿಸಬಹುದು. ಕಲ್ಯಾಣ ಕರ್ನಾಟಕ ಭಾಗದಲ್ಲಿ 21,381 (ಶೇ 37) ಶಿಕ್ಷಕ ಹುದ್ದೆಗಳು ಖಾಲಿ ಇರುವುದು ಇದಕ್ಕೆ ಪ್ರಮುಖ ಕಾರಣ ಆಗಿರಬಹುದು ಎಂದು ಕಲ್ಯಾಣ ಕರ್ನಾಟಕದ ಶಾಲಾ ಶಿಕ್ಷಣ ಇಲಾಖೆಯ ಹೆಚ್ಚುವರಿ ಆಯುಕ್ತ ಆಕಾಶ್ ಅಭಿಪ್ರಾಯಪಟ್ಟಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ಅಂಶದ ಜೊತೆಗೆ ಈ ಭಾಗದಲ್ಲಿ ಖಾಸಗಿ ಶಾಲೆಗಳ ಸಂಖ್ಯೆಯು ಇತರ ವಿಭಾಗಗಳಿಗಿಂತ ಕಡಿಮೆ ಇರುವುದು ಸಹ ಫಲಿತಾಂಶ ಕುಸಿತಕ್ಕೆ ಕಾರಣವಾಗಿರಬಹುದು. ಏಕೆಂದರೆ ಅನುದಾನರಹಿತ ಪ್ರೌಢಶಾಲೆಗಳಲ್ಲಿ ಫಲಿತಾಂಶವು ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಿಗಿಂತ ಉತ್ತಮವಾಗಿ ಇರುವುದನ್ನು ಗಮನಿಸಬಹುದು. ಈ ಕುರಿತು ಇನ್ನಷ್ಟು ವಿಶ್ಲೇಷಣೆಯ ಅಗತ್ಯ ಇದೆ.

ರಾಜ್ಯ ಮಟ್ಟದ ಫಲಿತಾಂಶದ ವಿಶ್ಲೇಷಣೆಯ ಜೊತೆಗೆ ಜಿಲ್ಲಾ ಮತ್ತು ತಾಲ್ಲೂಕು ಹಂತಗಳಲ್ಲಿಯೂ ಫಲಿತಾಂಶದ ವಿಶ್ಲೇಷಣೆಯನ್ನು ಕೈಗೊಂಡು, ಫಲಿತಾಂಶ ಹೆಚ್ಚಳ ಅಥವಾ ಕುಸಿತಕ್ಕೆ ಕಾರಣವಾದ ನಿರ್ದಿಷ್ಟವಾದ ಸ್ಥಳೀಯ ಅಂಶಗಳನ್ನು ಕಂಡುಕೊಂಡು ಫಲಿತಾಂಶವನ್ನು ಉತ್ತಮಪಡಿಸಲು ಪ್ರಯತ್ನಿಸಬೇಕು. ಈ ಪ್ರಕ್ರಿಯೆಯಲ್ಲಿ ಆಯಾ ಹಂತದಲ್ಲಿ ಸಕ್ರಿಯವಾಗಿರುವ ಶಿಕ್ಷಣಾಸಕ್ತರನ್ನು ತೊಡಗಿಸಿಕೊಂಡು, ಅವರ ಸಹಭಾಗಿತ್ವದಿಂದ ಮುಂದಡಿ ಇಡುವ ಪ್ರಯತ್ನಗಳಾಗಬೇಕು.

ಶಾಲಾ ಹಂತದಲ್ಲಿ ಕೈಗೊಳ್ಳುವ ಫಲಿತಾಂಶದ ವಿಶ್ಲೇಷಣೆಯು ಉತ್ತಮ ಒಳನೋಟಗಳನ್ನು ನೀಡುತ್ತದೆ. ಉದಾಹರಣೆಗೆ, ನನ್ನ ಬಂಧುವೊಬ್ಬರ ಶಾಲೆಯ ಫಲಿತಾಂಶವು ಶೇ 41ರಷ್ಟಿದ್ದು, ಗಣಿತ ವಿಷಯದ ಫಲಿತಾಂಶ ಶೇ 73ರಷ್ಟಿದೆ. ಗಣಿತ ಶಿಕ್ಷಕರು ಉತ್ತಮವಾದ ರೀತಿಯಿಂದ ತೊಡಗಿಸಿಕೊಂಡು ಕಲಿಸಿದ್ದರಿಂದ ಅದರ ಪರಿಣಾಮವು ಫಲಿತಾಂಶದಲ್ಲಿ ಕಂಡುಬಂದಿದೆ. ಶಿಕ್ಷಕ ಹುದ್ದೆ ಖಾಲಿಯಿದ್ದು, ಅನುಭವಿ ಕಾಯಂ ಶಿಕ್ಷಕರು ಇಲ್ಲದಿದ್ದ ವಿಷಯಗಳಲ್ಲಿ ಫಲಿತಾಂಶದ ಕುಸಿತ ಕಂಡುಬಂದಿದೆ. ಶಿಕ್ಷಕರ ಲಭ್ಯತೆ, ಶಿಕ್ಷಕರ ತೊಡಗಿಸಿಕೊಳ್ಳುವಿಕೆಯು ಫಲಿತಾಂಶದ ಮೇಲೆ ಪರಿಣಾಮ ಬೀರುತ್ತವೆ. ಶಾಲಾ ಹಂತದಲ್ಲಿ ಫಲಿತಾಂಶ ಹೆಚ್ಚಳಕ್ಕೆ ಮುಖ್ಯ ಶಿಕ್ಷಕರು, ಶಿಕ್ಷಕರು, ಪೋಷಕರು, ಸ್ಥಳೀಯ ಶಿಕ್ಷಣಾಸಕ್ತ ಸ್ವಯಂಸೇವಾ ಸಂಸ್ಥೆಗಳ ದೃಢ ಮತ್ತು ಸಂಘಟಿತ ಪ್ರಯತ್ನಗಳಾಗಬೇಕು.

ಸರಿಯಾಗಿ ಓದಲು, ಬರೆಯಲು ಬಾರದ ಹಾಗೂ ಗಣಿತದಂತಹ ಮೂಲಭೂತ ಕೌಶಲಗಳ ಕಲಿಕೆಯಾಗದ ವಿದ್ಯಾರ್ಥಿಗಳು ಎಂಟನೇ ತರಗತಿಗಾಗಿ ಪ್ರೌಢಶಾಲೆಗೆ ದಾಖಲಾದ ಸಂದರ್ಭದಲ್ಲಿ ಅವರಿಗೆ ಪಠ್ಯಪುಸ್ತಕದ ನಿಗದಿತ ಕಲಿಕಾಂಶಗಳನ್ನು ಕಲಿಸುವುದು ಹೆಚ್ಚಿನ ಶಿಕ್ಷಕರಿಗೆ ಸವಾಲಾಗುತ್ತದೆ. ಈ ಅಂಶವನ್ನು ಗಮನದಲ್ಲಿ ಇಟ್ಟುಕೊಂಡು, ಕಿರಿಯ ಪ್ರಾಥಮಿಕ ಹಂತದ ಶಿಕ್ಷಣದಿಂದಲೇ ಗುಣಾತ್ಮಕ ಕಲಿಕೆಯನ್ನು ಖಾತರಿಪಡಿಸಿಕೊಳ್ಳಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಯೋಜಿಸಿ, ಅನುಷ್ಠಾನ ಮಾಡುವುದು ಸೂಕ್ತವಾಗುತ್ತದೆ.

ಲೇಖಕ: ಹಿರಿಯ ಉಪನ್ಯಾಸಕ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಬೆಂಗಳೂರು ನಗರ ಜಿಲ್ಲೆ

ಚುರುಮುರಿ



ಜೈಲ್ ಜುಗಲ್ಬಂದಿ!

● ತುರುವೇಕೆರೆ ಪ್ರಸಾದ್

'ನಮ್ ಅಕಾಡೆಮಿ ಅಧ್ಯಕ್ಷ ಮುಕುಂದಣ್ಣ ಕನ್ನಡ ಸಾಹಿತ್ಯನ ಜೈಲ್‌ಗಂಟ ತಗಂಡೋಗೋ ಒಳ್ಳೇ ಪ್ರಯತ್ನ ಮಾಡವ್ರಲ್ಲಪ್ಪ' ಎಂದ ಗುದ್ಲಿಂಗ.

'ಊ ಕಣ್ಲಾ, ಆದ್ರೆ ಇದ್ರ ಪರಿಣಾಮ ಯೋಚ್ನೆ ಮಾಡ್ಬೇಕಾಯ್ತದೆ' ಎಂದ ಮಾಲಿಂಗ.

'ಇದ್ರಾಗೆ ಯೋಚ್ನೆ ಮಾಡೋದು ಏನೈತ್ಲಾ? ಮನ್ಸುಗಳ ಪರಿವರ್ತನೆ ಮಾಡಿ ಜೈಲಿನ ಪರಿಸರ ಸಾಹಿತ್ಯಮಯವಾಗಿಸೋದು'.

'ಜೈಲಲ್ಲಿ ಕಲ್ ಒಡೆದು ಮುದ್ದೆ ಕಟ್ಟೋ ಕೆಲಸ ಬಿಟ್ಟು ಎಲ್ಲಾ ಕವಿತೆ ಕಟ್ಟೋ ಕೆಲಸ ಶುರು ಮಾಡ್ಕಂಡ್ರೆ ಎಂಗ್ಲಾ?'

'ಅದೂ ನಿಜನೇಯ, 'ನಮಗೂ ಸ್ವಾತಂತ್ರ್ಯ ಬೇಕು, ಸಾಕು ಗೋಡೆ ಮಧ್ಯೆ ಬದುಕು. ಬಿಡಿಸಬೇಕು ಬಿರುಕು, ಅಕಾಡೆಮಿಗೆ ಬಹುಪರಾಕು' ಅಂತ ಎಲ್ಲ ಕವನ ಕೊರೆದು ಓದುದ್ರೆ ಜೈಲರ್ ಕಿವಿ ಗತಿ ಏನ್ಲಾ ಆಗ್ಬೇಕು?'

'ಅವರು ಎಂಗೋ ತಡ್ಕೊತಾರೆ ಬಿಡು. ಆದ್ರೆ ಬರೀ ಕವನ ಬರ್ಕಂಡಿದ್ರೆ ಓಕೆ. ಆದ್ರೆ ಈ ಜೈಲಲ್ ನಡ್ಯೋ ತಾರಾತಿಗಡಿನೆಲ್ಲಾ ಪತ್ತೇದಾರಿ ಅಂತ ಗೋಡೆ ಮೇಲೆ ಕೆತ್‌ಬುಟ್ರೆ ಸರ್ಕಾರದ ಬುಡಕ್ಕೆ ಬತ್ತದಲ್ಲಪ್ಪ'.

'ಜೊತೆಗೆ ಜೈಲ್ನಾಗೆ ಸಾಹಿತಿಗಳು ಜಾಸ್ತಿ ಆಗೋದ್ರೆ ಅಲ್ಲೂ ಶ್ರೇಷ್ಠತೆಯ ವ್ಯಸನ ಕಾಡುತ್ತೆ. ಜುಗಲ್ಬಂದಿ ಶುರುವಾಗಿ ಕಾಲ್ ಎಳೆಯಕ್ ಶುರು ಮಾಡ್ಕಂಡ್ರೆ ಪರಿವರ್ತನೆ ಎಲ್ ಬಂತು?'

'ಇಂತ ಪರಿವರ್ತನೇನ ಉಗ್ರರ ಬಂಕರ್‌ಗೂ ಓಗಿ ಮಾಡ್ಬೇಕು ಕಣ್ಲಾ'.

'ಹೂ ಕಣ್ಲಾ! ಹೇಳಿದ್ದನ್ನೇ ಹೇಳೋ ಟಿ.ವಿ. ಆ್ಯಂಕರ್‌ಗಳ ತರ ಕವಿತೆ ಮೇಲ್ ಕವಿತೆ ಕೊರುದ್ರೆ ಒಳಗಿರಕ್ಕಾಗ್ದೆ ಉಗ್ರರು ಈಚೆ ಬತ್ತಾರೆ. ಅವಾಗ ಸುಲಭವಾಗಿ ಹೊಡೆದುಹಾಕ್ಬಹುದು'.

'ಅಯ್ಯೋ ಅಲ್ಲಿಗಂಟ ಓದೆ ನೀನು. ಮನೆ ಮನೇನೂ ಎಷ್ಟೋ ಗಂಡಸರ ಪಾಲಿಗೆ 'ಜಗಳ್'ಬಂದಿ 'ಕಾರಾ'ಗೃಹಗಳಾಗಿವೆ. ನಮ್ ಹೆಂಡ್ತೀರನ್ನೂ ಹೀಗೆ ಕವನ ಬರೆಸಿ ಪರಿವರ್ತನೆ ಮಾಡ್ಬೇಕಲ್ವಾ?'

'ಈಗ ಕೆಲವು ಹೆಂಡ್ತೀರು ಕಿವಿ ಊದೇ ಸಾಕಾಗಿದೆ, ಇನ್ನು ಕವನ ಓದಿ ಕಿವಿನೂ ಕೊರುದ್ರೆ ಇರಕ್ಕಾಗುತ್ತೇನೋ?' ಎಂದ ಪರ್ಮೇಶಿ.

ಎಲ್ಲಾ ಗೊಳ್ಳನೆ ನಕ್ಕರು.

ದಿನದ ಟ್ವೀಟ್

ಹೇಳಿಕೊಳ್ಳುವ ಹಪಹಪಿಯೇಕೆ?

ಸೋಷಿಯಲ್ ಮೀಡಿಯಾ ಪ್ರಬಲವಾಗಿ ಬೆಳೆದ ಮೇಲಂತೂ ಹಲವರಿಗೆ ಎಲ್ಲ ವಿಷಯಗಳ ಬಗ್ಗೆಯೂ ತಮ್ಮ ಅನಿಸಿಕೆ, ಅಭಿಪ್ರಾಯ ಕೊಡಬೇಕು ಅನ್ನುವ ವಾತಾವರಣ ಸೃಷ್ಟಿ ಆಗಿದೆ. ನಾವು ಪ್ರಚಲಿತ ವಿದ್ಯಮಾನಗಳ ಬಗ್ಗೆ ಮಾತನಾಡಿಲ್ಲವೆಂದರೆ ನಮ್ಮನ್ನು ದಡ್ಡರು ಅಂತ ಜನ ಪರಿಗಣಿಸುತ್ತಾರೆ ಅನ್ನುವ ಅಭದ್ರತೆ ಇರಬಹುದು. ಅಭಿಪ್ರಾಯ ಕೊಡದೆ/ಇಲ್ಲದೆಯೇ ಇರುವುದು ತಪ್ಪೇನಲ್ಲ.

ಅಮರನಾಥ್ ಶಿವಶಂಕರ್, ಐ.ಟಿ. ಉದ್ಯೋಗಿ

ಕಿಡಿನುಡಿ

ಯುದ್ಧದ ಸಂದರ್ಭದಲ್ಲಿ ಭಾರತದ ಯಾವೊಂದು ಚಾನೆಲ್ ಸಹ ನಾವು ನಂಬುವಂತೆ ಇಲ್ಲದಿರುವುದು ಅಚ್ಚರಿದಾಯಕ... ಅವರು ನಿನ್ನೆ ರಾತ್ರಿ ಕೋಲಾಹಲವನ್ನೇ ಸೃಷ್ಟಿಸಿದರು ಮತ್ತು ಬಂದರನ್ನು ಸಹ ನಾಶಪಡಿಸಿದರು. ತನ್ನ ಎಲ್ಲ ಅಂಗಗಳೂ ಸಮರ್ಥವಾಗಿ ಕೆಲಸ ಮಾಡಿದಾಗಷ್ಟೇ ದೇಶವೊಂದು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಸಾಧ್ಯ.

ವಿ.ವಿನಯ್, ಉದ್ಯಮಿ

25 ವರ್ಷಗಳ ಹಿಂದೆ

ಬುಧವಾರ, 10-5-2000

● **ಕಲ್ಲಿದ್ದಲು ಪ್ರಕರಣ ಹೈಕೋರ್ಟ್ ಆದೇಶ ರದ್ದು**

ನವದೆಹಲಿ, ಮೇ 9 (ಪಿಟಿಐ): ಕಲ್ಲಿದ್ದಲು ಆಮದು ಹಗರಣದಲ್ಲಿ ತಮಿಳುನಾಡು ಮಾಜಿ ಮುಖ್ಯಮಂತ್ರಿ ಜಯಲಲಿತಾ ಅವರ ಹೆಸರನ್ನು ತೆಗೆದುಹಾಕುವಂತೆ ಚೆನ್ನೈ ವಿಶೇಷ ನ್ಯಾಯಾಲಯ ನೀಡಿದ ತೀರ್ಪನ್ನು ಸುಪ್ರೀಂ ಕೋರ್ಟ್ ಇಂದು ರದ್ದುಪಡಿಸಿತು.

'ವಸ್ತುಸ್ಥಿತಿ ಮತ್ತು ಪರಿಸ್ಥಿತಿಯನ್ನು ಅವಲೋಕಿಸಿದಾಗ, ಈ ಪ್ರಕರಣದಿಂದ ಜಯಲಲಿತಾ ಅವರನ್ನು ಹೊರಗಿಡುವುದು ಅಸಾಧ್ಯ' ಎಂದು ನ್ಯಾಯಪೀಠ ಹೇಳಿದೆ.

● **ಶ್ರೀಲಂಕಾ: ಮುಂದುವರಿದ ಭೀಕರ ಕದನ**

ಕೊಲಂಬೊ, ಮೇ 9 (ಯುಎನ್‌ಐ)– ಜಾಫ್ನಾ ಮೇಲಿನ ಹತೋಟಿಗಾಗಿ ಶ್ರೀಲಂಕಾ ಸೇನಾಪಡೆ ಮತ್ತು ಎಲ್‌ಟಿಟಿಇ ನಡುವೆ ಭೀಕರ ಕದನ ನಡೆಯುತ್ತಿದ್ದು, ಇಂದು ಮುಂಜಾನೆ ಉಗ್ರರು ಸೇನಾಪಡೆ ಮೇಲೆ ಹೊಸ ದಾಳಿ ನಡೆಸಿದ್ದಾರೆ.

ಉತ್ತರ ಪಳ್ಳೈನಲ್ಲಿ ಕಾವಲು ಕಾಯುತ್ತಿದ್ದ ಲಂಕಾ ಪಡೆಗಳ ಮೇಲೆ ಉಗ್ರರು ಸತತ ಎರಡು ಬಾರಿ ದಾಳಿ ನಡೆಸಿದರು. ಸೇನೆಯು ಅವರನ್ನು ಹಿಮ್ಮೆಟ್ಟಿಸಿದ್ದು, ಉಗ್ರರ ಕಡೆ ಭಾರಿ ಸಾವು–ನೋವು ಸಂಭವಿಸಿದೆ ಎಂದು ಸರ್ಕಾರದ ಮಾಹಿತಿ ವಿಭಾಗವು ವರದಿ ಮಾಡಿದೆ.

50 ವರ್ಷಗಳ ಹಿಂದೆ

ಶನಿವಾರ, 10-5-1975

● **ಅರಸು ನಾಯಕತ್ವಕ್ಕೆ ರಾಜ್ಯದ 18 ಮಂದಿ ಎಂ.ಪಿ.ಗಳ ವಿರೋಧ**

ನವದೆಹಲಿ, ಮೇ 9– ಕರ್ನಾಟಕದ ಹದಿನೆಂಟು ಮಂದಿ ಕಾಂಗ್ರೆಸ್ ಎಂ.ಪಿ.ಗಳಿಗೆ ಶ್ರೀ ದೇವರಾಜ ಅರಸು ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಮುಂದುವರಿಯುವುದು ಇಷ್ಟವಿಲ್ಲ.

ಅಲ್ಲದೆ ಶೀಘ್ರವಾಗಿ ನಾಯಕತ್ವದ ಬದಲಾವಣೆ ಮಾಡುವಂತೆ ಪ್ರಧಾನಿ ಇಂದಿರಾ ಗಾಂಧಿ ಅವರನ್ನು ಕೋರಲು ಇವರೆಲ್ಲ ಉದ್ದೇಶಿಸಿದ್ದಾರೆ.

ಸರ್ವಶ್ರೀ ಕೆ.ಹನುಮಂತಯ್ಯ, ತುಳಸಿದಾಸಪ್ಪ ಮತ್ತಿತರ ಎಂ.ಪಿ.ಗಳು ಈಚಿನ ವಾರಗಳಲ್ಲಿ ಪ್ರಧಾನಿಯವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ, 'ಕಾಂಗ್ರೆಸ್ ಮತ್ತು ರಾಜ್ಯದ ಆಡಳಿತದ ಹಿತದೃಷ್ಟಿಯಿಂದ' ಕೂಡಲೇ ರಾಜ್ಯದ ನಾಯಕತ್ವದ ಬದಲಾವಣೆಗಾಗಿ ಆಗ್ರಹಪಡಿಸಿದ್ದಾರೆ.

ಇವರೆಲ್ಲ ಇಂದು ಪ್ರಧಾನಿಗೆ ಒಂದು ಪತ್ರ ಬರೆದು ಸಂಯುಕ್ತವಾಗಿ ಸಹಿ ಹಾಕಿದ್ದಾರೆ. ಒಂದೆರಡು ದಿನಗಳಲ್ಲಿ ಪ್ರಧಾನಿಗೆ ಕಳುಹಿಸಲಿರುವ ಈ ಪತ್ರದಲ್ಲಿ ಅರಸು ಅವರ ಹೆಸರನ್ನು ಸ್ಪಷ್ಟವಾಗಿ ಸೂಚಿಸಿಲ್ಲವಾದರೂ ರಾಜ್ಯದ ನಾಯಕತ್ವವನ್ನು ತುರ್ತಾಗಿ ಬದಲಾಯಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದ್ದಾರೆ.

● **ಸರ್ಕಾರಿ ಸಂಸ್ಥೆಯಿಂದ ನೋಟ್‌ಬುಕ್ ಮಾರಾಟ**

ಬೆಂಗಳೂರು, ಮೇ 9– ಅಧಿಕ ಬೆಲೆಯಲ್ಲಿ ಮಾರುವ ಖಾಸಗಿ ಪುಸ್ತಕ ವ್ಯಾಪಾರಿಗಳಿಗೆ ಒಂದು ಸವಾಲಾಗಿ, ರಾಜ್ಯ ಸರ್ಕಾರದ ಸಂಸ್ಥೆಯಾದ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್, ಎಕ್ಸರ್‌ಸೈಜ್ ಮತ್ತು ಸ್ಟೂಡೆಂಟ್ ನೋಟ್ ಪುಸ್ತಕಗಳನ್ನು ತಯಾರಿಸಿ ಮಾರುತ್ತಿದೆ. ಕಾಗದ ಮತ್ತು ನೋಟ್‌ಬುಕ್‌ಗಳ ಅಭಾವ ಎದುರಿಸುತ್ತಿರುವಾಗ ಈ 'ಲೇಖಕ್' ಪುಸ್ತಕಗಳ ಯೋಜನೆ ವಿದ್ಯಾರ್ಥಿಗಳಿಗೆ ಒಂದು ವರವಾಗಿದೆ.

ಸಂಗತ

ನಾಗರಿಕ ಪ್ರಜ್ಞೆ: ಬೇಡ ಅವಜ್ಞೆ

ವಿವೇಕರಹಿತರಾಗಿ ಬದುಕುವವರ ಸಂಖ್ಯೆ ಹೆಚ್ಚಾಗುತ್ತಿದೆ

● ಸಿಬಂತಿ ಪದ್ಮನಾಭ ಕೆ.ವಿ.

ಇತ್ತೀಚೆಗೆ ಸರ್ಕಾರಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದೆ. ಬಹುತೇಕ ಹಿಂದಿನ ಸಾಲಿನ ಸೀಟಿನಲ್ಲಿ ಕುಳಿತಿದ್ದೆ. ಬಸ್ ವೇಗವಾಗಿ ಸಾಗುತ್ತಿದ್ದಾಗ, ಚಾಲಕನ ಹಿಂಬದಿಯ ಸೀಟಿನಲ್ಲಿ ಕುಳಿತಿದ್ದ ಯುವಕನೊಬ್ಬ ತಾನು ಜಗಿಯುತ್ತಿದ್ದ ಪಾನ್ ಅನ್ನು ಅನಾಮತ್ತಾಗಿ ಹೊರಗೆ ಉಗುಳಿದ. ಮುಂದಿನದನ್ನು ಊಹಿಸಬಹುದು– ಆ ಬದಿಯಲ್ಲಿ ಕುಳಿತಿದ್ದ ಎಲ್ಲರ ಮೈಮೇಲೂ ಅವನ ಎಂಜಲಿನ ಪ್ರೋಕ್ಷಣೆ ಆಯಿತು. 'ಕಾಮನ್‌ಸೆನ್ಸ್ ಇಲ್ವೇನ್ರೀ?' ಎಂದು ಒಂದಷ್ಟು ಜನ ಸಿಡಿಮಿಡಿಯಾದರು. ಒಬ್ಬ ಯುವತಿಯಂತೂ ಎದ್ದು ಮುಂದೆ ಹೋಗಿ ಹತ್ತು ನಿಮಿಷ ಆತನಿಗೆ ವಾಚಾಮಗೋಚರ ಬೈದು ಬಂದಳು. ಅವನು ಯಾವ ಪ್ರತಿಕ್ರಿಯೆಯೂ ಇಲ್ಲದೆ 'ಈಗೇನಾಯ್ತು' ಎಂಬಂತೆ ತನ್ನ ಪಾಡಿಗೆ ಕುಳಿತಿದ್ದ. ತಾನೊಂದು ತಪ್ಪು ಮಾಡಿದೆ ಎಂಬ ಸಣ್ಣ ಭಾವನೆಯೂ ಅವನ ಮುಖದ ಮೇಲೆ ಇರಲಿಲ್ಲ.

ನಮ್ಮಲ್ಲಿ ಇದೇನೂ ಹೊಸದಲ್ಲ. ಚಲಿಸುತ್ತಿರುವ ವಾಹನದಿಂದ ಉಗಿಯುವುದು, ಅದಕ್ಕಾಗಿ ಜಗಳ ಆಗುವುದು ಸಾಮಾನ್ಯ. ಆದರೆ ನಮ್ಮ ಮಂದಿ ನಾಗರಿಕ ಪ್ರಜ್ಞೆಯಿಲ್ಲದೆ ವಿವೇಕರಹಿತರಾಗಿ ಬದುಕುತ್ತಿರುವುದು ಇತ್ತೀಚಿನ ವರ್ಷಗಳಲ್ಲಂತೂ ಹೆಚ್ಚೇ ಆಗುತ್ತಿದೆ. ಕಾಲ ಸರಿದಂತೆ, ಸಮಾಜದಲ್ಲಿ ಶಿಕ್ಷಣದ ಪ್ರಮಾಣ ಹೆಚ್ಚಾದಂತೆ, ನಾಗರಿಕ ಪ್ರಜ್ಞೆ ಸುಧಾರಿಸಬೇಕಾದದ್ದು ಅಪೇಕ್ಷಣೀಯ. ಆದರೆ ನಾವು ಇನ್ನಷ್ಟು ಅನಾಗರಿಕತೆಯ ಕಡೆಗೆ ಸಾಗುತ್ತಿದ್ದೇವೆ ಎಂಬುದನ್ನು ಇಂತಹ ಅನೇಕ ನಿದರ್ಶನಗಳು ಬೊಟ್ಟು ಮಾಡುತ್ತವೆ.

ನಮ್ಮ ಮನೆ ಶುಚಿಯಾಗಿರಬೇಕು ಎಂದು ಬಯಸುತ್ತೇವೆ, ಹೊರಗೆ ಹೋದಾಗ ಅಂತಹ ಕನಿಷ್ಠ ವರ್ತನೆಯೂ ಇರುವುದಿಲ್ಲ. 'ಸ್ವಚ್ಛ ಭಾರತ' ಅಭಿಯಾನ ಆರಂಭವಾಗಿ ಒಂದು ದಶಕವೇ ಕಳೆದುಹೋಗಿದೆ. ಈ ಅಭಿಯಾನದ ಭಾಗವಾಗಿ ನೂರಾರು ಕೋಟಿ ಖರ್ಚಾಗಿದೆ. ಸಾವಿರಾರು ಕಾರ್ಯಕ್ರಮಗಳು ನಡೆದಿವೆ. ಆದರೂ ಸಮಾಜದ ಮನಃಸ್ಥಿತಿ ಬದಲಾಗಿಲ್ಲ. ಒಳಗಿನಿಂದ ಆಗಬೇಕಾದ ಬದಲಾವಣೆ ಆಗಿಲ್ಲ.

ವಸತಿ ಪ್ರದೇಶಗಳ ರಸ್ತೆಗಳು ಕಸದ ಕೊಂಪೆಗಳಾಗಿರುವುದೇ ಹೆಚ್ಚು. ಬೀಡಾಡಿ ನಾಯಿಗಳು, ಹಸುಗಳು ಅವನ್ನೇ ಬಗೆದು ಇನ್ನಷ್ಟು ಗಬ್ಬೆಬ್ಬಿಸಿರುತ್ತವೆ. ಕಸ ಒಯ್ಯಲು ಬರುವ ವಾಹನಕ್ಕೆ ಕಸ ಹಾಕುವ ವ್ಯವಧಾನವೂ ಕೆಲವರಿಗೆ ಇರುವುದಿಲ್ಲ. ಕಚೇರಿಗೆ ಹೋಗುತ್ತಾ ತಮ್ಮ ವಾಹನದಲ್ಲಿ ಕುಳಿತೇ ರಸ್ತೆಯ ಯಾವುದೋ ಒಂದು ಕಡೆ ಕಸದ ಚೀಲವನ್ನು ಎಸೆದು ಹೋಗುವ ಮಂದಿ ಬೇಕಾದಷ್ಟಿದ್ದಾರೆ.

ಯಾವುದೇ ಸಾರ್ವಜನಿಕ ಶೌಚಾಲಯಗಳಲ್ಲಿ ಕನಿಷ್ಠ ಶುಚಿತ್ವವೂ ಇಲ್ಲ. 'ಬಳಸಿದ ಮೇಲೆ ನೀರು ಹಾಕಿ' ಎಂದೋ 'ನೀರನ್ನು ಮಿತವಾಗಿ ಬಳಸಿ' ಎಂದೋ ಫಲಕ ಎಲ್ಲ ಕಡೆ ಇರುತ್ತದೆ. ಆದರೆ ಆ ನಲ್ಲಿಗಳಲ್ಲಿ ನೀರು ಬರುವುದೇ ಅಪರೂಪ. ಬಂದರೂ ಬಳಸಿದವನ ಮೈಮೇಲೆಯೇ ಸಿಡಿಯುವ ಪರಿಸ್ಥಿತಿ. ಶೌಚಾಲಯಗಳನ್ನು ತಾವು ಬಳಸಿದ ಮೇಲೆ ಬೇರೆಯವರೂ ಬಳಸಬೇಕು ಎಂಬ ಕನಿಷ್ಠ ಪ್ರಜ್ಞೆಯೂ ನಮ್ಮ ಮಂದಿಗೆ ಏಕೆ ಇರುವುದಿಲ್ಲ? ಇತ್ತೀಚೆಗೆ ದೆಹಲಿಯ ಒಂದು ಪ್ರಸಿದ್ಧ ಧಾರ್ಮಿಕ ಸ್ಥಳಕ್ಕೆ ಭೇಟಿ ಕೊಟ್ಟಿದ್ದೆವು. ಇಂಚಿಂಚಿಗೂ ಸ್ವಚ್ಛತೆ. ಮುಖವೇ ಕಾಣುವಂಥ ನೆಲ. ಶೌಚಾಲಯಕ್ಕೆ ಹೋದರೆ ಮಾತ್ರ ಗಲೀಜಿನ ಗುಡ್ಡೆ. ಬಳಸುವವರಿಗೆ ಸಣ್ಣ ವಿವೇಕವೂ ಇಲ್ಲದೇಹೋದರೆ ಸ್ವಚ್ಛತಾ ಸಿಬ್ಬಂದಿಯಾದರೂ ಏನು ಮಾಡಿಯಾರು?

ಎಲ್ಲೆಂದರಲ್ಲಿ ಕಸ ಎಸೆಯುವ, ಉಗುಳುವ ವಿಷಯವಷ್ಟೇ ಅಲ್ಲ, ಸಾರ್ವಜನಿಕ ವಸ್ತು ಹಾಗೂ ಸ್ಥಳಗಳ ಬಳಕೆಯ ಯಾವುದೇ ವಿಚಾರವಾದರೂ ಇದೇ ಕಥೆ. ನಮ್ಮ ನಾಗರಿಕ ಪ್ರಜ್ಞೆಯೇ ಸತ್ತುಹೋಗಿದೆ. ಬಸ್ ನಿಲ್ದಾಣ ಅಥವಾ ರೈಲು ನಿಲ್ದಾಣ, ಉದ್ಯಾನ, ಸರ್ಕಾರಿ ಕಚೇರಿ, ಬಸ್ಸು- ಯಾವುದನ್ನೇ ನೋಡಿದರೂ ಅವು 'ನಮ್ಮವು' ಎಂಬಂತೆ ಜನ ನಡೆದುಕೊಳ್ಳುವುದೇ ಕಡಿಮೆ. ನಲ್ಲಿಗಳಲ್ಲಿ ನೀರು ಹರಿಯುತ್ತಲೇ ಇರುತ್ತದೆ, ಜನ ಇರಲಿ, ಇಲ್ಲದಿರಲಿ ವಿದ್ಯುದ್ದೀಪ ಉರಿಯುತ್ತಲೇ ಇರುತ್ತದೆ, ಫ್ಯಾನು ತಿರುಗುತ್ತಲೇ ಇರುತ್ತದೆ. ನಾವು ಯಾಕೆ ನಿಲ್ಲಿಸಬೇಕು ಎಂಬ ಮನಃಸ್ಥಿತಿಯೇ ಎಲ್ಲರದೂ.



ದಿನಬೆಳಗಾದರೆ ಕಿವಿಗೆ ಮೊಬೈಲ್ ಫೋನ್ ಹಚ್ಚಿಕೊಂಡು ದ್ವಿಚಕ್ರವಾಹನ ಚಲಾಯಿಸುವ ಮಂದಿಯೇ ರಸ್ತೆ ತುಂಬ ಕಾಣಸಿಗುತ್ತಾರೆ. ಇದು ಕಾನೂನಿನ ಉಲ್ಲಂಘನೆಯೆಂದೋ ಇದರಿಂದ ತಮ್ಮೊಂದಿಗೆ ಓಡಾಡುವವರಿಗೆ ಕೂಡ ಅಪಾಯವೆಂದೋ ಇವರಿಗೆ ಒಂದಿನಿತೂ ಅನಿಸುವುದಿಲ್ಲ. ಇಂಥವರಿಗೆ ಬುದ್ಧಿವಾದ ಹೇಳಿಯೂ ಪ್ರಯೋಜನ ಇಲ್ಲ. ಇನ್ನು ಆಸ್ಪತ್ರೆ, ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಹಾರ್ನ್ ಮಾಡಬಾರದು, ಸಿಗ್ನಲ್ ಉಲ್ಲಂಘನೆ ಮಾಡಬಾರದು, ಹೆಲ್ಮೆಟ್-ಸೀಟ್ ಬೆಲ್ಟ್ ಇಲ್ಲದೆ ವಾಹನ ಚಲಾಯಿಸಬಾರದು, ವ್ಹೀಲಿಂಗ್ ಮಾಡಬಾರದು ಎಂಬಂತಹ ಸೂಚನೆಗಳೆಲ್ಲ ಇವರಿಗೆ ತಮಾಷೆಯ ವಿಷಯಗಳು. ತಾನಿಂದು ಹೆಲ್ಮೆಟ್ ಹಾಕದೆಯೇ ಹೇಗೆ ಇಡೀ ನಗರ ಸುತ್ತಾಡಿ ಬಂದೆ ಎಂಬುದೇ ಅನೇಕರಿಗೆ ಪೌರುಷದ ಸಂಕೇತ.

'ಧೂಮಪಾನ ನಿಷೇಧಿಸಿದೆ' ಎಂಬ ಫಲಕದ ಕೆಳಗೇ ನಿಂತುಕೊಂಡು ಸಿಗರೇಟ್ ಸೇದುವುದು, 'ಇಲ್ಲಿ ಮೂತ್ರ ವಿಸರ್ಜಿಸಿದರೆ ದಂಡ' ಎಂಬ ಬರಹದ ಮೇಲೆಯೇ ಮೂತ್ರ ವಿಸರ್ಜಿಸುವುದು ಈ ದಿನಗಳ ವಾಸ್ತವ. ನಾಗರಿಕ ಪ್ರಜ್ಞೆಯುಳ್ಳವರಿಂದ ಮಾತ್ರ ಸಾರ್ವಜನಿಕ ನೈತಿಕತೆಯನ್ನು ಪೋಷಿಸುವುದು ಸಾಧ್ಯ. ಒಂದು ನಗರ ಅಥವಾ ಊರಿನ ವ್ಯಕ್ತಿತ್ವವು ಅಲ್ಲಿನ ನಿವಾಸಿಗಳ ವ್ಯಕ್ತಿತ್ವ, ವರ್ತನೆ ಮತ್ತು ನಾಗರಿಕ ಪ್ರಜ್ಞೆಯನ್ನು ಪ್ರತಿಫಲಿಸುತ್ತದೆ. ಜನರಂತೆ ಊರು, ಊರಿನಂತೆ ಜನ.

ಲೇಖಕ: ಸಹಪ್ರಾಧ್ಯಾಪಕ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ತುಮಕೂರು ವಿಶ್ವವಿದ್ಯಾಲಯ

ವಾಚಕರ ವಾಣಿ

ಗೌರವ ಮೂಡಿಸುತ್ತದೆ ದೇಶದ ಮೂಲ ಸಿದ್ಧಾಂತ

'ಭಯೋತ್ಪಾದಕರು ಎಲ್ಲೇ ಇದ್ದರೂ ಅವರನ್ನು ಹುಡುಕಿ ಶಿಕ್ಷಿಸಲಾಗುವುದು' ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಮಾತಿನಂತೆ 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಮೂಲಕ ಉಗ್ರರ ನೆಲೆಗಳನ್ನು ಧ್ವಂಸಗೊಳಿಸಿರುವುದು ದೇಶವಾಸಿಗಳಿಗೆ ಸಮಾಧಾನ ತಂದಿದೆ. ಇದಕ್ಕೆ ಇಂಬು ಕೊಟ್ಟಂತೆ, ಈ ಕಾರ್ಯಾಚರಣೆಯ ಬಗ್ಗೆ ಜಾಗತಿಕ ಮಾಧ್ಯಮಗಳಿಗೆ ಮಾಹಿತಿ ನೀಡಿದ ಕರ್ನಲ್ ಸೋಫಿಯಾ ಖುರೇಷಿ ನಮ್ಮ ಬೆಳಗಾವಿ ಜಿಲ್ಲೆಯ ಸೊಸೆ ಎಂಬುದು ಕರ್ನಾಟಕದ ನಮಗೆಲ್ಲ ಮತ್ತಷ್ಟು ಹೆಮ್ಮೆಯ ಸಂಗತಿಯಾಗಿದೆ.

ಪಾಕಿಸ್ತಾನದಲ್ಲಿ ಅಸಂಖ್ಯಾತ ಮುಸ್ಲಿಮರನ್ನು ನಿರ್ದಾಕ್ಷಿಣ್ಯವಾಗಿ ಸಾಯಿಸುವ ಭಯೋತ್ಪಾದಕರು, ಪಹಲ್ಗಾಮ್‌ನಲ್ಲಿ ಮಾತ್ರ ಬರೀ ಹಿಂದೂಗಳನ್ನು ಗುರಿಯಾಗಿಸಿಕೊಂಡರು. ಈ ರೀತಿ ಮಾಡುವುದರಿಂದ ಈ ದೇಶದ ಹಿಂದೂಗಳಿಗೆ ಮುಸ್ಲಿಮರ ಮೇಲೆ ದ್ವೇಷ ಉಂಟಾಗಿ ಕೋಮುಗಲಭೆಗಳು ನಡೆಯಲಿ ಎಂಬ ಸಂಚು ರೂಪಿಸಿದ್ದರು. ಆದರೆ ಈ ದೇಶದ ಬಹುಸಂಖ್ಯಾತ ಹಿಂದೂಗಳು ಈ ಸಂಚಿಗೆ ಬಲಿಯಾಗಲಿಲ್ಲ. ಸೋಫಿಯಾ ಅವರಂತಹ ಮುಸ್ಲಿಂ ಹೆಣ್ಣುಮಗಳ ಹಾಗೂ ಆಕೆಯ ಕುಟುಂಬದವರ ಮಾತುಗಳನ್ನು ಕೇಳಿದಾಗ, 'ವಿವಿಧತೆಯಲ್ಲಿ ಏಕತೆ' ಎಂಬ ಭಾರತದ ಮೂಲ ಸಿದ್ಧಾಂತದ ಬಗ್ಗೆ ಮತ್ತಷ್ಟು ಗೌರವ ಮೂಡುತ್ತದೆ. ತಮಗೆ ವಹಿಸಿದ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನೆರವೇರಿಸುವುದೇ ನಿಜವಾದ ದೇಶಸೇವೆ ಎಂದು ಎಲ್ಲರೂ ಅರಿಯಬೇಕಾಗಿದೆ.

ಟಿ.ಜಯರಾಂ, ಕೋಲಾರ

ಕಸಾಪ ನಡಿಗೆ ಸಲ್ಲದ ಕಡೆಗೆ?

ಕನ್ನಡ ಸಾಹಿತ್ಯ ಪರಿಷತ್ತಿನ ಈ ಹಿಂದಿನ ಹಲವು ಅಧ್ಯಕ್ಷರು ಪರಿಷತ್ತಿಗೆ ಆರ್ಥಿಕ ಭದ್ರತೆಯನ್ನು ಒದಗಿಸುವ ಸಲುವಾಗಿ ಸಂಬಳವಿಲ್ಲದೆ ಕೆಲಸ ಮಾಡಿದರು. ದತ್ತಿನಿಧಿ ಸ್ಥಾಪಿಸಿ ಪ್ರೋತ್ಸಾಹ ನೀಡಿದರು. ಪ್ರತಿ ಕನ್ನಡಿಗನಿಂದ ಒಂದು ರೂಪಾಯಿಯನ್ನಾದರೂ ದೇಣಿಗೆ ಸಂಗ್ರಹಿಸಿ ಪರಿಷತ್ತನ್ನು ಬೆಳೆಸಬೇಕೆಂಬ ಕನಸು ಕಂಡು ಅಮೃತನಿಧಿ ಸ್ಥಾಪನೆ ಮಾಡಿದರು. ಪುಸ್ತಕ ಪ್ರಕಟಣೆ, ಮಾರಾಟ ಮಳಿಗೆ ಯೋಜನೆ ರೂಪಿಸಿದರು. ಸರ್ಕಾರದಿಂದಲೂ ಕಾಲಕಾಲಕ್ಕೆ ಅನುದಾನ ಪಡೆದರು. ಹಲವು ಯೋಜನೆಗಳಿಂದ ಹಣ ಮಾಡಿಟ್ಟಿದ್ದನ್ನು ಈಗಿನ ಮುಖ್ಯಸ್ಥರು ಬೈಲಾ ತಿದ್ದುಪಡಿ ಮೂಲಕ ತಮ್ಮ ಸ್ಥಾನವನ್ನು ಸಂಪುಟ ದರ್ಜೆಗೆ ಏರಿಸಿಕೊಂಡು ದಿನಭತ್ಯೆ, ಸಾರಿಗೆ ಭತ್ಯೆ, ದೂರವಾಣಿ ಭತ್ಯೆ, ಪೇಪರ್ ಬಿಲ್, ಜೊತೆಗೆ ವೇತನ ಪಡೆದು ಕರಗಿಸುತ್ತಿದ್ದಾರೆ ಎಂಬ ಆರೋಪಕ್ಕೆ ಗುರಿಯಾಗಿರುವುದು ಶೋಚನೀಯ. ವರ್ಷಕ್ಕೊಮ್ಮೆ ಸಮ್ಮೇಳನ ಮತ್ತು ದತ್ತಿನಿಧಿ ಕಾರ್ಯಕ್ರಮ ಬಿಟ್ಟರೆ ಪರಿಷತ್ತಿನಲ್ಲಿ ಬೇರೇನೂ ಕೆಲಸಗಳಾಗುತ್ತಿಲ್ಲ, ಬೈಲಾ ತಿದ್ದುಪಡಿ ಮೂಲಕ ಸರ್ವಾಧಿಕಾರಿ ಧೋರಣೆ ತಾಳಿದ್ದಾರೆ, ಆರ್ಥಿಕ ಅಶಿಸ್ತಿದೆ ಎಂಬ ಆರೋಪಗಳು ಸಾಹಿತ್ಯ ವಲಯದಲ್ಲಿವೆ. ಇದಕ್ಕೆ ಪ್ರತಿಯಾಗಿ, ಆರ್ಥಿಕ ಅಶಿಸ್ತು ಹಂಪನಾ ಕಾಲದಿಂದಲೂ ಇತ್ತೆಂದು, ತಮ್ಮ ಮೇಲಿರುವ ಆರೋಪಗಳನ್ನು ಸಮರ್ಥಿಸಿಕೊಂಡಿರುವ ಅಧ್ಯಕ್ಷರ ನಡೆ ಸರಿಯಲ್ಲ.

ಹಂಪನಾ ಅವರ ಮೇಲಿದ್ದ ಸಣ್ಣಪುಟ್ಟ ಆರೋಪಗಳ ಬಗ್ಗೆ ಶಾಮಸುಂದರ್ ಆಯೋಗ ರಚಿಸಿ ತನಿಖೆ ನಡೆಸಲಾಯಿತು. ಆರೋಪಗಳು ಏನೇ ಇದ್ದರೂ ಅವರ ಅವಧಿಯಲ್ಲಿ ಪರಿಷತ್ತು ಚೆನ್ನಾಗಿ ಕೆಲಸ ಮಾಡಿತ್ತು. ಸುಮಾರು 300ಕ್ಕೂ ಹೆಚ್ಚು ಮೌಲಿಕ ಪುಸ್ತಕಗಳನ್ನು ಮುದ್ರಿಸಿ ಕಡಿಮೆ ಬೆಲೆಯಲ್ಲಿ ಓದುಗರ ಕೈಸೇರುವಂತೆ ಮಾಡಿದರು. ಚಿನ್ನದ ಹಬ್ಬದ ನೆನಪಿಗಾಗಿ ಭವ್ಯ ಕಟ್ಟಡ ನಿರ್ಮಿಸಿದರು. ಅಂತರರಾಷ್ಟ್ರೀಯ ಸಮ್ಮೇಳನಗಳು ನಡೆದವು. ಸಮ್ಮೇಳನದಲ್ಲಿ ಎಲ್ಲ ವರ್ಗದ ಸಾಹಿತಿಗಳೂ ಒಳಗೊಳ್ಳುವಂತೆ ಮಾಡಿದರು. ಆಯೋಗದ ನಲವತ್ತು ವರ್ಷಗಳ ಹಳೆಯ ವರದಿಯನ್ನು ಈಗಿನ ಅಧ್ಯಕ್ಷರು ಕೆದಕುವ ಅಗತ್ಯವಿರಲಿಲ್ಲ. ಪರಿಷತ್ತಿನ ಹಿತದೃಷ್ಟಿಯಿಂದಲೇ ವರದಿಯ ಬಗ್ಗೆ ಸುದ್ದಿ ಮಾಡಿದ್ದರೆ, ಆಯ್ಕೆಯಾಗಿ ಬಂದ ತಕ್ಷಣ ಮಾಡಬೇಕಾಗಿತ್ತು. ಮೂರು ವರ್ಷಗಳಿಂದ ಸುಮ್ಮನಿದ್ದು, ಈಗ ವರದಿಯನ್ನು ಪ್ರಸ್ತಾಪಿಸುವುದು ಅಪರಾಧಿ ಪ್ರಜ್ಞೆಗೆ ತಾವೇ ಉತ್ತರ ಕೊಟ್ಟಂತೆ ಆಗುತ್ತದೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಸಂದಿಗ್ಧ ಸನ್ನಿವೇಶ: ಹೊಣೆ ಅರಿತು ನಡೆಯೋಣ

ಯುದ್ಧ ಮತ್ತು ಶಾಂತಿ ಪರಸ್ಪರ ವಿರುದ್ಧಾರ್ಥಕ ಪದಗಳಷ್ಟೆ. ಆದರೆ ಇಂದು, ಯುದ್ಧದಿಂದಲೇ ಶಾಂತಿ ಎಂಬ ಮಾನಸಿಕ ಘಟ್ಟಕ್ಕೆ ಜಗತ್ತು ಬಂದು ನಿಂತಿದೆ. ಭಾರತದ ಮಟ್ಟಿಗೆ ಹೇಳುವುದಾದರೆ, 1947ರಿಂದಲೂ ಪಾಕಿಸ್ತಾನ ತೋರುತ್ತಿರುವ ದುರ್ವರ್ತನೆಯಿಂದಾಗಿ, ನಿರ್ಣಾಯಕ ಯುದ್ಧದ ಮುಖೇನವೇ ಪಾಕಿಸ್ತಾನವನ್ನು ಸುಮ್ಮನಾಗಿಸಬೇಕಾದ ಅನಿವಾರ್ಯ ಸ್ಥಿತಿಗೆ ಭಾರತ ಇಂದು ಬಂದಂತಿದೆ. ಪ್ರಸಕ್ತ ಭಾರತ- ಪಾಕಿಸ್ತಾನ ಕದನವೂ ಸೇರಿದಂತೆ ಯಾವುದೇ ಯುದ್ಧವಾಗಲಿ ಈ ದಿನಮಾನದಲ್ಲಿ ನಿರ್ಣಾಯಕವಾಗಬಹುದೇ ಫಲಸ್ವರೂಪವಾಗಿ ಶಾಂತಿಯನ್ನು ಸ್ಥಾಪಿಸಬಹುದೇ ಎಂಬುದು ಚರ್ಚಾರ್ಹ ವಿಷಯ. ಎಳೆದುಕೊಂಡು ಹೋಗುತ್ತಿರುವ ರಷ್ಯಾ- ಉಕ್ರೇನ್ ಯುದ್ಧ, ಇಸ್ರೇಲ್- ಹಮಾಸ್ ಕದನ, ಸಿರಿಯಾ, ಸುಡಾನ್, ಮ್ಯಾನ್ಮಾರ್ ದೇಶಗಳ ಆಂತರಿಕ ಸಂಘರ್ಷ, ಇವು 'ಯುದ್ಧದಿಂದ ಶಾಂತಿ' ಸಾಧ್ಯತೆಯ ಬಗ್ಗೆ ಅನುಮಾನ ಹುಟ್ಟಿಸುತ್ತಿವೆ.

ಈಗ ನಡೆಯುತ್ತಿರುವ ಭಾರತ-ಪಾಕ್ ಸಂಘರ್ಷದಲ್ಲಿ ಭಾರತವೇನೋ ನ್ಯಾಯಪರವಾಗಿ, ಮಾತ್ರವಲ್ಲ ಬರೀ ಪ್ರತಿಕ್ರಿಯಾತ್ಮಕವಾಗಿ ಹೆಜ್ಜೆ ಇಡುತ್ತಿದೆ, ಸರಿಯೇ. ಆದರೆ, ಭಾರತವನ್ನು ದುರ್ಬಲಗೊಳಿಸುವ ದುರುದ್ದೇಶದಿಂದ ಪಾಕಿಸ್ತಾನದ ಹಿಂದಿರುವ ಚೀನಾ ಆಗಲೀ ಭಾರತದ ಪರ ತಾನೆಂದು ಹೇಳುತ್ತ, ಶಾಂತಿಮಂತ್ರ ಜಪಿಸುತ್ತಲೇ ಸ್ವಹಿತಾಸಕ್ತಿಯಿಂದಾಗಿ ಯುದ್ಧಗಳಿಗೆ ಪರೋಕ್ಷ ಪ್ರೋತ್ಸಾಹ ಕೊಡುತ್ತಿರುವ ಅಮೆರಿಕವಾಗಲೀ ಭಾರತ- ಪಾಕ್ ಸಂಘರ್ಷವನ್ನು ಶಾಶ್ವತ ಶಾಂತಿಯೆಡೆಗೆ ಸಾಗಲು ಬಿಟ್ಟಾವೇ? ಅನುಮಾನ.

ಇಂಥ ಸಂದಿಗ್ಧ ಸನ್ನಿವೇಶದಲ್ಲಿ, ಚೀನಾ ಮತ್ತು ಅಮೆರಿಕದ ಒಳ ಅಭಿಲಾಷೆಗಳಿಗೆ ತುತ್ತಾಗದೆ ಪಾಕಿಸ್ತಾನವನ್ನು ಬಗ್ಗುಬಡಿದು ಅಥವಾ ಶರಣಾಗುವಂತೆ ಮಾಡಿ ಕಾಶ್ಮೀರ ಸಮಸ್ಯೆಯನ್ನೂ ಉಗ್ರರ ಸಮಸ್ಯೆಯನ್ನೂ ನಿವಾರಿಸುವುದರ ಜೊತೆಗೆ, ಉಭಯ ದೇಶಗಳ ವಿಷಯದಲ್ಲಿ ಶಾಶ್ವತ ಶಾಂತಿಯನ್ನು ಸ್ಥಾಪಿಸಬಲ್ಲ ಚಾತುರ್ಯ ಹಾಗೂ ಪ್ರೌಢಿಮೆಯನ್ನು ಭಾರತ ಈಗ ತೋರಬೇಕಾಗಿದೆ. ಈ ವಿಷಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಮೇಲೆ ದೇಶವು ಸಂಪೂರ್ಣ ವಿಶ್ವಾಸ ಇಟ್ಟುಕೊಂಡಿದೆ. ನಾಗರಿಕರಾಗಿ ನಾವು ಈ ಸಮಯದಲ್ಲಿ ವ್ಯವಸ್ಥೆಗೆ ಸಹಕಾರ ನೀಡುವುದು, ಸ್ಥೈರ್ಯ ಹೊಂದಿರುವುದು, ಪ್ರಚೋದನಕಾರಿ ಹೇಳಿಕೆಗಳನ್ನು ನೀಡದಿರುವುದು, ಸುಳ್ಳು ಸುದ್ದಿಗಳನ್ನು ಹಬ್ಬಿಸದಿರುವಂತಹ ನಮ್ಮ ಹೊಣೆಗಳ ನಿರ್ವಹಣೆಯನ್ನು ತಪ್ಪದೇ ಮಾಡೋಣ.

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತ-ಪಾಕಿಸ್ತಾನ ಸಂಘರ್ಷ

ಎರಡೂ ರಾಷ್ಟ್ರಗಳಿಂದ ಡ್ರೋನ್‌ಗಳ ಬಳಕೆ

ಯುದ್ಧದಲ್ಲೀಗ ಡ್ರೋನ್ ಯುಗ

ಇಸ್ರೇಲ್‌ನ ಎಲ್ಬಿಟ್ ಸೆಕ್ಯೂರಿಟಿ ಸಿಸ್ಟಮ್ಸ್ ಅಭಿವೃದ್ಧಿ ಪಡಿಸಿರುವ ಸ್ಕೈಸ್ಟ್ರೈಕರ್
ಚಿತ್ರ: ಎಲ್ಬಿಟ್ ಸಿಸ್ಟಮ್ಸ್ ವೆಬ್‌ಸೈಟ್

● ಸೂರ್ಯನಾರಾಯಣ ವಿ.

'ಡ್ರೋನ್ ಸಮರವು 21ನೇ ಶತಮಾನದಲ್ಲಿ ನಡೆಯುವ ಸಂಘರ್ಷಗಳಿಗೆ ಹೊಸ ರೂಪ ನೀಡುತ್ತಿದೆ' ಎಂದು ದಶಕಗಳ ಹಿಂದೆ ತಜ್ಞರು ಅಭಿಪ್ರಾಯಪಟ್ಟಿದ್ದರು. ಮೂರು ವರ್ಷಗಳಿಂದ ನಡೆಯುತ್ತಿರುವ ರಷ್ಯಾ–ಉಕ್ರೇನ್ ಯುದ್ಧ, ಹಲವು ತಿಂಗಳುಗಳಿಂದ ಜಾರಿಯಲ್ಲಿರುವ ಇಸ್ರೇಲ್ –ಪ್ಯಾಲೆಸ್ಟೀನ್ , ಇಸ್ರೇಲ್–ಲೆಬನಾನ್, ಇಸ್ರೇಲ್–ಇರಾನ್ ಕಲಹಗಳು ಹಾಗೂ ಈಗ ಭಾರತ ಮತ್ತು ಪಾಕಿಸ್ತಾನದ ನಡುವೆ ಉಂಟಾಗಿರುವ ಸೇನಾ ಸಂಘರ್ಷವನ್ನು ಗಮನಿಸಿದರೆ ತಜ್ಞರ ಅಂದಿನ ಮಾತು ಅಕ್ಷರಶಃ ನಿಜವಾಗಿದೆ.

ರಕ್ಷಣಾ ಕ್ಷೇತ್ರವು ಆಧುನಿಕ ತಂತ್ರಜ್ಞಾನದ ಆವಿಷ್ಕಾರಗಳಿಗೆ ತೆರೆದುಕೊಂಡ ನಂತರ, ಶತ್ರುಗಳ ನೆಲೆಯನ್ನು ಗುರಿಯಾಗಿಸಿಕೊಂಡು ವೈಮಾನಿಕ ದಾಳಿ ಮಾಡಬಲ್ಲ ಆಧುನಿಕ ಯುದ್ಧವಿಮಾನಗಳು, ಕ್ಷಿಪಣಿಗಳು, ಡ್ರೋನ್‌ಗಳು ಸಮರಾಂಗಣದಲ್ಲಿ ಬಹುಮುಖ್ಯ ಪಾತ್ರ ನಿರ್ವಹಿಸುತ್ತಿವೆ. ಎರಡು ದೇಶಗಳ ನಡುವಿನ ಸೇನಾ ಸಂಘರ್ಷದಲ್ಲಿ ಯುದ್ಧವಿಮಾನ, ಕ್ಷಿಪಣಿಗಳ ಬಳಕೆ ಹಳೆಯದು. ಕೆಲವು ವರ್ಷಗಳಿಂದೀಚೆಗೆ ಲೇಸರ್ ನಿರ್ದೇಶಿತ ಕ್ಷಿಪಣಿಗಳು ಮತ್ತು ಬಾಂಬ್‌ಗಳು, ಡ್ರೋನ್‌ಗಳು ಮತ್ತು 'ಯುಎವಿ' ಎಂದು ಕರೆಸಿಕೊಳ್ಳುವ 'ಮಾನವರಹಿತ ವೈಮಾನಿಕ ವಾಹನಗಳು' ಸೇನಾ ಕಾರ್ಯಾಚರಣೆಗಳಲ್ಲಿ ಪ್ರಧಾನವಾಗಿ ಬಳಕೆಯಾಗುತ್ತಿವೆ.

ಪಹಲ್ಗಾಮ್ ಭಯೋತ್ಪಾದನಾ ದಾಳಿಗೆ ಪ್ರತೀಕಾರವಾಗಿ ಭಾರತವು ಇದೇ 7ರ (ಬುಧವಾರ) ನಸುಕಿನಲ್ಲಿ ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿರುವ ಉಗ್ರರ ಒಂಬತ್ತು ನೆಲೆಗಳನ್ನು ಗುರಿಯಾಗಿಸಿಕೊಂಡು ನಡೆಸಿದ್ದ 'ಆಪರೇಷನ್ ಸಿಂಧೂರ'ದಲ್ಲಿ ಬೆಂಗಳೂರಿನ ಕಂಪನಿಯು (ಆಲ್ಫಾ ಡಿಸೈನ್ ಟೆಕ್ನಾಲಜೀಸ್ ಲಿಮಿಟೆಡ್), ಇಸ್ರೇಲ್‌ನ ಕಂಪನಿಯ (ಎಲ್ಬಿಟ್ ಸೆಕ್ಯೂರಿಟಿ ಸಿಸ್ಟಮ್ಸ್) ನೆರವಿನೊಂದಿಗೆ ತಯಾರಿಸಿದ್ದ 'ಸ್ಕೈಸ್ಟ್ರೈಕರ್ ಸೂಸೈಡ್ ಡ್ರೋನ್' ಅಥವಾ 'ಕಾಮಿಕೇಜ್ ಡ್ರೋನ್' ಎಂದು ಕರೆಯಲಾಗುವ ಮಾನವರಹಿತ ವೈಮಾನಿಕ ವಾಹನಗಳನ್ನು (ಯುಎವಿ) ಭಾರತೀಯ ಸೇನೆಯು ಬಳಸಿತ್ತು. 'ಸಿಂಧೂರ' ಕಾರ್ಯಾಚರಣೆಗೆ ಪ್ರತಿಯಾಗಿ ಪಾಕಿಸ್ತಾನವು ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ರಾಜಸ್ಥಾನದಲ್ಲಿರುವ ವಿವಿಧ ಸೇನಾ ನೆಲೆಗಳನ್ನು ಗುರಿಯಾಗಿಸಿಕೊಂಡು ನಡೆಸಿದ ದಾಳಿಯಲ್ಲಿ ಡ್ರೋನ್‌ಗಳನ್ನು ದೊಡ್ಡ ಸಂಖ್ಯೆಯಲ್ಲಿ ಬಳಸಿತ್ತು. ಇದಕ್ಕೆ ಪ್ರತಿಯಾಗಿ ಭಾರತವು ಪಾಕಿಸ್ತಾನದ ಲಾಹೋರ್‌ನಲ್ಲಿರುವ ವಾಯು ರಕ್ಷಣಾ ವ್ಯವಸ್ಥೆ ಹಾಗೂ ಇನ್ನಿತರ ಸ್ಥಳಗಳನ್ನು ಗುರಿಯಾಗಿಸಿಕೊಂಡು ನಡೆಸಿದ ದಾಳಿಯಲ್ಲಿ ಡ್ರೋನ್‌ಗಳನ್ನು ದೊಡ್ಡ ಸಂಖ್ಯೆಯಲ್ಲಿ ಬಳಸಲಾಗಿದೆ. ಎರಡೂ ದೇಶಗಳು ದಾಳಿ ನಡೆಸಲು ಕ್ಷಿಪಣಿಗಳ ಜೊತೆಗೆ ಡ್ರೋನ್‌ಗಳನ್ನು ಗಣನೀಯವಾಗಿ ಬಳಸುತ್ತಿವೆ ಎಂದು ಹೇಳಲಾಗುತ್ತಿದೆ.

ಅಮೆರಿಕ, ರಷ್ಯಾ, ಇಸ್ರೇಲ್ ಸೇರಿದಂತೆ ಪಶ್ಚಿಮದ ರಾಷ್ಟ್ರಗಳಿಗೆ ಡ್ರೋನ್ ಯುದ್ಧವು ಹೊಸದಲ್ಲ. ಆದರೆ, ಏಷ್ಯಾದ ಮಟ್ಟಿಗೆ ಇದು ಹೊಸ ಸಮರ ವಿಧಾನ. ಎರಡು ದಿನಗಳ ಸಂಘರ್ಷದ ರೀತಿಯನ್ನು ನೋಡಿದಾಗ ಅಣ್ವಸ್ತ್ರ ಸಾಮರ್ಥ್ಯದ ಭಾರತ– ಪಾಕಿಸ್ತಾನಗಳು ಡ್ರೋನ್ ಸಮರಕ್ಕೆ ಇಳಿದಂತೆ ಕಾಣುತ್ತಿದೆ. ಭಾರತವು ಇಸ್ರೇಲ್ ನಿರ್ಮಿತ ಹಾರ್ಪಿ, ಹಾರೋಪ್ ಡ್ರೋನ್‌ಗಳನ್ನು ಬಳಸಿದೆ ಎಂದು ಹೇಳಲಾಗುತ್ತಿದ್ದು, ಪಾಕಿಸ್ತಾನವು ಟರ್ಕಿ ನಿರ್ಮಿತ ಡ್ರೋನ್‌ಗಳ ಮೂಲಕ ದಾಳಿ ನಡೆಸಿದೆ ಎಂದು ಭಾರತ ಹೇಳಿದೆ.

ಇಸ್ರೇಲ್ ನಿರ್ಮಿತ ಹಾರೋಪ್ ಡ್ರೋನ್ ಚಿತ್ರ:ಐಎಐ ವೆಬ್‌ಸೈಟ್

ಸೇನಾ ಡ್ರೋನ್‌ಗಳಿಗೆ ಎಂಟು ದಶಕಗಳಿಗೂ ಹೆಚ್ಚು ಇತಿಹಾಸವಿದೆ. ಎರಡನೇ ವಿಶ್ವ ಮಹಾಯುದ್ಧದಿಂದಲೇ ಈ ಡ್ರೋನ್‌ಗಳ ಅಭಿವೃದ್ಧಿ ಪಡಿಸುವ ಪ್ರಯತ್ನ ಆರಂಭವಾಗಿತ್ತು. 1970, 80ರ ದಶಕದಲ್ಲಿ ಇದಕ್ಕೆ ಒಂದು ಸ್ಪಷ್ಟ ರೂಪ ಸಿಕ್ಕಿದರೆ, 2000–2010ರ ನಡುವೆ ಅಮೆರಿಕ ಈ ತಂತ್ರಜ್ಞಾನದಲ್ಲಿ ಭಾರಿ ಪ್ರಗತಿ ಸಾಧಿಸಿತು. ನಂತರದ ವರ್ಷಗಳಲ್ಲಿ ಸೇನಾ ಕಾರ್ಯಾಚರಣೆಯಲ್ಲಿ ಇವುಗಳ ಬಳಕೆ ವ್ಯಾಪಕವಾಯಿತು. ಈಗ ಇವು ಎಲ್ಲ ರಾಷ್ಟ್ರಗಳ ಬತ್ತಳಿಕೆಯಲ್ಲಿನ ಪ್ರಮುಖ ಅಸ್ತ್ರವೇ ಆಗಿ ಹೋಗಿವೆ.

ದಾಳಿ ಗುರಿ ನಿಖರ, ಪರಿಣಾಮಕಾರಿ

ಈ ಮೊದಲು ರಕ್ಷಣಾ ಕ್ಷೇತ್ರದಲ್ಲಿ ಡ್ರೋನ್‌ಗಳನ್ನು ಕಾವಲು, ಮೇಲ್ವಿಚಾರಣೆ, ನಿಗಾ ಉದ್ದೇಶಕ್ಕೆ ಬಳಸಲಾಗುತ್ತಿತ್ತು. ಈಗ ಅವುಗಳನ್ನೇ ಬಾಂಬ್ ಆಗಿ ಪರಿವರ್ತಿಸಿ ದಾಳಿಗೂ ಬಳಸಲಾಗುತ್ತಿದೆ. ಡ್ರೋನ್‌ಗಳು/ಯುಎವಿಗಳನ್ನು ರಕ್ಷಣಾ ಭಾಷೆಯಲ್ಲಿ 'ಲಾಯಿಟರ್ ಮ್ಯೂನಿಶನ್ ಸಿಸ್ಟಮ್ಸ್ (ಎಲ್‌ಎಂಎಸ್) ಎಂದು ಕರೆಯಲಾಗುತ್ತದೆ. ಶತ್ರು ನೆಲೆಗಳ ಮೇಲೆ ನಿಖರವಾಗಿ ಗುರಿ ಇಟ್ಟು ವೈಮಾನಿಕ ದಾಳಿ ನಡೆಸುವ ಆಧುನಿಕ ತಂತ್ರಜ್ಞಾನ ಆಧಾರಿತ ವ್ಯವಸ್ಥೆ ಇದು. ಪುಟ್ಟ ವಿಮಾನವನ್ನು ಹೋಲುವ ಈ ಡ್ರೋನ್‌ಗಳು, ಆಗಸದಲ್ಲಿ ಸಂಚರಿಸುತ್ತಾ ನಿರ್ದಿಷ್ಟ ವ್ಯಾಪ್ತಿಯಲ್ಲಿರುವ ಶತ್ರುವಿನ ನೆಲೆಯನ್ನು ಪತ್ತೆ ಮಾಡುತ್ತವೆ. ನಂತರ ಅದರತ್ತ ಧಾವಿಸಿ ನಿಖರವಾಗಿ ಗುರಿಗೆ ಅಪ್ಪಳಿಸಿ ಸ್ಫೋಟಗೊಳ್ಳುತ್ತವೆ. ಹಾಗಾಗಿ, ಇವುಗಳನ್ನು 'ಸೂಸೈಡ್' ಅಥವಾ 'ಆತ್ಮಾಹುತಿ ಡ್ರೋನ್'ಗಳು ಎಂದೂ ಕರೆಯಲಾಗುತ್ತದೆ. ಇವುಗಳು ಡ್ರೋನ್‌ಗಳಂತೆ ಹಾರಾಡಬಲ್ಲವು. ದಾಳಿ ಸಂದರ್ಭದಲ್ಲಿ ಬಾಂಬ್‌ಗಳಂತೆ ಸಿಡಿಯಬಲ್ಲವು. ಮಾನವನ ಮಧ್ಯಪ್ರವೇಶವಿಲ್ಲದೆ, ಸ್ವಯಂಚಾಲಿತವಾಗಿ ಕಾರ್ಯನಿರ್ವಹಿಸುವುದು ಮಾತ್ರವಲ್ಲದೆ, ತನ್ನ ಗುರಿಯನ್ನು ಪತ್ತೆ ಹಚ್ಚಿ ಶತ್ರು ದೇಶದ ರೇಡಾರ್‌ನ ನಿಗಾದಿಂದ ತಪ್ಪಿಸಿಕೊಂಡು ನಿಖರವಾಗಿ ದಾಳಿ ಮಾಡಿ, ಶತ್ರು ನೆಲೆಯನ್ನು ಧ್ವಂಸ ಮಾಡುವ ಸಾಮರ್ಥ್ಯ ಹೊಂದಿರುವುದು ಈ ಡ್ರೋನ್‌ಗಳ ಹೆಗ್ಗಳಿಕೆ. ಹಾಗಾಗಿ ಸಮರಾಂಗಣದಲ್ಲಿ ಈಗ ಇವುಗಳಿಗೆ ಹೆಚ್ಚು ಬೇಡಿಕೆ. ಎಐ ತಂತ್ರಜ್ಞಾನ ಪ್ರವರ್ಧಮಾನಕ್ಕೆ ಬಂದ ನಂತರ ಈ ಡ್ರೋನ್‌ಗಳ ಕಾರ್ಯನಿರ್ವಹಣೆ ಇನ್ನಷ್ಟು ಪರಿಪಕ್ವಗೊಂಡಿದ್ದು, ದೇಶಗಳಿಗೆ ತಮ್ಮ ಶತ್ರುಗಳ ನೆಲೆಯನ್ನು ಅನ್ವೇಷಿಸುವುದು ಮತ್ತು ಅವುಗಳ ಮೇಲೆ ನಿಖರವಾಗಿ ದಾಳಿ ನಡೆಸುವುದು ಇನ್ನಷ್ಟು ಸುಲಭವಾಗಿದೆ. ಒಟ್ಟಾರೆಯಾಗಿ ಸೇನೆಗಳ ಕಾರ್ಯಾಚರಣೆಯನ್ನು ಈ ಡ್ರೋನ್‌ಗಳು ಇನ್ನಷ್ಟು ಪರಿಣಾಮಕಾರಿಯಾಗುವಂತೆ ಮಾಡುತ್ತಿವೆ.

ವಿರೋಧಿ ಪಾಳಯದ ವಾಯು ರಕ್ಷಣಾ ವ್ಯವಸ್ಥೆಯ ಕಣ್ತಪ್ಪಿಸಲೂ ಈ ಡ್ರೋನ್‌ಗಳನ್ನು ಬಳಸಲಾಗುತ್ತದೆ. ಅಂದರೆ, ಶತ್ರು ನೆಲೆ ಮೇಲೆ ಕ್ಷಿಪಣಿ ದಾಳಿ ನಡೆಸುವುದಕ್ಕೂ ಮುನ್ನ ಹಲವು ಡ್ರೋನ್‌ಗಳನ್ನು ಒಟ್ಟಾಗಿ ಹಾರಿಸಲಾಗುತ್ತದೆ. ವಿರೋಧಿಗಳ ರೇಡಾರ್‌ಗಳು ಈ ಡ್ರೋನ್‌ಗಳನ್ನು ಪತ್ತೆಹಚ್ಚಿ, ವಾಯು ರಕ್ಷಣಾ ವ್ಯವಸ್ಥೆಯ ಮೂಲಕ ಅವುಗಳನ್ನು ತಡೆಯುವುದರಲ್ಲಿ ನಿರತವಾಗಿದ್ದಾಗ ಕ್ಷಿಪಣಿ ಮೂಲಕ ದಾಳಿ ನಡೆಸುವ ತಂತ್ರವನ್ನು ಕಾರ್ಯಾಚರಣೆಯಲ್ಲಿ ಬಳಸಲಾಗುತ್ತದೆ. ಉಕ್ರೇನ್–ರಷ್ಯಾ ನಡುವಿನ ಸಂಘರ್ಷದಲ್ಲಿ ಎರಡೂ ರಾಷ್ಟ್ರಗಳು ಈ ತಂತ್ರವನ್ನು ಅನುಸರಿಸುತ್ತಾ ಬಂದಿವೆ.

ಇತ್ತೀಚೆಗೆ ಇಸ್ರೇಲ್, ರಷ್ಯಾ, ಉಕ್ರೇನ್, ಇರಾನ್ ಇಂತಹ ಡ್ರೋನ್‌ಗಳನ್ನು ಬಳಸಿವೆ. ಅಮೆರಿಕವು ಈ ಹಿಂದೆಯೇ ಇರಾಕ್, ಲಿಬಿಯಾ, ಪಾಕಿಸ್ತಾನ, ಸಿರಿಯಾ ಹಾಗೂ ಇತರ ರಾಷ್ಟ್ರಗಳಲ್ಲಿ ಭಯೋತ್ಪಾದಕರು ಮತ್ತು ಬಂಡುಕೋರರನ್ನು ಸದೆಬಡಿಯಲು ಬಳಸಿದೆ. ಫ್ರಾನ್ಸ್, ಬ್ರಿಟನ್, ಚೀನಾ, ಟರ್ಕಿ ಸೇರಿದಂತೆ ಹಲವು ರಾಷ್ಟ್ರಗಳ ಶಸ್ತ್ರಾಸ್ತ್ರ ಕೋಠಿಗಳಲ್ಲಿ ಇಂತಹ ಡ್ರೋನ್‌ಗಳು ಭಾರಿ ಸಂಖ್ಯೆಯಲ್ಲಿವೆ ಎಂದು ಹೇಳಲಾಗುತ್ತಿವೆ.

ಸಾಮರ್ಥ್ಯವೇನು?

ಈ ಡ್ರೋನ್‌ಗಳು 30 ನಿಮಿಷಗಳಿಂದ ಕೆಲವು ಗಂಟೆಗಳವರೆಗೂ ಕಾರ್ಯಾಚರಿಸುವ ಸಾಮರ್ಥ್ಯವನ್ನು ಹೊಂದಿದೆ. 40 ಕಿ.ಮೀನಿಂದ ಹಿಡಿದು 1,000 ಕಿ.ಮೀ ದೂರದವರೆಗೂ ಹಾರಾಟ ನಡೆಸಬಲ್ಲವು. ಉದಾಹರಣೆಗೆ, ಇಸ್ರೇಲ್ ನಿರ್ಮಿತ ಹಾರೋಪ್ ಡ್ರೋನ್ ಆರು ಗಂಟೆಗೂ ಹೆಚ್ಚು ನಿರಂತರವಾಗಿ ಆಗಸದಲ್ಲಿ ಕಾರ್ಯಾಚರಿಸುವುದರ ಜೊತೆಗೆ 1,000 ಕಿ.ಮೀ ದೂರದವರೆಗೂ ಸಂಚರಿಸಬಹುದು. ಭಾರತವು ಸೇರಿದಂತೆ ಹಲವು ರಾಷ್ಟ್ರಗಳು ಹೆಚ್ಚಿನ ಸಾಮರ್ಥ್ಯದ ಡ್ರೋನ್‌ಗಳ ಅಭಿವೃದ್ಧಿಯಲ್ಲಿ ತೊಡಗಿವೆ.

ಏನು ಲಾಭ?

ಈ ಡ್ರೋನ್‌ಗಳಿಂದ ನಿರ್ದಿಷ್ಟ ಗುರಿಯ ಮೇಲೆ ನಿಖರ ದಾಳಿ ಮಾಡಲು ಸಾಧ್ಯವಿರುವುದು ಒಂದು ಪ್ರಯೋಜನ. ಜತೆಗೆ, ಕ್ಷಿಪಣಿ, ಯುದ್ಧವಿಮಾನಗಳಿಗೆ ಹೋಲಿಸಿದರೆ ಈ ಡ್ರೋನ್‌ಗಳು ಅಗ್ಗ. ಇವುಗಳ ಖರೀದಿಗೆ ಹೆಚ್ಚು ಖರ್ಚು ಮಾಡಬೇಕಾಗಿಲ್ಲ. ತುಂಬಾ ದೂರದಲ್ಲಿರುವ ಗುರಿಗಳ ಮೇಲೆ ದಾಳಿ ನಡೆಸಲು ಇವುಗಳನ್ನು ಬಳಸಲು ಮತ್ತು ವಿರೋಧಿ ಪಾಳಯಕ್ಕೆ ದೊಡ್ಡ ಮಟ್ಟದ ಹಾನಿ ಉಂಟು ಮಾಡಲು ಇವುಗಳಿಂದ ಸಾಧ್ಯವಿಲ್ಲವಾದರೂ ಕಡಿಮೆ ವ್ಯಾಪ್ತಿಯಲ್ಲಿರುವ ಗುರಿಗಳನ್ನು ಸುಲಭವಾಗಿ ತಲುಪಬಹುದು. ಡ್ರೋನ್‌ಗಳು ಮಾನವರಹಿತವಾಗಿ ಕಾರ್ಯಾಚರಿಸುವುದರಿಂದ ಶತ್ರು ರಾಷ್ಟ್ರವು ಹೊಡೆದು ಉರುಳಿಸಿದರೂ ಜೀವಹಾನಿಯಾಗದು.

ವಾಯು ರಕ್ಷಣಾ ವ್ಯವಸ್ಥೆಯೂ ಮುಖ್ಯ

ಯುದ್ಧದಲ್ಲಿ ಡ್ರೋನ್ ಬಳಕೆ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಡ್ರೋನ್ ದಾಳಿಯನ್ನು ತಡೆಯುವಂತಹ ಸದೃಢ ವಾಯು ರಕ್ಷಣಾ ವ್ಯವಸ್ಥೆಯನ್ನು ಹೊಂದುವುದೂ ಮುಖ್ಯ.

'ಪಾಕಿಸ್ತಾನವು ಭಾರತವನ್ನು ಗುರಿಯಾಗಿಸಿಕೊಂಡು 300ರಿಂದ 400 ಡ್ರೋನ್‌ಗಳನ್ನು ದಾಳಿಗೆ ಬಳಸಿದೆ. ಪಾಕಿಸ್ತಾನದ ದುಸ್ಸಾಹಸವನ್ನು ಯುಎಎಸ್ ಗ್ರಿಡ್ ಮತ್ತು ವಾಯು ರಕ್ಷಣಾ ವ್ಯವಸ್ಥೆಯ ನೆರವಿನಿಂದ ತಡೆಯಲಾಗಿದೆ' ಎಂದು ಭಾರತ ಹೇಳಿದೆ.

ವಾಯು ರಕ್ಷಣಾ ವ್ಯವಸ್ಥೆ ಎಂದರೆ, ವೈಮಾನಿಕ ದಾಳಿಯನ್ನು ತಡೆಯಲು ಇರುವಂತಹ ಬಹು ಹಂತದ ಜಾಲ ವ್ಯವಸ್ಥೆ. ಭಾರತವು ದೇಶೀಯವಾಗಿ ಅಭಿವೃದ್ಧಿ ಪಡಿಸಿರುವ ಮತ್ತು ವಿದೇಶದಿಂದ ಆಮದು ಮಾಡಿಕೊಂಡಿರುವ ತಂತ್ರಜ್ಞಾನಗಳನ್ನು ಈ ಉದ್ದೇಶಕ್ಕೆ ಬಳಸುತ್ತಿದೆ.

ಪಾಕಿಸ್ತಾನ ನಡೆಸಿರುವ ಡ್ರೋನ್ ಮತ್ತು ಕ್ಷಿಪಣಿ ದಾಳಿಯನ್ನು ಹತ್ತಿಕ್ಕಲು ಭಾರತವು ರಷ್ಯಾದಿಂದ ಆಮದು ಮಾಡಿದ ಎಸ್–400 ಕ್ಷಿಪಣಿ ವ್ಯವಸ್ಥೆಯನ್ನು (ಎಸ್ 400 ಸುದರ್ಶನ ಚಕ್ರ) ಬಳಸಿದೆ. ಇದಲ್ಲದೇ 2,000 ಕಿ.ಮೀ ವ್ಯಾಪ್ತಿ ಸಾಮರ್ಥ್ಯವಿರುವ ಭೂಮಿಯ ವಾತಾವರಣದ ಹೊರಗೆ ಇರುವ ಕ್ಷಿಪಣಿಯನ್ನು ನಾಶ ಮಾಡಬಲ್ಲ ಬ್ಯಾಲಿಸ್ಟಿಕ್ ಕ್ಷಿಪಣಿ ರಕ್ಷಣಾ (ಬಿಎಂಡಿ) ವ್ಯವಸ್ಥೆಯನ್ನೂ ಭಾರತ ಹೊಂದಿದೆ.

ಈಗ ನಡೆಯುತ್ತಿರುವ ಸಂಘರ್ಷದಲ್ಲಿ ಭಾರತವು ತನ್ನ ವಾಯು ರಕ್ಷಣಾ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಬಳಸಲು ಯಶಸ್ವಿಯಾಗಿದ್ದು, ಪಾಕಿಸ್ತಾನವು ಅದರಲ್ಲಿ ವಿಫಲವಾಗಿದೆ ಎಂದು ಹೇಳಲಾಗುತ್ತಿದೆ.



ಎಸ್ 400 ಸುದರ್ಶನ ಚಕ್ರ

ವಿವೇಚನಾಯುಕ್ತ ನಿರ್ಣಯ ಮತ್ತು ಪ್ರಶ್ನಿಸುವ ಮನೋಧರ್ಮದ ಕಾರಣದಿಂದಾಗಿ ಎಲ್ಲರಿಗೂ ಕೇಂದ್ರಬಿಂದುವಾಗಿ ಕಾಣಿಸುತ್ತಿದ್ದ ರಾಬರ್ಟ್ ಪ್ರಿವೊಸ್ಟ್ ಅವರು ಶಾಂತ ಮತ್ತು ವಿನಮ್ರ ಮೂರ್ತಿ. ಜೀವನ ಪ್ರೀತಿ ಹೊಂದಿರುವ 69 ವರ್ಷ ವಯಸ್ಸಿನ ಅವರು ಕ್ಯಾಥೋಲಿಕಾ ಧರ್ಮಸಭೆಗೆ ಪೋಪ್ ಫ್ರಾನ್ಸಿಸ್ ಉತ್ತರಾಧಿಕಾರಿಯಾಗಿ ಆಯ್ಕೆಯಾಗಿದ್ದಾರೆ

ಮನುಷ್ಯ ಪ್ರೀತಿಯ ಸಂತ

ವ್ಯಕ್ತಿ

● ಮುಸ್ತಾಫ ಕೆ.ಎಚ್.

ಸಂತ ಪೀಟರ್ಸ್ ಬೆಸಿಲಿಕಾದ ಮಧ್ಯದ ಬಾಲ್ಕನಿಯಲ್ಲಿ 'ಹಬೆಮಾಸ್ ಪಾಪ್ಪಾನ್' (ಹೊಸ ಪೋಪ್ ಸಿಕ್ಕರು) ಎಂದು ಘೋಷಿಸುತ್ತಿದ್ದಂತೆಯೇ ಆ ಸಂತ ಕೆಂಪು ಮತ್ತು ಬಿಳಿ ಮಿಶ್ರಿತ ಧಾರ್ಮಿಕ ಉಡುಪನ್ನು ಧರಿಸಿ ನಿಧಾನಗತಿಯ ಹೆಜ್ಜೆ ಇಡುತ್ತಾ ಮುಂದೆ ಬಂದರು. ಸಾಗರೋಪಾದಿಯ ಜನಸಮುದಾಯದ ಕಡೆಗೆ ಕೈ ಬೀಸುತ್ತಲೇ ಪ್ರೀತಿಯ ಹೂಮಳೆಯನ್ನೂ ಸುರಿಸಿದರು. ಅವರ ಮಂದಹಾಸವನ್ನು ಕಂಡ ಜನಸಾಗರದಲ್ಲಿ ಹರ್ಷೋದ್ಗಾರದ ಅಲೆ ಎದ್ದಿತು. ಆಗ ಆ ಬಾಲ್ಕನಿಯಲ್ಲಿ ಕಾಣಿಸಿದ್ದು ಅಪ್ಪಟ ಮನುಷ್ಯ ಪ್ರೀತಿಯ ವ್ಯಕ್ತಿತ್ವವೊಂದರ ಅನಾವರಣ.

ತಮ್ಮ ಕೈಹಿಡಿದು ಸರಿದಾರಿಯಲ್ಲಿ ಮುನ್ನಡೆಸಲು ಬಂದ 'ಹೊಸ ಕುರುಬ'ನಲ್ಲಿ ಹೊಸ ಭರವಸೆಯ ಬೆಳಕು ಅಲ್ಲಿ ನೆರೆದಿದ್ದ ಜನಸ್ತೋಮಕ್ಕೆ ಕಂಡಿತು. 40 ಕೋಟಿಯಷ್ಟಿರುವ ಕ್ಯಾಥೋಲಿಕ್ ಕ್ರೈಸ್ತರ ಪರಮೋಚ್ಚ ಗುರು ಯಾರು ಎಂಬುದಕ್ಕೆ ಆ ಕ್ಷಣದಲ್ಲೇ ಉತ್ತರ ದಕ್ಕಿತು. ಅಮೆರಿಕದ ಕಾರ್ಡಿನಲ್ ರಾಬರ್ಟ್ ಪ್ರಿವೊಸ್ಟ್ ಎಂಬ ಅಪ್ಪಟ ಮನುಷ್ಯ ಪ್ರೀತಿಯ ವ್ಯಕ್ತಿಯನ್ನು 267ನೇ ನಾಯಕನನ್ನಾಗಿ ಆಯ್ಕೆ ಮಾಡಲಾಯಿತು. ಪೋಪ್ ಲಿಯೊ–14 ಎಂಬ ನಾಮಧೇಯವನ್ನೂ ಆ ನಾಯಕನಿಗೆ ನೀಡಲಾಯಿತು.

1955 ಸೆಪ್ಟೆಂಬರ್ 14ರಂದು ಮೆರಿಕದ ಷಿಕಾಗೊದಲ್ಲಿ ಜನಿಸಿದ ರಾಬರ್ಟ್ ಪ್ರಿವೊಸ್ಟ್ ಎಂಬ ಬಾಲಕನಿಗೆ ಪ್ರಾಥಮಿಕ ಶಿಕ್ಷಣ ಮುಗಿಸುವ ಹೊತ್ತಿಗೆ ಏಸು ಕ್ರಿಸ್ತ ಪಡಿಮೂಡಿಸಿದ ಧರ್ಮ ಸಮತೆಯ ಹಾದಿಯಲ್ಲಿ ಮುನ್ನಡೆದು ಬಡವರ ಸೇವೆಗಾಗಿ ಬದುಕನ್ನು ಮುಡಿಪಾಗಿಡಬೇಕೆಂಬ ಹಂಬಲ ಒಡಮೂಡಿತು. ಹಾದಿ ಕಾಣಿಸಿದ್ದು ಸಂತ ಅಗಸ್ಟೀನರ ಸಭೆಯನ್ನು ಸೇರುವುದಾಗಿತ್ತು. ಈ ಹಿಂದಿನ ಪೋಪ್ ಫ್ರಾನ್ಸಿಸ್‌ರಂತೆ ಬಡವರ ಸೇವೆ ಮಾಡುವ, ಜನರೊಂದಿಗೆ ಬೆರೆಯುವ, ಅವರಿಗೆ ಸ್ವಾಂತನ ಹೇಳುವ, ಭಕ್ತಿ ಮಾರ್ಗದಲ್ಲಿ ಕಾಯಕಯೋಗಿಯಂತೆ ಬದುಕುವ ಗುಣಶೀಲತೆಯನ್ನು ತಮ್ಮ ವ್ಯಕ್ತಿತ್ವದೊಳಗೆ ಜೀವತಂತುವಾಗಿ ತುಂಬಿಕೊಂಡರು.

1985ರಿಂದ 1998ರವರೆಗೆ ಪೆರು ದೇಶದಲ್ಲಿ ಪರಿಶ್ರಮದ ಮಿಷನರಿಯಾಗಿ ಸೇವೆಗೈದರು. ಧರ್ಮಕೇಂದ್ರದ ಗುರುವಾಗಿ, ಧರ್ಮಕ್ಷೇತ್ರದ ಅಧಿಕಾರಿಯಾಗಿ, ಗುರುಮಠದ ಬೋಧಕನಾಗಿ, ಧರ್ಮಾಧ್ಯಕ್ಷನಾಗಿ ಆರೋಗ್ಯ, ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದರು. ಬಾಲ್ಯದಲ್ಲೇ ಓದಿನಲ್ಲಿ ಮುಂದಿದ್ದ ರಾಬರ್ಟ್ ಪ್ರಿವೊಸ್ಟ್ ಅವರು ಮಿಲನೋವಾ ವಿಶ್ವವಿದ್ಯಾಲಯದಿಂದ, ಕ್ಯಾಥೋಲಿಕಾ ದೈವ ಶಾಸ್ತ್ರ ಸಂಘ ಹಾಗೂ ಸಂತ ಥಾಮಸರ ಗೊಂಥಿಪಿಕಲ್ ವಿಶ್ವವಿದ್ಯಾಲಯದಿಂದ ಪದವಿಗಳನ್ನು ಪಡೆದವರು.

ಜೀವನ ಪ್ರೀತಿಯ ಕಾರ್ಡಿನಲ್ ರಾಬರ್ಟ್ ಪ್ರಿವೊಸ್ಟ್ ಅವರಲ್ಲಿ ಧಾರ್ಮಿಕ ನಿಷ್ಠೆಯೂ ಅಧಿಕವಾಗಿತ್ತು, 1977ರಲ್ಲಿ ಗಣಿತ ಶಾಸ್ತ್ರದಲ್ಲಿ ಪದವಿ ಪಡೆದ ಅವರು ಜೊತೆಗೆ ತತ್ವಶಾಸ್ತ್ರವನ್ನೂ ಕಲಿತರು. ಗುರುಮಠಕ್ಕೆ ಸೇರಿದ ಅವರು, 1985ರಲ್ಲಿ ಅಂತಿಮ ವ್ರತ ವಾಗ್ದಾನವನ್ನು ಕೈಗೊಂಡರು. ದೈವಶಾಸ್ತ್ರ ಹಾಗೂ ಕಾನೂನು ಅಭ್ಯಾಸವನ್ನು ಮಾಡಿದ ಅವರು, ಧರ್ಮ ಮತ್ತು ಕಾನೂನುಗಳ ಕೈದೀವಿಗೆ ಹಿಡಿದು ಸಾಮಾಜಿಕ ಹಾಗೂ ಧಾರ್ಮಿಕ ಸಮತೋಲಿತ ಸಮಾಜವನ್ನು ರೂಪಿಸಲು ಸಾಧ್ಯ ಎಂಬ ದೂರದೃಷ್ಟಿಯ ಅಂಶವನ್ನು ಕಂಡುಕೊಂಡಂತೆ ತೋರುತ್ತದೆ.

ಕಾರ್ಡಿನಲ್ ರಾಬರ್ಟ್ ಪ್ರಿವೊಸ್ಟ್ ಅವರ ಸಂಶೋಧನಾ ಪ್ರಬಂಧವು ಸಂತ ಅಗಸ್ಟೀನರ ಸಭೆಯಲ್ಲಿ ಸ್ಥಳೀಯ ಪೂರ್ವಾಧಿಕಾರಿಯವರ ಪಾತ್ರಗಳನ್ನು ಶೋಧಿಸುವ ನೆಲೆಯಿಂದ ಕೂಡಿದೆ. ಧಾರ್ಮಿಕ ಆಡಳಿತದ ಬಗ್ಗೆ ಅವರಿಗೆ ಇರುವ ಆಳವಾದ ನಿರೂಪಣೆಗಳು ಅವರು ವಹಿಸಿಕೊಂಡಿರುವ ಧಾರ್ಮಿಕ ನಾಯಕತ್ವವನ್ನು ಮುನ್ನಡೆಸಲು ದಾರಿಬುತ್ತಿಯಾಗಿ ಸಿಕ್ಕಿವೆ ಎಂದು ಅವರ ಬೌದ್ಧಿಕ ಪ್ರೌಢಿಮೆಯನ್ನು ವ್ಯಾಖ್ಯಾನಿಸಲಾಗುತ್ತದೆ.

ಪೆರುವಿನಲ್ಲಿ ಸಂಭವಿಸಿದ ಪ್ರಕೃತಿ ವಿಕೋಪದ ವೇಳೆ ಧರ್ಮ ನಿರಪೇಕ್ಷವಾಗಿ ಎಲ್ಲರಿಗೂ ಸಹಾಯ ಮಾಡಬೇಕು ಎಂಬ ಉದ್ದೇಶದಿಂದ ತಾವೇ ಪ್ರಕೃತಿ ವಿಕೋಪ ನಡೆದ ಸ್ಥಳಕ್ಕೆ ಭೇಟಿ ನೀಡಿ ಔಷಧಿ, ವಸತಿ, ಅನ್ನ, ಆಹಾರಗಳನ್ನು ಒದಗಿಸಿ, ಅಂತಹ ಜನರೊಂದಿಗೆ ತಮ್ಮ ಬದುಕಿನ ಬಹುಭಾಗವನ್ನು ಕಳೆದವರು ಅವರು. ಮಾತೃಭಾಷೆಯೊಂದಿಗೆ ಸ್ಪ್ಯಾನಿಶ್, ಇಟಾಲಿಯನ್ ಭಾಷೆಯನ್ನೂ ಬಲ್ಲ ಅವರಿಗೆ ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಅಪಾರ ಒಲವಿದೆ.

ಪೆರು ದೇಶದಲ್ಲಿ ಮಿಷನರಿಯಾಗಿ ಅವರು ಸಲ್ಲಿಸಿದ ಸೇವೆ ಗಮನಾರ್ಹವಾದದ್ದು. ಅಡುಗೆ ತಯಾರಿಸಿ ಇತರರಿಗೆ ಉಣಬಡಿಸಿ ಸಂತೋಷಪಡುವ ರಾಬರ್ಟ್ ಪ್ರಿವೊಸ್ಟ್ ಅವರಿಗೆ ವಿಶಿಷ್ಟಬಗೆಯ ಆಹಾರ ಖಾದ್ಯಗಳನ್ನು ತಯಾರಿಸುವುದು ಬಲು ಪ್ರೀತಿಯ ಕಾರ್ಯ. ಪೆರುವಿನಲ್ಲಿ ನಡೆದ ಧರ್ಮಾಧ್ಯಕ್ಷರ ಸಮ್ಮೇಳನದಲ್ಲಿ ಮಹತ್ವದ ಪಾತ್ರವಹಿಸಿದ್ದ ಅವರು, ಪೆರು ದೇಶದ ರಾಜಕೀಯ ಪ್ರಕ್ಷುಬ್ಧ ವಾತಾವರಣದ ನಡುವೆ ಧಾರ್ಮಿಕ ಆಯಾಮದ ಸ್ಥಿರತೆಯೊಂದನ್ನು ನೀಡಿದವರು. ರಾಜಕೀಯ ಏರಿಳಿತಗಳ ನಡುವೆ ಧರ್ಮಸಭೆಯ ಏಕತೆ ಮತ್ತು ಸ್ಥಿರತೆಗೆ ಶ್ರಮಿಸುವಲ್ಲಿ ಅವರ ಪಾತ್ರ ಮುಖ್ಯವಾದದ್ದು.

ಸಂತ ಅಗಸ್ಟೀನ್ ಸಭೆಯ ಮುಖ್ಯಸ್ಥರಾಗಿ 12 ವರ್ಷಗಳ ಸೇವೆಯನ್ನು ಸಲ್ಲಿಸಿದ ನಂತರ 2015ರಿಂದ ಪೆರುದೇಶದ ಚಿಕ್ಲಾಯೋ ಧರ್ಮಕ್ಷೇತ್ರದ ಧರ್ಮಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. 2023ರಲ್ಲಿ ಪೋಪ್ ಫ್ರಾನ್ಸಿಸರ ಪ್ರೀತಿ, ವಿಶ್ವಾಸಕ್ಕೆ ಪಾತ್ರರಾಗಿ ಕಾರ್ಡಿನಲ್ ಪದವಿಗೆ ಏರಿದರು. ಬಿಷಪ್‌ಗಳ ಪ್ರಿಫೆಕ್ಟ್ ಡೈಕ್ಯಾಸ್ಟಿಯೋ ಆಗಿ ನೇಮಕಗೊಳ್ಳುವ ಮೂಲಕ ವಿಶ್ವದಾದ್ಯಂತ ಬಿಷಪ್‌ಗಳ ಆಯ್ಕೆಯನ್ನು ಮಾಡುವ ಮಾರ್ಗದರ್ಶಕರಾಗಿಯೂ ಅವರು ಕೆಲಸ ಮಾಡಿದರು.

ವಿವೇಚನಾಯುಕ್ತ ನಿರ್ಣಯ ಮತ್ತು ಪ್ರಶ್ನಿಸುವ ಮನೋಧರ್ಮದ ಕಾರಣದಿಂದಾಗಿ ಎಲ್ಲರಿಗೂ ಕೇಂದ್ರಬಿಂದುವಾಗಿ ಕಾಣಿಸುತ್ತಿದ್ದ ರಾಬರ್ಟ್ ಪ್ರಿವೊಸ್ಟ್ ಅವರು ಶಾಂತ ಮತ್ತು ವಿನಮ್ರ ಮೂರ್ತಿ.

ತಮ್ಮ ಜೀವನದ ಅಧಿಕ ಕಾಲವನ್ನು ಮಿಷನರಿಯಾಗಿ ಕಳೆದ 69 ವರ್ಷ ವಯಸ್ಸಿನ ಕಾರ್ಡಿನಲ್ ರಾಬರ್ಟ್ ಪ್ರಿವೊಸ್ಟ್ ಅವರು ಕ್ಯಾಥೋಲಿಕಾ ಧರ್ಮಸಭೆಗೆ ಪೋಪ್ ಫ್ರಾನ್ಸಿಸರ ಉತ್ತರಾಧಿಕಾರಿಯಾಗಿ ಆಯ್ಕೆಯಾಗಿದ್ದಾರೆ.

13ನೇ ಶತಮಾನದಲ್ಲಿ ಪೋಪ್ 14ನೇ ಅಲೆಕ್ಸಾಂಡರ್ ಅವರ ನಂತರ ಪೋಪ್ ಹುದ್ದೆಗೆ ಏರಿದ 2ನೇ ಅಗಸ್ಟೀನಿಯನ್ ಸಭೆಯ ವಕ್ತಾರರಾಗಿದ್ದಾರೆ ಅವರು.

ಪೋಪ್ ಹುದ್ದೆ ಅಲಂಕರಿಸುವ ಮುನ್ನ ಅವರು ವ್ಯಾಟಿಕನ್‌ನ ಅಧಿಕೃತ ಸುದ್ದಿ ಸಂಸ್ಥೆಯೊಂದಿಗೆ ಮಾತನಾಡುತ್ತಾ ಧರ್ಮಾಧ್ಯಕ್ಷರಾದವರು ಯುವರಾಜರಂತೆ ಸಿಂಹಾಸನದಲ್ಲಿ ಕುಳಿತಿರಬೇಕಾದವರಲ್ಲ. ಬದಲಾಗಿ ನೊಂದವರ, ಬಡವರ, ಶೋಷಣೆಗೆ ಒಳಪಟ್ಟವರ ಜೊತೆಯಲ್ಲಿ ನಿಂತು ಧರ್ಮದ ರಹದಾರಿ ಮೂಲಕ ಜನರನ್ನು ಉನ್ನತೀಕರಿಸುವ ಪ್ರಯತ್ನ ಮಾಡಬೇಕು ಎಂದಿದ್ದಾರೆ. ಮಾತ್ರವಲ್ಲ, ಮಿಷನರಿಯ ಸೇವೆ ತನ್ನೊಳಗಿನ ಧಾರ್ಮಿಕತ್ವವನ್ನು ಜೀವಂತಗೊಳಿಸಿದೆ ಎಂದು ನಂಬಿದ್ದಾರೆ. ಮಿಷನರಿ ಕಾರ್ಯಚಟುವಟಿಕೆಗಳು ವಿಶ್ವದಾದ್ಯಂತ ಮತ್ತಷ್ಟು ಚುರುಕುಗೊಳ್ಳುವ ಸಾಧ್ಯತೆ ಇದೆ. ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ವಲಯವು ಸಹ ಹೊಸ ಪೋಪ್ ಆಯ್ಕೆಯ ಮೂಲಕ ಹೊಸ ಸಂವತ್ಸರದ ಕಡೆಗೆ ಹೆಜ್ಜೆ ಇಡಲಿದೆ. ❖

ಪದಬಂಧ 6038

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕನ್ನಡಿಗರ ಹೆಮ್ಮೆಯ ನಾಡು (4)
3.ನೂರು ಹೆಜ್ಜೆ ನಡೆಯುವುದು (4)
5.ಬೆಳಗಿನ ಜಾವವಿದು (3)
6.ಎಳ್ಳು ನೀರು ಬಿಡುವಿಕೆ (4)
8.ಸ್ವಪ್ನವಿಲ್ಲಿ ನಿಜವಾಗಿದೆ (3)
10.ಮಾತೆ ತೋರಿರುವ ಪ್ರೀತಿ (3)
12.ತುಸುವೇ ಬೀರಿರುವ ಮಂದಹಾಸ (4)
15.ಅನೇಕ ಚಿಕ್ಕ ಚಿಕ್ಕ ಮನೆಗಳುಳ್ಳ ಆವಾರ (3)
16.ಸಾರವಾದ ಭಾಗದೊಂದಿಗಿರುವ ಕ್ಷೀರ (4)
17.ಈತ ಅತ್ಯಂತ ಪರಾಕ್ರಮಿ (4)

ಮೇಲಿಂದ ಕೆಳಕ್ಕೆ

1.ಬಣ್ಣದ ದಾರದಿಂದ ಬಟ್ಟೆಯ ಮೇಲೆ ಮಾಡಿದ ಹೆಣಿಗೆ ಅಲಂಕಾರ (3)
2.ಕನ್ನ ಹಾಕಿ ತೆಗೆದುಕೊಂಡಿರುವ ಚಿನ್ನ (3)
3.ಮುಂದಾಗುವುದನ್ನು ತಿಳಿಸುವುದು (3)
4.ಸೊಂಟಕ್ಕೆ ಸುತ್ತಿಕೊಳ್ಳುವ ಬಟ್ಟೆ (2)
7.ಯಾವ ಉದ್ದೇಶವೂ ಇಲ್ಲದ್ದು (5)
9.ಅಂತಶ್ಯಕ್ತಿಯಿದು (5)
11.ಅತಿಯಾದ ಬಯಕೆ (3)
12.ಇದು ಪಾಪಿಗಳ ಲೋಕ (3)
13.ನೆಲವನ್ನು ಅಗೆಯುವ ಕಬ್ಬಿಣದ ಸಾಧನ(3)
14.ಬೇಸಿಗೆಯ ತಾಪ (2)

1			2	■	3			4
	■	■	5			■	■	
6	7			■	8		9	■
■		■	■	■	■	■		■
■		■	■	■	■	■		■
■		■	■	■	■	■		■
■	10		11	■	12			13
14	■	■	15			■	■	
16				■	17			

6037ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಾತ್ಮಿದಾರ 3.ಪರಿಚ್ಛೇದ 5.ರಹಸ್ಯ 6.ಹಣವಂತ 8.ತಭೂ 9.ಲೋಪ 10.ಮಿತವ್ಯಯ 12.ಉದಾರಿ 16.ಕಡುಕೋಪ 17.ಮಕರಂದ

ಮೇಲಿಂದ ಕೆಳಕ್ಕೆ:
1.ಬಾಲ 2.ದಾಸೋಹ 3.ಪರಿಮಾಣ 4.ದಡಿ 5.ರಣಭೂಮಿ 6.ಹರೆಯ 7.ತಲೋದರಿ 11.ವ್ಯರ್ಥಾಲಾಪ 13.ದಾಕ್ಷಿಣ್ಯ 14.ಅಂಕ 15.ವಾದ

ಸುಡೊಕು 6422

4			3		8			
	7						8	
9					2			6
							6	
	2	6	9		7			
	4		6		1		7	5
			1					7
8		7					9	1
	9		8		6	4		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6421 ಸುಡೊಕು

1	5	8	4	3	2	9	7	6
3	7	6	9	8	1	2	4	5
9	2	4	6	5	7	1	8	3
8	9	5	2	7	4	6	3	1
4	6	1	5	9	3	7	2	8
7	3	2	1	6	8	5	9	4
5	4	9	3	2	6	8	1	7
2	1	7	8	4	5	3	6	9
6	8	3	7	1	9	4	5	2

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ ಶನಿವಾರ ಮೇ 10, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ತ್ರಯೋದಶಿ ಗಂ. 17-30 ನಕ್ಷತ್ರ: ಚಿತ್ರಾ ಗಂ.27-15 ಯೋಗ: ಸಿದ್ಧಿ(ಆಸ್ರಿಕ್) ಗಂ. 28-01 ಕರಣ: ತೈತಿಲ ಗಂ. 17-30, ಮೇಷ ಮಾಸದ 27 ನೇ ದಿನ.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-10 ಸೂರ್ಯಾಸ್ತ : 06-44
ಮುಸ್ಲಿಂ ದಿನಾಂಕ : 11 ಜುಲ್ಕಾಯದ್
ಅದೃಷ್ಟ ಸಂಖ್ಯೆ : 1, 7

ಮೇಷ: ಪ್ರೇಮಿಗಳ ಪಾಲಿಗೆ ಈ ದಿನ ಅತ್ಯುತ್ತಮ. ಸಕಾರಾತ್ಮಕವಾದ ಒಳ್ಳೆಯ ಕನಸುಗಳಿಗೆ ಪುನಃ ಜೀವ ಬಂದಂತೆ ಆಗಲಿದೆ. ದಿನಸಿ ವರ್ತಕರಿಗೆ ವ್ಯಾಪಾರ ಇರಲಿದೆ. ಜಗದ್ಗುರುವಿನ ಸೇವೆಯಿಂದ ಪುಣ್ಯ ಪ್ರಾಪ್ತಿ.

ವೃಷಭ: ಕೆಲಸ ಕಾರ್ಯದಲ್ಲಿ ಸಮಾನ ಮನಸ್ಕರರು ಸಿಗುವುದರಿಂದ ವ್ಯವಸ್ಥಿತವಾಗಿ ಮಾತುಕತೆ ನಡೆದು ಕಾರ್ಯಭಾರ ಸುಗಮ. ದೇವತಾ ಕಾರ್ಯಗಳತ್ತ ಗಮನ ನೀಡಿ. ಬಂಧುಗಳ ಆಗಮನ ಸಂತೋಷವನ್ನು ಉಂಟುಮಾಡುತ್ತದೆ.

ಮಿಥುನ: ವೃತ್ತಿ ರಂಗದಲ್ಲಿ ನಾನಾ ಮೂಲಗಳಿಂದ ಆದಾಯ ಬರಲಿದೆ. ಸ್ನೇಹಿತರ ಅನಿವಾರ್ಯ ಸಂಧರ್ಭಗಳಿಗೆ ಉದಾರ ಮನೋಭಾವ ತೋರುವಿರಿ. ಚಲನಚಿತ್ರ, ಧಾರವಾಹಿಯ ನಟಿಯರಿಗೆ ಅವಕಾಶಗಳು ದೊರೆಯಲಿವೆ.

ಕರ್ಕಾಟಕ: ವಿದ್ಯಾರ್ಥಿಗಳಿಗೆ ಶುಭಸಮಯ. ವ್ಯಾಪಾರಕ್ಕೆ ಎದುರಾದ ಎಲ್ಲಾ ಬಗೆಯ ಸಮಸ್ಯೆಗಳಿಂದ ಮುಕ್ತಗೊಳ್ಳುವ ಬಗ್ಗೆ ಅಧಿಕಾರಿಗಳಿಂದ ಸಲಹೆ ಸ್ವೀಕರಿಸಿ. ಶ್ರೀನಿವಾಸ ದೇವರ ದರ್ಶನ ಭಾಗ್ಯ ದೊರೆಯುವುದು.

ಸಿಂಹ: ಸಂಸಾರದ ಹುಳುಕನ್ನು ಹೊರಹೋಗದಂತೆ ಕಾಪಾಡಿಕೊಳ್ಳುವುದರಿಂದ ಗೌರವ ಉಳಿಸಿಕೊಳ್ಳಬಹುದು. ವಾಹನ ಮಾರಾಟ ಮಾಡುವವರಿಗೆ ಆದಾಯ ಬರಲಿದೆ. ರಫ್ತು ಮಾರಾಟದಿಂದ ಲಾಭವಿರುವುದು.

ಕನ್ಯಾ: ಸರ್ಕಾರಿ ಕೆಲಸದಲ್ಲಿ ಬಡ್ತಿ ದೊರೆತು ವರ್ಗಾವಣೆಯಾಗುವ ಸುದ್ದಿ ಖಚಿತಪಡಿಸಿಕೊಳ್ಳುವಿರಿ. ಎಲ್ಲಾ ಕೆಲಸಗಳಲ್ಲಿಯೂ ವೈಯಕ್ತಿಕ ಪ್ರಯತ್ನದಿಂದ ಕಾರ್ಯಗಳು ಸಿದ್ಧಿಸುವುದು. ಮರೆಗುಳಿತನ ಕಾಡಲಿದೆ.

ತುಲಾ: ಕೃಷಿಕರಿಗೆ ಉತ್ತಮ ಫಸಲು ದೊರಕುವ ಲಕ್ಷಣಗಳಿದ್ದು, ಮನಸ್ಸಿಗೆ ಹರ್ಷವಿರುವುದು. ಸಣ್ಣ ಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಸಹಾಯ ದೊರಕಲಿದೆ. ವ್ಯವಹಾರದ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುವ ಬಗ್ಗೆ ಯೋಚಿಸಿ.

ವೃಶ್ಚಿಕ: ಕೃಷಿಕರು ಪ್ರಯತ್ನಿಸಿದ ಹೊಸ ಕೆಲಸವು ಯಶಸ್ಸನ್ನು ಕೊಡುವುದು. ವಿದ್ಯುತ್‌ಚಾಲಿತ ಯಂತ್ರೋಪಕರಣಗಳ ಮಾರಾಟದ ಮಧ್ಯಸ್ಥಿಕೆಯಲಿ ಸ್ನೇಹಿತರ ಸಹಕಾರಗಳು ದೊರೆತು ಅಧಿಕ ಲಾಭ ಹೊಂದುವಿರಿ.

ಧನು: ಕುಶಾಗ್ರಮತಿಗಳ ಸಂಪರ್ಕದಿಂದ ಪ್ರಗತಿಪರ ಯೋಜನೆ ಇರುವುದು. ವಿದೇಶಿ ಉತ್ಪನ್ನಗಳ ಮಾರಾಟ ನಡೆಸುವವರಿಗೆ ವ್ಯವಹಾರದಲ್ಲಿ ಸಂಕಷ್ಟ ಎದುರಾಗಬಹುದು. ಋಣಬಾಧೆಯಿಂದ ಹೊರಬರುವ ಯೋಚನೆ ಮಾಡಿರಿ.

ಮಕರ: ಮದುವೆಯ ವಿಚಾರದಲ್ಲಿ ಮಗಳಿಗೆ ತಿಳಿವಳಿಕೆ ನೀಡಬೇಕಾಗಬಹುದು. ಉದ್ವೇಗಕ್ಕೆ ಒಳಗಾಗದೇ ಸಮಾಧಾನಚಿತ್ತದಿಂದ ಉದಾಹರಣೆ ಕೊಟ್ಟು ಮನಮುಟ್ಟುವಂತೆ ತಿಳಿಹೇಳಿ. ಯೋಗಾಭ್ಯಾಸದಿಂದ ಆರೋಗ್ಯ ವೃದ್ಧಿ.

ಕುಂಭ: ನಿರುದ್ಯೋಗಿಗಳು ಕೇಂದ್ರ ಸರ್ಕಾರದ ಹುದ್ದೆಯ ನೇಮಕಾತಿಯ ಬಗ್ಗೆ ಮಾಹಿತಿ ಕಲೆಹಾಕಿ ಪ್ರಯತ್ನಿಸಿ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಅಭ್ಯಾಸ ದಲ್ಲಿ ಗಮನವಿರಲಿ. ಲೆಕ್ಕ ಪರಿಶೀಲನೆ ಮಾಡಿ.

ಮೀನ: ಸಾಮಾಜಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ಹೆಸರು ಗಳಿಸಿಕೊಳ್ಳುವಿರಿ. ನೂತನ ದಂಪತಿಗೆ ಸಂತಾನ ಭಾಗ್ಯವಿರುವುದು. ಉದ್ಯೋಗ ಬದಲಾವಣೆಯ ವಿಚಾರವಾಗಿ ಮಾರ್ಗದರ್ಶಕರ ನುಡಿಯಂತೆ ನಡೆಯಿರಿ.

ಪಾಕ್ ದಾಳಿ ತಡೆಯಲು ವಿವಿಧ ಅಸ್ತ್ರಗಳ ನಿಯೋಜನೆ • ವಾಯುಪ್ರದೇಶ ರಕ್ಷಣೆಯಲ್ಲಿ ನಿರ್ಣಾಯಕ ಪಾತ್ರ

ಎಸ್–400, ಆಕಾಶ್ ಕ್ಷಿಪಣಿ ಪ್ರತ್ಯುತ್ತರ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಪಾಕಿಸ್ತಾನವು ಡ್ರೋನ್ ಹಾಗೂ ಕ್ಷಿಪಣಿಗಳಿಂದ ನಡೆಸುತ್ತಿರುವ ದಾಳಿಯನ್ನು ಹಿಮ್ಮೆಟ್ಟಿಸುವುದಕ್ಕಾಗಿ ಭಾರತೀಯ ಪಡೆಗಳು ಅತ್ಯಾಧುನಿಕ ಎಸ್–400 ಟ್ರಯಂಫ್ ಕ್ಷಿಪಣಿ ವ್ಯವಸ್ಥೆ, ಬರಾಕ್–8 ಹಾಗೂ ಆಕಾಶ್ ಕ್ಷಿಪಣಿಗಳನ್ನು ಬಳಸುತ್ತಿವೆ ಎಂದು ಉನ್ನತ ಮೂಲಗಳು ಶುಕ್ರವಾರ ಹೇಳಿವೆ.

ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ದಾಳಿಗೆ ಪ್ರತ್ಯುತ್ತರ ನೀಡಲು ಭಾರತವು ಮೇ 7ರಂದು 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಆರಂಭಿಸಿದೆ. ಪಾಕಿಸ್ತಾನ ಪಡೆಗಳು ಭಾರತದ ಮಿಲಿಟರಿ ನೆಲೆಗಳನ್ನು ಗುರಿಯಾಗಿಸಿ ಕ್ಷಿಪಣಿಗಳಿಂದ ದಾಳಿ ನಡೆಸುವ ಮೂಲಕ ಉದ್ವಿಗ್ನತೆ ಸೃಷ್ಟಿಗೆ ಯತ್ನಿಸಿದವು. ಆದರೆ, ಅತ್ಯಾಧುನಿಕ ಕ್ಷಿಪಣಿ ವ್ಯವಸ್ಥೆಗಳನ್ನು ಬಳಸುವ ಮೂಲಕ ಭಾರತವು ಶತ್ರು ಪಾಳಯದ ದಾಳಿಯನ್ನು ಸಮರ್ಥವಾಗಿ ತಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಡಿಆರ್‌ಡಿಒ ಅಭಿವೃದ್ಧಿಪಡಿಸಿರುವ, ಡ್ರೋನ್ ನಿರೋಧಕ ತಂತ್ರಜ್ಞಾನಗಳನ್ನು ಒಳಗೊಂಡ ಸಾಧನಗಳನ್ನು ಕೂಡ ಭಾರತದ ಪಡೆಗಳು ಬಳಸಿವೆ.

ಮೇ 7–8ರ ರಾತ್ರಿ ಆವಂತಿಪುರ, ಶ್ರೀನಗರ, ಜಮ್ಮು, ಪಠಾಣಕೋಟ್, ಅಮೃತಸರ, ಕಪೂರ್ತಲಾ, ಜಲಂಧರ, ಲುಧಿಯಾನಾ, ಆದಮ್‌ಪುರ, ಬಠಿಂಡಾ, ಚಂಡೀಗಢ, ನಾಲ್, ಫಲೋಡಿ, ಭುಜ್ ಮತ್ತಿತರ ಕಡೆಗಳಲ್ಲಿನ ಮಿಲಿಟರಿ ನೆಲಗಳನ್ನು ಗುರಿಯಾಗಿಸಿ ಪಾಕಿಸ್ತಾನ ಡ್ರೋನ್ ಮತ್ತು ಕ್ಷಿಪಣಿಗಳಿಂದ ದಾಳಿ ನಡೆಸಿತ್ತು.

ನಿರ್ದಿಷ್ಟ ಹಾಗೂ ಕ್ಷಿಪ್ರ ಪ್ರತ್ಯುತ್ತರ ನೀಡುವ ಮೂಲಕ, ಪಾಕಿಸ್ತಾನದ ಈ ಎಲ್ಲ ಪ್ರಯತ್ನಗಳನ್ನು ಭಾರತ ವಿಫಲಗೊಳಿಸಿದೆ. ಪಾಕಿಸ್ತಾನ ಉಡಾಯಿಸಿದ ಯಾವ ಡ್ರೋನ್/ಕ್ಷಿಪಣಿಯೂ ನಿರ್ದೇಶಿತ ತನ್ನ ಗುರಿ ತಲುಪಿಲ್ಲ ಎಂದೂ ಮೂಲಗಳು ಹೇಳಿವೆ.

ಉರಿಯಲ್ಲಿ ನಡೆದ ನಿರ್ದಿಷ್ಟ ದಾಳಿ ಹಾಗೂ ಬಾಲಾಕೋಟ್ ಮೇಲಿನ ವೈಮಾನಿಕ ದಾಳಿ ನಂತರ, ದೇಶದ ವಾಯುಪ್ರದೇಶ ರಕ್ಷಣೆ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಅತ್ಯಾಧುನಿಕ ಕ್ಷಿಪಣಿ/ಡ್ರೋನ್ ನಿರೋಧಕ ವ್ಯವಸ್ಥೆಗಳನ್ನು ಖರೀದಿಸಲಾಗಿದೆ ಎಂದು ಇವೇ ಮೂಲಗಳು ಹೇಳಿವೆ.

'ಭಾರತೀಯ ಸೇನೆಯು ಇಸ್ರೇಲ್ ನಿರ್ಮಿತ, ನೆಲದಿಂದ ಆಕಾಶಕ್ಕೆ ಚಿಮ್ಮುವ ಮಧ್ಯಮ ವ್ಯಾಪ್ತಿಯ ಕ್ಷಿಪಣಿ ವ್ಯವಸ್ಥೆಗಳು ಹಾಗೂ ದೇಶೀಯವಾಗಿ ನಿರ್ಮಿಸಲಾದ ಆಕಾಶ್ ಕ್ಷಿಪಣಿ ವ್ಯವಸ್ಥೆಗಳನ್ನು ಹೊಂದಿದೆ. ಇವುಗಳಲ್ಲದೇ, ಕಡಿಮೆ ವ್ಯಾಪ್ತಿಯಲ್ಲಿನ ಗುರಿ ನಾಶ ಮಾಡಬಲ್ಲ ರಕ್ಷಣಾ ವ್ಯವಸ್ಥೆ(ವಿಶಾರ್ಡ್ಸ್) 'ಇಗ್ಲಾ–ಎಸ್', 'ಕ್ಯೂಆರ್‌ಎಸ್‌ಎಎಂ' ಕ್ಷಿಪಣಿಗಳನ್ನು ಹೊಂದಿದೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಸೇನೆ ಹಾಗೂ ವಾಯುಪಡೆ, ಆಕಾಶ್ ಕ್ಷಿಪಣಿಗಳನ್ನು ಹೊಂದಿವೆ. ಪಾಕಿಸ್ತಾನಕ್ಕೆ ಹೊಂದಿಕೊಂಡ ಗಡಿ ಉದ್ದಕ್ಕೂ ಈ ಕ್ಷಿಪಣಿ ವ್ಯವಸ್ಥೆಗಳನ್ನು ನಿಯೋಜನೆ ಮಾಡಲಾಗಿದೆ' ಎಂದು ರಕ್ಷಣಾ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ. ಪಾಕಿಸ್ತಾನದ ಡ್ರೋನ್‌ಗಳನ್ನು ನಿಷ್ಕ್ರಿಯಗೊಳಿಸುವುದಕ್ಕಾಗಿ ಜಾಮರ್‌ಗಳನ್ನು ಕೂಡ ಬಳಸಲಾಗುತ್ತಿದೆ ಎಂದಿದ್ದಾರೆ.

ಎಸ್–400 ಕ್ಷಿಪಣಿ ವ್ಯವಸ್ಥೆ

ರಷ್ಯಾ ಅಭಿವೃದ್ಧಿಪಡಿಸಿರುವ ಎಸ್–400 ಕ್ಷಿಪಣಿ-ವ್ಯವಸ್ಥೆಯು ಶತ್ರು ಪಾಳಯ ನಡೆಸುವ ವೈಮಾನಿಕ ದಾಳಿ ತಡೆಯುವ ಪ್ರಮುಖ ಆಯುಧವಾಗಿ ಹೊರಹೊಮ್ಮಿದೆ. ವಿಶಿಷ್ಟ ರೇಡಾರ್ ವ್ಯವಸ್ಥೆಯ ಸಂಯೋಜನೆಯೊಂದಿಗೆ ಕಾರ್ಯನಿರ್ವಹಿಸುವ ಈ ಕ್ಷಿಪಣಿಯು 600 ಕಿ.ಮೀ ದೂರದ ವರೆಗಿನ ಗುರಿಯನ್ನು ನಾಶ ಮಾಡಬಲ್ಲದು.

ಎದುರಾಗುವ ಅಪಾಯದ ಸ್ವರೂಪವನ್ನು ಆಧರಿಸಿ, 120 ಕಿ.ಮೀ., 200 ಕಿ.ಮೀ. 250 ಕಿ.ಮೀ. ಹಾಗೂ 380 ಕಿ.ಮೀ. ದೂರದ ವರೆಗಿನ ಗುರಿಯನ್ನು ತಲುಪುವ ಸಾಮರ್ಥ್ಯದ ಕ್ಷಿಪಣಿಗಳನ್ನು ಈ ವ್ಯವಸ್ಥೆ ಹೊಂದಿದೆ.

ಬರಾಕ್–8 ಕ್ಷಿಪಣಿ

ವಾಯು, ಭೂಮೇಲ್ಮೈ ಹಾಗೂ ಸಮುದ್ರದ ಮೂಲಕ ಎದುರಾಗುವ ಬೆದರಿಕೆಗಳನ್ನು ನಿಭಾಯಿಸುವ ಸಾಮರ್ಥ್ಯ ಹೊಂದಿದೆ. ಅತ್ಯಾಧುನಿಕ ಡಿಜಿಟಲ್ ರೇಡಾರ್, ಲಾಂಚರ್‌ಗಳು, ಕಮಾಂಡ್ ಮತ್ತು ಕಂಟ್ರೋಲಿಂಗ್ ವ್ಯವಸ್ಥೆ, ಡಾಟಾ ಲಿಂಕ್ ಮತ್ತು ವಿಶಾಲ ವ್ಯಾಪ್ತಿಯ ಸಂಪರ್ಕ ವ್ಯವಸ್ಥೆ ಹೊಂದಿರುವ ಈ ಕ್ಷಿಪಣಿ ಯಾವುದೇ ವಾತಾವರಣದಲ್ಲಿ ಹಗಲು, ರಾತ್ರಿ ಎನ್ನದೇ ಏಕಕಾಲದಲ್ಲಿ ವಿವಿಧ ಕಡೆ ನಿಗಾ ವಹಿಸುವ ಸಾಮರ್ಥ್ಯವಿದೆ

ಆಕಾಶ್ ಕ್ಷಿಪಣಿ

ಹೊಸ ತಲೆಮಾರಿನ ಆಕಾಶ್, ಭೂಮೇಲ್ಮೈಯಿಂದ ಆಕಾಶದತ್ತ ದಾಳಿ ಮಾಡುವ ಕ್ಷಿಪಣಿ ವ್ಯವಸ್ಥೆಯಾಗಿದೆ. ಕಡಿಮೆ ಎತ್ತರದಲ್ಲಿ ಅತಿ ವೇಗದಿಂದ ಹಾರಾಟ ನಡೆಸುವ, ಮಾನವರಹಿತ ವೈಮಾನಿಕ ಗುರಿಯನ್ನು (ಯುಎವಿ) ಅತ್ಯಂತ ನಿಖರವಾಗಿ ಹೊಡೆದುರುಳಿಸುವ ಸಾಮರ್ಥ್ಯವನ್ನು ಈ ಕ್ಷಿಪಣಿ ಹೊಂದಿದೆ.

'ಪ್ರಾದೇಶಿಕ ಸೇನೆ' ಸಜ್ಜುಗೊಳಿಸಲು ಸೂಚನೆ

ನವದೆಹಲಿ (ಪಿಟಿಐ): ದೇಶದ ಪ್ರಾದೇಶಿಕ ಸೇನೆಯಲ್ಲಿ (ಟಿಎ) ನೋಂದಣಿ ಮಾಡಿಕೊಂಡಿರುವ ಪ್ರತಿಯೊಬ್ಬ ಅಧಿಕಾರಿ ಮತ್ತು ವ್ಯಕ್ತಿಯನ್ನು ಸೇನೆಯ ನೆರವಿಗೆ ಬರುವಂತೆ ಅಥವಾ ಅದಕ್ಕೆ ಪೂರಕವಾಗಿ ಸಜ್ಜುಗೊಳಿಸುವಂತೆ ಕೇಂದ್ರ ಸರ್ಕಾರವು ಸೇನಾ ಮುಖ್ಯಸ್ಥರಿಗೆ ಸೂಚನೆ ನೀಡಿದೆ.

ಭಾರತ– ಪಾಕಿಸ್ತಾನ ನಡುವೆ ಸೇನಾ ಸಂಘರ್ಷ ನಡೆಯುತ್ತಿರುವ ಸಂದರ್ಭದಲ್ಲಿ ಸರ್ಕಾರ ಈ ನಿಟ್ಟಿನಲ್ಲಿ ಸೂಚಿಸಿದೆ. ಈ ನಿಟ್ಟಿನಲ್ಲಿ ರಕ್ಷಣಾ ಸಚಿವಾಲಯದ ಸೇನಾ ವ್ಯವಹಾರಗಳ ಇಲಾಖೆಯು ಮೇ 6ರಂದು ಆದೇಶ ಹೊರಡಿಸಿದೆ.

ಪ್ರಾದೇಶಿಕ ಸೇನೆಯು ಸೇನೆಯೊಂದಿಗೆ ಪೂರ್ಣವಾಗಿ ಸಂಯೋಜಿಸಲ್ಪಟ್ಟಿರುವ ಘಟಕವಾಗಿದೆ. ಯುದ್ಧ ಅಥವಾ ಸಂಘರ್ಷಗಳ ಸಂದರ್ಭದಲ್ಲಿ ಸೇವೆ ಸಲ್ಲಿಸಿ ಮಹತ್ವದ ಕೊಡುಗೆಗಳನ್ನು ನೀಡಿದ ಈ ಘಟಕದ ಹಲವು ವ್ಯಕ್ತಿಗಳು ಶೌರ್ಯ ಮತ್ತು ವಿಶಿಷ್ಟ ಸೇವಾ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

ಪ್ರಾದೇಶಿಕ ಸೇನೆಯು 1949ರ ಅಕ್ಟೋಬರ್ 9ರಂದು ಸ್ಥಾಪನೆಯಾಗಿದ್ದು, 75 ವರ್ಷಗಳನ್ನು ಪೂರೈಸಿದೆ. ಯುದ್ಧದ ಸಮಯದಲ್ಲಿ ದೇಶಕ್ಕೆ ಸೇವೆ ಸಲ್ಲಿಸುವ ಹಾಗೂ ಮಾನವೀಯತೆ ಮತ್ತು ಪರಿಸರ ಸಂರಕ್ಷಣಾ ಕಾರ್ಯಗಳನ್ನು ಕೈಗೊಳ್ಳುವ ಮಹತ್ವದ ಉದ್ದೇಶವನ್ನು ಇದು ಹೊಂದಿದೆ.

ಆಂಧ್ರದ ಯೋಧ ಸಾವು

ಮುರಳಿ ನಾಯ್ಕ್

ಹೈದರಾಬಾದ್: ಪಾಕ್ ಪಡೆಗಳ ಜೊತೆಗೆ ನಡೆದ ಗುಂಡಿನ ಚಕಮಕಿಯಲ್ಲಿ ಆಂಧ್ರಪ್ರದೇಶದ ಶ್ರೀಸತ್ಯಸಾಯಿ ಜಿಲ್ಲೆ ಕಲ್ಲಿತಾಂಡಾ ಬುಡಕಟ್ಟ ಪ್ರದೇಶದ ನಿವಾಸಿ, ಯೋಧ ಮುರಳಿ ನಾಯ್ಕ್ ಮೃತಪಟ್ಟಿದ್ದಾರೆ.

27 ವರ್ಷ ವಯಸ್ಸಿನ, ಅವಿವಾಹಿತರಾಗಿದ್ದ ಇವರು ಕೆಲದಿನಗಳ ಹಿಂದಷ್ಟೇ ಭಾರತದ ಗಡಿಯಲ್ಲಿ ಸೇವೆಗೆ ನಿಯೋಜಿತರಾಗಿದ್ದರು. ಪಾರ್ಥೀವ ಶರೀರ ಶನಿವಾರ ಗ್ರಾಮಕ್ಕೆ ತಲುಪವ ನಿರೀಕ್ಷೆಗಳಿವೆ.

ಅಗ್ನಿವೀರರಾಗಿ ಸೇನೆಗೆ ಸೇರ್ಪಡೆಗೊಂಡಿದ್ದ ಅವರು ನಾಸಿಕ್‌ನಲ್ಲಿ ತರಬೇತಿ ಪಡೆದಿದ್ದರು. ಇವರು, ಕೃಷಿ ಕೂಲಿ ಕಾರ್ಮಿಕರಾದ ಮುದವತ್ ಶ್ರೀರಾಮ್ ನಾಯ್ಕ್, ಜ್ಯೋತಿಭಾಯಿ ಅವರ ಏಕೈಕ ಪುತ್ರ.

ಸಾವಿನ ಸುದ್ದಿ ತಿಳಿದಂತೆ ತಾಯಿಯ ರೋದನ ಮುಗಿಲುಮುಟ್ಟಿತ್ತು. ಮೃತ ಯೋಧನ ಮನೆಗೆ ರಾಜ್ಯದ ಸಚಿವೆ ಎಸ್.ಸವಿತಾ ಭೇಟಿ ನೀಡಿದ್ದು, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು.

ದಿನದ ಬೆಳವಣಿಗೆಗಳು

ಅಮೃತಸರದ ಸ್ವರ್ಣಮಂದಿರ

- ಜಮ್ಮು ವಲಯದಲ್ಲಿ ಶುಕ್ರವಾರ ರಾತ್ರಿ ಸ್ಫೋಟದ ಸದ್ದು ಕೇಳಿಬಂದಿದ್ದು, ಇಡೀ ನಗರವನ್ನು ಸತತ ಎರಡನೇ ದಿನವೂ ಬ್ಲ್ಯಾಕ್‌ಔಟ್ ಮಾಡಲಾಯಿತು
- ಪಂಜಾಬ್‌ನ ಪಠಾಣ್‌ಕೋಟ್, ಅಮೃತಸರ ಮತ್ತು ಫಿರೋಜ್‌ಪುರದಲ್ಲೂ ಸ್ಫೋಟದ ಸದ್ದು ಕೇಳಿದೆ
- ಮಧ್ಯಪ್ರದೇಶದಲ್ಲಿ ನೋಂದಣಿ ಆಗಿರುವ 7.5 ಲಕ್ಷ ಟ್ರಕ್‌ಗಳು ಭಾರತೀಯ ಸೇನೆಯೊಂದಿಗೆ ದೇಶ ಸೇವೆಗಾಗಿ ಲಭ್ಯವಿರಲಿವೆ (ಉಚಿತವಾಗಿ) ಎಂದು ಅಖಿಲ ಭಾರತ ಮೋಟಾರ್ ಟ್ರಾನ್ಸ್‌ಪೋರ್ಟ್ ಕಾಂಗ್ರೆಸ್ ಹೇಳಿದೆ. ಈ ಸಂಬಂಧ ಅದು ಪ್ರಧಾನಿ ಕಚೇರಿಗೆ ಪತ್ರವನ್ನೂ ರವಾನಿಸಿದೆ.
- ಕೇಂದ್ರ ಮೀಸಲು ಪೊಲೀಸ್ ಪಡೆಯು (ಸಿಆರ್‌ಪಿಎಫ್) ತನ್ನ ಸಿಬ್ಬಂದಿಯ ವರ್ಗಾವಣೆ ಮತ್ತು ನಿಗದಿತ ತರಬೇತಿ ಕೋರ್ಸ್‌ಗಳನ್ನು ಮುಂದೂಡಿದೆ.
- ಬಿಎಸ್‌ಎಫ್ ಮತ್ತು ಸೇನೆ ಜತೆಗೆ ಕಾರ್ಯ ನಿರ್ವಹಿಸಲು ತನ್ನ 12 ಘಟಕಗಳು ಮತ್ತು 2,400 ಸಿಬ್ಬಂದಿಯನ್ನು ಜಮ್ಮು ಮತ್ತು ಕಾಶ್ಮೀರಕ್ಕೆ ರವಾನಿಸಲಾಗುವುದು ಎಂದು ಸಿಆರ್‌ಪಿಎಫ್ ಹೇಳಿದೆ.
- ಮೊಹಾಲಿಯಲ್ಲಿ ಸೂರ್ಯಾಸ್ತದಿಂದ ಸೂರ್ಯೋದಯದವರೆಗೆ ಸಿನಿಮಾ ಹಾಲ್‌ಗಳು, ಶಾಪಿಂಗ್ ಮಾಲ್‌ಗಳನ್ನು ಮುಂದಿನ ಆದೇಶದವರೆಗೆ ಬಂದ್ ಮಾಡುವಂತೆ ಪಂಜಾಬ್ ಸರ್ಕಾರ ನಿರ್ದೇಶಿಸಿದೆ. ರಸ್ತೆ ದೀಪಗಳು, ಹೊರಾಂಗಣದ ದೀಪಗಳನ್ನು ಆರಿಸುವಂತೆಯೂ ಸೂಚಿಸಿದೆ.
- ತೆಲಂಗಾಣದಲ್ಲಿ ಕಾಂಗ್ರೆಸ್‌ನ ಶಾಸಕರು (ಎಂಎಲ್‌ಎ, ಎಂಎಲ್‌ಸಿ) ತಮ್ಮ ಒಂದು ತಿಂಗಳ ವೇತನವನ್ನು ರಾಷ್ಟ್ರೀಯ ರಕ್ಷಣಾ ನಿಧಿಗೆ (ಎನ್‌ಡಿಎಫ್) ದೇಣಿಗೆ ನೀಡುವ ಪ್ರಸ್ತಾವಕ್ಕೆ ಮುಖ್ಯಮಂತ್ರಿ ಎ. ರೇವಂತ ರೆಡ್ಡಿ ಸಮ್ಮತಿ ಸೂಚಿಸಿದ್ದಾರೆ.
- ನಿಷೇಧಿತ ಜಮಾತ್-ಉಲ್-ಮುಜಾಹಿದ್ದೀನ್ ಬಾಂಗ್ಲಾದೇಶ (ಜೆಎಂಬಿ) ಸಂಘಟನೆಯ ಇಬ್ಬರು ಶಂಕಿತರನ್ನು ಪಶ್ಚಿಮ ಬಂಗಾಳದ ವಿಶೇಷ ಕಾರ್ಯಪಡೆ ಬಿರ್‌ಭೂಮ್ ಜಿಲ್ಲೆಯಲ್ಲಿ ಬಂಧಿಸಿದೆ.

ಜನರ ಸುರಕ್ಷತೆ, ಆಸ್ತಿ ರಕ್ಷಣೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಜನರ ಸುರಕ್ಷತೆ ಮತ್ತು ಸಾರ್ವಜನಿಕ ಆಸ್ತಿಯ ರಕ್ಷಣೆಗೆ ಅಗತ್ಯ ಕ್ರಮ ವಹಿಸಲು ಸ್ಥಳೀಯ ಆಡಳಿತಗಳಿಗೆ ನಿರ್ದೇಶಿಸಬೇಕು ಎಂದು ಕೇಂದ್ರ ಸರ್ಕಾರ ರಾಜ್ಯಗಳಿಗೆ ಸೂಚಿಸಿದೆ.

ಭಾರತ ಮತ್ತು ಪಾಕಿಸ್ತಾನ ನಡುವೆ ಬಿಗುವಿನ ಸ್ಥಿತಿ ಮೂಡಿರುವಂತೆಯೇ, ಒಂದು ವೇಳೆ ತೀವ್ರ ದಾಳಿ ನಡೆದಲ್ಲಿ ಅಗತ್ಯ ಸೇವೆಗಳಿಗೆ ಧಕ್ಕೆಯಾಗದಂತೆ ಕ್ರಮವಹಿಸಬೇಕು ಎಂದು ತಿಳಿಸಿದೆ.

ಕೇಂದ್ರ ಗೃಹ ಸಚಿವಾಲಯವು ಈ ಸಂಬಂಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿದೆ.

ತುರ್ತು ಸಂದರ್ಭಗಳಲ್ಲಿ ಅಗತ್ಯ ಕ್ರಮವಹಿಸಲು 1968ರ ನಾಗರಿಕ ರಕ್ಷಣಾ ನಿಯಮಗಳ ಸೆಕ್ಷನ್ 11ರ ಅನ್ವಯ ನಾಗರಿಕ ರಕ್ಷಣಾ ನಿರ್ದೇಶನಾಲಯಕ್ಕೆ ವಿಶೇಷಾಧಿಕಾರ ನೀಡಬೇಕು ಎಂದಿದೆ.

'ತುರ್ತು ಅಗತ್ಯಗಳಿಗೆ ತಗಲುವ ವೆಚ್ಚ ಭರಿಸಲು ಸ್ಥಳೀಯ ಆಡಳಿತಗಳಲ್ಲಿ ಲಭ್ಯವಿರುವ ನಿಧಿ ಬಳಸಲು ಪ್ರಥಮ ಆದ್ಯತೆ ನೀಡಬೇಕು' ಎಂದು ನಾಗರಿಕ ರಕ್ಷಣೆ, ಗೃಹರಕ್ಷಕರ ದಳ ಮತ್ತು ಅಗ್ನಿಶಾಮಕ ದಳಗಳ ಮಹಾ ನಿರ್ದೇಶಕರಾದ ವಿವೇಕ್ ಶ್ರೀವಾತ್ಸವ ಪತ್ರದಲ್ಲಿ ತಿಳಿಸಿದ್ದಾರೆ.

ಸೈನಿಕರ ಯಶಸ್ಸಿಗಾಗಿ ಮಸೀದಿಗಳಲ್ಲಿ ಪ್ರಾರ್ಥನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಪರೇಷನ್ ಸಿಂಧೂರ'ದಲ್ಲಿ ಭಾಗಿಯಾಗಿರುವ ಸೈನಿಕರಿಗೆ ಯಶಸ್ಸನ್ನು ಬಯಸಿ ರಾಜ್ಯದ ಎಲ್ಲ ಮಸೀದಿಗಳಲ್ಲಿ ಶುಕ್ರವಾರ ವಿಶೇಷ ಪ್ರಾರ್ಥನೆ ನಡೆಸಲಾಯಿತು.

'ಪಹಲ್ಗಾಮ್‌ನಲ್ಲಿ ಭಾರತೀಯರ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಗೆ ಪ್ರತಿಯಾಗಿ ನಮ್ಮ ಸೈನಿಕರು ಆಪರೇಷನ್ ಸಿಂಧೂರ ನಡೆಸುತ್ತಿದ್ದಾರೆ. ಅವರಿಗೆ ಶಕ್ತಿ ತುಂಬಬೇಕಿದೆ. ಹೀಗಾಗಿ ವಕ್ಫ್ ಅಧೀನದಲ್ಲಿರುವ ರಾಜ್ಯದ ಎಲ್ಲ ಮಸೀದಿಗಳಲ್ಲಿ ಮತ್ತು ಇತರ ಮಸೀದಿಗಳಲ್ಲೂ ವಿಶೇಷ ಪ್ರಾರ್ಥನೆ ಸಲ್ಲಿಸಿ' ಎಂದು ವಕ್ಫ್ ಸಚಿವ ಜಮೀರ್ ಅಹಮದ್ ಖಾನ್ ಅವರು ವಕ್ಫ್ ಮಂಡಳಿಗೆ ಪತ್ರ ಬರೆದಿದ್ದರು.

ಅದರಂತೆ ರಾಜ್ಯದ ಎಲ್ಲ ಮಸೀದಿಗಳಲ್ಲಿ ಶುಕ್ರವಾರ ಮಧ್ಯಾಹ್ನದ ನಮಾಜ್ ವೇಳೆ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.

ಗಾಂಧಿನಗರದ ಮಸೀದಿಯಲ್ಲಿ ಪ್ರಾರ್ಥನೆಗೆ ತೆರಳುವ ಮುನ್ನ ಸುದ್ದಿಗಾರರ ಜತೆ ಮಾತನಾಡಿದ ಜಮೀರ್ ಅಹಮದ್ ಖಾನ್, 'ದೇಶದ ಪ್ರಧಾನಿ ಅನುಮತಿ ನೀಡಿ, ಆತ್ಮಹತ್ಯಾ ಬಾಂಬ್ ಒದಗಿಸಿದರೆ ಪಾಕಿಸ್ತಾನಕ್ಕೆ ಹೋಗಿ ದಾಳಿ ನಡೆಸುತ್ತೇನೆ ಎಂಬ ಹೇಳಿಕೆಗೆ ಈಗಲೂ ಬದ್ಧವಾಗಿದ್ದೇನೆ. ನಮಗೆ ನಮ್ಮ ದೇಶ ಮುಖ್ಯ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸೈನಿಕರಿಗೆ ಯಶಸ್ಸು ಬಯಸಿ ಸಚಿವ ಜಮೀರ್ ಅಹಮದ್ ಖಾನ್ ಮತ್ತು ಇತರರು ಬೆಂಗಳೂರಿನ ಗಾಂಧಿನಗರದಲ್ಲಿರುವ ಮಸೀದಿಯಲ್ಲಿ ಶುಕ್ರವಾರ ವಿಶೇಷ ಪ್ರಾರ್ಥನೆ ಸಲ್ಲಿಸಿದರು

ದೇಶದ ಆತ್ಮಗೌರವಕ್ಕೆ ಸವಾಲೆಸೆದವರಿಗೆ ಭಾರತೀಯ ಪಡೆಗಳು ತಕ್ಕ ಉತ್ತರ ನೀಡಿರುವ ಇತಿಹಾಸವಿದೆ. ಪಹಲ್ಗಾಮ್ ನಲ್ಲಿ ಮುಗ್ಧ ಜನರ ಹತ್ಯೆ ಮಾಡುವ ಮೂಲಕ ಭಯೋತ್ಪಾದಕರು ಭಾರತಕ್ಕೆ ಮತ್ತೊಮ್ಮೆ ಸವಾಲೊಡ್ಡಿದ್ದಾರೆ ಹಾಗೂ ತಾಳ್ಮೆ ಮತ್ತು ಸಂಯಮವನ್ನು ಪರೀಕ್ಷಿಸುತ್ತಿದ್ದಾರೆ. ಇದಕ್ಕೆ ಅವರು ತಕ್ಕ ಬೆಲೆ ತೆರಬೇಕಾಗುತ್ತದೆ

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಯುದ್ಧ ಯಾರಿಗೂ ಬೇಡ. ಯುದ್ಧ ಆಗ ಬೇಕೆಂದು ಬಯಸುವುದು ಸರಿಯಲ್ಲ. ಆದರೆ, ಪಾಕಿಸ್ತಾನ ಮತ್ತೆ ಎಂದೂ ಭಾರತವನ್ನು ಕೆಣಕದಂತೆ, ಅಂತಹ ಯೋಚನೆಯನ್ನೂ ಮಾಡದಂತೆ ಬುದ್ಧಿ ಕಲಿಸಬೇಕು. ಭಾರತೀಯ ಸೇನೆಗೆ ಎಲ್ಲರೂ ಬೆಂಬಲ ನೀಡಬೇಕು

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಭಾರತದ 140 ಕೋಟಿ ಜನರ ಭಾವನೆಯನ್ನೇ ಸಚಿವ ಜಮೀರ್ ಅಹಮದ್ ಖಾನ್ ಹೇಳಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ನಕಾರಾತ್ಮಕ ಸುದ್ದಿಗಳೇ ವಿಜೃಂಭಿಸುತ್ತಿವೆ. ಫೇಕ್ ವಿಡಿಯೊಗಳನ್ನು ಯಾರೂ ಹರಿಯಬಿಡಬೇಡಿ

ಸಂತೋಷ್ ಲಾಡ್ ಕಾರ್ಮಿಕ ಸಚಿವ

ಪಾಕ್ ಪರ ಪೋಸ್ಟ್; ದೂರು

ವಿಜಯಪುರ: ಭಾರತ ಮತ್ತು ಪಾಕಿಸ್ತಾನ ನಡುವೆ ಉದ್ವಿಗ್ನ ಸ್ಥಿತಿಯ ಸಂದರ್ಭದಲ್ಲಿ ವಿಜಯಪುರದ ಅಲ್ ಅಮೀನ್ ವೈದ್ಯಕೀಯ ಕಾಲೇಜಿನ ತಷಾಹುದ್ ಫಾರೂಕಿ ಶೇಖ್ ಎಂಬ ವಿದ್ಯಾರ್ಥಿನಿ ಇನ್‌ಸ್ಟಾಗ್ರಾಮ್‌ನಲ್ಲಿ ಪಾಕಿಸ್ತಾನ ಪರ ಪೋಸ್ಟ್ ಹಾಕಿದ ಹಿನ್ನೆಲೆಯಲ್ಲಿ ಪೊಲೀಸರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದಾರೆ.

ವೀರು ಕಿಚ್ಚ ಎಂಬ ಫೇಸ್‌ಬುಕ್ ಖಾತೆಯಲ್ಲಿ 'ವಿಜಯಪುರದ ಅಲ್ ಅಮೀನ್ ಮೆಡಿಕಲ್ ಕಾಲೇಜಿನಲ್ಲಿ ಪಾಕ್ ಪ್ರೇಮಿ' ಎಂಬ ಹೆಸರಲ್ಲಿ ಪೋಸ್ಟ್ ಹಾಕಲಾಗಿತ್ತು. ಅದರಲ್ಲಿ ಆರೋಪಿ ವಿದ್ಯಾರ್ಥಿನಿಯ ಇನ್‌ಸ್ಟಾಗ್ರಾಮ್ ಸ್ಟೋರಿಯ ಸ್ಕ್ರೀನ್ ಶಾಟ್ ಹಂಚಿಕೊಳ್ಳಲಾಗಿತ್ತು. ಇದನ್ನು ಗಮನಿಸಿದ ಗ್ರಾಮೀಣ ಠಾಣೆಯ ಪಿಎಸ್‌ಐ ವಿನೋದ ದೊಡಮನಿ ಅವರು ದೂರು ದಾಖಲಿಸಿಕೊಂಡಿದ್ದಾರೆ.

ಈ ಎಲ್ಲಾ ಬೆಳವಣಿಗೆ ಬಳಿಕ ವಿದ್ಯಾರ್ಥಿನಿಯು, 'ನಾನು ನಿಜವಾದ ಭಾರತೀಯ ನಿವಾಸಿ. ಇದು ನನ್ನ ಮಾತೃಭೂಮಿ. ನಾನು ಮಾಡಿದ್ದು ಮೂರ್ಖತನದ ಕೃತ್ಯ. ನಾನು ಎಲ್ಲರನ್ನೂ ಕ್ಷಮೆ ಕೋರುವೆ' ಎಂಬ ಪೋಸ್ಟ್ ಹಂಚಿಕೊಂಡಿದ್ದಾರೆ.

ಡ್ರೋನ್ ದಾಳಿ: ಆತಂಕದಲ್ಲೇ ಸರಿದ ರಾತ್ರಿ

ರಾಜಸ್ಥಾನ, ಪಂಜಾಬ್‌ನ ಗಡಿ ಭಾಗದ ಪ್ರದೇಶಗಳಲ್ಲಿ ಬ್ಲ್ಯಾಕ್‌ಔಟ್ ಘೋಷಣೆ

• ರಾಖಿ ರಾಯ್‌ತಾಲುಡ್ಕರ್

ಜೈಪುರ: ರಾಜಸ್ಥಾನದ ಜೈಸಲ್ಮೇರ್ ಹಾಗೂ ಆಸುಪಾಸಿನ ಭಾಗದ ಪ್ರದೇಶಗಳಲ್ಲಿ ಗುರುವಾರ ರಾತ್ರಿ ಬಹುತೇಕ ವಿಲಕ್ಷಣ ಮೌನ. ನಿವಾಸಿಗಳಲ್ಲಿ ದಿಗಿಲು. ಮನೆಯ ಒಳಗೆ ಮತ್ತು ಹೊರಗೂ ಕತ್ತಲು ಆವರಿಸಿತ್ತು. ಏನಾಗುತ್ತಿದೆ, ಏನಾದಿತು ಎಂಬ ಉತ್ತರವಿಲ್ಲದ ಪ್ರಶ್ನೆಗಳು.

ಈ ಭಾಗದ ಹೆಚ್ಚಿನ ನಿವಾಸಿಗಳಲ್ಲಿ ಯಾರ ಜೊತೆ, ಏನು ಮಾತನಾಡಬೇಕು ಎಂಬ ಸ್ಪಷ್ಟತೆ ಇರಲಿಲ್ಲ. ಫೋನ್‌ನಲ್ಲಿ ಚರ್ಚೆಯೇ ಬೇಡ ಎಂದು ನಿರ್ಧರಿಸಿದಂತಿತ್ತು. ಅದರ ಹಿಂದಿನ ದಿನವಷ್ಟೇ ಈ ವ್ಯಾಪ್ತಿಯಲ್ಲಿ ಪಾಕ್ ನೆಲದಿಂದ ಡ್ರೋನ್ ದಾಳಿ ನಡೆದಿತ್ತು.

ಮನೆಗಳ ಒಳಗೆ, ಹೊರಗೆ ಅಕ್ಷರಶಃ 'ಬ್ಲ್ಯಾಕ್‌ಔಟ್' ಇದ್ದ ಅನಿಶ್ಚಿತ ರಾತ್ರಿಯಲ್ಲೂ ಜನರಿಗಿದ್ದ ಒಂದೇ ನೆಮ್ಮದಿ ಎಂದರೆ: ಪಹಲ್ಗಾಮ್ ದಾಳಿಗೆ ಪ್ರತೀಕಾರದ ಹೆಜ್ಜೆಗಳನ್ನು ಭಾರತ ಇಡುತ್ತಿದೆ. ನಾವು ದೇಶದ ಹಿತರಕ್ಷಣೆಗಾಗಿ ಈ ಸಂದರ್ಭ ಎದುರಿಸುತ್ತಿದ್ದೇವೆ ಎಂಬುದು.

'ಪ್ರಜಾವಾಣಿ' ಜೊತೆ ಮಾತನಾಡಿದ ಸ್ಥಳೀಯ ಪಂಚಾಯತ್ ಸಮಿತಿ ಪ್ರತಿನಿಧಿ ಭಗವಾನ್ ಪರಿಹಾರ್ ಅವರು, 'ಇಂಥ ಸ್ಥಿತಿಯನ್ನು ಇತ್ತೀಚೆಗೆ ನೋಡಿಯೇ ಇರಲಿಲ್ಲ' ಎಂದು ಅಭಿಪ್ರಾಯಪಟ್ಟರು.

54 ವರ್ಷಗಳ ಬಳಿಕ ಈ ವಲಯದಲ್ಲಿ ದಾಳಿ ನಡೆಯುತ್ತಿದೆ. ಜೈಸಲ್ಮೇರ್, ಬಾರ್ಮೇಡ್, ಜೋಧಪುರ, ಆಸುಪಾಸಿನ ಪ್ರದೇಶಗಳಲ್ಲಿ ಹಿಂದೆ 1965, 1971ರ ಯುದ್ಧದಲ್ಲಿ ಪಾಕ್ ದಾಳಿ ನಡೆಸಿತ್ತು.

'ಈ ಬಾರಿ ಪಾಕಿಸ್ತಾನದಿಂದ ಬಿಕನೇರ್‌ನ ನಾಲ್, ಜೋಧಪುರದ ಫಲೊಡಿ ಮತ್ತು ಬರ್ಮೆರ್‌ನ ಉತರಲೈನಲ್ಲಿ ದಾಳಿ ಆಗಿದೆ' ಎನ್ನುತ್ತವೆ ಮೂಲಗಳು.

ಈ ಪ್ರತಿನಿಧಿ ಜೊತೆ ಬಹುತೇಕ ಸ್ಥಳೀಯ ಪತ್ರಕರ್ತರೂ ರಾತ್ರಿಯ ಬೆಳವಣಿಗೆಗಳ ಬಗ್ಗೆ ಮಾತನಾಡಲು ಸಿದ್ಧರಿರಲಿಲ್ಲ.

ಸಾಕಷ್ಟು ಯತ್ನದ ಬಳಿಕ ಇಬ್ಬರು ಮಾತಿಗೆ ಸಿಕ್ಕರು. ಜೈಸಲ್ಮೇರ್‌ನ ಸೀಮಾಂತ್ ಲೋಕ್ ಸಂಘಟನೆಯ ಕಾರ್ಯಕರ್ತ ದಿಲೀಪ್ ಸಿಂಗ್ ಸೋಢಾ, 'ರಾತ್ರಿ 9ಕ್ಕೆ ಮನೆಗೆ ಬರುತ್ತಿದ್ದೆ. ಆಗಸದಲ್ಲಿ ದಿಢೀರ್ ಡ್ರೋನ್‌ಗಳು ಕಂಡವು. 70–80 ಡ್ರೋನ್‌ಗಳಿರಬಹುದು. ಹಿಂದೆಂದೂ ನೋಡಿರಲಿಲ್ಲ' ಎಂದರು.

'ರಾತ್ರಿ 9 ರಿಂದ ಬೆಳಿಗ್ಗೆ 4 ಗಂಟೆವರೆಗೆ ಬ್ಲ್ಯಾಕ್‌ಔಟ್ ಘೋಷಿಸಲಾಗಿತ್ತು. ಭಾರತೀಯ ಸೇನೆ ಈ ಡ್ರೋನ್‌ಗಳನ್ನು ನಿಷ್ಕ್ರಿಯಗೊಳಿಸಿದೆ ಎಂದು ತಿಳಿದಾಗ ನೆಮ್ಮದಿ ಆವರಿಸಿತು' ಎಂದು ಹೇಳಿದರು.

ಸ್ಥಳೀಯ ಗುತ್ತಿಗೆದಾರ ನಿವಾಸಿ ಪಪ್ಪಾ ಸೋಢಾ ಮಸುರಿಯಾ, 'ಸಂಭವನೀಯ ದಾಳಿ ಹಾಗೂ ಸೈರನ್ ಮೊಳಗಿಸುವ ಕುರಿತು ಮಾಹಿತಿ ಇತ್ತು. ಹೆಚ್ಚಿನವರು ಮನೆ ತೊರೆದು ರಸ್ತೆಗಳಲ್ಲಿ ಗುಂಪುಗೂಡಿದ್ದೆವು' ಎಂದರು.

ಜೈಸಲ್ಮೇರ್ ವಲಯ ಪಾಕಿಸ್ತಾನದ ಗಡಿಯಿಂದ 464 ಕಿ.ಮೀ. ದೂರದಲ್ಲಿದೆ. ಗಡಿಗೆ ಹತ್ತಿರದ ಗ್ರಾಮಗಳಿಂದ ಜನರನ್ನು ತೆರವುಗೊಳಿಸಲಾಗಿದೆ. ಮುಂಜಾಗ್ರತೆ ಕ್ರಮವಾಗಿ ಬಾರ್ಮೇಡ್, ಜೈಸಲ್ಮೇರ್‌ಗೆ ರೈಲು ಸಂಚಾರವನ್ನು ರದ್ದುಪಡಿಸಲಾಗಿದೆ. ಜೋಧಪುರ, ಬಿಕನೇರ್, ಕೃಷ್ಣಘರ್‌ನಲ್ಲಿನ ವಿಮಾನ ನಿಲ್ದಾಣಗಳನ್ನು ಮುಚ್ಚಲಾಗಿದೆ.

ರಾಜಸ್ಥಾನದ ಜೈಸಲ್ಮೇರ್ ಜಿಲ್ಲೆಯ ಕೃಷ್ಣಘಾಟ್ ವಲಯದಲ್ಲಿ ಶುಕ್ರವಾರ ಶಂಕಾಸ್ಪದ ವಸ್ತು ಕಂಡುಬಂದಿದ್ದು, ಸ್ಥಳವನ್ನು ಸೇನಾ ಸಿಬ್ಬಂದಿ ಸುತ್ತುವರಿದಿದ್ದರು –ಪಿಟಿಐ ಚಿತ್ರ

ಪ್ರಧಾನಿ ನೇತೃತ್ವದಲ್ಲಿ ಉನ್ನತ ಮಟ್ಟದ ಸಭೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ರಕ್ಷಣಾ ಸಚಿವರು ಮತ್ತು ರಕ್ಷಣಾ ಪಡೆಗಳ ಮುಖ್ಯಸ್ಥರ ಜತೆ ಶುಕ್ರವಾರ ಉನ್ನತ ಮಟ್ಟದ ಸಭೆ ನಡೆಸಿದರು. ಈ ವೇಳೆ ಅವರ ಭದ್ರತಾ ಪರಿಸ್ಥಿತಿಗಳ ಪರಿಶೀಲನೆ ನಡೆಸಿದರು.

ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಘರ್ಷ ತೀವ್ರಗೊಂಡಿರುವ ಬೆನ್ನಲ್ಲೇ ಮೋದಿ ಅವರು ಈ ಸಭೆ ನಡೆಸಿದರು.

ರಕ್ಷಣಾ ಸಚಿವ ರಾಜನಾಥ್ ಸಿಂಗ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್, ಸೇನಾ ಪಡೆ, ವಾಯು ಪಡೆ ಮತ್ತು ನೌಕಾ ಪಡೆಯ ಮುಖ್ಯಸ್ಥರು ಸಭೆಯಲ್ಲಿ ಭಾಗವಹಿಸಿದ್ದರು. ಮುಂದೆ ಕೈಗೊಳ್ಳಬೇಕಾದ ಕಾರ್ಯತಂತ್ರದ ಬಗ್ಗೆ ಸಭೆಯಲ್ಲಿ ಚರ್ಚೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಸೈರನ್ ಸದ್ದು, ಆತಂಕ

ಚಂಡೀಗಢ (ಪಿಟಿಐ): ಪಂಜಾಬ್‌ನ ಗಡಿ ಗ್ರಾಮಗಳಲ್ಲೂ ಗುರುವಾರ ರಾತ್ರಿ ಭಿನ್ನ ಆಗಿರಲಿಲ್ಲ. ಜನರು ಮನೆಯಿಂದ ಹೊರ ಬಂದಿರಲಿಲ್ಲ. ಆಗಾಗ್ಗೆ ಸೈರನ್ ಮೊಳಗುತ್ತಿದ್ದವು.

'ಬ್ಲಾಕ್‌ಔಟ್' ಘೋಷಿಸಲಾಗಿತ್ತು. ಆಗಾಗ್ಗೆ ಸ್ಫೋಟದ ಶಬ್ದ ಕೇಳಿಬರುತ್ತಿತ್ತು. ಶುಕ್ರವಾರ ಬೆಳಿಗ್ಗೆ ಜನತೆ ನಿರಾಳ-ರಾಗಿದ್ದರೂ, ಏನಾದಿತೋ ಎಂಬ ಆತಂಕ ನಿವಾರಣೆ ಆಗಿರಲಿಲ್ಲ.

ಪಾಕಿಸ್ತಾನದ ಜೊತೆಗೆ ಪಂಜಾಬ್ 532 ಕಿ.ಮೀ ಗಡಿ ಹೊಂದಿದ್ದರೆ, ರಾಜಸ್ತಾನ ಒಟ್ಟು 1,070 ಕಿ.ಮೀ ಗಡಿಯನ್ನು ಹೊಂದಿದೆ.

ಮಜೂರು ಗ್ರಾ.ಪಂ. ಬಜೆಟ್‌ನಲ್ಲಿ ಸೇನೆಗೆ ₹10 ಲಕ್ಷ

ಪ್ರಜಾವಾಣಿ ವಾರ್ತೆ

ಪಡುಬಿದ್ರಿ (ಉಡುಪಿ): ಕಾಪು ತಾಲ್ಲೂಕಿನ ಮಜೂರು ಗ್ರಾಮ ಪಂಚಾಯಿತಿಯ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಭಾರತೀಯ ಸೇನೆಗೆ ₹10 ಲಕ್ಷ ಮೊತ್ತವನ್ನು ಮೀಸಲಿಡಲು ತೀರ್ಮಾನಿಸಲಾಯಿತು.

ಭಾರತ-ಪಾಕಿಸ್ತಾನ ಗಡಿಯಲ್ಲಿ ಉಂಟಾಗಿರುವ ಉದ್ವಿಗ್ನ ಪರಿಸ್ಥಿತಿಯನ್ನು ಗಮನಿಸಿ ರಾಷ್ಟ್ರ ಮತ್ತು ಸೈನಿಕರ ಹಿತಕ್ಕಾಗಿ ಸರ್ವ ಸದಸ್ಯರ ಒಪ್ಪಿಗೆ ಪಡೆದು ಈ ಮೊತ್ತವನ್ನು ಬಜೆಟ್‌ನಲ್ಲಿ ಮೀಸಲಿರಿಸಲಾಯಿತು.

ಕಾಶ್ಮೀರದಲ್ಲಿ ಉಗ್ರರು ನಡೆಸಿದ ದಾಳಿಗೆ ಪ್ರತೀಕಾರವಾಗಿ ಭಾರತವು ಅವರ ಅಡಗುತಾಣಗಳನ್ನು ಧ್ವಂಸ ಮಾಡುತ್ತಿರುವುದು ಹೆಮ್ಮೆಯ ಸಂಗತಿ ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷ ಪ್ರಸಾದ್ ಶೆಟ್ಟಿ ವಳದೂರು ಹಾಗೂ ಉಪಾಧ್ಯಕ್ಷೆ ಮಂಜುಳಾ ಆಚಾರ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ, 'ದೇಶಕ್ಕೆ ಆಪತ್ತು ಎದುರಾದಾಗ ಪ್ರತಿಯೊಬ್ಬ ನಾಗರಿಕ ಸೈನ್ಯದ ಜೊತೆ ಕೈಜೋಡಿಸಬೇಕು. ಮಜೂರು ಗ್ರಾಮ ಪಂಚಾಯಿತಿ ತೆಗೆದುಕೊಂಡ ನಿರ್ಧಾರ ದೇಶದಲ್ಲೇ ಪ್ರಥಮ' ಎಂದರು.

ಕಾಂಗ್ರೆಸ್ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಿಎಂ. ಡಿಸಿಎಂ, ಸಚಿವರು ಭಾಗಿ

ಸೇನಾ ಪಡೆ ಬೆಂಬಲಿಸಿ 'ತಿರಂಗಾ ಯಾತ್ರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಗ್ರರ ವಿರುದ್ಧ 'ಆಪರೇಷನ್ ಸಿಂಧೂರ' ಹೆಸರಿನಲ್ಲಿ ಸಮರ ಸಾರಿರುವ ಭಾರತೀಯ ಸೇನಾ ಪಡೆಗೆ ಬೆಂಬಲ ಸೂಚಿಸಿ ರಾಜ್ಯ ಸರ್ಕಾರದ ನೇತೃತ್ವದಲ್ಲಿ ಕೆ.ಆರ್. ವೃತ್ತದಿಂದ ಮ್ಯೂಸಿಯಂ ರಸ್ತೆಯ ಮಿನ್ಸ್ಕ್ ಸ್ಕ್ವೇರ್‌ವರೆಗೆ 'ತಿರಂಗಾ ಯಾತ್ರೆ' ಶುಕ್ರವಾರ ನಡೆಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಯಾತ್ರೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಜಿ. ಪರಮೇಶ್ವರ, ಎಚ್.ಕೆ. ಪಾಟೀಲ, ಕೆ.ಎಚ್. ಮುನಿಯಪ್ಪ, ಎಂ.ಸಿ. ಸುಧಾಕರ್, ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ, ರಾಮಲಿಂಗಾರೆಡ್ಡಿ, ಕೆ.ಜೆ. ಜಾರ್ಜ್, ಎಚ್.ಸಿ. ಮಹದೇವಪ್ಪ, ಪ್ರಿಯಾಂಕ್ ಖರ್ಗೆ, ಬೋಸರಾಜು ಸೇರಿದಂತೆ ಸಚಿವರು, ಪಕ್ಷದ ನಾಯಕರು, ಕಾಂಗ್ರೆಸ್ ಕಾರ್ಯಕರ್ತರು ದೇಶದ ಧ್ವಜ ಹಿಡಿದು ಹೆಜ್ಜೆ ಹಾಕಿದರು.

'ನಾವು ನಮ್ಮ ಸೈನಿಕರ ಪರ ಇದ್ದೇವೆ. ಅದಕ್ಕಾಗಿ ಈ ಯಾತ್ರೆ ಹಮ್ಮಿಕೊಂಡಿದ್ದೇವೆ. ಭದ್ರತೆಗೆ ಸಂಬಂಧಿಸಿದಂತೆ ಉತ್ತರ ಭಾರತದ ರಾಜ್ಯಗಳಿಗೆ ಕೊಟ್ಟಿರುವ ಸೂಚನೆಗಳನ್ನೇ ನಮಗೂ ಕೇಂದ್ರ ಕೊಟ್ಟಿದೆ. ನಾವು ಆರಂಭದಿಂದಲೂ ಎಲ್ಲ ಜಿಲ್ಲೆಗಳ ಎಸ್‌ಪಿಗಳಿಗೆ ಮುನ್ನೆಚ್ಚರಿಕೆ ಸೂಚನೆ ನೀಡಿದ್ದೇವೆ. ಮಾಹಿತಿಗಳನ್ನು ಸಂಗ್ರಹಿಸಲು ತಿಳಿಸಿದ್ದೇವೆ. ಸ್ಲೀಪರ್ ಸೆಲ್‌ಗಳ ಮೇಲೂ ನಿಗಾ ಇಡಲು ಸೂಚಿಸಲಾಗಿದೆ. ಎಚ್ಚರಿಕೆ ವಹಿಸುವಂತೆ ಸ್ಥಳೀಯ ಪೊಲೀಸರಿಗೂ ಸೂಚನೆ ಕೊಡಲಾಗಿದೆ. ಜಲಾಶಯಗಳು, ಅಣೆಕಟ್ಟುಗಳು, ಪ್ರಮುಖ ಸ್ಥಳಗಳಿಗೆ ಭದ್ರತೆ ಕೊಟ್ಟಿದ್ದೇವೆ. ರಾಜ್ಯದಲ್ಲಿ ಹೆಚ್ಚುವರಿ ಭದ್ರತೆ ಬಗ್ಗೆ ಮುಖ್ಯಮಂತ್ರಿಯವರ ಜೊತೆಯಲ್ಲೂ ಚರ್ಚೆ ಮಾಡುತ್ತೇನೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಡಿ.ಕೆ. ಶಿವಕುಮಾರ್ ಮಾತನಾಡಿ, 'ಇಡೀ ರಾಜ್ಯದಲ್ಲಿ ನಾವೆಲ್ಲರೂ ಒಂದಾಗಿದ್ದೇವೆ, ಒಟ್ಟಾಗಿದ್ದೇವೆ ಎಂಬ ಸಂದೇಶವನ್ನು ಭಾರತದ ಯೋಧರಿಗೆ ಕಳುಹಿಸಬೇಕು. ಕೇಂದ್ರ ಸರ್ಕಾರದ ನಿರ್ಧಾರದ ಪರ ನಾವೆಲ್ಲರೂ ನಿಲ್ಲಬೇಕು. ದೇಶವನ್ನು ಉಳಿಸೋಣ, ಯೋಧರಿಗೆ ಗೌರವ ಕೊಡೋಣ. ನಮ್ಮ ಸೈನಿಕರು ನಮ್ಮ ಹೆಮ್ಮೆ' ಎಂದರು.

ಸರ್ಕಾರಿ, ಖಾಸಗಿ ಉದ್ದಿಮೆಗಳ ನೌಕರರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ವಿದ್ಯಾರ್ಥಿಗಳು ಸೇರಿದಂತೆ ಸಾವಿರಾರು ಜನರು ಯಾತ್ರೆಯಲ್ಲಿ ಭಾಗವಹಿಸಿದ್ದರು. ತ್ರಿವರ್ಣ ಧ್ವಜ ಹಿಡಿದು ಭಾರತ ಹಾಗೂ ಸೈನಿಕರ ಪರ ಘೋಷಣೆಗಳನ್ನು ಕೂಗಿದರು.

ಭಾರತೀಯ ಸೇನಾ ಪಡೆಗೆ ಬೆಂಬಲ ಸೂಚಿಸಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ತಿರಂಗಾ ಯಾತ್ರೆ ಶುಕ್ರವಾರ ನಡೆಯಿತು ಪ್ರಜಾವಾಣಿ ಚಿತ್ರ

ದೇಶದಾದ್ಯಂತ 'ಜೈ ಹಿಂದ್ ಯಾತ್ರೆ'

ನವದೆಹಲಿ: ಸೈನಿಕರಿಗೆ ಬೆಂಬಲ ವ್ಯಕ್ತಪಡಿಸಲು ಮತ್ತು ಪಹಲ್ಗಾಮ್ ದಾಳಿಯಲ್ಲಿ ಮೃತಪಟ್ಟವರ ಸ್ಮರಣಾರ್ಥ ಕಾಂಗ್ರೆಸ್ ದೇಶದಾದ್ಯಂತ ಶುಕ್ರವಾರ 'ಜೈ ಹಿಂದ್ ಯಾತ್ರೆ' ನಡೆಸಿದೆ.

'ಈ ಯಾತ್ರೆಯು ಪ್ರತಿದಿನ ದೇಶವನ್ನು ಕಾಯುವ ವೀರಯೋಧರ ಧೈರ್ಯ ಮತ್ತು ತ್ಯಾಗಕ್ಕೆ ಸಲ್ಲಿಸುವ ಗೌರವವಾಗಿದೆ. 'ಜೈ ಹಿಂದ್ ಯಾತ್ರೆ' ಕೇವಲ ಮೆರವಣಿಗೆಯಲ್ಲ, ಏಕತೆ, ಶಾಂತಿ ಮತ್ತು ನ್ಯಾಯಕ್ಕಾಗಿ ನೀಡುವ ಕರೆಯಾಗಿದೆ' ಎಂದು ಕಾಂಗ್ರೆಸ್ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರು ಹೇಳಿದ್ದಾರೆ.

ಪ್ರಸ್ತುತ ಬೆಳವಣಿಗೆಗಳ ಕಾರಣಕ್ಕೆ 'ಸಂವಿಧಾನ್ ಬಚಾವೋ' ಆಂದೋಲನವನ್ನು ಮುಂದೂಡಲಾಗಿದೆ ಎಂದು ಎಂದು ಕಾಂಗ್ರೆಸ್ ವಕ್ತಾರೆ ರಾಗಿಣಿ ನಾಯಕ್ ಅವರು ಹೇಳಿದ್ದಾರೆ

'ಸಿಂಧೂರ' ಹೆಸರಿಗೆ ಪೈಪೋಟಿ

ಪ್ರಜಾವಾಣಿ ವಾರ್ತೆ

ಪಟ್ನಾ: ಮೇ 7ರಂದು ಜನಿಸಿದ ಮಕ್ಕಳಿಗೆ 'ಸಿಂಧೂರ', 'ಸಿಂಧೂರಿ', 'ಸಿಂಧೂ' ಎಂದು ಹೆಸರಿಡಲು ಬಿಹಾರದ ವಿವಿಧೆಡೆ ಪೋಷಕರು ಪೈಪೋಟಿಗೆ ಬಿದ್ದಿದ್ದಾರೆ.

ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಭಯೋತ್ಪಾದಕರ ನೆಲೆಗಳ ಮೇಲೆ ಭಾರತದ ಸಶಸ್ತ್ರ ಪಡೆಗಳು ಮೇ 7ರಂದು ನಡೆಸಿದ್ದ ಕ್ಷಿಪಣಿ ದಾಳಿಗೆ 'ಆಪರೇಷನ್ ಸಿಂಧೂರ್' ಎಂದು ಹೆಸರಿಡಲಾಗಿತ್ತು. ಹೀಗಾಗಿ, ಮೇ 7ರಂದು ಜನಿಸಿದ ಮಕ್ಕಳಿಗೆ ಇದಕ್ಕೆ ಸಾಮ್ಯವಿರುವ ಹೆಸರನ್ನಿಡಲು ಪೋಷಕರು ಮುಗಿಬಿದ್ದಿದ್ದಾರೆ.

ಮುಜಾಫ್ಫರ್‌ಪುರ ಜಿಲ್ಲೆಯ ಕಾಂಟಿ ನಿವಾಸಿ ಸುಷ್ಮಿತಾ ದೇವಿ ಅವರು ಮೇ 7ರಂದು ಜನಿಸಿದ ತಮ್ಮ ಮೊಮ್ಮಗನಿಗೆ 'ಸಿಂಧೂರ' ಎಂದು ಹೆಸರಿಟ್ಟಿದ್ದಾರೆ. 'ಮೊಮ್ಮಗ ಬೆಳೆದು ದೊಡ್ಡವನಾಗುತ್ತಿದ್ದಂತೆ ತನ್ನ ಹೆಸರಿನ ಹಿನ್ನೆಲೆ ತಿಳಿದುಕೊಳ್ಳುತ್ತಾನೆ. ಪಾಕಿಸ್ತಾನದಲ್ಲಿನ ಭಯೋತ್ಪಾದಕರ ನೆಲೆಗಳನ್ನು ಭಾರತ ನಾಶಪಡಿಸಲು 'ಸಿಂಧೂರ' ಕಾರ್ಯಾಚರಣೆ ನಡೆಸಿದ ದಿನದಂದು ತಾನು ಹುಟ್ಟಿದ್ದು ಎಂಬುದನ್ನು ತಿಳಿದುಕೊಳ್ಳುವ ಮೂಲಕ, ತನ್ನ ಹೆಸರಿನ ಮಹತ್ವವನ್ನು ಅರಿಯುತ್ತಾನೆ' ಎಂದು ಪ್ರತಿಕ್ರಿಯಿಸಿದ್ದಾರೆ.

'ನನ್ನ ಮೊಮ್ಮಗ ವಿದ್ಯಾಭ್ಯಾಸ ಮುಗಿಸಿದ ಬಳಿಕ ಸಮವಸ್ತ್ರ ಧರಿಸಿ ದೇಶಕ್ಕೆ ಸೇವೆ ಸಲ್ಲಿಸಬೇಕು ಎಂದು ಬಯಸುತ್ತೇನೆ' ಎಂದು ಅವರು ಹೇಳಿದ್ದಾರೆ.

ಇದೇ ರೀತಿಯ ಮುಜಾಫ್ಫರ್‌ಪುರದ 12 ಪೋಷಕರು, ಕತಿಹಾರ, ಮೋತಿಹಾರಿ, ಸೀತಾಮಡಿಯಲ್ಲಿನ ತಲಾ ಒಬ್ಬರು ಪೋಷಕರು ತಮ್ಮ ನವಜಾತ ಶಿಶುಗಳಿಗೆ ಈ ಹೆಸರುಗಳನ್ನಿಟ್ಟಿದ್ದಾರೆ. ಗಂಡು ಮಕ್ಕಳಿಗೆ 'ಸಿಂಧೂರ' ಎಂದು ಹೆಣ್ಣು ಮಕ್ಕಳಿಗೆ 'ಸಿಂಧೂರಿ' ಎಂದು ನಾಮಕರಣ ಮಾಡಿದ್ದಾರೆ.

'ದೇಶಭಕ್ತಿಯ ಸಂಕೇತವಾಗಿ ಮಗಳಿಗೆ ಸಿಂಧೂರಿ ಎಂದು ಹೆಸರಿಟ್ಟಿದ್ದೇವೆ' ಎಂದು ಕತಿಹಾರದ ರಾಖಿ ಮತ್ತು ಸಂತೋಷ್ ಮಂಡಲ್ ದಂಪತಿ ತಿಳಿಸಿದ್ದಾರೆ. ಮಗಳು ದೊಡ್ಡವಳಾದ ಬಳಿಕ ಸಶಸ್ತ್ರ ಪಡೆಗೆ ಸೇರಿ ದೇಶಕ್ಕೆ ಸೇವೆ ಸಲ್ಲಿಸಬೇಕು ಎಂದು ಬಯಸಿದ್ದೇವೆ ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

69 ಮಹಿಳಾ ಅಧಿಕಾರಿಗಳು ಸಲ್ಲಿಸಿರುವ ಮೇಲ್ಮನವಿಗಳ ವಿಚಾರಣೆ: ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ಕಿವಿಮಾತು

'ಸೇನೆಯ ಮಹಿಳಾ ಅಧಿಕಾರಿಗಳ ನೈತಿಕತೆ ಕುಗ್ಗಿಸದಿರಿ'

ನವದೆಹಲಿ (ಪಿಟಿಐ): ತಮ್ಮ ನೇಮಕಾತಿಯನ್ನು ಕಾಯಂಗೊಳಿಸದ ಕ್ರಮವನ್ನು ಪ್ರಶ್ನಿಸಿರುವ, ಸೇನೆಯಲ್ಲಿ ಅಲ್ಪಾವಧಿ ಕೆಲಸಕ್ಕೆ ನೇಮಕಗೊಂಡಿರುವ ಮಹಿಳಾ ಅಧಿಕಾರಿಗಳನ್ನು ಕೆಲಸದಿಂದ ಬಿಡುಗಡೆ ಮಾಡಬಾರದು. ದೇಶವು ಪ್ರಸ್ತುತ ಎದುರಿಸುತ್ತಿರುವ ಪರಿಸ್ಥಿತಿಯಲ್ಲಿ ಅವರ ನೈತಿಕತೆಯನ್ನು ಕುಗ್ಗಿಸುವುದು ಬೇಡ ಎಂದು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

69 ಮಹಿಳಾ ಅಧಿಕಾರಿಗಳು ಸಲ್ಲಿಸಿರುವ ಮೇಲ್ಮನವಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಎನ್. ಕೋಟೀಶ್ವರ ಸಿಂಗ್ ಅವರು ಇದ್ದ ನ್ಯಾಯಪೀಠ, ಮುಂದಿನ ವಿಚಾರಣೆ ವರೆಗೆ ಅರ್ಜಿದಾರರನ್ನು ಕೆಲಸದಿಂದ ಬಿಡುಗಡೆ ಮಾಡಬಾರದು ಎಂದು ಸೂಚಿಸಿತು. ನಂತರ, ವಿಚಾರಣೆಯನ್ನು ಆಗಸ್ಟ್‌ಗೆ ಮುಂದೂಡಿತು.

'ಇವರು ಪ್ರತಿಭಾವಂತ ಅಧಿಕಾರಿಗಳು. ಸೇನೆಯ ಬೇರೆ ವಿಭಾಗದಲ್ಲಿ ಅವರ ಸೇವೆಯನ್ನು ಬಳಸಿಕೊಳ್ಳಬಹುದು. ದೇಶದಲ್ಲಿರುವ ಈಗಿನ ಪರಿಸ್ಥಿತಿಯನ್ನು ಪರಿಗಣಿಸಿದಾಗ ಅವರನ್ನು ಸೇವೆಯಿಂದ ಬಿಡುಗಡೆ ಮಾಡಿ, ಅವರು ಸುಪ್ರೀಂ ಕೋರ್ಟ್‌ಗೆ ಅಲೆದಾಡುವಂತೆ ಮಾಡುವುದು ಸರಿಯಲ್ಲ. ಇಂಥ ಕ್ರಮದಿಂದ ಅವರ ಆತ್ಮವಿಶ್ವಾಸವನ್ನು ಕುಂದಿಸುವುದು ಬೇಡ. ಉತ್ತಮ ಹುದ್ದೆಯಲ್ಲಿದ್ದುಕೊಂಡು ಅವರು ದೇಶ ಸೇವೆ ಮಾಡಬಹುದಾಗಿದೆ' ಎಂದು ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದರು.

ವಿಚಾರಣೆ ವೇಳೆ, 'ಸಶಸ್ತ್ರ ಪಡೆಗಳಲ್ಲಿ ಯುವ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಸೇವೆ ಸಲ್ಲಿಸುವಂತಾಗಬೇಕು ಎಂಬ ಉದ್ದೇಶದಿಂದ ರೂಪಿಸಿರುವ ನೀತಿಯ ಭಾಗವಾಗಿ ಕೈಗೊಂಡಿರುವ ಆಡಳಿತಾತ್ಮಕ ನಿರ್ಧಾರ ಇದಾಗಿದೆ' ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ, ನ್ಯಾಯಪೀಠಕ್ಕೆ ತಿಳಿಸಿದರು.

'ಪ್ರತಿ ವರ್ಷ 250 ಸಿಬ್ಬಂದಿಯ ನೇಮಕಾತಿಯನ್ನು ಮಾತ್ರ ಕಾಯಂಗೊಳಿಸಲಾಗುತ್ತದೆ. ಹೀಗಾಗಿ ಈ ಪ್ರಕರಣಕ್ಕೆ ಸಂಬಂಧಿಸಿ ತಡೆಯಾಜ್ಞೆ ನೀಡಬಾರದು' ಎಂದು ಮನವಿ ಮಾಡಿದರು.

ಅರ್ಜಿದಾರರಾದ ಕರ್ನಲ್ ಗೀತಾ ಶರ್ಮಾ ಪರ ಹಾಜರಿದ್ದ ಹಿರಿಯ ವಕೀಲರಾದ ಮೇನಕಾ ಗುರುಸ್ವಾಮಿ, 'ಆಪರೇಷನ್ ಸಿಂಧೂರ' ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡುತ್ತಿರುವ ಕರ್ನಲ್ ಸೋಫಿಯಾ ಖುರೇಷಿ ಅವರ ಕುರಿತು ಪ್ರಸ್ತಾಪಿಸಿದರು.

'ತಮ್ಮ ಸೇವೆಯನ್ನು ಕಾಯಂಗೊಳಿಸುವಂತೆ ಕೋರಿ ಕರ್ನಲ್ ಖುರೇಷಿ ಕೋರ್ಟ್ ಮೆಟ್ಟಿಲೇರಬೇಕಾಯಿತು. ಈಗ ಅವರು ದೇಶವೇ ಹೆಮ್ಮೆ ಪಡುವಂತೆ ಮಾಡಿದ್ದಾರೆ' ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠ, ವಿಚಾರಣೆ ನಡೆಯುತ್ತಿರುವ ಪ್ರಕರಣ ಕಾನೂನಿಗೆ ಸಂಬಂಧಿಸಿದ್ದು. ಸೇನೆಯಲ್ಲಿನ ಅಧಿಕಾರಿಗಳ ಸಾಧನೆಗಳಿಗೂ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದು ಹೇಳಿ, ವಿಚಾರಣೆಯನ್ನು ಮುಂದೂಡಿತು.

ಕೋರ್ಟ್ ಆದೇಶ ಉಲ್ಲಂಘನೆ ಸಹಿಸಲ್ಲ; ಜಿಲ್ಲಾಧಿಕಾರಿಗೆ ಹಿಂಬಡ್ತಿ

ನವದೆಹಲಿ (ಪಿಟಿಐ): ನ್ಯಾಯಾಲಯದ ಆದೇಶಗಳನ್ನು ಧಿಕ್ಕರಿಸುವುದು ಕಾನೂನಿನ ಆಳ್ವಿಕೆಯ ತಳಹದಿಯ ಮೇಲೆ ದಾಳಿ ನಡೆಸಿದಂತೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಹೈಕೋರ್ಟ್ ನಿರ್ದೇಶನವನ್ನು ಉಲ್ಲಂಘಿಸಿದ ಆಂಧ್ರ ಪ್ರದೇಶದ ಅಧಿಕಾರಿಯೊಬ್ಬರಿಗೆ ಹಿಂಬಡ್ತಿ ನೀಡುವಂತೆ ಶುಕ್ರವಾರ ಆದೇಶಿಸಿದೆ.

2014ರಲ್ಲಿ ತಹಶೀಲ್ದಾರ್ ಆಗಿದ್ದಾಗ ಗುಂಟೂರು ಜಿಲ್ಲೆಯಲ್ಲಿ ಹಲವು ಗುಡಿಸಲನ್ನು ಬಲವಂತವಾಗಿ ತೆರವುಗೊಳಿಸಿದ್ದ ಜಿಲ್ಲಾಧಿಕಾರಿಯನ್ನು ತಹಶೀಲ್ದಾರ್ ಹುದ್ದೆಗೆ ಹಿಂಬಡ್ತಿ ಮಾಡುವಂತೆ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಆಗಸ್ಟಿನ್ ಜಾರ್ಜ್ ಮಸೀಹ್ ಅವರಿದ್ದ ಪೀಠವು ಆಂಧ್ರ ಪ್ರದೇಶ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಪ್ರಕರಣ ನಡೆಯುವ ಅವಧಿಯಲ್ಲಿ ತಹಶೀಲ್ದಾರ್ ಹುದ್ದೆಯಲ್ಲಿದ್ದ ಅವರು 2023ರಲ್ಲಿ ಜಿಲ್ಲಾಧಿಕಾರಿ ಹುದ್ದೆಗೆ ಬಡ್ತಿ ಹೊಂದಿದ್ದರು.

'ನ್ಯಾಯಾಲಯದ ಆದೇಶ ಧಿಕ್ಕರಿಸುವುದನ್ನು ಯಾರೂ ಸಹಿಸುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಇಡೀ ದೇಶಕ್ಕೆ ರವಾನಿಸಲು ನಾವು ಬಯಸುತ್ತೇವೆ' ಎಂದು ನ್ಯಾಯಮೂರ್ತಿ ಗವಾಯಿ ಹೇಳಿದರು.

ಅಧಿಕಾರಿಗೆ ₹1 ಲಕ್ಷ ದಂಡ ವಿಧಿಸಿದ ಸುಪ್ರೀಂ ಕೋರ್ಟ್, 'ಕಾನೂನಿಗಿಂತ ಯಾರೂ ಮೇಲಲ್ಲ' ಎಂಬ ಸಂದೇಶವನ್ನು ಎಲ್ಲರಿಗೂ ತಲುಪಿಸುವ ಅಗತ್ಯವನ್ನು ಒತ್ತಿ ಹೇಳಿತು.

'ಪ್ರತಿಯೊಬ್ಬ ಅಧಿಕಾರಿ, ಆತ ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ ನ್ಯಾಯಾಲಯ ನೀಡುವ ನಿರ್ದೇಶನವನ್ನು ಗೌರವಿಸಬೇಕು ಮತ್ತು ಪಾಲಿಸಬೇಕು' ಎಂದು ಪೀಠ ಹೇಳಿದೆ.

'ನ್ಯಾಯಾಲಯದ ಆದೇಶಗಳನ್ನು ಪಾಲಿಸದಿರುವುದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲ ಆಧಾರವಾಗಿರುವ ಕಾನೂನಿನ ಆಳ್ವಿಕೆಯ ತಳಹದಿಯ ಮೇಲೆ ದಾಳಿ ನಡೆಸುವುದಕ್ಕೆ ಸಮನಾಗುತ್ತದೆ' ಎಂದಿತು. ಹೈಕೋರ್ಟ್‌ನ ವಿಭಾಗೀಯ ಪೀಠದ ಆದೇಶದ ವಿರುದ್ಧ ಅಧಿಕಾರಿ ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ನಡೆಸಿತು.

ಗುಡಿಸಲುಗಳನ್ನು ತೆರವುಗೊಳಿಸಬಾರದು ಎಂದು ಹೈಕೋರ್ಟ್ 2013ರ ಡಿಸೆಂಬರ್ 11ರಂದು ಆದೇಶಿಸಿತ್ತು. ಆದರೆ ಅಂದು ತಹಶೀಲ್ದಾರ್ ಆಗಿದ್ದ ಆ ಅಧಿಕಾರಿ, 2014ರ ಜನವರಿಯಲ್ಲಿ ಬಲವಂತವಾಗಿ ಹಲವು ಗುಡಿಸಲುಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸಿದ್ದರು.

ನ್ಯಾಯಾಲಯದ ಆದೇಶ ಉಲ್ಲಂಘಿಸಿದ್ದಕ್ಕೆ ಹೈಕೋರ್ಟ್‌ನ ಏಕಸದಸ್ಯ ಪೀಠವು ಅಧಿಕಾರಿಗೆ ಎರಡು ವರ್ಷ ಜೈಲು ವಿಧಿಸಿತ್ತು. ಆ ಅಧಿಕಾರಿ, ಏಕಸದಸ್ಯ ಪೀಠದ ಆದೇಶವನ್ನು ಪ್ರಶ್ನಿಸಿ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದರು. ಏಕಸದಸ್ಯ ಪೀಠದ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ವಿಭಾಗೀಯ ಪೀಠ ನಿರಾಕರಿಸಿದ್ದರಿಂದ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

'ಎನ್‌ಇಪಿ ಅಳವಡಿಕೆಗೆ ಒತ್ತಾಯಿಸುವಂತಿಲ್ಲ'

ಪ್ರಜಾವಾಣಿ ವಾರ್ತೆ



ನವದೆಹಲಿ: ತಮ್ಮ ರಾಜ್ಯಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಅಳವಡಿಸುವಂತೆ ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಕೇರಳ ಸರ್ಕಾರಗಳಿಗೆ ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಳವಡಿಸಿಕೊಳ್ಳುವಂತೆ ನ್ಯಾಯಾಲಯವು ಯಾವುದೇ ರಾಜ್ಯವನ್ನು ಒತ್ತಾಯಿಸಲು ಸಾಧ್ಯವಿಲ್ಲ ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರಿದ್ದ ಪೀಠವು ಅರ್ಜಿದಾರ ಜಿ.ಎಸ್. ಮಣಿ ಅವರಿಗೆ ತಿಳಿಸಿದೆ.

'ಕ್ಷಮಿಸಿ, ಈ ಬಗ್ಗೆ ನಾವು ಯಾವುದೇ ಆದೇಶ ನೀಡಲು ಸಾಧ್ಯವಿಲ್ಲ. ಎನ್‌ಇಪಿ–2020ರಂತಹ ನೀತಿಯನ್ನು ಅಳವಡಿಸಿಕೊಳ್ಳುವಂತೆ ನ್ಯಾಯಾಲಯವು ಯಾವುದೇ ರಾಜ್ಯವನ್ನು ನೇರವಾಗಿ ಒತ್ತಾಯಿಸುವಂತಿಲ್ಲ' ಎಂದು ಪೀಠ ಹೇಳಿತು.

ಆದರೆ, ಎನ್‌ಇಪಿಗೆ ಸಂಬಂಧಿಸಿದಂತೆ ರಾಜ್ಯವು ತೆಗೆದುಕೊಳ್ಳುವ ಕ್ರಮ ಅಥವಾ ಅದರ ನಿಷ್ಕ್ರಿಯತೆಯು ಯಾವುದೇ ಮೂಲಭೂತ ಹಕ್ಕು ಉಲ್ಲಂಘಿಸಿದರೆ ಆಗ ಮಧ್ಯಪ್ರವೇಶಿಸುತ್ತೇವೆ ಎಂದು ಸ್ಪಷ್ಟಪಡಿಸಿದೆ.

ಕೇಂದ್ರ ಸರ್ಕಾರದ ಎನ್‌ಇಪಿ ಮತ್ತು 'ತ್ರಿಭಾಷಾ ಸೂತ್ರ'ವನ್ನು ತಮಿಳುನಾಡು, ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಜಾರಿಗೆ ತರಲು ನಿರ್ದೇಶನ ನೀಡುವಂತೆ ಕೋರಿ ತಮಿಳುನಾಡು ಮೂಲದ ವಕೀಲ ಮತ್ತು ಬಿಜೆಪಿ ನಾಯಕ ಮಣಿ ಅವರು ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

ವಿಶ್ವ ಸುಂದರಿ ಸ್ಪರ್ಧೆಯಲ್ಲಿ ಭಾಗಿಯಾಗಲು ಶುಕ್ರವಾರ ಹೈದರಾಬಾದ್‌ಗೆ ಬಂದ ಸ್ಪರ್ಧಿಗಳನ್ನು ಸ್ವಾಗತಿಸಲಾಯಿತು ಪಿಟಿಐ ಚಿತ್ರ

ವಿಶ್ವಸುಂದರಿ ಸ್ಪರ್ಧೆ ಇಂದಿನಿಂದ

ಹೈದರಾಬಾದ್: ಭಾರಿ ಬಿಗಿ ಭದ್ರತೆಯಲ್ಲಿ 72ನೇ ವರ್ಷದ 'ವಿಶ್ವ ಸುಂದರಿ' ಸ್ಪರ್ಧೆಗೆ ಇಲ್ಲಿನ ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣ ಸಜ್ಜುಗೊಂಡಿದೆ.

ಇದೇ 10ರಂದು ಸ್ಪರ್ಧೆ ಆರಂಭವಾಗಲಿರುವ ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಸುಮಾರು 110 ರಾಷ್ಟ್ರಗಳ ಸುಂದರಿಯರು ಆಗಮಿಸಿದ್ದಾರೆ. ವಿಶ್ವ ಸುಂದರಿ 'ಕಿರೀಟ' ಯಾರ ಮುಡಿಗೇರಲಿದೆ ಎಂಬುದು ಮೇ 31ರಂದು ಗೊತ್ತಾಗಲಿದೆ.

ಆಯುಕ್ತರ ಕಛೇರಿ

ಮಹಾನಗರಪಾಲಿಕೆ, ಬಳ್ಳಾರಿ–583101.

ದೂರವಾಣಿ ಸಂಖ್ಯೆ : 08392–273479 /278168
ಫ್ಯಾಕ್ಸ್ : 08392–273477
ವೆಬ್‌ಸೈಟ್ : www.bellarycity.gov.in
ಇ–ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101

ಸಂಖ್ಯೆ:ಮನಪಾಬ/SWM /SHG/CM/PN-2/2025-26 ದಿನಾಂಕ: 08.05.2025.

ಪತ್ರಿಕಾ ಪ್ರಕಟಣೆ

ಬಳ್ಳಾರಿ ಮಹಾನಗರ ಪಾಲಿಕೆಯ ಸ್ವಚ್ಛ ಭಾರತ್ ಮಿಷನ್ 2.0 ರ ಅಡಿಯಲ್ಲಿ IEC ಚಟುವಟಿಕೆಗಳನ್ನು ಕೈಗೊಳ್ಳಲು ಸ್ವಸಹಾಯ ಗುಂಪು (SHG) ಸದಸ್ಯರ ನೇಮಕಾತಿಗಾಗಿ ಆಸಕ್ತಿಯುಳ್ಳ ಸದಸ್ಯರಿಗೆ ಈ ಮೂಲಕ ಆಹ್ವಾನಿಸುತ್ತಿದ್ದು, 03 ವರ್ಷಗಳವರೆಗೆ ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ IEC ಚಟುವಟಿಕಳನ್ನು ಕೈಗೊಳ್ಳಲು ಆಸಕ್ತಿಯನ್ನು ಹೊಂದಿರುವ NULM-DAY ಅಡಿಯಲ್ಲಿ ನೋಂದಾಯಿತ SHG ಸದಸ್ಯರಿಂದ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಇದರ ToR, ಆಯ್ಕೆ ಪ್ರಕ್ರಿಯೆ ಮತ್ತುಗೌರವಧನಕ್ಕೆ ಸಂಬಂಧಿಸಿದ ಇತರೆ ವಿವರಗಳಿಗಾಗಿ ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು(ಪರಿಸರ) ಇವರಿಗೆ ಸಂಪರ್ಕಿಸತಕ್ಕದ್ದು.

ಆಸಕ್ತಿಯುಳ್ಳ NULM-DAY ಅಡಿಯಲ್ಲಿ ನೋಂದಾಯಿಸಿಕೊಂಡ ಆಸಕ್ತ SHG ಸದಸ್ಯರು Expression of Interest (ಇಚ್ಛಾ ಅರ್ಜಿಯನ್ನು) ಹಿಂಬರಹದೊಂದಿಗೆ ಮಹಾನಗರಪಾಲಿಕೆ ಆಯುಕ್ತರು ಕಾರ್ಯಲಯಕ್ಕೆ ಭೇಟಿ ನೀಡಿ ಲಭ್ಯವಿರುವ ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನ ಭರ್ತಿ ಮಾಡಿಅವಶ್ಯ ದಾಖಲಾತಿಗಳೊಂದಿಗೆ ದಿನಾಂಕ: 16.05.2025 ರ ಮಧ್ಯಹ್ನ 01:30 ಗಂಟೆಯ ಒಳಗಾಗಿ ಖುದ್ದಾಗಿ ಬಳ್ಳಾರಿ ಮಹಾನಗರ ಪಾಲಿಕೆಯ ಕಛೇರಿಗೆ ಸಲ್ಲಿಸತಕ್ಕದು.

SHG ಸದಸ್ಯರು ನಿಗಧಿತಅರ್ಜಿ ನಮೂನೆಯೊಂದಿಗೆ ಲಗತ್ತಿಸಬೇಕಾದ ದಾಖಲಾತಿಗಳು

1. ಗುರುತಿನ ಪುರಾವೆ
2. ವಿಳಾಸದ ಪುರಾವೆ
3. SHG ಅಡಿಯಲ್ಲಿ ನೋಂದಾಯಿಸಿಕೊಂಡಿರುವುದಕ್ಕೆ (ಎಂಪೆನಾಲ್) ದಾಖಲೆಗಳು.
4. ಶೈಕ್ಷಣಿಕಾ ಅರ್ಹತೆ ದಾಖಲಾತಿಗಳು.
5. NULM-DAY/NRLM ರಿಂದ ಹಿಂಬರಹದ ನಮೂನೆ.
6. SHG ಸದಸ್ಯರುಚಾಲ್ತಿಯಲ್ಲಿರುವತಮ್ಮ ಸಂಸ್ಥೆಯ ನೋಂದಾಣಿ ಪತ್ರದ ಪ್ರತಿ.

ಅಭ್ಯರ್ಥಿಗಳಿಗೆ ಈ ವಿಷಯದ ಕುರಿತು ಅವರಿಗೆ ಇರುವ ಆಸಕ್ತಿ, ಜ್ಞಾನಕೌಶಲ್ಯ,/ಮಾಹಿತಿಯಕುರಿತು ನಿರ್ಣಯಿಸಲು ಸಂದರ್ಶನವನ್ನು ಆಯೋಜಿಸಿ ಆಯ್ಕೆ ಮಾಡಲಾಗುವುದು.

ಆಯುಕ್ತರು, ಬಳ್ಳಾರಿ ಮಹಾನಗರಪಾಲಿಕೆ ಬಳ್ಳಾರಿ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.

ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ–583105. ಫೋನ್ ನಂ.ಮುಖ್ಯ ಆವರಣ: 8892531820,
ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ: 8660493897 E-Mail ID: www.vskub.ac.in

ನಂ.ವಿ.ಶ್ರೀ.ಕೃ.ವಿಬ/ಶೈಕ್ಷಣಿಕ/ಯುಜಿ/184/2025–26 ದಿನಾಂಕ: 08.05.2025

ಅಧಿಸೂಚನೆ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ "ಜ್ಞಾನಸಾಗರ" ಬಳ್ಳಾರಿ ಯಲ್ಲಿ ವಿವಿಧ ಹೊಸ ಸ್ನಾತಕ ಪದವಿ, ಡಿಪ್ಲೋಮಾ, ಪಿಜಿ ಡಿಪ್ಲೋಮಾ, ಮತ್ತು ಸರ್ಟಿಫಿಕೇಟ್ ಕೋರ್ಸುಗಳ ಪ್ರವೇಶಾತಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

I. ವಾಣಿಜ್ಯ ಅಧ್ಯಯನ ವಿಭಾಗ (Contact no.: 9448833426)
1. ಬಿ.ಕಾಂ (ಫೈನಾನ್ಸಿಯಲ್ ಟೆಕ್ನಾಲಜಿ)
2. ಬಿ.ಕಾಂ (ಬಿಸಿನೆಸ್ ಅ್ಯನಾಲಿಟಿಕ್ಸ್)
3. ಬಿ.ಕಾಂ (ಫೈನಾನ್ಸ್ & ಅಕೌಂಟಿಂಗ್) (ಮುಖ್ಯ ಆವರಣ ಮತ್ತು ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ)
4. ಬಿ.ಕಾಂ (ಟೂರಿಸಂ ಅಂಡ್ ಟ್ರಾವೆಲ್ ಮ್ಯಾನೇಜ್ಮೆಂಟ್)

II. ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗ (Contact no.: 7795147383)
1. ಬಿ.ಬಿ.ಎ. ಸ್ಪೋರ್ಟ್ಸ್ ಮ್ಯಾನೇಜ್ಮೆಂಟ್
2. ಬಿ.ಬಿ.ಎ. ಲಾಜಸ್ಟಿಕ್ ಅಂಡ್ ಸಪ್ಲೈ ಚೈನ್ ಮ್ಯಾನೇಜ್ಮೆಂಟ್ (ಮುಖ್ಯ ಆವರಣ ಮತ್ತು ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ)

III. ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ವಿಭಾಗ (Microbiology) (Contact number: 9845805477)
1. ಬಿ.ಎಸ್ಸಿ. (ಫುಡ್ ಟೆಕ್ನಾಲಜಿ)

IV. ಗಣಕಯಂತ್ರ ಅಧ್ಯಯನ ವಿಭಾಗ (Computer Science) (Contact no.: 9738338457)
1. ಬಿ.ಸಿ.ಎ. (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಅಂಡ್ ಮಷೀನ್ ಲರ್ನಿಂಗ್)
2. ಬಿ.ಸಿ.ಎ. (ಡಾಟಾ ಸೈನ್ಸ್) (ಮುಖ್ಯಆವರಣ ಮತ್ತು ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ)

V. ಅರ್ಥಶಾಸ್ತ್ರ ಅಧ್ಯಯನ ವಿಭಾಗ (Contact no.: 9986341024)
1. ಬಿ.ಎ. (ಎಕನಾಮಿಕ್ಸ್ ಅಂಡ್ ಡೇಟಾ ಸೈನ್ಸ್)

VI. ಡಿಪ್ಲೋಮಾ ಮತ್ತು ಪಿಜಿ ಡಿಪ್ಲೋಮಾ ಪ್ರೊಗ್ರಾಮ್ಸ್
1. ಡಿಪ್ಲೋಮಾ (ಎಲೆಕ್ಟ್ರಾನಿಕ್ ಮೀಡಿಯಾ) (ವಿದ್ಯಾರ್ಹತೆ – PUC) (Contact no : 9986131144)
2. ಡಿಪ್ಲೋಮಾ (ಟೂರಿಸ್ಟ್ ಗೈಡ್) (Contact no : 9591190016)
3. ಪಿಜಿ ಡಿಪ್ಲೋಮಾ (ಫುಡ್ ಅನಾಲಿಸಿಸ್, ಸೇಫ್ಟಿ ಅಂಡ್ ಸ್ಟ್ಯಾಂಡರ್ಡ್ಸ್) (Contact no : 9845805477)
4. ಪಿಜಿ ಡಿಪ್ಲೋಮಾ (ಟೂರಿಸಂ, ಮ್ಯೂಸಿಯಾಲಾಜಿ ಅಂಡ್ ಆರ್ಕಿಯಾಲಜಿ) (ವಿದ್ಯಾರ್ಹತೆ – ಯಾವುದೇ ಪದವಿ)
5. ಪಿಜಿ ಡಿಪ್ಲೋಮಾ: (Contact no: 9481664966)
 a. ಸೈಬರ್ ಲಾ
 b. ಮಾನವ ಹಕ್ಕುಗಳು ಅಂಡ್ ಕಾರ್ಪೊರೇಟ್ ಗವರ್ನನ್ಸ್ (ವಿದ್ಯಾರ್ಹತೆ – ಯಾವುದೇ ಪದವಿ)

VII. ಸರ್ಟಿಫಿಕೇಟ್ ಕೋರ್ಸುಗಳು (Contact no.: 7676132277)
1. ಸರ್ಟಿಫಿಕೇಟ್ ಕೋರ್ಸ್ (ಫ್ರೆಂಚ್, ಜರ್ಮನ್ ಅಂಡ್ ಸ್ಪ್ಯಾನಿಷ್ ಲ್ಯಾಂಗ್ವೇಜಸ್)
2. ಸರ್ಟಿಫಿಕೇಟ್ ಕೋರ್ಸ್ (ಡೈರೆಕ್ಷನ್ – ಡ್ರಾಮಾ ಮತ್ತು ಫಿಲ್ಮ್)
3. ಸರ್ಟಿಫಿಕೇಟ್ ಕೋರ್ಸ್ (ಕ್ಲಾಸಿಕಲ್ ಡ್ಯಾನ್ಸ್)
4. ಸರ್ಟಿಫಿಕೇಟ್ ಕೋರ್ಸ್ (ಕ್ಲಾಸಿಕಲ್ ಮ್ಯೂಸಿಕ್)

ಆಸಕ್ತ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ **Website:** www.vskub.ac.in ಆನ್‌ಲೈನ್ ನೋಂದಣಿ ಮತ್ತು ಅರ್ಜಿ ಸಲ್ಲಿಕೆಗಾಗಿ ಕರ್ನಾಟಕ ಸರ್ಕಾರದ ಯು.ಯು. ಸಿ.ಎಂ.ಎಸ್ ಪೋರ್ಟಲ್ https://uucms.karnataka.Gov.in ಭೇಟಿ ನೀಡಲು ತಿಳಿಸಲಾಗಿದೆ. **ಪ್ರವೇಶಾತಿ ಪ್ರಕ್ರಿಯೆಯು ದಿನಾಂಕ:** 25.05.2025 ರಿಂದ ಪ್ರಾರಂಭವಾಗುವುದು ಹೆಚ್ಚಿನ ವಿವರಗಳಿಗಾಗಿ ವಿಶ್ವವಿದ್ಯಾಲಯದ ಜಾಲತಾಣ www.vskub.ac.in ಭೇಟಿ ನೀಡುವುದು.

ಅಗತ್ಯ ಸಂಖ್ಯೆಯ ಪ್ರವೇಶ ಅರ್ಜಿಗಳು ಸ್ವೀಕೃತವಾಗದಿದ್ದಲ್ಲಿ ಅಂತಹ ಕೋರ್ಸುಗಳನ್ನು ಪ್ರಸ್ತುತ ವರ್ಷ ಪ್ರಾರಂಭಿಸಲಾಗುವುದಿಲ್ಲ.

ಸಹಿ/– ಕುಲಸಚಿವರು,
ಡಿಐಪಿಆರ್/ಬಳ್ಳಾರಿ/87/ಕೆಎಸ್ಎಂಸಿಎ/2025–26 ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.

ಪುರಸಭೆ ಕಾರ್ಯಾಲಯ, ಘಟಪ್ರಭಾ

ತಾ: ಗೋಕಾಕ ದೂರವಾಣಿ ನಂ: 08332–286076 ಜಿ: ಬೆಳಗಾವಿ

ನಂ:ಪುಸಘಲೋ.ಇ:ಸ್ಥ.ನೀ:15ನೇ ಹ.ಎಸ್.ಎಫ್.ಸಿ.ಎಸ್.ಬಿ.ಎಮ್.2:2025–26 ದಿನಾಂಕ: 07.05.2025

ಮರು ಟೆಂಡರ ಪ್ರಕಟಣೆ (ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ)

ಘಟಪ್ರಭಾ ಪುರಸಭೆಯ ಸನ್ 2020–21 ರಿಂದಾ ಸನ್ 2022–23ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನದಡಿ ಬಾಕಿ ಉಳಿದ ಅನುದಾನ, ಸನ್ 2019–20 ರಿಂದಾ ಸನ್ 2022–23ನೇ ಸಾಲಿನ ಎಸ್,ಎಫ್,ಸಿ ಮುಕ್ತ ನಿಧಿ ಅನುದಾನದಡಿಯಲ್ಲಿ ಉಳಿಕೆ ಅನುದಾನದಡಿ, ಸನ್ 2023–24ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನದಡಿ ಸನ್ 2024–25ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನದಡಿ ಸನ್ 2024–25ನೇ ಸಾಲಿನ ಎಸ್,ಎಫ್,ಸಿ ಅನುದಾನದಡಿ ಸನ್ 2024–25ನೇ ಸಾಲಿನ ಎಸ್,ಎಫ್,ಸಿ ಅನುದಾನದಡಿ, ಸನ್ 2024–25 ನೇ ಸಾಲಿನ ಸ್ಥಳೀಯ ನಿಧಿ ಅನುದಾನದಡಿ, ಸನ್ 2024–25ನೇ ಸಾಲಿನ ಸ್ವಚ್ಛ ಭಾರತ್ ಮಿಷನ್ 2.00 ಅನುದಾನದಡಿ, ಮತ್ತು ಸನ್ 2024–25ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಬಿಡುಗಡೆಯಾದ 2ನೇ ಕಂತಿನ ಅನುದಾನದಡಿ ಲೋಕೋಪಯೋಗಿ ಇಲಾಖೆ ಇಂಜಿನಿಯರಿಂಗ ವಿಭಾಗದಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಸಿವ್ಹಿಲ್ ಗುತ್ತಿಗೆದಾರರು ಮತ್ತು ಪೂರೈಕೆದಾರರಿಂದ ಕೆ.ಡಬ್ಲ್ಯೂ–1,2 ಮತ್ತು ಕೆ.ಜಿ–1 ರ ಪ್ರಕಾರ ಐಟಂವಾರು ಒಟ್ಟು – 18 ಪ್ಯಾಕೇಜಗಳ ಕಾಮಗಾರಿಗಳಿಗೆ ಟೆಂಡರಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ನಿಗಧಿಪಡಿಸಿದ ಟೆಂಡರ ದಾಖಲಾತಿಯನ್ನು ಕೆ.ಪಿ.ಪಿ.ಪಿ ಪೋರ್ಟಲ್ ನಿಂದ ನಿಗಧಿತ ಶುಲ್ಕ ಪಾವತಿಯೊಂದಿಗೆ ಡೌನ್ ಲೋಡ್ ಮಾಡಿ ಕೊಳ್ಳತಕ್ಕದ್ದು ಇ.ಎಂ.ಡಿ ಮೊತ್ತದೊಂದಿಗೆ ಭರ್ತಿ ಮಾಡಿದ ಟೆಂಡರುಗಳನ್ನು ದಿ: 21.05.2025 ರ ಸಾಯಂಕಾಲ 5.30 ಘಂಟೆಯೊಳಗಾಗಿ ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿ ಸಲ್ಲಿಸತಕ್ಕದ್ದು. ಸದರೀ ಟೆಂಡರಿನ ಪ್ರಿ ಬಿಡ್ ಮೀಟಿಂಗನ್ನು ದಿ: 17.05.2025 ರಂದು ಮಧ್ಯಾಹ್ನ 12.00 ಘಂಟೆಗೆ ಪುರಸಭೆ ಕಾರ್ಯಾಲಯದಲ್ಲಿ ನಿಗದಿಪಡಿಸಲಾಗಿದೆ. ತಾಂತ್ರಿಕ ಬಿಡ್ ನ್ನು ತೆರೆಯುವ, ದಿ: 23.05.2025ರಂದು ಮುಂಜಾನೆ 11 ಘಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ತೆರೆಯುವ ದಿ: 26.05.2025 ರಂದು ಮುಂಜಾನೆ 11 ಘಂಟೆಗೆ (ತಾಂತ್ರಿಕ ಬಿಡ್‌ನ್ನು ಸಕ್ಷಮ ಪ್ರಾಧಿಕಾರದಿಂದ ಮಂಜೂರಾದ ನಂತರ) ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು ಕಾಮಗಾರಿಗಳ ಟೆಂಡರ್ ಪಡೆಯಲು ಬೇಕಾದ ಅರ್ಹತೆ ಹಾಗೂ ಇತರೆ ಷರತ್ತುಗಳನ್ನು ಟೆಂಡರ್ ಫಾರಂಗಳಲ್ಲಿ ವಿವರವಾಗಿ ನಮೂದಿಸಲಾಗಿದೆ. ವಿವರವಾದ ಟೆಂಡರ ಪ್ರಕಟಣೆಯನ್ನು ಗುತ್ತಿಗೆದಾರರು ಹಾಗೂ ಪೂರೈಕೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಹಾಗೂ ಕಛೇರಿ ದೂರವಾಣಿ ನಂ–08332–286076 ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್ಜಾಲದ ಮೂಲಕ ವೆಬ್ ಸೈಟ್ ಕಾಮಗಾರಿ ವಿವರ ಹಾಗೂ ಷರತ್ತುಗಳು www.KPPP.Karnataka.gov.in ಅಥವಾ ಈ ಕಛೇರಿ website: www.ghataprabhatown.mrc.gov.in ಇದರಲ್ಲಿ ಪಡೆಯಬಹುದು.

ಸಹಿ/–, ಮುಖ್ಯಾಧಿಕಾರಿ ಪುರಸಭೆ, ಘಟಪ್ರಭಾ
ಸಹಿ/–, ಆಡಳಿತಾಧಿಕಾರಿ ಪುರಸಭೆ, ಘಟಪ್ರಭಾ

DIPO/RO.No.220/2025-26

ಗುಲಬರ್ಗಾ ವಿಶ್ವವಿದ್ಯಾಲಯ

ಜ್ಞಾನ ಗಂಗಾ, ಕಲಬುರಗಿ–585 106, ಕರ್ನಾಟಕ, ಭಾರತ
ದೂ.ಸಂ.: 08472-263202 ಫ್ಯಾಕ್ಸ್: 08472-263206, ಇ–ಮೇಲ್: registrargug@rediffmail.com

ಸಂ. ಗುವಿಕ:ಆಡಳಿತ:ಸಾ–3:2025–26:152 ದಿನಾಂಕ: 07.05.2025

:: ಅಧಿಸೂಚನೆ ::

ವಿಷಯ: ಗುಲಬರ್ಗಾ ವಿಶ್ವವಿದ್ಯಾಲಯದ 43ನೇ ವಾರ್ಷಿಕ ಘಟಿಕೋತ್ಸವವನ್ನು ಮೇ 2025 ರಲ್ಲಿ ಜರುಗಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 22.04.2025.

ಗುಲಬರ್ಗಾ ವಿಶ್ವವಿದ್ಯಾಲಯದ 43ನೇ ವಾರ್ಷಿಕ ಘಟಿಕೋತ್ಸವವನ್ನು ಮೇ 2025 ರಲ್ಲಿ ನಡೆಸಲು ನಿರ್ಧರಿಸಲಾಗಿದೆ. 2023–24ರ ಶೈಕ್ಷಣಿಕ ಅವಧಿಯಲ್ಲಿ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಪಡೆದಿರುವ ಅರ್ಹ ವಿದ್ಯಾರ್ಥಿಗಳಿಂದ ಪದವಿ ಪ್ರಮಾಣ ಪತ್ರಗಳನ್ನು ಪಡೆಯಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಘಟಿಕೋತ್ಸವದ ಪ್ರಮಾಣ ಪತ್ರಗಳನ್ನು ವಿವಿಧ ಪದವೀಧರರು ಉಪಸ್ಥಿತಿಯಲ್ಲಿ (In Person) ಹಾಗೂ ಅನುಪಸ್ಥಿತಿಯಲ್ಲಿ (In Absentia) ಪಡೆಯಬಹುದು. ಸಂಬಂಧಪಟ್ಟ ವಿದ್ಯಾರ್ಥಿಗಳು ಪದವಿ ಪ್ರಮಾಣ ಪತ್ರಗಳನ್ನು ಪಡೆಯಲು ಕೇವಲ ಆನ್‌ಲೈನ್ ಮೂಲಕ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದೆ. ವಿಶ್ವವಿದ್ಯಾಲಯದ ಜಾಲತಾಣ www.gugu.ac.in ನಲ್ಲಿ ಇರುವ Apply for Convocation ಮೇಲೆ ಕ್ಲಿಕ್ ಮಾಡಿ ನಿಗದಿಪಡಿಸಿದ ಶುಲ್ಕವನ್ನು ಆನ್‌ಲೈನ್ ಮೂಲಕವೇ ಸಂದಾಯ ಮಾಡತಕ್ಕದ್ದು.

ಘಟಿಕೋತ್ಸವ ಪ್ರಮಾಣ ಪತ್ರಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು www.gugu.ac.in ವೈಬ್‌ಸೈಟ್‌ಗೆ ಭೇಟಿ ನೀಡಿ, ನಿಗದಿಪಡಿಸಿರುವ ಕೊನೆಯ ದಿನಾಂಕ, ನಿಗದಿಪಡಿಸಿದ ಶುಲ್ಕ, ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಅಗತ್ಯ ಸೂಚನೆಗಳನ್ನು ಮತ್ತು ಇನ್ನಿತರ ವಿವರಗಳನ್ನು ಪಡೆಯಬಹುದು.

ಸಹಿ/– ಕುಲಸಚಿವರು
ವಾ.ಸಾ.ಸಂ.ಇ/ಕಲಬುರಗಿ/95/ಕೆ.ಎಸ್.ಎಂ.ಸಿ.&ಎ/2025–26 ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿದೆ)
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೃಭಾಜನಿನಿ, ಐಬಿಸಿ, ನಿಮಪೋ ವಿಭಾಗ, ರಾಂಪೂರ (ಪ.ಅ)
ತಾ: ಸಿಂದಗಿ, ಜಿ: ವಿಜಯಪುರ. ದೂರವಾಣಿ ಸಂಖ್ಯೆ: 08488–224328, ಇ–ಮೇಲ್:kbjnleerampur@gmail.com.

ಸಂಖ್ಯೆ:ಕೃಭಾಜನಿನಿ/ಐಬಿಸಿ/ನಿಮಪೋ/ವಿರಾಂ/ಪಿಬಿ–2/2025–26/193 ದಿನಾಂಕ:07.05.2025

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಪರವಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ, ರಾಂಪೂರ (ಪ.ಅ) ಇವರು Consultancy services for Preparation of DPR, Estimate and DTP for the work of: Survey, Investigation, Design of SCADA and PLC system for pumps to maintain the required discharge in canal network of Indi Lift Canal and SCADA system for canal network management system from Ch: 0.00 to 97.300 km (including main canal/distributaries/ laterals/ DPO's) and from Ch: 97.300 to 147.00 of Indi Lift Canal (including Main canal / Distry Head Regulators). **ಕಾಮಗಾರಿಯನ್ನು ರೂ: 130.00 ಲಕ್ಷಗಳ ಮೊತ್ತದ ಕಾಮಗಾರಿಗೆ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್ ಸೈಟ್ https://kppp.karnataka.gov.in ಮಾಹಿತಿ ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು.**

- ಕೆ.ಪಿ.ಪಿ.ಪಿ.ಪೋರ್ಟಲ್ https://kppp.karnataka.gov.in ವೆಬ್‌ಸೈಟ್ ನಿಂದ ಖಾಲಿ ಟೆಂಡರ್ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು ಮತ್ತು ಭರ್ತಿ ಮಾಡಿದ ಬಿಡ್ ದಾಖಲೆಗಳನ್ನು ಸಲ್ಲಿಸುವ ದಿನಾಂಕ: 08–05–2025 ರಿಂದ 16–05–2025 ರ ಸಾಯಂಕಾಲ 5.00 ಗಂಟೆಯವರೆಗೆ ಸಲ್ಲಿಸುವುದು.
- ಗುತ್ತಿಗೆದಾರರು ದಿನಾಂಕ: 08–05–2025 ರಿಂದ 16–05–2025 ರ ಸಾಯಂಕಾಲ 5.00 ಗಂಟೆಯವರೆಗೆ ಇ–ಟೆಂಡರ ಪುಸ್ತಕವನ್ನು Access ಮಾಡಬಹುದು.
- ಭರ್ತಿಗೊಳಿಸಿದ ಇ–ಟೆಂಡರ ಪುಸ್ತಕವನ್ನು ದಿನಾಂಕ: 08–05–2025 ರಿಂದ 16–05–2025 ರ ಸಾಯಂಕಾಲ 5.00 ಗಂಟೆಯವರೆಗೆ ಸಲ್ಲಿಸುವದು.
- ತಾಂತ್ರಿಕ ಬಿಡ್ಡನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ನಿಮಪೋ ವಿಭಾಗ ರಾಂಪೂರ (ಪಿಎ) ತಾ: ಸಿಂದಗಿ ಜಿಲ್ಲೆ: ವಿಜಯಪೂರ ಕಛೇರಿಯಲ್ಲಿ ದಿನಾಂಕ: **19–05–2025** ರ ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು.
- ಆರ್ಥಿಕ ಬಿಡ್ಡನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ನಿಮಪೋ ವಿಭಾಗ ರಾಂಪೂರ (ಪಿಎ) ತಾ: ಸಿಂದಗಿ ಜಿಲ್ಲೆ: ವಿಜಯಪೂರ ಕಛೇರಿಯಲ್ಲಿ ದಿನಾಂಕ: **21–05–2025** ರ ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು.
- ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ ರಾಂಪೂರ (ಪ.ಅ) ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ https://kppp.karnataka.gov.in ವೆಬ್‌ಸೈಟ್ ನಿಂದ ಪಡೆಯಬಹುದು.
- ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವುದು.
- ಯಾವುದೇ ಕಾರಣ ನೀಡದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಐಬಿಸಿ ನಿಮಪೋ ವಿಭಾಗ,
ರಾಂಪೂರ (ಪಅ)

ವಾಸಾಸಂಇ/ವಿಜಯಪುರ/66/ಕೆಎಸ್ಎಂಸಿಎ/2025–26

ತುಮಕೂರು ಮಹಾನಗರ ಪಾಲಿಕೆ, ತುಮಕೂರು

ದೂ–2271200, 2272200, ಫ್ಯಾಕ್ಸ್: 2275106,
ಇ–ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.mrc.gov.in

ಸಂ:ತುಮಪಾ:ಕಾಅ:ಇ.ಟೆಂಡರ್:01/2025–26 ದಿನಾಂಕ: 07.05.2025

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ತುಮಕೂರು ಮಹಾನಗರಪಾಲಿಕೆಯ ಉಗ್ರಾಣ ಶಾಖೆ, ಕಛೇರಿ ಆವರಣ ಮತ್ತು ಪಂಪ್‌ಹೌಸ್ ಆವರಣದಲ್ಲಿರುವ ನೀರು ಸರಬರಾಜು ಮಂಡಲ ಬೀದಿದೀಪಗಳ ನಿರ್ವಹಣೆ ಹಾಗೂ ಇತರೆ ಅನುಪಯುಕ್ತ ಸಾಮಗ್ರಿಗಳ ಇ–ಹರಾಜು, 2021–22ನೇ ಸಾಲಿನ 15ನೇ ಹಣಕಾಸು ಎಂ.ಎನ್.ಪಿ.ಸಿ ಅನುದಾನದಡಿ 01 ಸಂಖ್ಯೆ ನೀರು ಸರಬರಾಜು ಸಂಬಂಧಿತ ಅಲ್ಪಾವಧಿ ಮರುಟೆಂಡರ್, 2024–25ನೇ ಸಾಲಿನ ಎಸ್.ಎಫ್.ಸಿ ಅನುದಾನದಡಿ 01 ಸಂಖ್ಯೆ ನೀರು ಸರಬರಾಜು ಸಂಬಂಧಿತ ಅಲ್ಪಾವಧಿ ಮರುಟೆಂಡರ್ ಮತ್ತು 01 ಸಂಖ್ಯೆ ಸೇವಾ ಸಂಬಂಧಿತ (ಪೂರ್ಣಾವಧಿ)ಕಾಮಗಾರಿಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಡಬಲ್ ಕವರ್ ಪದ್ಧತಿಯಲ್ಲಿ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು(ವಿದ್ಯುತ್/ ನೀರುಸರಬರಾಜು) ರವರು ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು/ ಏಜನ್ಸಿದಾರರು/ ಸರಬರಾಜುದಾರರು ಕೆಪಿಪಿಪಿ ಪೋರ್ಟಲ್ ವೆಬ್ ಸೈಟ್ kppp.karnataka. gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಕಛೇರಿ ಸಮಯದಲ್ಲಿ ಮಹಾನಗರ ಪಾಲಿಕೆಯ ಕಛೇರಿಯ ವಿದ್ಯುತ್ ಶಾಖೆಗೆ ಭೇಟಿ ನೀಡಿ ಪಡೆಯಬಹುದಾಗಿದೆ. ಮಹಾನಗರ ಪಾಲಿಕೆಯ ಸಹಾಯಕ ದೂರವಾಣಿ ಸಂಖ್ಯೆ: 9449872511 ರಿಂದ ಮಾಹಿತಿ ಪಡೆಯಬಹುದು.

ಸೂಚನೆ : 1) ಈ ಮೇಲ್ಕಂಡ ಕಾಮಗಾರಿಯ ಮುಂದೆ ನಮೂದಿಸಿದ ಅಂದಾಜು ಮೊತ್ತ ಹಾಗೂ ಟೆಂಡರ್‌ಗಿಟ್ಟ ಮೊತ್ತ ದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿದ ಟೆಂಡರ್‌ಗಿಟ್ಟ ಮೊತ್ತವು ಅಂತಿಮವಾಗಿರುತ್ತದೆ. 2) ಈ ಕೆಳಕಂಡ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಅದಲ್ಲಿ ಆ ದಿನಾಂಕಗಳನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪ್ರತ್ಯೇಕ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಅಲ್ಪಾವಧಿ ಟೆಂಡರ್ ಆಕ್ಷೇಪಣೆ ಸಲ್ಲಿಸುವ ದಿನಾಂಕ ಮತ್ತು ವೇಳೆ : 13–05–2025 ಸಮಯ : 17.15 ನಂತರ. ಅಲ್ಪಾವಧಿ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 14–05–2025 ಸಮಯ : 17.00. ಅಲ್ಪಾವಧಿ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ : 15–05–2025 ಸಮಯ : 17.15 ನಂತರ.

ಪೂರ್ಣಾವಧಿ ಟೆಂಡರ್ ಆಕ್ಷೇಪಣೆ ಸಲ್ಲಿಸುವ ದಿನಾಂಕ ಮತ್ತು ವೇಳೆ : 20–05–2025 ಸಮಯ : 17.15 ನಂತರ. ಪೂರ್ಣಾವಧಿ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 22–05–2025 ಸಮಯ : 17.00. ಪೂರ್ಣಾವಧಿ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ : 23–05–2025 ಸಮಯ : 17.15 ನಂತರ.

ಹರಾಜು ಪ್ರಕ್ರಿಯೆಯೆ ಆಕ್ಷೇಪಣೆ ಸಲ್ಲಿಸುವ ದಿನಾಂಕ ಮತ್ತು ವೇಳೆ : 21–04–2025 : 16.30 ನಂತರ.ಹರಾಜು ಪ್ರಕ್ರಿಯೆಗೆ ನೋಂದಣಿ ಮಾಡಿಕೊಳ್ಳುವ ಅಂತಿಮ ದಿನಾಂಕ ಮತ್ತು ವೇಳೆ : 23–04–2025 ಸಮಯ : 16.30 ವರೆಗೆ ಹರಾಜು ನಡೆಯುವ ದಿನಾಂಕ ಮತ್ತು ವೇಳೆ : 26–05–2025 ಬೆಳಗ್ಗೆ 10.30 ರಿಂದ ಸಂಜೆ 4.30 ವರೆಗೆ.

ಸಹಿ/–ಕಾರ್ಯಪಾಲಕ ಅಭಿಯಂತರರು,
ತುಮಕೂರು ಮಹನಗರ ಪಾಲಿಕೆ, ತುಮಕೂರು.

DIPR/TUM/53/KSMCA/2025-26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಬ್ಯಾಟರಾಯನಪುರ ವಿಭಾಗ, ಸಂಖ್ಯೆ 2152/20, ಡಿಫೆನ್ಸ್ ಕಾಲೋನಿ, ಬೆಂಗಳೂರು
ಜಲಮಂಡಳಿ ಟ್ಯಾಂಕ್ ರಸ್ತೆ, ಸಹಕಾರನಗರ, ಬೃ.ಬೆಂ.ಮ.ಪಾಲಿಕೆ ಕಚೇರಿ, ಬ್ಯಾಟರಾಯನಪುರ, ಬೆಂಗಳೂರು – 560 092

ಸಂಖ್ಯೆ: ಕಾಪಾಅ/ಬ್ಯಾಪು/ಬೃಬೆಂಮಪಾ/ಕೆಪಿಪಿಪಿ/02/2025.26 ದಿನಾಂಕ: 09.05.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಟೆಂಡರ್)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬೃ.ಬೆಂ.ಮ.ಪಾಲಿಕೆ ಇವರು ಸ್ಟ್ಯಾಂಡರ್ಡ್ ಬಿಡ್ ದಾಖಲೆ ರಂತೆ ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ	ಕಾಮಗಾರಿಗಳ ಹೆಸರು / ವರ್ಗೀಕರಣ
1.	ಬ್ಯಾಟರಾಯನಪುರ ಉಪವಿಭಾಗದ ವಾರ್ಡ್ ಸಂಖ್ಯೆ–05, ಕೋಗಿಲು, ಕೋಗಿಲು ಬಡಾವಣೆ, ಅಗ್ರಹಾರ, ಕಟ್ಟಿಗೇನಹಳ್ಳಿ, ಪಾಲನಹಳ್ಳಿ, ಚೊಕ್ಕನಹಳ್ಳಿ ಸುತ್ತಮುತ್ತ ವಾರ್ಡ್ ಸಂಖ್ಯೆ–06 ಜಕ್ಕೂರಿನ ಕೋಗಿಲು ಮತ್ತು ಬಸವಲಿಂಗಪ್ಪನವರ, ಜಕ್ಕೂರು ಕಾಲೋನಿ, ಸಂಪಿಗೆಹಳ್ಳಿ ಕಾಲೋನಿ, ಅಗ್ರಹಾರ ಕಾಲೋನಿ ಸುತ್ತಮುತ್ತ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು ಹಾಗೂ ಜಕ್ಕೂರಿನಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ ಮಾಡುವುದು. (ಸಾಮಾನ್ಯರಿಗೆ) **ಕಾಮಗಾರಿಯ ಅಂದಾಜು ಮೊತ್ತ: ₹.650.00 ಲಕ್ಷಗಳು ಇಎಂಡಿ ಮೊತ್ತ: ₹.975000.00**
2.	ಕೊಡಿಗೇಹಳ್ಳಿ ಉಪವಿಭಾಗದ ವಾರ್ಡ್ ಸಂಖ್ಯೆ–05ರ ಕೋಗಿಲು ಪ.ಜಾ/ಪ.ಪಂಗಡದ ಸ್ಮಶಾನಕ್ಕೆ ಕಾಂಪೌಂಡ್ ಗೋಡೆ ನಿರ್ಮಾಣ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. ವಾರ್ಡ್ ಸಂಖ್ಯೆ–07, ಥಣಿಸಂದ್ರದ ರಾಚೇನಹಳ್ಳಿ ಪ.ಜಾ/ಪ.ಪಂಗಡದ ಸ್ಮಶಾನಕ್ಕೆ ಕಾಂಪೌಂಡ್ ಗೋಡೆ ನಿರ್ಮಾಣದ ಉಳಿಕೆ ಕಾಮಗಾರಿ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು ಹಾಗೂ ಥಣಿಸಂದ್ರ ಕಾಲೋನಿ, ಸಾರಾಯಿಪಾಳ್ಯ ಕಾಲೋನಿ, ರಾಚೇನಹಳ್ಳಿ ಕಾಲೋನಿ, ಮೇಸ್ತ್ರಿಪಾಳ್ಯ ಸುತ್ತಮುತ್ತಲ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು ವಾರ್ಡ್ ಸಂಖ್ಯೆ–08ರ ಅಮೃತಹಳ್ಳಿ, ಜಕ್ಕೂರು ಬಡಾವಣೆಯಲ್ಲಿ ಸಮುದಾಯ ಭವನಕ್ಕೆ ಹೆಚ್ಚುವರಿ ಕಾಮಗಾರಿಗಳನ್ನು ಮಾಡುವುದು ಮತ್ತು ವಾರ್ಡ್ ಸಂಖ್ಯೆ–11ರ ಮಾರುತಿನಗರ, ಮಾರುತಿ ಬಡಾವಣೆ, ಎನ್‌ಟಿಐ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (ಸಾಮಾನ್ಯರಿಗೆ) **ಕಾಮಗಾರಿಯ ಅಂದಾಜು ಮೊತ್ತ: ₹.650.00 ಲಕ್ಷಗಳು ಇಎಂಡಿ ಮೊತ್ತ: ₹.975000.00**
3.	ವಿದ್ಯಾರಣ್ಯಪುರ ಉಪವಿಭಾಗದ ವಾರ್ಡ್ ಸಂಖ್ಯೆ–12ರಲ್ಲಿ ರಘುರಾಮ ಬಡಾವಣೆಯಲ್ಲಿ ಹೊಸ ಉದ್ದೇಶಿತ ಸಮುದಾಯ ಭವನಕ್ಕೆ ಹೆಚ್ಚುವರಿ ಮಹಡಿಗಳನ್ನು ನಿರ್ಮಾಣ ಮಾಡುವುದು ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. ವಾರ್ಡ್ ಸಂಖ್ಯೆ–14ರಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣ ಮಾಡುವುದು ಮತ್ತು ವಾರ್ಡ್ ಸಂಖ್ಯೆ–11, ಹೊಸ ವಾರ್ಡ್ ಸಂಖ್ಯೆ–14 [ಕುವೆಂಪುನಗರ]ದ ಕುವೆಂಪುನಗರ, ಹೊಸಬಾಳುನಗರ, ಆಶ್ರಯ ಬಡಾವಣೆ, ಸಿಂಗಾಪುರ, ನಾಯ್ಡು ಬಡಾವಣೆ, ಮಾರಿಯಮ್ಮ ಬ್ಲಾಕ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. **ಕಾಮಗಾರಿಯ ಅಂದಾಜು ಮೊತ್ತ: ₹.700.00 ಲಕ್ಷಗಳು ಇಎಂಡಿ ಮೊತ್ತ: ₹.1050000.00**
4.	ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ–05ರ ಬೆಲ್ಲಹಳ್ಳಿ ಮತ್ತು ಕೋಗಿಲು ಬಡಾವಣೆ ಸುತ್ತಮುತ್ತ ವಾರ್ಡ್ ಸಂಖ್ಯೆ–07ರ ಸಾರಾಯಿಪಾಳ್ಯ, ವಿದ್ಯಾಸಾಗರ ಬಡಾವಣೆ ಮತ್ತು ಸುತ್ತಮುತ್ತ ವಾರ್ಡ್ ಸಂಖ್ಯೆ–09ರ ಮರಿಯಣ್ಣಪಾಳ್ಯ ಚಿನ್ನಪ್ಪ ಬಡಾವಣೆ ಮತ್ತು ಸುತ್ತಮುತ್ತ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು ಹಾಗೂ ವಾರ್ಡ್ ಸಂಖ್ಯೆ–13ರ ನರಸೀಪುರ ಬಡಾವಣೆಯಲ್ಲಿ ಸಮುದಾಯ ಭವನ ಕಟ್ಟಡ ನಿರ್ಮಾಣ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. **ಕಾಮಗಾರಿಯ ಅಂದಾಜು ಮೊತ್ತ: ₹.500.00 ಲಕ್ಷಗಳು ಇಎಂಡಿ ಮೊತ್ತ: ₹.750000.00**
5.	ಬ್ಯಾಟರಾಯನಪುರ ಉಪವಿಭಾಗದ ವಾರ್ಡ್ ಸಂಖ್ಯೆ–05ರ ಕಟ್ಟಿಗೇನಹಳ್ಳಿ, ಪಾಲನಹಳ್ಳಿ, ದ್ವಾರಕಾನಗರ ಸುತ್ತಮುತ್ತು ವಾರ್ಡ್ ಸಂಖ್ಯೆ–06, ಜಕ್ಕೂರು, ಜಿಕೆವಿಕೆ ಬಡಾವಣೆ ಸುತ್ತಮುತ್ತ ಹಾಗೂ ವಾರ್ಡ್ ಸಂಖ್ಯೆ–07ರ ರಾಯಲ್ ಎನ್‌ಕ್ಲೇವ್ ಮತ್ತು ಚಾಮುಂಡೇಶ್ವರಿ ಬಡಾವಣೆ ಸುತ್ತಮುತ್ತ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (ಸಾಮಾನ್ಯರಿಗೆ) **ಕಾಮಗಾರಿಯ ಅಂದಾಜು ಮೊತ್ತ: ₹.500.00 ಲಕ್ಷಗಳು ಇಎಂಡಿ ಮೊತ್ತ: ₹.750000.00**

ಟೆಂಡರ್ ವೇಳಾಪಟ್ಟಿ: (1) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **19.05.2025** ರ ಮಧ್ಯಾಹ್ನ **3:00** ಗಂಟೆಗೆ ನಡೆಸಲಾಗುವುದು. (2) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ **23.05.2025**ರ ಸಂಜೆ **4:00** ಗಂಟೆಯವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **26.05.2025**ರ ಬೆಳಿಗ್ಗೆ **11:00** ಗಂಟೆಗೆ ಸಾಧ್ಯವಾದಲ್ಲಿ ಕಾರ್ಯಪಾಲಕ ಅಭಿಯಂತರರ ಕಚೇರಿಯಲ್ಲಿ ತೆರೆಯಲಾಗುವುದು. (4) (ದ್ವಿಲಕೋಟೆ ಪದ್ದತಿಗೆ) ಆರ್ಥಿಕ ಬಿಡ್‌ಗಳನ್ನು ದಿನಾಂಕ **27.05.2025**ರ ಬೆಳಿಗ್ಗೆ **11:00** ಗಂಟೆಗೆ ತೆರೆಯಲಾಗುವುದು ಸಾಧ್ಯವಾದಲ್ಲಿ .

ಸಹಿ/– ಕಾರ್ಯಪಾಲಕ ಅಭಿಯಂತರರು,
ಬ್ಯಾಟರಾಯನಪುರ ವಿಭಾಗ

ಷೇರುಪೇಟೆ ವಹಿವಾಟು 880



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,273
ಇಂದಿನ ಅಂತ್ಯ	24,008
▼	265
ದಿನದ ಕನಿಷ್ಠ	23,935

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹545
12 ಕ್ಕೆ	₹72
ಮೈಸೂರು	
100ಕ್ಕೆ	₹560

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರ.ಕೆ)	₹300-545
ದ್ವಿತಳಿ (ಬಿ.ವಿ)	₹202-662

ಎನ್.ಆರ್.ಪುರ ರಬ್ಬರ್ (ಪ್ರತಿ ಕೆಜಿಗೆ)

ಆರ್‌ಎಸ್‌ಎಸ್-4	₹191
ಆರ್‌ಎಸ್‌ಎಸ್-5	₹186
ಗುಡ್ ಲಾಟ್	₹176

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹27900
ಎಸಿ	₹16100
ಆರ್‌ಪಿ	₹22000
ಆರ್‌ಸಿ	₹12280

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ		ಸರಕು	51700-8770[?]	ಚಾಲಿ	34018-43500
ಚಾಲಿ	38569-43098	ಸಿದ್ದಾಪುರ		ಕೆಂಪುಗೋಟು	14199-25199
ಕೋಕ	6099-20189	ಬಿಳಿಗೋಟು	26109-31659	ರಾಶಿ	41699-46909
ಚಿಪ್ಪು	26899-32019	ಚಾಲಿ	33699-41699	ಯಲ್ಲಾಪುರ	
ಪುತ್ತೂರು		ಕೋಕ	17699-24569	ಅಪಿ	65969-65969
ಕೋಕ	21000-30000	ಕೆಂಪುಗೋಟು	19909-21619	ಬಿಳಿಗೋಟು	14899-33695
ಹೊಸತು	26000-46000	ರಾಶಿ	41099-48509	ಚಾಲಿ	33900-42599
ಶಿವಮೊಗ್ಗ		ತಟ್ಟಿಬೆಟ್ಟೆ	26099-32099	ಕೋಕ	7710-19299
ಬೆಟ್ಟೆ	49000-59299	ಶಿರಸಿ		ಕೆಂಪುಗೋಟು	15011-27610
ಗೊರಬಲು	16558-31069	ಬೆಟ್ಟೆ	24521-44001	ರಾಶಿ	39869-55950
ರಾಶಿ	42366-57599	ಬಿಳಿಗೋಟು	18699-31699	ತಟ್ಟಿಬೆಟ್ಟೆ	29309-38766

ಭಾರತ–ಪಾಕಿಸ್ತಾನ ಬಿಕ್ಕಟ್ಟು • ಎರಡು ದಿನದಲ್ಲಿ ₹7 ಲಕ್ಷ ಕೋಟಿ ನಷ್ಟ

ಷೇರುಪೇಟೆಯಲ್ಲಿ ಕರಡಿ ಕುಣಿತ

ಮುಂಬೈ (ಪಿಟಿಐ): ಭಾರತ ಮತ್ತು ಪಾಕಿಸ್ತಾನದ ನಡುವೆ ತಲೆದೋರಿರುವ ಬಿಕ್ಕಟ್ಟಿನಿಂದಾಗಿ ಸತತ ಎರಡನೇ ದಿನವಾದ ಶುಕ್ರವಾರವೂ ದೇಶೀಯ ಷೇರುಪೇಟೆಯಲ್ಲಿ ಕರಡಿ ಕುಣಿತ ಜೋರಾಯಿತು. ಇದರಿಂದ ಸೂಚ್ಯಂಕಗಳು ಶೇ 1ರಷ್ಟು ಕುಸಿತ ಕಂಡಿವೆ.

ಎರಡು ದಿನಗಳಲ್ಲಿ ಹೂಡಿಕೆದಾರರ ಸಂಪತ್ತು ₹7 ಲಕ್ಷ ಕೋಟಿ ಕರಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 880 ಅಂಶ ಇಳಿಕೆ ಕಂಡು, 79,454 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 265 ಅಂಶ ಇಳಿಕೆ ಕಂಡು, 24,008 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ಗುರುವಾರ ರಾತ್ರಿ ಪಾಕಿಸ್ತಾನವು ಜಮ್ಮು ಮತ್ತು ಪಠಾಣ್‌ಕೋಟ್ ಭಾಗದಲ್ಲಿ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿದೆ. ಇವುಗಳನ್ನು ಭಾರತೀಯ ಸೇನೆಯು ಹೊಡೆದುರುಳಿಸಿದೆ. ಇದರಿಂದ ಉಭಯ ದೇಶಗಳ ಗಡಿ ಭಾಗದಲ್ಲಿ ಉದ್ವಿಗ್ನ ಸ್ಥಿತಿ ಹೆಚ್ಚಿದೆ. ಇದು ಷೇರುಪೇಟೆ ಮೇಲೂ ಪರಿಣಾಮ ಬೀರಿದೆ ಎಂದು ತಜ್ಞರು ತಿಳಿಸಿದ್ದಾರೆ.

‘ಸಂಘರ್ಷದ ಹೊರತಾಗಿಯೂ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ದೇಶದ ಈಕ್ವಿಟಿ ಮಾರುಕಟ್ಟೆಯಲ್ಲಿ ಹೂಡಿಕೆ ಮುಂದುವರಿಸಿದ್ದಾರೆ. ಆದರೆ, ರಿಟೇಲ್ ಹೂಡಿಕೆದಾರರು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಸೆನ್ಸೆಕ್ಸ್ ಗುಚ್ಛದಲ್ಲಿನ ಐಸಿಐಸಿಐ ಬ್ಯಾಂಕ್, ಪವರ್ ಗ್ರಿಡ್, ಅಲ್ಟ್ರಾಟೆಕ್ ಸಿಮೆಂಟ್, ಬಜಾಜ್ ಫೈನಾನ್ಸ್, ಎಚ್‌ಡಿಎಫ್‌ಸಿ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್, ಬಜಾಜ್ ಫಿನ್‌ಸರ್ವ್, ಅದಾನಿ ಪೋರ್ಟ್ಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಎನ್‌ಟಿಪಿಸಿ ಷೇರಿನ ಮೌಲ್ಯ ಇಳಿಕೆಯಾಗಿದೆ.

ಟಾಟಾ ಮೋಟರ್ಸ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಷೇರಿನ ಮೌಲ್ಯ ಏರಿಕೆ ಕಂಡಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಶೇ 1.53ರಷ್ಟು ಹೆಚ್ಚಳವಾಗಿದ್ದು, ಪ್ರತಿ ಬ್ಯಾರೆಲ್‌ಗೆ 63.80 ಡಾಲರ್ ಆಗಿದೆ.

ಕರಾಚಿ ಸೂಚ್ಯಂಕ ಚೇತರಿಕೆ

ಕರಾಚಿ (ಪಿಟಿಐ): ಪಾಕಿಸ್ತಾನದ ಪ್ರಮುಖ ಷೇರುಪೇಟೆಯಾದ ಕರಾಚಿ ಸ್ಟಾಕ್ ಎಕ್ಸ್‌ಚೇಂಜ್–100 ಸೂಚ್ಯಂಕವು ಶುಕ್ರವಾರದ ವಹಿವಾಟಿನಲ್ಲಿ ಚೇತರಿಕೆ ಕಂಡಿದೆ.

799 ಅಂಶ ಏರಿಕೆ ಕಂಡಿದ್ದು, 1,04,426 ಅಂಶಗಳಲ್ಲಿ ಸ್ಥಿರಗೊಂಡಿತು.

‘ಷೇರು ಮಾರುಕಟ್ಟೆಯಲ್ಲಿ ಅಲ್ಪಾವಧಿಯ ಏರಿಳಿತ ಸಹಜವಾದುದು. ಅನಿಶ್ಚಿತ ಸ್ಥಿತಿ ಸಂದರ್ಭದಲ್ಲಿ ಎಚ್ಚರಿಕೆಯಿಂದ ಹೂಡಿಕೆ ಮಾಡುವಂತೆ ನಮ್ಮ ಹೂಡಿಕೆದಾರರಿಗೆ ಮಾಹಿತಿ ನೀಡಲಾಗಿದೆ’ ಎಂದು ಚೇಸ್ ಸೆಕ್ಯುರಿಟೀಸ್‌ನ ನಿರ್ದೇಶಕ ಯೂಸುಫ್ ಎಂ. ಫಾರೂಕ್ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಬಾಸ್ಮತಿ ಅಕ್ಕಿ ದರ ಏರಿಕೆ

ನವದೆಹಲಿ (ಪಿಟಿಐ): ‘ಮಾರುಕಟ್ಟೆಯಲ್ಲಿ ಬಾಸ್ಮತಿ ಅಕ್ಕಿ ದರ ಏರಿಕೆಗೆ ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಘರ್ಷವು ಕಾರಣವಾಗಿಲ್ಲ’ ಎಂದು ಅಖಿಲ ಭಾರತ ಅಕ್ಕಿ ರಫ್ತುದಾರರ ಸಂಘ (ಎಐಆರ್‌ಇಎ) ತಿಳಿಸಿದೆ.

ಬಾಸ್ಮತಿ ಅಕ್ಕಿ (1509 ಮತ್ತು 1718 ಹೆಸರಿನ ತಳಿ) ದರವು ಮಾರ್ಚ್‌ನಿಂದಲೇ ಅಲ್ಪಮಟ್ಟಿಗೆ ಏರಿಕೆ ಕಂಡಿತ್ತು. ಸೌದಿ ಅರೇಬಿಯಾ, ಇರಾನ್ ಮತ್ತು ಇರಾಕ್‌ನಿಂದ ಹೆಚ್ಚಿನ ಪ್ರಮಾಣದಲ್ಲಿ ಬೇಡಿಕೆ ಕಂಡುಬಂದಿದೆ. ಆದರೆ, ಇದಕ್ಕೆ ಅನುಗುಣವಾಗಿ ಪೂರೈಕೆ ಇಲ್ಲದಂತಾಗಿದೆ. ಇದೇ ದರ ಏರಿಕೆಗೆ ಕಾರಣವಾಗಿದೆ ಎಂದು ಸಂಘದ ಅಧ್ಯಕ್ಷ ಸತೀಶ್ ಗೋಯಲ್ ಹೇಳಿದ್ದಾರೆ.

ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಬಾಸ್ಮತಿ ಅಕ್ಕಿ (1509 ತಳಿ) ದರವು ಕೆ.ಜಿಗೆ ₹62 ಇತ್ತು. ಆದರೆ, ಅಧಿಕ ಉತ್ಪಾದನೆಯಾಗಿದ್ದರಿಂದ ದರ ಇಳಿಕೆ ಕಂಡಿತ್ತು. ಅಲ್ಲದೆ, ಬಾಸ್ಮತಿ ಇತರ ತಳಿಗಳ ಉತ್ಪಾದನೆಯಲ್ಲಿನ ಹೆಚ್ಚಳವು ದರ ಇಳಿಕೆಗೆ ಕಾರಣವಾಗಿತ್ತು ಎಂದು ಸಂಘದ ಮಾಜಿ ಅಧ್ಯಕ್ಷ ವಿಜಯ್ ಸೇತಿಯಾ ಹೇಳಿದ್ದಾರೆ.

ಫೆಬ್ರುವರಿಯಲ್ಲಿ ಈ ತಳಿಯ ಅಕ್ಕಿ ಬೆಲೆ ಕೆ.ಜಿಗೆ ₹52 ಇತ್ತು, ಸದ್ಯ ₹58ಕ್ಕೆ ಮುಟ್ಟಿದೆ ಎಂದಿದ್ದಾರೆ. 2024-25ರಲ್ಲಿ ಭಾರತವು 60 ಲಕ್ಷ ಟನ್ ಬಾಸ್ಮತಿ ಅಕ್ಕಿಯನ್ನು ರಫ್ತು ಮಾಡಿದ್ದರೆ, ಪಾಕಿಸ್ತಾನವು 1 ಕೋಟಿ ಟನ್‌ನಷ್ಟು ರಫ್ತು ಮಾಡಿದೆ.

ಸಿಎ ಪರೀಕ್ಷೆ ಮುಂದೂಡಿಕೆ

ನವದೆಹಲಿ (ಪಿಟಿಐ): ಭಾರತೀಯ ಲೆಕ್ಕ ಪರಿಶೋಧಕರ ಸಂಸ್ಥೆಯು (ಐಸಿಎಐ) ಶುಕ್ರವಾರದಿಂದ ಮೇ 14ರ ವರೆಗೆ ಹಮ್ಮಿಕೊಂಡಿದ್ದ ಅಂತಿಮ ಸಿಎ, ಸಿಎ ಮಧ್ಯಂತರ (ಇಂಟರ್‌ಮೀಡಿಯೆಟ್) ಮತ್ತು ಮೌಲ್ಯಮಾಪನ ಪರೀಕ್ಷೆಯನ್ನು ಮುಂದೂಡಿದೆ.

ದೇಶದಲ್ಲಿ ತಲೆದೋರಿರುವ ಉದ್ವಿಗ್ನ ಸ್ಥಿತಿಯಿಂದಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಪರಿಷ್ಕೃತ ಪರೀಕ್ಷಾ ದಿನಾಂಕವನ್ನು ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುವುದು ಎಂದು ತಿಳಿಸಿದೆ.

55,666 ವಿದ್ಯಾರ್ಥಿಗಳು ಅಂತಿಮ ಪರೀಕ್ಷೆ ಹಾಗೂ 1.02 ಲಕ್ಷ ವಿದ್ಯಾರ್ಥಿಗಳು ಸಿಎ ಮಧ್ಯಂತರ ಪರೀಕ್ಷೆಗೆ ಹೆಸರು ನೋಂದಾಯಿಸಿದ್ದಾರೆ.

138 ವಿಮಾನ ಹಾರಾಟ ರದ್ದು

ನವದೆಹಲಿ (ಪಿಟಿಐ): ಭಾರತ ಮತ್ತು ಪಾಕಿಸ್ತಾನದ ನಡುವಿನ ಬಿಕ್ಕಟ್ಟಿನಿಂದಾಗಿ ಭದ್ರತೆ ದೃಷ್ಟಿಯಿಂದ ದೆಹಲಿ ವಿಮಾನ ನಿಲ್ದಾಣದಲ್ಲಿ ಶುಕ್ರವಾರ 138 ವಿಮಾನಗಳ ಹಾರಾಟವನ್ನು ರದ್ದುಪಡಿಸಲಾಗಿದೆ.

‘ಆಪರೇಷನ್ ಸಿಂಧೂರ’ ಕಾರ್ಯಾಚರಣೆ ಬಳಿಕ ದೇಶದಾದ್ಯಂತ 27 ವಿಮಾನ ನಿಲ್ದಾಣಗಳ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಹಾಗಾಗಿ, ನಿಗದಿತ ವೇಳಾಪಟ್ಟಿಯಲ್ಲಿ ಸಂಚರಿಸಬೇಕಿದ್ದ ಹಲವು ವಿಮಾನಗಳ ಹಾರಾಟವನ್ನು ರದ್ದುಪಡಿಸಲಾಗಿದೆ.

ದೆಹಲಿ ವಿಮಾನ ನಿಲ್ದಾಣದ ಕಾರ್ಯಾಚರಣೆಯು ಸಹಜ ಸ್ಥಿತಿಯಲ್ಲಿದೆ. ಆದರೂ, ಭದ್ರತೆಯ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ದೆಹಲಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶಿವಗಣಾರಾಧನಾ

ಲಿಂ|| ಶ್ರೀಮತಿ ಲಲಿತಮ್ಮನವರು
(ಶ್ರೀ ಎಸ್. ರಾಜಣ್ಣನವರ ಧರ್ಮಪತ್ನಿ)
ಮರಣ : 01-05-2025
ದಿನಾಂಕ: 11-05-2025ನೇ ಭಾನುವಾರ ಬೆಳಿಗ್ಗೆ 11 ಗಂಟೆಗೆ ದೊಡ್ಡಬಳ್ಳಾಪುರ ತಾಲ್ಲೂಕು, ಲಿಂಗನಹಳ್ಳಿ ಗ್ರಾಮದಲ್ಲಿ ಏರ್ಪಡಿಸಿರುತ್ತೇವೆ.
ಇಂತಿ ದುಃಖತಪ್ತರು : ಕುಟುಂಬವರ್ಗದವರು ಹಾಗೂ ಬಂಧು-ಮಿತ್ರರು | ದೂ: 98862 60561

ಯೂನಿಯನ್ ಬ್ಯಾಂಕ್‌ಗೆ ₹4,985 ಕೋಟಿ ಲಾಭ

ಮುಂಬೈ (ಪಿಟಿಐ): 2024–25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ನಿವ್ವಳ ಲಾಭದಲ್ಲಿ ಶೇ 50ರಷ್ಟು ಏರಿಕೆಯಾಗಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ಒಟ್ಟು ₹4,985 ಕೋಟಿ ಲಾಭ ಗಳಿಸಿದೆ. 2023–24ನೇ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹3,311 ಕೋಟಿ ಲಾಭ ಗಳಿಸಲಾಗಿತ್ತು ಎಂದು ಬ್ಯಾಂಕ್ ಶುಕ್ರವಾರ ತಿಳಿಸಿದೆ.

ಒಟ್ಟು ವರಮಾನ ₹33,254 ಕೋಟಿ ಆಗಿದೆ. 2024–25ನೇ ಆರ್ಥಿಕ ವರ್ಷದಲ್ಲಿ ಶೇ 11ರಿಂದ ಶೇ 13ರಷ್ಟು ಸಾಲ ನೀಡಿಕೆಯ ಗುರಿ ಹೊಂದಲಾಗಿತ್ತು. ಒಟ್ಟಾರೆ ಶೇ 8.62ರಷ್ಟು ಗುರಿ ಸಾಧನೆಯಾಗಿದೆ ಎಂದು ತಿಳಿಸಿದೆ.

ಮಾಜಿ ಆರ್ಥಿಕ ಸಲಹೆಗಾರ ಕೃಷ್ಣಮೂರ್ತಿ ಸುಬ್ರಮಣಿಯನ್ ಬರೆದಿರುವ ‘ಇಂಡಿಯಾ@100: ಎನ್‌ವಿಷನಿಂಗ್ ಟುಮಾರೋಸ್ ಎಕಾನಾಮಿಕ್ ಪವರ್‌ಹೌಸ್’ ಕೃತಿಯ 2 ಲಕ್ಷ ಪ್ರತಿಗಳನ್ನು ₹7.25 ಕೋಟಿ ವೆಚ್ಚದಡಿ ಖರೀದಿಗೆ ಬ್ಯಾಂಕ್ ಮುಂದಾಗಿರುವ ವಿಷಯ ವಿವಾದಕ್ಕೆ ಕಾರಣವಾಗಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ ಎ. ಮಣಿಮೇಖಲೈ ಈ ಕುರಿತು ಸ್ಪಷ್ಟನೆ ನೀಡಲು ನಿರಾಕರಿಸಿದರು. ಆಡಳಿತ ಮಂಡಳಿಯು ಪ್ರಕರಣ ಕುರಿತು ತನಿಖೆಗೆ ಮುಂದಾಗಿದೆಯೇ? ಎಂಬ ಪ್ರಶ್ನೆಗೂ ಅವರು ಉತ್ತರಿಸಲಿಲ್ಲ.

ಹಿರಿಯ ಅಧಿಕಾರಿಗಳ ಜೊತೆ ಸಚಿವೆ ನಿರ್ಮಲಾ ಸಭೆ

ಸುಗಮ ಬ್ಯಾಂಕಿಂಗ್ ಸೇವೆಗೆ ಸೂಚನೆ



ನಿರ್ಮಲಾ ಸೀತಾರಾಮನ್

ನವದೆಹಲಿ (ಪಿಟಿಐ): ‘ಭಾರತ ಮತ್ತು ಪಾಕಿಸ್ತಾನದ ಸಂಘರ್ಷದ ನಡುವೆ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಯಾವುದೇ ವ್ಯತ್ಯಯ ಅಥವಾ ಬಿಕ್ಕಟ್ಟು ತಲೆದೋರದಂತೆ ಬ್ಯಾಂಕ್‌ಗಳು ಮುಂಜಾಗ್ರತೆವಹಿಸಬೇಕಿದೆ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೂಚಿಸಿದ್ದಾರೆ.

ಶುಕ್ರವಾರ ಸರ್ಕಾರಿ ಮತ್ತು ಖಾಸಗಿ ವಲಯದ ಬ್ಯಾಂಕ್‌ಗಳ ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಿಇಒಗಳು, ವಿಮಾ ಕಂಪನಿಗಳ ಮುಖ್ಯಸ್ಥರು ಸೇರಿ ಪ್ರಮುಖ ಹಣಕಾಸು ಸಂಸ್ಥೆಗಳ ಮುಖ್ಯಸ್ಥರೊಟ್ಟಿಗೆ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಬ್ಯಾಂಕಿಂಗ್ ವಲಯದ ಕಾರ್ಯಾಚರಣೆ ಮತ್ತು ಸೈಬರ್ ಸುರಕ್ಷತೆ ಬಗ್ಗೆ ಪರಿಶೀಲನೆ ನಡೆಸಿದ ಅವರು, ಸೈಬರ್ ಭದ್ರತೆಗೆ ಹೆಚ್ಚಿನ ಒತ್ತು ನೀಡಬೇಕು. ಇಂಟರ್‌ನೆಟ್ ಬ್ಯಾಂಕಿಂಗ್, ಯುಪಿಐ ಸೇವೆಯಲ್ಲಿ ವ್ಯತ್ಯಯವಾಗದಂತೆ ಎಚ್ಚರಿಕೆ ವಹಿಸಬೇಕಿದೆ ಎಂದು ಸೂಚಿಸಿದರು.

ಬ್ಯಾಂಕಿಂಗ್ ವ್ಯವಸ್ಥೆಯ ಭೌತಿಕ ಮತ್ತು ಡಿಜಿಟಲ್ ಸೇವೆಯಲ್ಲಿ ತೊಂದರೆಯಾಗದಂತೆ ಜಾಗ್ರತೆವಹಿಸಬೇಕಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ಸರ್ಕಾರದ ಏಜೆನ್ಸಿಗಳೊಟ್ಟಿಗೆ ಹೊಂದಾಣಿಕೆಯಿಂದ ಕೆಲಸ ನಿರ್ವಹಿಸಬೇಕಿದೆ ಎಂದು ಹೇಳಿದರು.

12 ಸರ್ಕಾರಿ ಬ್ಯಾಂಕ್‌ಗಳಿಗೆ ₹1.78 ಲಕ್ಷ ಕೋಟಿ ಲಾಭ

ನವದೆಹಲಿ (ಪಿಟಿಐ): ಸಾರ್ವಜನಿಕ ವಲಯದ 12 ಬ್ಯಾಂಕ್‌ಗಳು 2024–25ನೇ ಆರ್ಥಿಕ ವರ್ಷದಲ್ಲಿ ಒಟ್ಟು ₹1.78 ಲಕ್ಷ ಕೋಟಿ ನಿವ್ವಳ ಲಾಭ ಗಳಿಸಿವೆ.

2023–24ನೇ ಆರ್ಥಿಕ ವರ್ಷದಲ್ಲಿ ₹1.41 ಲಕ್ಷ ಕೋಟಿ ಲಾಭ ಗಳಿಸಿದ್ದವು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 26ರಷ್ಟು ಹೆಚ್ಚಳವಾಗಿದೆ.

ಈ ಲಾಭದ ಪೈಕಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಪಾಲು ಶೇ 40ರಷ್ಟಿದೆ. ಒಟ್ಟು ₹70,901 ಕೋಟಿ ಲಾಭ ಗಳಿಸಿದೆ. 2023–24ರಲ್ಲಿ ₹61,077 ಕೋಟಿ ಲಾಭ ಗಳಿಸಿತ್ತು.

ಪಂಜಾಬ್ ನ್ಯಾಷನಲ್ ಬ್ಯಾಂಕ್ ₹16,630 ಕೋಟಿ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ₹3,785 ಕೋಟಿ, ಯುಕೊ ಬ್ಯಾಂಕ್ ₹2,445 ಕೋಟಿ, ಬ್ಯಾಂಕ್ ಆಫ್ ಇಂಡಿಯಾ ₹9,219 ಕೋಟಿ, ಬ್ಯಾಂಕ್ ಆಫ್ ಮಹಾರಾಷ್ಟ್ರ ₹5,520 ಕೋಟಿ, ಇಂಡಿಯನ್ ಬ್ಯಾಂಕ್ ₹10,918 ಕೋಟಿ ಲಾಭ ಗಳಿಸಿದೆ.

‘ಸೋಂಕಿತನ ಸಂಪರ್ಕಕ್ಕೆ ಬಂದಿದ್ದ 6 ಮಂದಿ ಸುರಕ್ಷಿತ’

ಮಲಪ್ಪುರ (ಪಿಟಿಐ): ನಿಫಾ ಸೋಂಕಿತ ವ್ಯಕ್ತಿಯ ಸಂಪರ್ಕಕ್ಕೆ ಬಂದಿದ್ದ 6 ಮಂದಿಯಲ್ಲಿ ನಿಫಾ ವೈರಸ್ ಪತ್ತೆಯಾಗಿಲ್ಲ. ಅವರೆಲ್ಲರೂ ಸುರಕ್ಷಿತವಾಗಿದ್ದಾರೆ ಎಂದು ಕೇರಳ ಸರ್ಕಾರ ಶುಕ್ರವಾರ ತಿಳಿಸಿದೆ.

ಆರೋಗ್ಯ ಸಚಿವೆ ವೀಣಾ ಜಾರ್ಜ್ ನೇತೃತ್ವದಲ್ಲಿ ಮಲಪ್ಪುರ ಜಿಲ್ಲಾಡಳಿತ ಕಚೇರಿಯಲ್ಲಿ ಉನ್ನತ ಹಂತದ ಸಮಿತಿ ಸಭೆ ನಡೆಯಿತು.

ಈ ಕುರಿತು ಪ್ರತಿಕ್ರಿಯಿಸಿದ ಸಚಿವೆ ವೀಣಾ ಜಾರ್ಜ್, ‘ನಿಫಾ ಸೋಂಕಿತನ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಜನರ ಸುರಕ್ಷತೆಗಾಗಿ ಜಿಲ್ಲೆಯಲ್ಲಿ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು’ ಎಂದು ಹೇಳಿದ್ದಾರೆ.

ಸೋಂಕಿತನ ಸಂಪರ್ಕಕ್ಕೆ ಬಂದಿದ್ದ 49 ಮಂದಿಯ ಮೇಲೆ ನಿಗಾ ವಹಿಸಲಾಗಿದೆ. ಇದರಲ್ಲಿ 12 ಮಂದಿ ಕುಟುಂಬ ಸದಸ್ಯರಾಗಿದ್ದಾರೆ. ಈ ಪೈಕಿ ಸೋಂಕಿನ ಸೌಮ್ಯ ಗುಣ

ಲಕ್ಷಣ ಕಂಡುಬಂದ ಐವರನ್ನು ಮಂಜೇರಿ ವೈದ್ಯಕೀಯ ಆಸ್ಪತ್ರೆಯಲ್ಲಿ ಮತ್ತು ಎರ್ನಾಕುಲಂನ ಶುಶ್ರೂಷಕಿಯನ್ನು ಪೆರಿಂಥಲ್‌ಮನ್ನ ಆಸ್ಪತ್ರೆಯಲ್ಲಿ ಪ್ರತ್ಯೇಕವಾಗಿರಿಸಲಾಗಿತ್ತು. ಇವರೆಲ್ಲರ ವೈದ್ಯಕೀಯ ಪರೀಕ್ಷಾ ವರದಿ ಬಂದಿದ್ದು, 6 ಮಂದಿ ಸುರಕ್ಷಿತವಾಗಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

CAUTION NOTICE

This is to notify to the General Public that, we M/s.CITILIGHTS ESTATES PRIVATE LTD., a company incorporated under the company's Act 1956, having its branch office at No. 876, 3rd Cross, 7th Main, HAL 2nd Stage, Bangalore 560038 are the absolute owners of all that piece and parcel of the converted landed property bearing Survey No. 31/1,situated at Chikkadunnasandra Village, Sarjapur Hobli, Anekal Taluk, (Bikkanahosahalli Dakhele)duly approved by the Anekal Planning Authority vide No.APA/LAO/36/2008-09,dated 11.09.2009 and Revised Sanctioned Plan No.APA/LAO/36/2008- 09_1 dated 20.01.2020.
This being the fact, it is reliably learnt that some third parties claiming to have rights over the said converted lands are making attempts to sell or create third party interest in respect of the plots formed in the above-mentioned converted lands by supressing the facts that there are several cases pending against them.
Wherefore the General Public is hereby cautioned through this Caution Notice that, if any person/s enter/s into any such transactions, in respect of the plots formed in the above-mentioned converted lands, such transactions are not binding on us in any manner and the same will be done at their own costs and risks and M/s. Citilights Estates Private Ltd will take appropriate criminal and legal action against such acts.
Sd/- Chandrakala S.K, Advocate
M/s. CITILIGHTS ESTATES PRIVATE LTD.,
No. 876, 3rdCross, 7thMain, HAL 2nd Stage,
Bangalore 560038 Mobile: 9741993578

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

Cook

ಬೆಂಗಳೂರಿನಲ್ಲಿ ಚಿಕ್ಕ ಕುಟುಂಬಕ್ಕೆ ಮಾಂಸಾಹಾರಿ ಅಡುಗೆ ಮಾಡುವ ಹಿಂದೂ ಮಹಿಳೆ ಬೇಕಾಗಿದ್ದಾರೆ . ಉತ್ತಮ ಸಂಬಳ, ವಸತಿ ಮತ್ತು ಊಟದ ಸೌಲಭ್ಯವಿದೆ. ಸಂಪರ್ಕಿಸಿ: 97419 00909.

ರೆಂಟಲ್ ಪ್ರಾಪರ್ಟೀಸ್

Accommodation Available

Godown

ಗೋಡೌನ್ ಬಾಡಿಗೆಗೆ ದೊರೆಯುತ್ತದೆ.ಬೆಂಗಳೂರು - ಮೈಸೂರು ಎಕ್ಸ್‌ಪ್ರೆಸ್ ಹೈವೆಗೆ ಹೊಂದಿಕೊಂಡಂತೆ 9,000 ಚದರ ಅಡಿ ಅಳತೆಯ ಸುಸಜ್ಜಿತವಾದ ಗೋಡೌನ್, ಮಂಡ್ಯ ತಾಲ್ಲೂಕ್, ಯಲಿಯೂರು ಕೆರೆ ಹತ್ತಿರ ಬಾಡಿಗೆಗೆ ದೊರೆಯುತ್ತದೆ. ಸಂಪರ್ಕಿಸಿ: 9448082289, 7760997333

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Marketing & Sales

REQUIRED AREA Sales Manager Location: Hubli, Shivamoga, Davanagere, Bellary, Tumkur, Mysore, Gulbarga, Hassan. Salary: 25,000 Rs per month + incentives. Experience: General Insurance sales. Contact: Richard 6366538671, prasun@letstransport.in

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Hassan

ಕಮರ್ಷಿಯಲ್ ನಾರ್ತ್ ಈಸ್ಟ್ ಕಾರ್ನರ್ KHB ಸೈಟ್ ಮಾರಾಟಕ್ಕೆ ಇದೆ, ಹೊಸ ಬಸ್ ನಿಲ್ದಾಣದ ಎದುರು ಹಾಸನ ಸಂಪರ್ಕಿಸಿ 6361444146

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036

ನಮನ... ಸಾಹಿತಿ ರವೀಂದ್ರನಾಥ್ ಟ್ಯಾಗೋರ್ ಅವರ ಜನ್ಮದಿನದ ಅಂಗವಾಗಿ ಕೋಲ್ಕತ್ತದಲ್ಲಿ ಶುಕ್ರವಾರ ಅವರ ಪ್ರತಿಮೆಗೆ ವಿದ್ಯಾರ್ಥಿನಿಯರು ಪುಷ್ಪ ನಮನ ಸಲ್ಲಿಸಿದರು ಪಿಟಿಐ ಚಿತ್ರ

‘ಭಾರತ–ಪಾಕ್ ಸಂಘರ್ಷ ಅಮೆರಿಕಕ್ಕೆ ಸಂಬಂಧಿಸಿದ್ದಲ್ಲ’

ಜೆ.ಡಿ.ವ್ಯಾನ್ಸ್

ನ್ಯೂಯಾರ್ಕ್ (ಪಿಟಿಐ): ‘ಭಾರತ ಮತ್ತು ಪಾಕಿಸ್ತಾನ ತಮ್ಮ ನಡುವಿನ ಉದ್ವಿಗ್ನತೆಯನ್ನು ತಗ್ಗಿಸಬೇಕು ಹಾಗೂ ಈ ನಿಟ್ಟಿನ ಪ್ರಯತ್ನಗಳನ್ನು ಅಮೆರಿಕ ಉತ್ತೇಜಿಸಲಿದೆ. ಮೂಲಭೂತವಾಗಿ, ಉಭಯ ದೇಶಗಳ ನಡುವಿನ ಯುದ್ಧ ನಮಗೆ ಸಂಬಂಧಿಸಿದ್ದಲ್ಲ’ ಎಂದು ಅಮೆರಿಕ ಗುರುವಾರ ಹೇಳಿದೆ.

‘ಅಮೆರಿಕವು ಭಾರತ ಮತ್ತು ಪಾಕಿಸ್ತಾನವನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಉಭಯ ದೇಶಗಳ ನಡುವೆ ನಡೆಯುತ್ತಿರುವ ಯುದ್ಧದಲ್ಲಿ ತೊಡಗಿಸಿಕೊಳ್ಳಲು ಅಮೆರಿಕ ಮುಂದಾಗದು’ ಎಂದು ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಹೇಳಿದ್ದಾರೆ.

ಫಾಕ್ಸ್ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ಈ ಮಾತು ಹೇಳಿರುವ ವ್ಯಾನ್ಸ್, ‘ಅಣ್ವಸ್ತ್ರ ಹೊಂದಿರುವ ಈ ಎರಡು ದೇಶಗಳ ನಡುವಿನ ಈ ಸಂಘರ್ಷ ತೀವ್ರಗೊಳ್ಳಬಾರದು ಎಂಬುದೇ ನಮ್ಮ ಕಾಳಜಿ’ ಎಂದು ಹೇಳಿದ್ದಾರೆ.

‘ಶಸ್ತ್ರಾಸ್ತ್ರಗಳನ್ನು ಕೆಳಗಿಡುವಂತೆ ಭಾರತ ಹಾಗೂ ಪಾಕಿಸ್ತಾನಕ್ಕೆ ಅಮೆರಿಕ ಹೇಳಲು ಸಾಧ್ಯವಿಲ್ಲ. ಆದರೆ, ರಾಜತಾಂತ್ರಿಕ ಮಾರ್ಗಗಳ ಮೂಲಕ ಈ ಉದ್ದೇಶ ಈಡೇರಿಸುವ ಪ್ರಯತ್ನವನ್ನು ಮುಂದುವರಿಸಲಾಗುವುದು. ಇದು, ಬರುವ ದಿನಗಳಲ್ಲಿ ವ್ಯಾಪಕವಾದ ಪ್ರಾದೇಶಿಕ ಯುದ್ಧದ ಹಂತ ತಲುಪದಿರಲಿ ಎಂಬುದೇ ನಮ್ಮ ನಿರೀಕ್ಷೆ’ ಎಂದಿದ್ದಾರೆ.

ಉದ್ವಿಗ್ನ ಸ್ಥಿತಿ ಶಮನಕ್ಕೆ ಪಾಕ್ ಮಾಜಿ ಪ್ರಧಾನಿ ನವಾಜ್ ಷರೀಫ್ ಯತ್ನ

ಲಾಹೋರ್ (ಪಿಟಿಐ): ಭಾರತದಲ್ಲಿ ತಮಗಿರುವ ಸಂಪರ್ಕವನ್ನು ಬಳಸಿಕೊಂಡು ಈಗಿನ ಬಿಗುವಿನ ಸ್ಥಿತಿಯನ್ನು ಶಮನಗೊಳಿಸಲು ಮಾಜಿ ಪ್ರಧಾನಿ ನವಾಜ್ ಷರೀಫ್ ಯತ್ನಿಸಿದ್ದಾರೆ ಎಂದು ವರದಿಯಾಗಿದೆ.

ಭಾರತದ ದಾಳಿಗೆ ಪ್ರತಿಕ್ರಿಯಿಸಬೇಕು ಎಂದು ಪಕ್ಷಗಳು ಮತ್ತು ಜನರಿಂದ ಒತ್ತಡ ಹೆಚ್ಚಿರುವಂತೆಯೇ ನವಾಜ್ ಷರೀಫ್ ಹಿಂಬಾಗಿಲ ಮೂಲಕ ಪರಿಸ್ಥಿತಿ ಶಮನಕ್ಕೆ ಯತ್ನಿಸಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ನವಾಜ್ ಷರೀಫ್ ಅವರು ಪ್ರಧಾನಿ ಶೆಹಬಾಜ್ ಷರೀಫ್ ಅವರ ಅಣ್ಣ. ಗುರುವಾರ ನಡೆದ ಸಭೆಯಲ್ಲಿ ಅವರು ‘ರಾಜತಾಂತ್ರಿಕ ಮಾರ್ಗದಲ್ಲಿ ಪರಿಸ್ಥಿತಿ ಶಮನಕ್ಕೆ ಸಲಹೆ ಮಾಡಿದ್ದಾರೆ’ ಎಂದು ವರದಿಗಳು ಉಲ್ಲೇಖಿಸಿವೆ.

‘ಭಾರತದ ವಿರುದ್ಧ ದಾಳಿಯನ್ನು ತೀವ್ರಗೊಳಿಸುವುದರ ಪರವಾಗಿ ನಾನಿಲ್ಲ ಎಂದು ಷರೀಫ್ ಹೇಳಿದ್ದಾರೆ’ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ದೇಶದ ಸಾರ್ವಭೌಮತೆ ರಕ್ಷಣೆಗಾಗಿ ಸೇನಾ ಪಡೆಗಳು ದಾಳಿ ನಡೆಸಬೇಕು ಎಂದು ವಿವಿಧ ಪಕ್ಷಗಳ ಸದಸ್ಯರು ಒತ್ತಡ ಹೇರಿದ್ದಾರೆ ಎಂದು ನ್ಯೂಸ್ ಇಂಟರ್‌ನ್ಯಾಷನಲ್ ವರದಿ ಮಾಡಿದೆ.

ರಾಜ್ಯದಲ್ಲೂ ಹೆಚ್ಚಿನ ಕಟ್ಟೆಚ್ಚರ

ಒಂದನೇ ಪುಟದಿಂದ...

ಸೂಕ್ಷ್ಮ ಪ್ರದೇಶಗಳಲ್ಲಿ ಗಸ್ತು ಹೆಚ್ಚಿಸಬೇಕು. ಸಿ.ಸಿ.ಟಿ.ವಿ ಕ್ಯಾಮೆರಾಗಳು ಸುಸ್ಥಿತಿಯಲ್ಲಿ ಇರುವ ಕುರಿತು ಖಚಿತಪಡಿಸಿಕೊಳ್ಳಬೇಕು. ಕ್ಯಾಮೆರಾ ಇಲ್ಲದ ಸ್ಥಳಗಳಲ್ಲಿ ತುರ್ತಾಗಿ ಕ್ಯಾಮೆರಾ ಅಳವಡಿಸಬೇಕು ಎಂದು ನಿರ್ದೇಶನ ನೀಡಿದ್ದಾರೆ.

ಸಾರ್ವಜನಿಕರಲ್ಲಿ ಅರಿವು: ಕೇಂದ್ರ ಸರ್ಕಾರ ಸೂಚನೆಯಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಸ್ವರಕ್ಷಣೆ ತಾಲೀಮು ಆಯೋಜಿಸಬೇಕು. ಗ್ರಾಮ ಮತ್ತು ಪಟ್ಟಣಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರ ರಕ್ಷಣೆಯ ಜವಾಬ್ದಾರಿ ಹೊತ್ತಿರುವ ಸಂಸ್ಥೆಗಳು ಸಮನ್ವಯದಿಂದ ಕೆಲಸ ಮಾಡಬೇಕು ಎಂದು ಸೂಚಿಸಲಾಗಿದೆ.

ಘಟಕಾಧಿಕಾರಿಗಳು ತಮ್ಮ ಘಟಕಗಳಲ್ಲಿನ ವೈರ್‌ಲೆಸ್ ಉಪಕರಣಗಳು, ಕಂಪ್ಯೂಟರ್ ಮತ್ತು ವಾಹನಗಳನ್ನು ಸುಸಜ್ಜಿತವಾಗಿ ಇಟ್ಟುಕೊಳ್ಳಬೇಕು. ಶಸ್ತ್ರಾಗಾರದಲ್ಲಿ ಶಸ್ತ್ರಾಸ್ತ್ರ ಹಾಗೂ ಮದ್ದುಗುಂಡುಗಳನ್ನು ದಾಸ್ತಾನು ಇಟ್ಟುಕೊಳ್ಳಬೇಕು ಎಂದು ಸೂಚನೆ ನೀಡಿದ್ದಾರೆ.

ಸಿ.ಎಂ ಸಭೆ ಇಂದು

ಒಂದನೇ ಪುಟದಿಂದ...

ಇದೇ ಸಮಯದಲ್ಲಿ ಎಲ್ಲ ಮಹಾನಗರಗಳ ಪೊಲೀಸ್ ಆಯುಕ್ತರು, ಜಿಲ್ಲಾ ಪೊಲೀಸ್ ವರಿಷ್ಠರು, ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ವಿಡಿಯೊ ಕಾನ್ಫರೆನ್ಸ್ ಮೂಲಕ ಭಾಗವಹಿಸುವರು.

ಭಾರತ–ಪಾಕಿಸ್ತಾನ ನಡುವಿನ ಯುದ್ಧದ ವಾತಾವರಣ, ಭಯೋತ್ಪಾದಕ ಸಂಘಟನೆಗಳ ಚಟುವಟಿಕೆ ವಿರುದ್ಧ ರಾಜ್ಯದಲ್ಲಿ ಕೈಗೊಳ್ಳಬೇಕಾದ ಕ್ರಮಗಳು, ನಾಗರಿಕರ ಸುರಕ್ಷತೆಗಾಗಿ ತೆಗೆದುಕೊಳ್ಳುವ ಮುಂಜಾಗ್ರತಾ ಕ್ರಮಗಳು, ಕಾನೂನು ಸುವ್ಯವಸ್ಥೆ ಕುರಿತು ಸಭೆಯಲ್ಲಿ ಚರ್ಚಿಸಿ, ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಎಂದು ಮುಖ್ಯಮಂತ್ರಿ ಕಚೇರಿ ಹೇಳಿದೆ.

ನಿಗಾ ಇಡಬೇಕಾದ ಚಟುವಟಿಕೆ/ಜನರು

- ಎಲ್‌ಇಟಿ, ಜೆಇಎಮ್, ಐಎಂ ಮಾಡ್ಯೂಲ್ಸ್ ಮತ್ತು ಸಂಘಟನೆಯ ಸದಸ್ಯರು
- ಭಯೋತ್ಪಾದಕ ಕೃತ್ಯಗಳಲ್ಲಿ ಭಾಗಿಯಾದವರು, ಶಿಕ್ಷೆಗೆ ಒಳಗಾದವರು
- ಬಾಂಬ್ ತಯಾರಿಕೆ ಮತ್ತು ಬಾಂಬ್ ಬಳಸಿ ಭಯೋತ್ಪಾದನೆ ಮಾಡುವಂತಹ ಕೃತ್ಯಗಳಲ್ಲಿ ಭಾಗಿ ಆದವರು
- ಸ್ಫೋಟಕಗಳು ವಸ್ತುಗಳ ಹಾಗೂ ಡಿಟೋನೇಟರ್‌ಗಳಂತಹ ಉಪಕರಣಗಳ ತಯಾರು ಮಾಡುವ ಸ್ಥಳಗಳು
- ಭಾರತದ ವಿರುದ್ಧ ಭಾಷಣಗಳು ಮತ್ತು ಘೋಷಣೆಗಳ ಮೂಲಕ ಸಾರ್ವಜನಿಕ ಶಾಂತಿ ಭಂಗವನ್ನು ಉಂಟು ಮಾಡುವವರು
- ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳನ್ನು ಹಂಚಿಕೊಳ್ಳುವವರು
- ನಗರ/ಜಿಲ್ಲೆಗಳಿಗೆ ಭೇಟಿ ನೀಡುವ ಅಪರಿಚಿತರು ಹಾಗೂ ಅನುಮಾನಾಸ್ಪದ ವ್ಯಕ್ತಿಗಳ ಚಲನವಲನ ಮತ್ತು ಅವರು ತಂಗುವ ಸ್ಥಳ/ ಹೋಟೆಲ್‌ಗಳು

ಭಾರತದ ಜತೆಗಿನ ಸಂಘರ್ಷ ತಗ್ಗಿಸಲ್ಲ: ಪಾಕ್

ರಾವಲ್ಪಿಂಡಿ, ಪಾಕಿಸ್ತಾನ್ (ಎಎಫ್‌ಪಿ): ‘ಭಾರತದ ಜೊತೆಗಿನ ಸಂಘರ್ಷವನ್ನು ತಗ್ಗಿಸುವುದಿಲ್ಲ’ ಎಂದು ಪಾಕಿಸ್ತಾನ ಸೇನೆಯ ವಕ್ತಾರರು ತಿಳಿಸಿದ್ದಾರೆ. ಭಾರತದ ಮೇಲೆ ಕ್ಷಿಪಣಿ, ಆರ್ಟಿಲರಿ, ಡ್ರೋನ್ ದಾಳಿ ಬಳಿಕ ಈ ಹೇಳಿಕೆ ನೀಡಿದ್ದಾರೆ.

‘ಸಂಘರ್ಷ ತಗ್ಗಿಸುವ ಇರಾದೆ ಹೊಂದಿಲ್ಲ. ಭಾರತವು ನಮಗೆ ಯಾವ ರೀತಿ ಹಾನಿ ಮಾಡಿದೆಯೋ, ಅದೇ ರೀತಿ ನಾವು ಕೂಡ ಮಾಡಲಿದ್ದೇವೆ. ಇದುವರೆಗೂ ನಾವು ನಮ್ಮನ್ನು ರಕ್ಷಿಸಿದ್ದೇವೆ. ಅವರಿಗೆ ಸರಿಯಾದ ಸಮಯದಲ್ಲಿ ಉತ್ತರ ಸಿಗಲಿದೆ’ ಎಂದು ಸೇನಾ ವಕ್ತಾರ ಅಹ್ಮದ್ ಷರೀಫ್ ಚೌಧರಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಇಂಧನದ ಕೊರತೆ ಇಲ್ಲ, ಎಟಿಎಂ ಸೇವೆ ಸ್ಥಗಿತವಿಲ್ಲ’

ಒಂದನೇ ಪುಟದಿಂದ...

‘ಅನಗತ್ಯವಾಗಿ ಸಂಗ್ರಹಕ್ಕೂ ಮುಂದಾಗಬಾರದು’ ಎಂದೂ ಕೋರಿವೆ.

ದೇಶದಾದ್ಯಂತ ಇರುವ ಎಲ್ಲಾ ಇಂಧನ ಪೂರೈಕೆ ಕೇಂದ್ರಗಳು ಮತ್ತು ಎಲ್‌ಪಿಜಿ ವಿತರಣಾ ಜಾಲವು ಯಾವುದೇ ಅಡೆತಡೆ ಇಲ್ಲದೆ ಕಾರ್ಯ ನಿರ್ವಹಿಸುತ್ತಿದೆ. ಗ್ರಾಹಕರ ದಿನನಿತ್ಯದ ಬೇಡಿಕೆಯನ್ನು ಪೂರೈಸಲಾಗುತ್ತಿದೆ. ಪೂರೈಕೆ ಸರಪಳಿಯೂ ಸದೃಢವಾಗಿದೆ. ಹಾಗಾಗಿ, ವ್ಯತ್ಯಯದ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಹೇಳಿವೆ.

ಎಟಿಎಂ ಸೇವೆ ಅಬಾಧಿತ: ಎರಡು ದೇಶಗಳ ನಡುವಿನ ಸಂಘರ್ಷ ಮುಂದುವರಿಯುವುದರಿಂದ ಮುಂದಿನ ದಿನಗಳಲ್ಲಿ ಎಟಿಎಂ ಕೇಂದ್ರಗಳ ಸೇವೆ ಸ್ಥಗಿತಗೊಳ್ಳಲಿದೆ ಎಂಬ ಸುದ್ದಿಯು ಆಧಾರ ರಹಿತವಾಗಿದೆ ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಸೇರಿ ಹಲವು ಬ್ಯಾಂಕ್‌ಗಳು ಸ್ಪಷ್ಟನೆ ನೀಡಿವೆ.

ಎಟಿಎಂಗಳಲ್ಲಿ ಹಣ ಸಂಗ್ರಹದ ಕೊರತೆಯಾಗಿಲ್ಲ. ಡಿಜಿಟಲ್ ಸೇವೆಯು ಸಾಂಗವಾಗಿ ನಡೆಯುತ್ತಿದೆ. ಹಾಗಾಗಿ, ಗ್ರಾಹಕರು ಅನಗತ್ಯ ಆತಂಕಪಡಬಾರದು ಎಂದು ಬ್ಯಾಂಕ್ ಆಫ್ ಬರೋಡಾ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್, ಕೆನರಾ ಬ್ಯಾಂಕ್ ‘ಎಕ್ಸ್’ನಲ್ಲಿ ತಿಳಿಸಿವೆ.

ಸಿಂಧೂರ ಪ್ರಹಾರ: ಪಾಕ್ ಡ್ರೋನ್ ತತ್ತರ

ಒಂದನೇ ಪುಟದಿಂದ...

ಅದರ ಬೆನ್ನಲ್ಲೇ, ಭಾರತೀಯ ಸೇನಾ ಪಡೆ ಪ್ರತಿದಾಳಿ ನಡೆಸಿದೆ. ಬೆಳಿಗ್ಗೆ 3.50ರಿಂದ 4.45ರ ನಡುವೆ ತೀವ್ರ ಸ್ಫೋಟ ಸಂಭವಿಸಿದೆ. ಪಾಕ್ ಸೇನೆ ಹಾರಿಸಿದ ಡ್ರೋನ್ ಹಾಗೂ ಕ್ಷಿಪಣಿಗಳನ್ನು ಸೇನಾ ಪಡೆ ಹಿಮ್ಮೆಟ್ಟಿಸಿದೆ. ದಾಳಿಯ ಹಿನ್ನೆಲೆಯಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಗುರುವಾರ ರಾತ್ರಿ ವಿದ್ಯುತ್ ಕಡಿತ ಮಾಡಲಾಗಿತ್ತು. ಶ್ರೀನಗರ ಮತ್ತು ಜಮ್ಮು ವಿಮಾನ ನಿಲ್ದಾಣಗಳನ್ನು ಸತತ ಮೂರನೇ ದಿನವೂ ಮುಚ್ಚಲಾಯಿತು. ಶಿಕ್ಷಣ ಸಂಸ್ಥೆಗಳಿಗೆ ರಜೆ ನೀಡಲಾಯಿತು.

ದೇಶದಲ್ಲಿ ವಿಧ್ವಂಸಕ ಕೃತ್ಯಗಳನ್ನು ನಡೆಸಲು ಉಗ್ರರು ಅಂತರರಾಷ್ಟ್ರೀಯ ಗಡಿಯ ಮೂಲಕ ಒಳನುಗ್ಗಲು ಪ್ರಯತ್ನಿಸಿದರು. ಗಡಿ ಭದ್ರತಾ ಪಡೆಯು ಕಾರ್ಯಾಚರಣೆ ನಡೆಸಿ ಏಳು ಉಗ್ರರನ್ನು ಕೊಂದು ಹಾಕಿತು ಹಾಗೂ ಪಾಕಿಸ್ತಾನದ ರೇಂಜರ್ಸ್ ಪೋಸ್ಟ್ ಅನ್ನು ಧ್ವಂಸಗೊಳಿಸಿತು. ಭಯೋತ್ಪಾದಕರ ದೊಡ್ಡ ಗುಂಪೊಂದು ಸಾಂಬಾ ಜಿಲ್ಲೆಯ ಮೂಲಕ ನುಗ್ಗಲು ಪ್ರಯತ್ನಿಸುತ್ತಿರುವ ಬಗ್ಗೆ ಪಡೆಗೆ ಮಾಹಿತಿ ಲಭಿಸಿತು. ಬಿಎಸ್‌ಎಫ್ ಗುರುವಾರ ರಾತ್ರಿ ಏಳು ಗಂಟೆಗೆ ಕಾರ್ಯಾಚರಣೆ ನಡೆಸಿ ಏಳು ಮಂದಿಯನ್ನು ಹತ್ಯೆ ಮಾಡುವಲ್ಲಿ ಯಶಸ್ವಿಯಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜಸ್ಥಾನದ ಜೈಸಲ್ಮೇರ್, ಪಂಜಾಬ್‌ನ ಬಠಿಂಡಾ, ಹೊಷಿಯಾರ್‌ಪುರ ಮತ್ತಿತರ ಕಡೆಗಳಲ್ಲಿ ಕ್ಷಿಪಣಿಯ ಅವಶೇಷಗಳು ಪತ್ತೆಯಾಗಿವೆ. ಭಾರತೀಯ ನಾಗರಿಕರನ್ನು ಗುರಿಯಾಗಿಸಿಕೊಂಡು ಪಾಕ್ ಕ್ಷಿಪಣಿ ದಾಳಿ ನಡೆಸಿದೆ. ಈ ಎಲ್ಲ ಕುಕೃತ್ಯಗಳನ್ನು ವಿಫಲಗೊಳಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ರಾಜಸ್ಥಾನ ಹಾಗೂ ಗುಜರಾತ್‌ನ ಗಡಿ ಜಿಲ್ಲೆಗಳಲ್ಲಿ ವಿದ್ಯುತ್ ಕಡಿತ ಮಾಡಲಾಗುತ್ತಿದೆ. ಮನೆಯಿಂದ ಹೊರಕ್ಕೆ ಬಾರದಂತೆ ನಾಗರಿಕರಿಗೆ ಸೂಚನೆ ನೀಡಲಾಗಿದೆ. ಸೈರನ್‌ಗಳನ್ನು ಮೊಳಗಿಸಲಾಗುತ್ತಿದೆ ಎಂದು ರಕ್ಷಣಾ ಇಲಾಖೆಯ ಅಧಿಕಾರಿಗಳು ತಿಳಿಸಿದರು.

ಸಚಿವರ ಸರಣಿ ಸಭೆ: ಭಾರತ ಹಾಗೂ ಪಾಕ್ ನಡುವಿನ ಸಂಬಂಧ ಮತ್ತಷ್ಟು ವಿಷಮಿಸಿದ ಬೆನ್ನಲ್ಲೇ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮೂರು ಪಡೆಗಳ ಮುಖ್ಯಸ್ಥರ ಜತೆಗೆ ಉನ್ನತ ಮಟ್ಟದ ಸಭೆ ನಡೆಸಿದರು. ಗೃಹ ಸಚಿವ ಅಮಿತ್ ಶಾ ಅವರು ಉನ್ನತ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಗಡಿಯಲ್ಲಿ ಹಾಗೂ ವಿಮಾನ ನಿಲ್ದಾಣಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಚನೆ ನೀಡಿದರು. ಆರೋಗ್ಯ ಸಚಿವ ಜೆ.ಪಿ.ನಡ್ಡಾ ಸಭೆ ನಡೆಸಿ ದೇಶದಾದ್ಯಂತ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಪರಿಶೀಲಿಸಿದರು. ಪ್ರಧಾನಿ ಮೋದಿ ಅವರು ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರಿಗೆ ಕರೆ ಮಾಡಿ ಗಡಿ ಜಿಲ್ಲೆಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಚನೆಗಳನ್ನು ನೀಡಿದರು.

ಸೇನಾ ಸಂಘರ್ಷದ ಕಾರಣ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ನಿರ್ಧಾರ

ಐಪಿಎಲ್ ಒಂದು ವಾರ ಸ್ಥಗಿತ

ನವದೆಹಲಿ (ಪಿಟಿಐ): ಭಾರತ– ಪಾಕ್ ಗಡಿಯಲ್ಲಿ ಸಂಘರ್ಷದ ಕಾರಣ ಇಂಡಿಯನ್ ಪ್ರೀಮಿಯರ್ ಲೀಗ್‌ನ ಉಳಿದ ಪಂದ್ಯಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಒಂದು ವಾರ ಸ್ಥಗಿತಗೊಳಿಸಲಾಗಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತಿಳಿಸಿದೆ.

ಗಡಿಯಾಚೆಯ ಭಯೋತ್ಪಾದಕರ ಅಪ್ರಚೋದಿತ ದಾಳಿಗೆ ಉತ್ತರ ನೀಡುವಾಗ ರಾಷ್ಟ್ರದ ಹಿತಾಸಕ್ತಿ ಇತರ ಎಲ್ಲಾ ವಿಷಯಗಳಿಗಿಂತ ಮುಖ್ಯವಾಗುತ್ತದೆ ಎಂದು ಮಂಡಳಿ ಶುಕ್ರವಾರ ಹೇಳಿದೆ.

ಧರ್ಮಶಾಲಾದಲ್ಲಿ ಗುರುವಾರ ಪಂಜಾಬ್ ಕಿಂಗ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ನಡುವಣ ಪಂದ್ಯವನ್ನು ಅರ್ಧದಲ್ಲೇ ಸ್ಥಗಿತಗೊಳಿಸಲಾಗಿತ್ತು. ಸಮೀಪದ ಪಠಾಣ್‌ಕೋಟ್ ಮತ್ತು ಜಮ್ಮು ನಗರಗಳಲ್ಲಿ ವೈಮಾನಿಕ ದಾಳಿಗಳು ನಡೆಯಬಹುದೆಂಬ ಮುನ್ನೆಚ್ಚರಿಕೆಯಿಂದ ಧರ್ಮಶಾಲಾದಲ್ಲೂ 'ಬ್ಲ್ಯಾಕ್‌ಔಟ್' ಮಾಡಲಾಗಿತ್ತು.

'ಹಾಲಿ ಐಪಿಎಲ್ ಆವೃತ್ತಿಯ ಉಳಿದ ಪಂದ್ಯಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಒಂದು ವಾರ ಸ್ಥಗಿತಗೊಳಿಸಲಾಗಿದೆ' ಎಂದು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಪ್ರಸಕ್ತ ಪರಿಸ್ಥಿತಿಯ ಸಮಗ್ರ ಅವಲೋಕನದ ಬಳಿಕ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಭಾಗೀದಾರರ ಜೊತೆ ಸಮಾಲೋಚನೆ ನಡೆಸಲಾಗುವುದು. ಮುಂದಿನ ದಿನಗಳಲ್ಲಿ ಟೂರ್ನಿಯ ಉಳಿದ ಪಂದ್ಯಗಳ ವೇಳಾಪಟ್ಟಿ ಮತ್ತು ಸ್ಥಳಗಳ ಪರಿಷ್ಕೃತ ವಿವರಗಳನ್ನು ನೀಡಲಾಗುವುದು' ಎಂದೂ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಈ ಮೊದಲು ನಿಗದಿಪಡಿಸಿದ ವೇಳಾಪಟ್ಟಿಯ ಪ್ರಕಾರ ಇದೇ ತಿಂಗಳ 25ರಂದು ಕೋಲ್ಕತ್ತದಲ್ಲಿ ಐಪಿಎಲ್ ಫೈನಲ್ ನಿಗದಿಯಾಗಿತ್ತು. ಈಗ 16 ಪಂದ್ಯಗಳು (12 ಲೀಗ್ ಮತ್ತು ನಾಲ್ಕು ನಾಕೌಟ್) ಉಳಿದಿದ್ದು, ಅವುಗಳನ್ನು ಪ್ರಶಸ್ತವೆನಿಸುವ ಸಮಯದಲ್ಲಿ ನಡೆಸಲು ಮಂಡಳಿ ಉದ್ದೇಶಿಸಿದೆ. ಬರುವ ಸೆಪ್ಟೆಂಬರ್‌ನಲ್ಲಿ ನಿಗದಿಯಾಗಿರುವ ಏಷ್ಯಾ ಕಪ್ ಟೂರ್ನಿಯನ್ನು ರದ್ದುಗೊಳಿಸಿದಲ್ಲಿ ಆ ಅವಧಿಯಲ್ಲಿ ಲೀಗ್‌ನ ಉಳಿದ ಪಂದ್ಯಗಳನ್ನು ನಡೆಸುವುದು ಒಂದು ಆಯ್ಕೆಯಾಗಿದೆ ಎಂಬ ಮಾತುಗಳು ಕೇಳಿಬಂದಿವೆ.

'ಈ ತುರ್ತು ಸಂದರ್ಭದಲ್ಲಿ ಬಿಸಿಸಿಐ ದೇಶದ ಜೊತೆಗೆ ನಿಲ್ಲಲಿದೆ. ಸಶಸ್ತ್ರ ಪಡೆ ಮತ್ತು ದೇಶದ ಜನರೊಡನೆ ನಾವೂ ಇದ್ದೇವೆ. ಕ್ರಿಕೆಟ್ ದೇಶದಲ್ಲಿ ಅಚ್ಚುಮೆಚ್ಚಿನ ಕ್ರೀಡೆಯಾಗಿ ಉಳಿದಿರಬಹುದು. ಆದರೆ ಅದು ದೇಶದ ಸಾರ್ವಭೌಮತೆ, ಸಮಗ್ರತೆ ಮತ್ತು ಭದ್ರತೆಗಿಂತ ಮಿಗಿಲು ಅಲ್ಲ' ಎಂದೂ ಹೇಳಿಕೆಯಲ್ಲಿ ತಿಳಿಸಲಾಗಿದೆ.

62 ಆಟಗಾರರು: 2024ರ ಕೊನೆಯಲ್ಲಿ ನಡೆದ ಮೆಗಾ ಹರಾಜಿನಲ್ಲಿ ಐಪಿಎಲ್‌ನ 10 ಫ್ರಾಂಚೈಸಿ ತಂಡಗಳಿಗೆ ಒಟ್ಟು 62 ಮಂದಿ ವಿದೇಶಿ ಆಟಗಾರರು ಸೇರ್ಪಡೆಯಾಗಿದ್ದರು. ಗಡಿಯಲ್ಲಿ ಮಿಲಿಟರಿ ಕಾರ್ಯಾಚರಣೆಯು ಈ ಆಟಗಾರರಲ್ಲಿ ಆತಂಕ ಮೂಡಿಸಿದೆ.

'ಆಟಗಾರರೆಲ್ಲಾ ಸುರಕ್ಷಿತವಾಗಿದ್ದಾರೆ. ಆದರೆ ಗಡಿಯಲ್ಲಿನ ಬೆಳವಣಿಗೆಯಿಂದ ಅವರಲ್ಲಿ ಆತಂಕ ಉಂಟಾಗಿದೆ' ಎಂದು ಐಪಿಎಲ್ ತಂಡವೊಂದರ ಸಿಬ್ಬಂದಿ ಸುದ್ದಿಸಂಸ್ಥೆಗೆ ತಿಳಿಸಿದರು.

ಭಾರತ ಮತ್ತು ಪಾಕಿಸ್ತಾನದಲ್ಲಿನ ಪರಿಸ್ಥಿತಿಯನ್ನು ಅವಲೋಕಿಸುತ್ತಿರುವುದಾಗಿ ಸಿಡ್ನಿಯಲ್ಲಿ ಕ್ರಿಕೆಟ್ ಆಸ್ಟ್ರೇಲಿಯಾ ತಿಳಿಸಿದೆ. ನ್ಯೂಜಿಲೆಂಡ್ ಪ್ಲೇಯರ್ಸ್ ಅಸೋಸಿಯೇಷನ್ ಮತ್ತು ವೆಸ್ಟ್ ಇಂಡೀಸ್ ಕ್ರಿಕೆಟ್ ಮಂಡಳಿ ಸಹ ಆಟಗಾರರ ಸುರಕ್ಷತೆಯ ಬಗ್ಗೆ ಆತಂಕ ವ್ಯಕ್ತಪಡಿಸಿವೆ.

ಗುರುವಾರ ಧರ್ಮಶಾಲಾದಲ್ಲಿ ಪಂದ್ಯ ಸ್ಥಗಿತಗೊಂಡ ನಂತರ ಪಂಜಾಬ್ ಕಿಂಗ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳ ಆಟಗಾರರು ರಸ್ತೆ ಮಾರ್ಗವಾಗಿ ದೆಹಲಿಗೆ ಪ್ರಯಾಣಿಸಿದ್ದಾರೆ.

ಶುಕ್ರವಾರ ಲಖನೌದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಲಖನೌ ಸೂಪರ್ ಜೈಂಟ್ಸ್ ನಡುವಣ ಪಂದ್ಯ ನಿಗದಿಯಾಗಿದ್ದು ಅದು ನಡೆಯಲಿಲ್ಲ.

ಲಖನೌದ ಏಕನಾ ಕ್ರೀಡಾಂಗಣದ ಗೇಟ್ ಬಳಿ ಶುಕ್ರವಾರ ಕುತೂಹಲದಿಂದ ಸೇರಿದ್ದ ಕ್ರಿಕೆಟ್‌ಪ್ರಿಯರು ಎಎಫ್‌ಪಿ ಚಿತ್ರ

ಐಪಿಎಲ್‌ಗೆ ತೊಡಕು ಇದೇ ಮೊದಲಲ್ಲ

ಆಟಕ್ಕೆ ಹೊರತಾದ ಕಾರಣಗಳಿಂದ ಐಪಿಎಲ್‌ಗೆ ತೊಡಕು ಎದುರಾಗಿರುವುದು ಇದೇ ಮೊದಲಲ್ಲ. ಈ ಹಿಂದೆ ವಿವಿಧ ಕಾರಣಗಳಿಂದ ಮೂರು ಸಲ ದೇಶದಿಂದ ಹೊರಗೆ ಈ ಶ್ರೀಮಂತ ಲೀಗ್ ಪಂದ್ಯಾವಳಿ ನಡೆಸಲಾಗಿತ್ತು.

ಲೋಕಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ಭದ್ರತೆಯ ಕಾರಣದಿಂದ 2009ರಲ್ಲಿ ಇಡೀ ಟೂರ್ನಿಯನ್ನು ದಕ್ಷಿಣ ಆಫ್ರಿಕಾದಲ್ಲಿ ನಡೆಸಲಾಯಿತು. ಕೋವಿಡ್ ಸಾಂಕ್ರಾಮಿಕದ ಕಾರಣ 2020ರ ಏಪ್ರಿಲ್– ಮೇ ತಿಂಗಳಲ್ಲಿ ಟೂರ್ನಿಯನ್ನು ದುಬೈನಲ್ಲಿ ಹಮ್ಮಿಕೊಳ್ಳಲಾಯಿತು.

ಮರು ವರ್ಷ ಲೀಗ್ ದೇಶದಲ್ಲೇ ಬಯೊ ಬಬಲ್ ವ್ಯವಸ್ಥೆ ಮೂಲಕ ಆರಂಭವಾಯಿತು. ಆದರೆ ಸೋಂಕು ಪ್ರಕರಣಗಳು ಜಾಸ್ತಿಯಾದ ಕಾರಣ ಅದೇ ವರ್ಷದ ಸೆಪ್ಟೆಂಬರ್‌ನಲ್ಲಿ ಯುಎಇಯಲ್ಲಿ ಉಳಿದ ಪಂದ್ಯಗಳನ್ನು ಮುಗಿಸಲಾಯಿತು.

ಐದು ಟೆಸ್ಟ್‌ಗಳ ಸರಣಿಯನ್ನು ಆಡಲು ಭಾರತ ಮುಂದಿನ ತಿಂಗಳಿಂದ ಇಂಗ್ಲೆಂಡ್ ಪ್ರವಾಸ ಕೈಗೊಳ್ಳಲಿದೆ. ಈ ಪ್ರವಾಸ ಆಗಸ್ಟ್ ಮೊದಲ ವಾರದವರೆಗೆ ಇದೆ.

ಎನ್‌ಸಿ ಕ್ಲಾಸಿಕ್ ಜಾವೆಲಿನ್ ಕೂಟ ಮುಂದೂಡಿಕೆ

ನವದೆಹಲಿ (ಪಿಟಿಐ): ಸೇನಾ ಸಂಘರ್ಷದ ಹಿನ್ನೆಲೆಯಲ್ಲಿ ಮೇ 24ರಂದು ಬೆಂಗಳೂರಿನಲ್ಲಿ ನಡೆಯಬೇಕಿದ್ದ ನೀರಜ್ ಚೋಪ್ರಾ ಕ್ಲಾಸಿಕ್ ಜಾವೆಲಿನ್ ಥ್ರೋ ಕೂಟವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ.

ನೀರಜ್ ಚೋಪ್ರಾ ಅವರ ಹೆಸರಿನ ಕೂಟವನ್ನು ಪಂಚಕುಲಾದಲ್ಲಿ ಆಯೋಜಿಸಲು ಆರಂಭದಲ್ಲಿ ನಿರ್ಧರಿಸಲಾಗಿತ್ತು. ಆದರೆ, ನಂತರದಲ್ಲಿ ಬೆಂಗಳೂರಿನ ಕಂಠೀರವ ಕ್ರೀಡಾಂಗಣಕ್ಕೆ ಸ್ಥಳಾಂತರಿಸಲಾಗಿತ್ತು.

ಕೂಟದ ಮುಂದೂಡಿಕೆಯನ್ನು ಎನ್‌ಸಿ ಕ್ಲಾಸಿಕ್ ತಂಡದ ಟ್ವಿಟರ್ ಖಾತೆಯಲ್ಲಿ ಚೋಪ್ರಾ ಖಚಿತಪಡಿಸಿದ್ದಾರೆ. ಪರಿಷ್ಕೃತ ವೇಳಾಪಟ್ಟಿ ಸೂಕ್ತ ಸಮಯದಲ್ಲಿ ಹಂಚಿಕೊಳ್ಳಲಾಗುವುದು ಎಂದು ಹೇಳಿದ್ದಾರೆ.

'ಪ್ರಸ್ತುತ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಎನ್‌ಸಿ ಕ್ಲಾಸಿಕ್‌ನ ಉದ್ಘಾಟನಾ ಆವೃತ್ತಿಯನ್ನು ಮುಂದಿನ ಸೂಚನೆ ಬರುವವರೆಗೆ ಮುಂದೂಡಲಾಗಿದೆ. ಅಥ್ಲೀಟ್‌ಗಳು, ಭಾಗಿದಾರರ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಪಿಎಸ್‌ಎಲ್ ಮುಂದೂಡಿಕೆ

ಲಾಹೋರ್ (ಪಿಟಿಐ): ಪಾಕಿಸ್ತಾನ ಸೂಪರ್ ಲೀಗ್ (ಪಿಎಸ್‌ಎಲ್)ನಲ್ಲಿ ಬಾಕಿಯುಳಿದಿರುವ ಪಂದ್ಯಗಳನ್ನು ಮುಂದೂಡಿರುವುದಾಗಿ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಶುಕ್ರವಾರ ತಿಳಿಸಿದೆ.

ಭಾರತದ ಜೊತೆ ಸೇನಾ ಸಂಘರ್ಷದ ಕಾರಣ ಪಂದ್ಯಗಳನ್ನು ಯುಎಇನಲ್ಲಿ ನಡೆಸುವುದಾಗಿ ಇದಕ್ಕೆ ಕೆಲವೇ ಗಂಟೆಗಳ ಮೊದಲು ಪಿಸಿಬಿ ತಿಳಿಸಿತ್ತು.

'ಪ್ರಧಾನಿ ಮುಹಮ್ಮದ್ ಶೆಹಬಾಝ್ ಶರೀಫ್ ಅವರ ಸಲಹೆಯನ್ನು ಸ್ವೀಕರಿಸಿ ಮುಂದೂಡುವ ನಿರ್ಧಾರಕ್ಕೆ ಬಂದಿರುವುದಾಗಿ' ಪಿಸಿಬಿ ತಿಳಿಸಿದೆ.

ಆದರೆ ದುಬೈನಲ್ಲಿ ಲೀಗ್‌ನ ಉಳಿದ ಪಂದ್ಯಗಳನ್ನು ನಡೆಸುವ ಪಾಕಿಸ್ತಾನದ ಕೋರಿಕೆಗೆ ಎಮಿರೇಟ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಸಮ್ಮತಿಸುವ ಸಾಧ್ಯತೆ ಇರಲಿಲ್ಲ ಎಂದು ಹೇಳಲಾಗುತ್ತಿದೆ.

ಇಸಿಬಿಯು ಬಿಸಿಸಿಐ ಜೊತೆ ಸೌಹಾರ್ದ ಸಂಬಂಧ ಹೊಂದಿದೆ. ದುಬೈನಲ್ಲಿ ಐಸಿಸಿ ಕೇಂದ್ರ ಕಚೇರಿಯಿದೆ. ಭಾರತದ ಜಯ್ ಶಾ ಐಸಿಸಿ ಅಧ್ಯಕ್ಷರಾಗಿದ್ದಾರೆ.

ಹುಸಿ ಬಾಂಬ್ ಬೆದರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಬಾಂಬ್ ಇಡಲಾಗಿದೆ ಎಂದು ಶುಕ್ರವಾರ ಬೆದರಿಕೆ ಕರೆ ಬಂದ ಹಿನ್ನೆಲೆಯಲ್ಲಿ ಬಾಂಬ್ ನಿಷ್ಕ್ರಿಯ ದಳ, ಶ್ವಾನದಳ ಮತ್ತು ದೆಹಲಿ ಪೊಲೀಸ್ ತಂಡಗಳು ತಪಾಸಣೆ ನಡೆಸಿದವು. ಇದು ಹುಸಿ ಬೆದರಿಕೆ ಕರೆ ಎಂದು ನಂತರ ತಿಳಿದುಬಂತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಡೆಲ್ಲಿ ಮತ್ತು ಜಿಲ್ಲಾ ಕ್ರಿಕೆಟ್ ಸಂಸ್ಥೆಗೆ (ಡಿಡಿಸಿಎ) ಇಮೇಲ್ ಮೂಲಕ ಬೆದರಿಕೆ ಕರೆ ಬಂದಿತ್ತು. ತಕ್ಷಣ ದೆಹಲಿ ಪೊಲೀಸರ ಗಮನಕ್ಕೆ ತರಲಾಯಿತು. ಇಡೀ ಕ್ರೀಡಾಂಗಣ ಜಾಲಾಡಿದ ನಂತರ ಇದು ಹುಸಿ ಕರೆಯೆಂಬುದು ಗೊತ್ತಾಯಿತು ಎಂದು ಡಿಸಿಸಿಎ ಕಾರ್ಯದರ್ಶಿ ಅಶೋಕ್ ಶರ್ಮಾ ತಿಳಿಸಿದ್ದಾರೆ.

ICMR- NATIONAL CENTRE FOR DISEASE INFORMATICS AND RESEARCH, BENGALURU
Dept. of Health Research, MH&FW, Govt. of India,
Nirmal Bhawan-ICMR Complex, Adjacent to Trumpet
Flyover of BIAL Kannamangala Post, Bengaluru–562 110,
Telephone: 080-22176400

No. ICMR/NCDIR/Recruitment/2025-26 Date : 10.05.2025

वॉक-इन-इंटरव्यू के लिए अधिसूचना

ICMR-NCDIR, बेंगलुरु मे सलाहकार (वैज्ञानिक - मेडिकल / गैर-मेडिकल) - दो पद, युवा पेशेवर- I (आईटी) – एक पद और युवा पेशेवर- II (आईटी) और (सांख्यिकी/डेटा विज्ञान) - दो पद के अस्थायी/संविदात्मक पदों के लिए आवेदन आमंत्रित किए जाते हैं। विस्तृत विज्ञापन वेबसाइट www.ncdirindia.org / www.icmr.nic.in. से डाउनलोड किया जा सकता है। कृपया ध्यान दें कि इस विज्ञापन के संबंध में Corrigendum / Addendum /अतिरिक्त जानकारी यदि कोई हो, केवल हमारी वेबसाइटों पर प्रकाशित की जाएगी

NOTIFICATION FOR WALK-IN-INTERVIEW

Applications are invited for Temporary/Contractual positions of Consultant (Scientific – Medical / Non-Medical) – 2 posts, Young Professional-I (IT) – 1 post and Young Professional-II (IT) and (Statistics/Data Science) – 2 postsatI CMR-NCDIR, Bengaluru. Detailed advertisement can be downloaded from the websites www.ncdirindia.org/www.icmr.nic.in. Please note that corrigendum / addendum / further information, if any, in respect of this advertisement will be published on our websites only.

एसडी/- निदेशक
Sd/- Director

ಕರ್ನಾಟಕ ಸರ್ಕಾರ
ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ನಿರ್ದೇಶನಾಲಯ
ನಂ.58, ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಭವನ,
ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ರಸ್ತೆ,
ಬೆಂಗಳೂರು–560025
ದೂರವಾಣಿ: 080–25589459 ಇಲಾಖಾ ಮಿಂಚಂಚೆ: dirdswrblr@gmail.com
ಇಲಾಖಾ ವೆಬ್ ಸೈಟ್: https://sainikwelfare.karnataka.gov.in

ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯಲ್ಲಿ ಖಾಲಿ ಇರುವ ನಿರ್ದೇಶಕರ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

(ವೇತನ ಶ್ರೇಣಿ–ರೂ. 131100–3100–134200–3500–155200–4000–179200–4500–188200 ಮತ್ತು ಕರ್ನಾಟಕ ಸರ್ಕಾರದ ಅನ್ವಯವಾಗುವ ಭತ್ಯೆಗಳು)

ಅರ್ಹತೆ:

- ಭಾರತೀಯ ಸೇನೆಯ ನಿವೃತ್ತ ಬ್ರಿಗೇಡಿಯರ್/ಕರ್ನಲ್ ಅಥವಾ ಸಮಾನ ಹುದ್ದೆಯ ನೌಕಾಪಡೆ ಅಥವಾ ವಾಯುಪಡೆ ಅಧಿಕಾರಿಯಾಗಿರಬೇಕು. ಬ್ರಿಗೇಡಿಯರ್ ಹುದ್ದೆಯ ಅಧಿಕಾರಿಗಳು ಲಭ್ಯವಿಲ್ಲದಿದ್ದರೆ, ಕರ್ನಲ್ (ನೌಕಾಪಡೆ/ವಾಯುಪಡೆಯ ತತ್ಸಮಾನ) ಹುದ್ದೆಯ ಅಧಿಕಾರಿಗಳನ್ನು ಪರಿಗಣಿಸಲಾಗುತ್ತದೆ.
- ವಯಸ್ಸು: ಅರ್ಜಿ ಸಲ್ಲಿಸುವ ಕಡೆಯ ದಿನಾಂಕದಂದು 58 ವರ್ಷಗಳು ಮೀರಿರಬಾರದು.
- ಕನ್ನಡದಲ್ಲಿ ಕಛೇರಿಯ ಕಾರ್ಯ ನಿರ್ವಹಿಸುವ ಸಾಮರ್ಥ್ಯ ಹೊಂದಿರಬೇಕು.
- ಅಧಿಕಾರಾವಧಿಯು (5 ವರ್ಷಗಳ ಸೇವಾವಧಿ ಅಥವಾ) 60 ವರ್ಷ ವಯಸ್ಸಿನವರೆಗೆ.

ಅರ್ಜಿ ನಮೂನೆಯನ್ನು https://sainikwelfare.karnataka.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಅಥವಾ ನಿರ್ದೇಶನಾಲಯದಿಂದ ಪಡೆದುಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ 10 ಜೂನ್ 2025 ಸಂಜೆ 5.00 ಗಂಟೆಯೊಳಗೆ ಮೇಲಿನ ವಿಳಾಸಕ್ಕೆ ಸಲ್ಲಿಸಬೇಕು. ಮಿಂಚಂಚೆ ಮೂಲಕ ಸಲ್ಲಿಸಲಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಖೇಲೊ ಇಂಡಿಯಾ ಯೂತ್ ಗೇಮ್ಸ್‌ನ ಈಜು ಸ್ಪರ್ಧೆಗಳಿಗೆ ತೆರೆ

ಕರ್ನಾಟಕ ತಂಡಗಳು ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಬಾಲಕರ ಮತ್ತು ಬಾಲಕಿಯರ ತಂಡಗಳು ಬಿಹಾರದ ಗಯಾದಲ್ಲಿ ಶುಕ್ರವಾರ ಮುಕ್ತಾಯಗೊಂಡ ಖೇಲೊ ಇಂಡಿಯಾ ಯೂತ್ ಗೇಮ್ಸ್‌ನ ಈಜು ಸ್ಪರ್ಧೆಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದವು.

ರಾಜ್ಯ ತಂಡವು ಈಜು ಸ್ಪರ್ಧೆಯಲ್ಲಿ 13 ಚಿನ್ನ, 17 ಬೆಳ್ಳಿ ಮತ್ತು 3 ಕಂಚು ಸೇರಿದಂತೆ ಒಟ್ಟು 33 ಪದಕಗಳನ್ನು ಗೆದ್ದುಕೊಂಡಿತು. ಮಹಾರಾಷ್ಟ್ರ ತಂಡ 7 ಚಿನ್ನ ಸೇರಿದಂತೆ 29 ಪದಕಗಳೊಂದಿಗೆ ಎರಡನೇ ಸ್ಥಾನ ಪಡೆಯಿತು.

ಬಾಲಕರ ವಿಭಾಗದಲ್ಲಿ ಕರ್ನಾಟಕ 136 ಅಂಕ ಗಳಿಸಿದರೆ, ಮಹಾರಾಷ್ಟ್ರ (65 ಅಂಕ) ಮತ್ತು ಆಂಧ್ರ ಪ್ರದೇಶ (64) ನಂತರದ ಸ್ಥಾನ ಪಡೆದವು. ಬಾಲಕಿಯರ ವಿಭಾಗದಲ್ಲಿ ಕರ್ನಾಟಕ ತಂಡವು 156 ಅಂಕಗಳೊಂದಿಗೆ ಅಗ್ರಸ್ಥಾನವನ್ನು ಮಹಾರಾಷ್ಟ್ರದೊಂದಿಗೆ ಹಂಚಿಕೊಂಡಿತು. ತಮಿಳುನಾಡು (60) ನಂತರದ ಸ್ಥಾನ ಗಳಿಸಿತು.

ಕರ್ನಾಟಕಕ್ಕೆ ರಿಲೆ ಚಿನ್ನ: ಕೂಟದ ಕೊನೆಯ ದಿನ ನಡೆದ ಬಾಲಕರ 4x100 ಮೀಟರ್ ಫ್ರೀಸ್ಟೈಲ್ ರಿಲೆ ಸ್ಪರ್ಧೆಯಲ್ಲಿ ಕರ್ನಾಟಕ ತಂಡವು ಚಿನ್ನದ ಸಾಧನೆ ಮಾಡಿತು. ಅಲೆಸ್ವರ್ ಸ್ಯಾಮ್ಯುಯೆಲ್ ರೇಗೊ, ಸೋಹಂ ಮೊಂಡಲ್, ಮೊನೀಶ್ ಪಿ.ವಿ, ಚಿಂತನ್ ಎಸ್. ಶೆಟ್ಟಿ ಅವರನ್ನು ಒಳಗೊಂಡ ತಂಡವು 3 ನಿಮಿಷ 37.21 ಸೆಕೆಂಡ್‌ಗಳಲ್ಲಿ ಗುರಿ ತಲುಪಿತು. ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ತಂಡಗಳು ಕ್ರಮವಾಗಿ ನಂತರದ ಸ್ಥಾನ ಪಡೆದವು.

ಅದಿತಿಗೆ ಸ್ವರ್ಣ: ರಾಜ್ಯದ ಅದಿತಿ ಎನ್. ಮುಲ್ಯೆ ಬಾಲಕಿಯರ (18 ವರ್ಷದೊಳಗಿನವರ) 1500 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ 18 ನಿಮಿಷ 04.39 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿ ಚಿನ್ನ ಗೆದ್ದರು. ಕರ್ನಾಟಕದ ಮತ್ತೊಬ್ಬ ಸ್ಪರ್ಧಿ ಶ್ರೀಚರಣಿ ತುಮು (18 ನಿ.19.29ಸೆ) ಬೆಳ್ಳಿ ಪದಕ ಗೆದ್ದರೆ, ಮಹಾರಾಷ್ಟ್ರದ ಅದಿತಿ ಸತೀಶ್ ಹೆಗ್ಡೆ (18 ನಿ.22.97ಸೆ) ಕಂಚಿನ ಪದಕ ತಮ್ಮದಾಗಿಸಿಕೊಂಡರು. ಅದಿತಿ ಅವರಿಗೆ ಕೂಟದಲ್ಲಿ ಇದು ಏಳನೇ ಪದಕವಾಗಿದೆ.

ಬಾಲಕಿಯರ 50 ಮೀಟರ್ ಫ್ರೀಸ್ಟೈಲ್‌ನಲ್ಲಿ ಕರ್ನಾಟಕದ ರುತುಜಾ ಎಸ್. (27.12ಸೆ) ಚಿನ್ನದ ಸಾಧನೆ ಮಾಡಿದರು. ಮಹಾರಾಷ್ಟ್ರದ ಶ್ರೀಲೇಖಾ ಪರೀಕ್ ಮತ್ತು ಅಲೆಫಿಯಾ ಸಲೇಹ್ ಧನ್ಸುರ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು. ಬಾಲಕರ 50 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಕರ್ನಾಟಕದ ಚಿಂತನ್ ಎಸ್. ಶೆಟ್ಟಿ (24.24ಸೆ) ಬೆಳ್ಳಿ ಪದಕ ಗೆದ್ದರು. ಹರಿಯಾಣದ ಅರ್ಜುನ್ ಸಿಂಗ್ (23.91ಸೆ) ಮತ್ತು ಗುಜರಾತ್‌ನ ಹೀರ್ ಸುನಿಲ್ ಪಿತ್ರೋಡಾ (24.36ಸೆ) ಕ್ರಮವಾಗಿ ಚಿನ್ನ ಮತ್ತು ಕಂಚು ಜಯಿಸಿದರು.

ಬಾಲಕಿಯರ 50 ಮೀಟರ್ ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಕರ್ನಾಟಕದ ಮಾನವಿ ವರ್ಮಾ (35.23ಸೆ) ಮತ್ತು ವಿಹಿತಾ ನಯನಾ ಲೋಕನಾಥನ್ (35.48ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು. ಮಹಾರಾಷ್ಟ್ರದ ಸನಯಾ ರೋಷನ್ ಶೆಟ್ಟಿ (34.67ಸೆ) ಸ್ವರ್ಣ ಗೆದ್ದರು.

ಖೇಲೊ ಇಂಡಿಯಾ ಯೂತ್ ಗೇಮ್ಸ್‌ನ ಈಜು ಸ್ಪರ್ಧೆಯಲ್ಲಿ ಚಾಂಪಿಯನ್ ಆದ ಕರ್ನಾಟಕ ಬಾಲಕರ ತಂಡ

ದಕ್ಷಿಣ ಆಫ್ರಿಕಾಕ್ಕೆ ಮಣಿದ ಲಂಕಾ

ಕೊಲಂಬೊ (ಪಿಟಿಐ): ಕ್ಲೊ ಟ್ರಯಾನ್ (74ರನ್ ಮತ್ತು 34ಕ್ಕೆ 5) ಅವರ ಆಲ್‌ರೌಂಡ್ ಆಟದ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡವು ಶುಕ್ರವಾರ ಮಹಿಳೆಯರ ತ್ರಿಕೋನ ಏಕದಿನ ಸರಣಿಯ ಪಂದ್ಯದಲ್ಲಿ ಶ್ರೀಲಂಕಾ ತಂಡ ವನ್ನು 76 ರನ್‌ಗಳಿಂದ ಸುಲಭವಾಗಿ ಮಣಿಸಿತು. ಇದು ಹರಿಣ ಪಡೆಗೆ ಸರಣಿಯಲ್ಲಿ ಸಿಕ್ಕ ಏಕೈಕ ಗೆಲುವಾಗಿದೆ.

ಆತಿಥೇಯ ತಂಡವು ಈ ಸೋಲಿನ ಹೊರತಾಗಿಯೂ ಫೈನಲ್‌ಗೆ ಮುನ್ನಡೆಯಿತು. ಇದೇ 11ರಂದು ನಡೆಯುವ ಫೈನಲ್‌ನಲ್ಲಿ ಭಾರತ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 50 ಓವರ್‌ಗಳಲ್ಲಿ 9ಕ್ಕೆ 315 (ಅನ್ನೇರಿ ಡರ್ಕ್‌ಸೆನ್ 104, ಕ್ಲೊ ಟ್ರಯಾನ್ 74; ದೇವ್ಮಿ ವಿಹಂಗಾ 43ಕ್ಕೆ 5). ಶ್ರೀಲಂಕಾ: 42.5 ಓವರ್‌ಗಳಲ್ಲಿ 239 (ಚಾಮರಿ ಅಟ್ಟಪಟ್ಟು 52; ಕ್ಲೊ ಟ್ರಯಾನ್ 34ಕ್ಕೆ 5). ಪಂದ್ಯದ ಆಟಗಾರ್ತಿ: ಟ್ರಯಾನ್

ಸೆಮಿಫೈನಲ್‌ಗೆ ಆಯುಷ್, ಉನ್ನತಿ

ತೈಪೆ (ಪಿಟಿಐ): ಭಾರತದ ಆಯುಷ್ ಶೆಟ್ಟಿ ಮತ್ತು ಉನ್ನತಿ ಹೂಡಾ ಇಲ್ಲಿ ನಡೆಯುತ್ತಿರುವ ತೈಪೆ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದಾರೆ.

ಬಾಲಕರ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಆಯುಷ್ 16-21, 21-19, 21-14ರಿಂದ ಕೆನಡಾದ ಏಳನೇ ಶ್ರೇಯಾಂಕದ ಬ್ರಿಯಾನ್ ಯಂಗ್ ಅವರಿಗೆ ಆಘಾತ ನೀಡಿದರು. ಹರಿಯಾಣದ ಉನ್ನತಿ ಬಾಲಕಿಯರ ಸಿಂಗಲ್ಸ್‌ನಲ್ಲಿ 21-8, 19-21, 21-19ರಿಂದ ಸ್ಥಳೀಯ ಆಟಗಾರ್ತಿ ಹಂಗ್ ಯಿ ಟಿಂಗ್ ಅವರನ್ನು ಮಣಿಸಿದರು.

ಮುಂಬೈ ತಂಡದಲ್ಲೇ ಉಳಿಯಲು ಬಯಸಿದ ಯಶಸ್ವಿ ಜೈಸ್ವಾಲ್



ಮುಂಬೈ (ಪಿಟಿಐ): ದೇಶಿ ಕ್ರಿಕೆಟ್‌ನಲ್ಲಿ ಮುಂಬೈ ಕ್ರಿಕೆಟ್ ತಂಡದಲ್ಲೇ ತಮ್ಮನ್ನು ಮುಂದುವರಿಸುವಂತೆ ಭಾರತ ತಂಡದ ಆರಂಭ ಆಟಗಾರ ಯಶಸ್ವಿ ಜೈಸ್ವಾಲ್ ಅವರು ಮುಂಬೈ ಕ್ರಿಕೆಟ್ ಸಂಸ್ಥೆಯನ್ನು (ಎಂಸಿಎ) ಕೋರಿದ್ದಾರೆ.

ಗೋವಾ ತಂಡದ ಪರ ಆಡಲು ತಮಗೆ ನಿರಾಕ್ಷೇಪಣಾ ಪತ್ರ ನೀಡುವಂತೆ ಅವರು ತಿಂಗಳ ಹಿಂದೆ ಎಂಸಿಎಯನ್ನು ಕೋರಿ ಕ್ರಿಕೆಟ್ ವಲಯದಲ್ಲಿ ಅಚ್ಚರಿ ಮೂಡಿಸಿದ್ದರು.

ಮುಂದಿನ ದೇಶಿ ಕ್ರಿಕೆಟ್ ಋತುವಿನಲ್ಲಿ ತಾವು ಮುಂಬೈ ತಂಡವನ್ನು ಪ್ರತಿನಿಧಿಸಲು ಲಭ್ಯರಿರುವುದಾಗಿ ಜೈಸ್ವಾಲ್ ಅವರು ಮುಂಬೈ ಕ್ರಿಕೆಟ್ ಸಂಸ್ಥೆಗೆ ಇ-ಮೇಲ್ ಮೂಲಕ ಕೋರಿಕೆ ಕಳುಹಿಸಿದ್ದಾರೆ.

800 ಮೀ. ಓಟ: ಅಫ್ಸಲ್ ದಾಖಲೆ

ದುಬೈ (ಪಿಟಿಐ): ಏಷ್ಯನ್ ಕ್ರೀಡಾಕೂಟದ ಬೆಳ್ಳಿ ಪದಕ ವಿಜೇತ ಮೊಹಮ್ಮದ್ ಅಫ್ಸಲ್ ಅವರು ಶುಕ್ರವಾರ ಇಲ್ಲಿ ನಡೆದ ಯುಎಇ ಅಥ್ಲೆಟಿಕ್ಸ್ ಗ್ರ್ಯಾನ್‌ಪ್ರಿ ಕೂಟದ 800 ಮೀಟರ್ ಸ್ಪರ್ಧೆಯಲ್ಲಿ ರಾಷ್ಟ್ರೀಯ ದಾಖಲೆ ನಿರ್ಮಿಸಿದರು.

ಕೇರಳದ 29 ವರ್ಷ ವಯಸ್ಸಿನ ಅಫ್ಸಲ್ ಅವರು ಒಂದು ನಿಮಿಷ 45.61 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಈ ಮೂಲಕ 2018ರಲ್ಲಿ ಜಿನ್ಸನ್ ಜಾನ್ಸನ್ (1ನಿ.45.65ಸೆ) ನಿರ್ಮಿಸಿದ್ದ ರಾಷ್ಟ್ರೀಯ ದಾಖಲೆಯನ್ನು ಮುರಿದರು.

ದುಬೈ ಪೊಲೀಸ್ ಕ್ರೀಡಾಂಗಣದಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟಲ್ ಟೂರ್ ಸ್ಪರ್ಧೆಯಲ್ಲಿ ಅಫ್ಸಲ್ ಬೆಳ್ಳಿ ಪದಕ ಗೆದ್ದರು. ಕೆನ್ಯಾದ ನಿಕೋಲಸ್ ಕಿಪ್ಲಾಗಟ್ (1 ನಿ.45.38ಸೆ) ಚಿನ್ನ ಗೆದ್ದರು.

ರಾಷ್ಟ್ರೀಯ ದಾಖಲೆ ಹೊಂದಿರುವ ಅನಿಮೇಶ್ ಕುಜುರ್ ಅವರು 200 ಮೀ ಓಟವನ್ನು 20.45 ಸೆಕೆಂಡುಗಳಲ್ಲಿ ಪೂರ್ಣಗೊಳಿಸಿ ಚಿನ್ನ ಗೆದ್ದರು.

ಸ್ಯಾಫ್: ಭಾರತ ತಂಡ ಶುಭಾರಂಭ

ಯುಪಿಯಾ, ಅರುಣಾಚಲ ಪ್ರದೇಶ (ಪಿಟಿಐ): ಡ್ಯಾನಿ ಮೈತೈ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಭಾರತ ತಂಡವು ಸ್ಯಾಫ್ 19 ವರ್ಷದೊಳಗಿನವರ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 8–0 ಗೋಲುಗಳಿಂದ ಶ್ರೀಲಂಕಾ ತಂಡವನ್ನು ಮಣಿಸಿ ಶುಭಾರಂಭ ಮಾಡಿತು.

ದಿನದ ಇನ್ನೊಂದು ಪಂದ್ಯದಲ್ಲಿ ಬಾಂಗ್ಲಾದೇಶ 2–2 ಗೋಲುಗಳಿಂದ ಮಾಲ್ಡೀವ್ಸ್ ತಂಡದೊಂದಿಗೆ ಡ್ರಾ ಮಾಡಿಕೊಂಡಿತು.

ಕ್ವಾರ್ಟರ್‌ನಲ್ಲಿ ಎಡವಿದ ಕರ್ನಾಟಕ

ಬೆಂಗಳೂರು: ಕರ್ನಾಟಕ ತಂಡವು ಸ್ವಾಮಿ ವಿವೇಕಾನಂದ (20 ವರ್ಷದೊಳಗಿನವರ)ಪುರುಷರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್‌ಫೈನಲ್‌ನಲ್ಲಿ ಶುಕ್ರವಾರ ಸೋಲು ಕಂಡಿತು.

ಛತ್ತೀಸಗಢದ ನಾರಾಯಣಪುರದಲ್ಲಿ ನಡೆದ ಪಂದ್ಯದಲ್ಲಿ ಕರ್ನಾಟಕ 0–1 ಗೋಲಿನಿಂದ ಮೇಘಾಲಯಕ್ಕೆ ಮಣಿಯಿತು.

ವಿಶ್ವಕಪ್ ಆರ್ಚರಿ: ರಿಕರ್ವ್ ವಿಭಾಗದ ಸೆಮಿಫೈನಲ್‌ಗೆ ದೀಪಿಕಾ, ಸಾಲುಂಖೆ

ಕಂಚಿನ ಪದಕದ ಸುತ್ತಿಗೆ ಕಾಂಪೌಂಡ್ ಮಿಶ್ರತಂಡ

ಶಾಂಘೈ (ಪಿಟಿಐ): ಭಾರತದ ಕಾಂಪೌಂಡ್ ಮಿಶ್ರ ತಂಡವು ವಿಶ್ವಕಪ್ ಸ್ಟೇಜ್2 ಟೂರ್ನಿಯಲ್ಲಿ ಶುಕ್ರವಾರ ಕಂಚಿನ ಪದಕ ಸುತ್ತಿಗೆ ತಲುಪಿದೆ. ದೀಪಿಕಾ ಕುಮಾರಿ ಮತ್ತು ಪಾರ್ಥ ಸುಶಾಂತ್ ಸಾಲುಂಖೆ ಅವರು ಕ್ರಮವಾಗಿ ಮಹಿಳೆಯರ ಮತ್ತು ಪುರುಷರ ರಿಕರ್ವ್ ವೈಯಕ್ತಿಕ ವಿಭಾಗದ ಸಮಿಫೈನಲ್‌ಗೆ ತಲುಪಿದ್ದಾರೆ.

ಮಧುರಾ ಧಾಮಣಗಾಂವಕರ್ ಮತ್ತು ಅಭಿಷೇಕ್ ವರ್ಮಾ ಅವರು ಕಾಂಪೌಂಡ್ ವಿಶ್ರವಿಭಾಗದ ಸೆಮಿಫೈನಲ್‌ನಲ್ಲಿ ಬ್ರಿಟನ್‌ನ ಎಲ್ಲಾ ಗಿಬ್ಸನ್ ಮತ್ತು ಅಜಯ್ ಸ್ಕಾಟ್ ಅವರಿಗೆ ಮಣಿಯಿತು. ಭಾರತದ ಜೋಡಿ ಮೊದಲ ಮತ್ತು ಮೂರನೇ ಸರಣಿಯನ್ನು 38–39, 30–40ರಲ್ಲಿ ಸೋತಿತು. ಎರಡನೇ ಮತ್ತು ನಾಲ್ಕನೇ ಸರಣಿಯಲ್ಲಿ 40–40 ಮತ್ತು 39–39ರಲ್ಲಿ ಟೈಮಾಡಿಕೊಂಡಿತ್ತು.

ಹೀಗಾಗಿ ಭಾರತ ತಂಡ ಕಂಚಿನ ಪದಕಕ್ಕಾಗಿ ಸೆಣಸಾಟ ನಡೆಸುವ ಅವಕಾಶ ಹೊಂದಿತು. ಭಾರತದ ಸ್ಪರ್ಧಿಗಳು ಶನಿವಾರ ನಡೆಯುವ ಈ ಹಣಾಹಣಿಯಲ್ಲಿ ಮಲೇಷ್ಯಾದ ತಂಡವನ್ನು ಎದುರಿಸಲಿದ್ದಾರೆ. ಮಲೇಷ್ಯಾದ ಜೋಡಿ ಇನ್ನೊಂದು ಸೆಮಿಫೈನಲ್‌ನಲ್ಲಿ ಟರ್ಕಿಯ ಸ್ಪರ್ಧಿಗಳಿಗೆ 156–157ರಲ್ಲಿ ಮಣಿದರು.

ಗಮನ ಸೆಳೆದ ಸಾಲುಂಖೆ: ಪುರುಷರ ವೈಯಕ್ತಿಕ ರಿಕರ್ವ್ ವಿಭಾಗದ ಸೆಮಿಫೈನಲ್ ತಲುಪುವ ಹಾದಿಯಲ್ಲಿ ಸಾಲುಂಖೆ ಕ್ವಾರ್ಟರ್‌ಫೈನಲ್‌ನಲ್ಲಿ ದಕ್ಷಿಣ ಕೊರಿಯಾದ ಕಿಮ್ ಜೇ ದಿಯೊಕ್ ಅವರನ್ನು 6–2 ರಿಂದ ಸೋಲಿಸಿದರು. ಅವರು ಭಾನುವಾರ ನಡೆಯುವ ಸೆಮಿಫೈನಲ್‌ನಲ್ಲಿ ದಕ್ಷಿಣ ಕೊರಿಯಾದ ಮತ್ತೊಬ್ಬ ಸ್ಪರ್ಧಿ ಹಾಗೂ ಪ್ಯಾರಿಸ್ ಒಲಿಂಪಿಕ್ ಸ್ವರ್ಣ ವಿಜೇತ ಕಿಮ್ ವೂಜಿನ್ ಅವರನ್ನು ಎದುರಿಸಲಿದ್ದಾರೆ.

ವೂಜಿನ್ ಇನ್ನೊಂದು ಕ್ವಾರ್ಟರ್ ಫೈನಲ್‌ನಲ್ಲಿ ಭಾರತದ ಅತನು ದಾಸ್ ಅವರನ್ನು ಸೋಲಿಸಿದ್ದರು.

ಮಹಿಳೆಯರ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ದೀಪಿಕಾ ಅವರು 6–2 ರಿಂದ ಚೀನಾದ ಲಿ ಜಿಯಾಮನ್ ಅವರನ್ನು ಸೋಲಿಸಿದರು. ಭಾರತದ ಅನುಭವಿ ಬಿಲ್ಗಾರ್ತಿ ಸೆಮಿಫೈನಲ್‌ನಲ್ಲಿ ದಕ್ಷಿಣ ಕೊರಿಯಾದ ಲಿಮ್ ಸಿಹಯೊನ್ ಅವರನ್ನು ಎದುರಿಸಲಿದ್ದಾರೆ. ಸಿಹಯೋನ್ ಇನ್ನೊಂದು ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಭಾರತದ ಅಂಕಿತಾ ಭಕತ್ ಅವರನ್ನು ಮಣಿಸಿದ್ದರು.

ಚಿನ್ನಕ್ಕೆ ಸೆಣಸಾಟ: ಭಾನುವಾರ ಕಾಂಪೌಂಡ್ ತಂಡ ವಿಭಾಗದ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಭಾರತ ತಂಡವು (ಅಭಿಷೇಕ್ ವರ್ಮಾ, ರಿಷಭ್ ಯಾದವ್ ಮತ್ತು ಓಜಸ್ ದೇವತಳೆ), ಮೆಕ್ಸಿಕೊ ತಂಡವನ್ನು ಎದುರಿಸಲಿದೆ.

ಮಹಿಳೆಯರ ವಿಭಾಗದಲ್ಲಿ ಮಧುರಾ, ಜ್ಯೋತಿ ಸುರೇಖಾ ವೆನ್ನಂ ಮತ್ತು ಚಿಕಿತಾ ತನಿಪರ್ತಿ ಅವರಿರುವ ತಂಡ ಫೈನಲ್‌ನಲ್ಲಿ ಮೆಕ್ಸಿಕೊ ವಿರುದ್ಧವೇ ಸೆಣಸಲಿದೆ.

ದೀಪಿಕಾ ಕುಮಾರಿ

ನವೋದಯ ಗ್ರಾಮ ವಿಕಾಸ ಚಾರಿಟೆಬಲ್ ಟ್ರಸ್ಟ್ (ರಿ.)
ಕೊಡಿಯಾಲ್‌ಬೈಲ್, ಮಂಗಳೂರು-575 003
ಅಧ್ಯಕ್ಷತೆ
25
ನವೋದಯ ಸ್ವ-ಸಹಾಯ ಗುಂಪುಗಳ
ಇಂದು
ರಜತ ಸಂಭ್ರಮ
2025
ದಿನಾಂಕ: 10-05-2025ನೇ ಶನಿವಾರ ಪೂರ್ವಾಹ್ನ ಗಂಟೆ 10.00ಕ್ಕೆ । ಸ್ಥಳ: ಗೋಲ್ಡ್‌ಫಿಂಚ್ ಸಿಟಿ, ಬಂಗ್ರಕೂಳೂರು, ಮಂಗಳೂರು
ರಜತ ಸಂಭ್ರಮದ ಲಾಂಛನ ಅನಾವರಣ
ಡಾ. ಥಾವರ್ ಚಂದ್ ಗೆಹ್ಲೋಟ್
ಘನತವೆತ್ತ ಮಾನ್ಯ ರಾಜ್ಯಪಾಲರು, ಕರ್ನಾಟಕ
ರಜತ ಸಂಭ್ರಮದ ಉದ್ಘಾಟನೆ
ಸನ್ಮಾನ್ಯ ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರಕಾರ
ನವೋದಯ ಸ್ವಸಹಾಯ ಗುಂಪುಗಳ ಸದಸ್ಯರಿಗೆ ಸವಲತ್ತು ವಿತರಣೆ
ಸನ್ಮಾನ್ಯ ಶ್ರೀ ದೇವೇಂದ್ರ ಫಡ್ನವೀಸ್
ಮಾನ್ಯ ಮುಖ್ಯಮಂತ್ರಿಗಳು, ಮಹಾರಾಷ್ಟ್ರ ಸರಕಾರ
ಆಶೀರ್ವಚನ
ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ
ಜಗದ್ಗುರು ಶ್ರೀಮಧ್ವಾಚಾರ್ಯ ಮಹಾ ಸಂಸ್ಥಾನ
ಶ್ರೀ ಪೇಜಾವರ ಅಧೋಕ್ಷಜ ಮಠ, ಉಡುಪಿ
'ಸಂತೃಪ್ತಿ' ಸ್ಮರಣ ಸಂಚಿಕೆ ಬಿಡುಗಡೆ
ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು,
ಕರ್ನಾಟಕ ಸರಕಾರ
ಸಹಕಾರಿ ಧ್ವಜಾರೋಹಣ
ಶ್ರೀ ಯು. ಟಿ. ಖಾದರ್ ಫರೀದ್
ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ
ಹಾಗೂ ಶಾಸಕರು, ಮಂಗಳೂರು ವಿಧಾನಸಭಾ ಕ್ಷೇತ್ರ
ಅತ್ಯುತ್ತಮ ನವೋದಯ ಗುಂಪುಗಳಿಗೆ ಪ್ರಶಸ್ತಿ ಪ್ರದಾನ
ಸನ್ಮಾನ್ಯ ಶ್ರೀ ಪ್ರಲ್ಹಾದ್ ವಿ. ಜೋಶಿ
ಮಾನ್ಯ ಕೇಂದ್ರ ಸಚಿವರು, ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ
ಹಾಗೂ ಹೊಸ ಮತ್ತು ನವೀಕರಿಸಬಹುದಾದ ಇಂಧನ ಖಾತೆ, ಭಾರತ ಸರಕಾರ
ಪರಮಪೂಜ್ಯ ರಾಜರ್ಷಿ
ಡಾ। ಡಿ. ವೀರೇಂದ್ರ ಹೆಗ್ಗಡೆ
ಧರ್ಮಾಧಿಕಾರಿಗಳು, ಶ್ರೀ ಕ್ಷೇತ್ರ ಧರ್ಮಸ್ಥಳ
ಹಾಗೂ ಮಾನ್ಯ ರಾಜ್ಯಸಭಾ ಸದಸ್ಯರು
ಮುಖ್ಯ ಅತಿಥಿಗಳು
ಸನ್ಮಾನ್ಯ ಶ್ರೀ ಕೆ.ಎನ್. ರಾಜಣ್ಣ
ಮಾನ್ಯ ಸಹಕಾರ ಸಚಿವರು,
ಕರ್ನಾಟಕ ಸರಕಾರ
ಸನ್ಮಾನ್ಯ ಡಾ. ಎಂ. ವೀರಪ್ಪ ಮೊಯ್ಲಿ
ಮಾನ್ಯ ಮಾಜಿ ಮುಖ್ಯಮಂತ್ರಿಗಳು,
ಕರ್ನಾಟಕ ಸರಕಾರ
ಸನ್ಮಾನ್ಯ ಶ್ರೀ ದಿನೇಶ್ ಗುಂಡೂರಾವ್
ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಸಚಿವರು ಹಾಗೂ ದಕ್ಷಿಣ ಕನ್ನಡ ಜಿಲ್ಲಾ
ಉಸ್ತುವಾರಿ ಸಚಿವರು, ಕರ್ನಾಟಕ ಸರಕಾರ
ಸನ್ಮಾನ್ಯ ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್
ಮಾನ್ಯ ಸಚಿವರು, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರು
ಸನ್ಮಾನ್ಯ ಶ್ರೀ ಶಿವಾನಂದ ಪಾಟೀಲ
ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ
ಮತ್ತು ಸಕ್ಕರೆ ನಿರ್ದೇಶನಾಲಯ,
ಕೃಷಿ ಮಾರುಕಟ್ಟೆ ಸಚಿವರು
ಸನ್ಮಾನ್ಯ ಶ್ರೀ ಆರ್.ಬಿ. ತಿಮ್ಮಾಪುರ
ಮಾನ್ಯ ಅಬಕಾರಿ ಸಚಿವರು,
ಕರ್ನಾಟಕ ಸರಕಾರ
ಸನ್ಮಾನ್ಯ ಶ್ರೀ ಲಕ್ಷ್ಮಣ ಸಂಗಪ್ಪ ಸವದಿ
ಮಾನ್ಯ ಮಾಜಿ ಉಪಮುಖ್ಯಮಂತ್ರಿಗಳು,
ಮಾಜಿ ಸಹಕಾರ ಸಚಿವರು ಹಾಗೂ
ಶಾಸಕರು, ಅಥಣಿ ವಿಧಾನಸಭಾ ಕ್ಷೇತ್ರ
ಸನ್ಮಾನ್ಯ ಶ್ರೀ ಜಿ. ಟಿ. ದೇವೇಗೌಡ
ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ
ಮಹಾಮಂಡಳ ನಿ., ಬೆಂಗಳೂರು,
ಮಾಜಿ ಸಹಕಾರ ಸಚಿವರು ಹಾಗೂ ಶಾಸಕರು
ಸನ್ಮಾನ್ಯ ಡಾ. ಉದಯ ಶಂಕರ್ ಅವಸ್ಥಿ
ವ್ಯವಸ್ಥಾಪಕ ನಿರ್ದೇಶಕರು,
ಇಫ್ಕೋ, ನವದೆಹಲಿ
ಸನ್ಮಾನ್ಯ ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್
ಮಾಜಿ ಸಚಿವರು ಹಾಗೂ ಶಾಸಕರು,
ಯಲ್ಲಾಪುರ ವಿಧಾನಸಭಾ ಕ್ಷೇತ್ರ
ಸನ್ಮಾನ್ಯ ಶ್ರೀ ವಿ. ಸುನಿಲ್ ಕುಮಾರ್
ಮಾಜಿ ಸಚಿವರು ಹಾಗೂ ಶಾಸಕರು,
ಕಾರ್ಕಳ ವಿಧಾನಸಭಾ ಕ್ಷೇತ್ರ
ಸನ್ಮಾನ್ಯ ಶ್ರೀ ಮುರುಗೇಶ್ ಆರ್. ನಿರಾಣಿ
ಮಾಜಿ ಸಚಿವರು,
ಕರ್ನಾಟಕ ಸರಕಾರ
ಸನ್ಮಾನ್ಯ ಶ್ರೀ ಬಿ.ವೈ. ರಾಘವೇಂದ್ರ
ಸಂಸದರು,
ಶಿವಮೊಗ್ಗ ಲೋಕಸಭಾಕ್ಷೇತ್ರ
ಸನ್ಮಾನ್ಯ ಶ್ರೀ ಕೋಟ ಶ್ರೀನಿವಾಸ ಪೂಜಾರಿ
ಸಂಸದರು, ಉಡುಪಿ- ಚಿಕ್ಕಮಗಳೂರು
ಲೋಕಸಭಾಕ್ಷೇತ್ರ
ಸನ್ಮಾನ್ಯ ಶ್ರೀ ಕ್ಯಾಪ್ಟನ್ ಬ್ರಿಜೇಶ್ ಚೌಟ
ಸಂಸದರು,
ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರ
ಸನ್ಮಾನ್ಯ ಡಾ। ಕೆ. ಪ್ರಕಾಶ್ ಶೆಟ್ಟಿ
ಮುಖ್ಯ ವ್ಯವಸ್ಥಾಪಕ ನಿರ್ದೇಶಕರು,
ಎಂ.ಆರ್.ಜಿ. ಗ್ರೂಪ್
ಸನ್ಮಾನ್ಯ ಶ್ರೀ ಬೆಳ್ಳಿ ಪ್ರಕಾಶ್
ಮಾನ್ಯ ಅಧ್ಯಕ್ಷರು, ಕರ್ನಾಟಕ
ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿ.
ಸನ್ಮಾನ್ಯ ಶ್ರೀ ಕೆ. ಜಯರಾಮ ಬಲ್ಲಾಳ್
ವ್ಯವಸ್ಥಾಪಕ ನಿರ್ದೇಶಕರು, ಬಲ್ಲಾಳ್ ಗ್ರೂಪ್
ಆಫ್ ಹೋಟೆಲ್ಸ್, ಬೆಂಗಳೂರು
ಸನ್ಮಾನ್ಯ ಡಾ। ಎಂ.ಎನ್. ರಾಜೇಂದ್ರ ಕುಮಾರ್
ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು
ಅಧ್ಯಕ್ಷರು, ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಮಂಗಳೂರು
ಸಂಸ್ಥಾಪಕರು, ನವೋದಯ ಗ್ರಾಮ ವಿಕಾಸ ಚಾರಿಟೆಬಲ್ ಟ್ರಸ್ಟ್ (ರಿ.), ಮಂಗಳೂರು
ಮುಖ್ಯ ಅತಿಥಿಗಳು
ಸನ್ಮಾನ್ಯ ಶ್ರೀ ಬಿ. ರಮಾನಾಥ ರೈ
ಮಾಜಿ ಸಚಿವರು, ಕರ್ನಾಟಕ ಸರಕಾರ
ಸನ್ಮಾನ್ಯ ಪ್ರೊ. ಪಿ. ಎಲ್. ಧರ್ಮ
ಉಪಕುಲಪತಿ, ಮಂಗಳೂರು ವಿಶ್ವವಿದ್ಯಾನಿಲಯ
ಸನ್ಮಾನ್ಯ ಶ್ರೀ ವಿನಯ್ ಕುಮಾರ್ ಸೊರಕೆ
ಮಾಜಿ ಸಚಿವರು, ಕರ್ನಾಟಕ ಸರಕಾರ
ಸನ್ಮಾನ್ಯ ಶ್ರೀ ಎಸ್. ಅಂಗಾರ
ಮಾಜಿ ಸಚಿವರು, ಕರ್ನಾಟಕ ಸರಕಾರ
ಸನ್ಮಾನ್ಯ ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ
ಮಾಜಿ ಸಚಿವರು, ಕರ್ನಾಟಕ ಸರಕಾರ
ಸನ್ಮಾನ್ಯ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ
ಮಾಜಿ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್
ಸನ್ಮಾನ್ಯ ಶ್ರೀ ಜೆ. ಆರ್. ಲೋಬೋ
ಮಾಜಿ ಶಾಸಕರು, ಮಂಗಳೂರು
ಸನ್ಮಾನ್ಯ ಶ್ರೀ ಸಂಜೀವ ಮಠಂದೂರು
ಮಾಜಿ ಶಾಸಕರು, ಪುತ್ತೂರು
ಸನ್ಮಾನ್ಯ ಶ್ರೀ ಮಿಥುನ್ ಎಂ. ರೈ
ಪ್ರಧಾನ ಕಾರ್ಯದರ್ಶಿ, ಕೆ.ಪಿ.ಸಿ.ಸಿ.
ಸನ್ಮಾನ್ಯ ಶ್ರೀ ಪದ್ಮರಾಜ್ ಆರ್. ಪೂಜಾರಿ,
ಅಧ್ಯಕ್ಷರು, ಗುರು ಬೆಳದಿಂಗಳು ಫೌಂಡೇಷನ್, ಮಂಗಳೂರು
ಸನ್ಮಾನ್ಯ ಶ್ರೀ ಸತೀಶ್ ಕುಂಪಲ
ಅಧ್ಯಕ್ಷರು, ಭಾರತೀಯ ಜನತಾ ಪಕ್ಷ, ದ.ಕ. ಜಿಲ್ಲೆ
ಸನ್ಮಾನ್ಯ ಶ್ರೀ ಉದಯ ಕುಮಾರ್ ಶೆಟ್ಟಿ,
ಅಧ್ಯಕ್ಷರು, ಉದಯಕೃಷ್ಣ ಚಾರಿಟೆಬಲ್‌ಟ್ರಸ್ಟ್ (ರಿ) ಕಾರ್ಕಳ
ಸನ್ಮಾನ್ಯ ಶ್ರೀ ನಳಿನ್ ಕುಮಾರ್ ಕಟೀಲ್
ಮಾಜಿ ಸಂಸದರು, ಮಂಗಳೂರು
ಸನ್ಮಾನ್ಯ ಡಾ. ಎಂ. ಮೋಹನ್ ಆಳ್ವ
ಅಧ್ಯಕ್ಷರು, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ, ಮೂಡುಬಿದಿರೆ
ಸನ್ಮಾನ್ಯ ಶ್ರೀ ಕಿಶೋರ್ ಆಳ್ವ
ಅಧ್ಯಕ್ಷರು, ಅದಾನಿ ಸಮೂಹ ಸಂಸ್ಥೆ
ಸನ್ಮಾನ್ಯ ನಾಡೋಜ ಡಾ। ಜಿ. ಶಂಕರ್
ಪ್ರವರ್ತಕರು, ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್ (ರಿ), ಉಡುಪಿ
ಸನ್ಮಾನ್ಯ ಶ್ರೀ ಅಭಯಚಂದ್ರ ಜೈನ್
ಮಾಜಿ ಸಚಿವರು, ಕರ್ನಾಟಕ ಸರಕಾರ
ಸನ್ಮಾನ್ಯ ಶ್ರೀ ಐಕಳ ಹರೀಶ್ ಶೆಟ್ಟಿ
ಅಧ್ಯಕ್ಷರು, ಜಾಗತಿಕ ಬಂಟರ ಸಂಘ, ಮಂಗಳೂರು
ಸನ್ಮಾನ್ಯ ಶ್ರೀ ಗೋಪಾಲ ಪೂಜಾರಿ
ಮಾಜಿ ಶಾಸಕರು, ಬೈಂದೂರು
ಸನ್ಮಾನ್ಯ ಡಾ। ಯು. ಟಿ. ಇಫ್ತಿಕಾರ್ ಅಲಿ,
ಅಧ್ಯಕ್ಷರು, ರಾಜ್ಯ ಅಲೈಡ್ & ಹೆಲ್ತ್ ಕೇರ್ ಕೌನ್ಸಿಲ್
ಸನ್ಮಾನ್ಯ ಶ್ರೀ ಹರೀಶ್ ಕುಮಾರ್
ಮಾಜಿ ಶಾಸಕರು ಹಾಗೂ ಅಧ್ಯಕ್ಷರು, ಕಾಂಗ್ರೆಸ್ ಪಕ್ಷ, ದ.ಕ. ಜಿಲ್ಲೆ
ಸನ್ಮಾನ್ಯ ಶ್ರೀ ಪ್ರಸಾದ್ ಕಾಂಚನ್
ಉದ್ಯಮಿ, ಉಡುಪಿ
ಸನ್ಮಾನ್ಯ ಶ್ರೀ ರಕ್ಷಿತ್ ಶಿವರಾಮ್
ಉದ್ಯಮಿ, ಬೆಳ್ತಂಗಡಿ
ಸನ್ಮಾನ್ಯ ಶ್ರೀ ದಿನೇಶ್ ಹೆಗ್ಡೆ ಎಂ
ಉದ್ಯಮಿ, ಕುಂದಾಪುರ
ಸನ್ಮಾನ್ಯ ಶ್ರೀ ಇನಾಯಿತ್ ಅಲಿ
ಉದ್ಯಮಿ, ಮಂಗಳೂರು
ಶ್ರೀ ಡಿ. ವೇದವ್ಯಾಸ ಕಾಮತ್
ಶಾಸಕರು, ಮಂಗಳೂರು ದಕ್ಷಿಣ
ವಿಧಾನಸಭಾ ಕ್ಷೇತ್ರ
ಡಾ. ಭರತ್ ಶೆಟ್ಟಿ ವೈ.
ಶಾಸಕರು, ಮಂಗಳೂರು ಉತ್ತರ
ವಿಧಾನಸಭಾ ಕ್ಷೇತ್ರ
ಶ್ರೀ ಉಮಾನಾಥ ಎ. ಕೋಟ್ಯಾನ್
ಶಾಸಕರು, ಮೂಲ್ಕಿ - ಮೂಡಬಿದ್ರೆ
ವಿಧಾನಸಭಾ ಕ್ಷೇತ್ರ
ಶ್ರೀ ರಾಜೇಶ್ ನಾಯ್ಕ್ ಯು.
ಶಾಸಕರು,
ಬಂಟ್ವಾಳ ವಿಧಾನಸಭಾ ಕ್ಷೇತ್ರ
ಶ್ರೀ ಹರೀಶ್ ಪೂಂಜ
ಶಾಸಕರು,
ಬೆಳ್ತಂಗಡಿ ವಿಧಾನಸಭಾ ಕ್ಷೇತ್ರ
ಶ್ರೀ ಅಶೋಕ್ ಕುಮಾರ್ ರೈ
ಶಾಸಕರು,
ಪುತ್ತೂರು ವಿಧಾನಸಭಾ ಕ್ಷೇತ್ರ
ಕುಮಾರಿ ಭಾಗೀರಥಿ ಮುರುಳ್ಯ
ಶಾಸಕರು,
ಸುಳ್ಯ ವಿಧಾನಸಭಾ ಕ್ಷೇತ್ರ
ಶ್ರೀ ಎ. ಕಿರಣ್ ಕುಮಾರ್ ಕೊಡ್ಗಿ
ಶಾಸಕರು,
ಕುಂದಾಪುರ ವಿಧಾನಸಭಾ ಕ್ಷೇತ್ರ
ಶ್ರೀ ಯಶ್‌ಪಾಲ್ ಎ. ಸುವರ್ಣ
ಶಾಸಕರು,
ಉಡುಪಿ ವಿಧಾನಸಭಾ ಕ್ಷೇತ್ರ
ಶ್ರೀ ಗುರ್ಮೆ ಸುರೇಶ್ ಶೆಟ್ಟಿ
ಶಾಸಕರು,
ಕಾಪು ವಿಧಾನಸಭಾ ಕ್ಷೇತ್ರ
ಶ್ರೀ ಗುರುರಾಜ್ ಶೆಟ್ಟಿ ಗಂಟಿಹೊಳೆ
ಶಾಸಕರು,
ಬೈಂದೂರು ವಿಧಾನಸಭಾ ಕ್ಷೇತ್ರ
ಶ್ರೀ ಎಸ್. ಎಲ್. ಭೋಜೇಗೌಡ
ಶಾಸಕರು,
ಕರ್ನಾಟಕ ವಿಧಾನ ಪರಿಷತ್
ಶ್ರೀ ಐವನ್ ಡಿ'ಸೋಜ
ಶಾಸಕರು,
ಕರ್ನಾಟಕ ವಿಧಾನ ಪರಿಷತ್
ಶ್ರೀ ಮಂಜುನಾಥ ಭಂಡಾರಿ
ಶಾಸಕರು,
ಕರ್ನಾಟಕ ವಿಧಾನ ಪರಿಷತ್
ಶ್ರೀ ಪ್ರತಾಪಸಿಂಹ ನಾಯಕ್ ಕೆ.
ಶಾಸಕರು,
ಕರ್ನಾಟಕ ವಿಧಾನ ಪರಿಷತ್
ಶ್ರೀ ಕಿಶೋರ್ ಕುಮಾರ್
ಶಾಸಕರು,
ಕರ್ನಾಟಕ ವಿಧಾನ ಪರಿಷತ್
ವಿಶೇಷ ಆಹ್ವಾನಿತರು
• ಸನ್ಮಾನ್ಯ ಶ್ರೀ ಮೇಜರ್ ಮಣಿವಣ್ಣನ್ ಪಿ. ಭಾ.ಆ.ಸೇ ಸರಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು
• ಸನ್ಮಾನ್ಯ ಶ್ರೀ ಟಿ. ಎಚ್. ಎಂ. ಕುಮಾರ್ ಭಾ.ಆ.ಸೇ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು • ಸನ್ಮಾನ್ಯ ಶ್ರೀ ಮುಲ್ಲೈ ಮುಹಿಲನ್ ಎಂ. ಪಿ. ಭಾ.ಆ.ಸೇ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ
• ಸನ್ಮಾನ್ಯ ಡಾ. ಕೆ. ವಿದ್ಯಾ ಕುಮಾರಿ ಭಾ.ಆ.ಸೇ ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ • ಸನ್ಮಾನ್ಯ ಶ್ರೀ ಅಮಿತ್ ಸಿಂಗ್ ಭಾ.ಪೋ.ಸೇ ಪೋಲೀಸ್ ಉಪ ಮಹಾನಿರೀಕ್ಷಕರು, ಪಶ್ಚಿಮ ವಲಯ
• ಸನ್ಮಾನ್ಯ ಶ್ರೀ ಅನುಪಮ್ ಅಗ್ರವಾಲ್ ಭಾ.ಪೋ.ಸೇ ಪೋಲೀಸ್ ಆಯುಕ್ತರು, ಮಂಗಳೂರು • ಸನ್ಮಾನ್ಯ ಶ್ರೀ ಯತೀಶ್ ಎನ್. ಭಾ.ಪೋ.ಸೇ ಪೋಲೀಸ್ ವರಿಷ್ಠಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು
• ಸನ್ಮಾನ್ಯ ಶ್ರೀ ಅರುಣ್ ಕೆ. ಭಾ.ಪೋ.ಸೇ ಪೋಲೀಸ್ ವರಿಷ್ಠಾಧಿಕಾರಿಗಳು, ಉಡುಪಿ ಜಿಲ್ಲೆ • ಸನ್ಮಾನ್ಯ ಶ್ರೀ ರವಿಚಂದ್ರ ನಾಯಕ್ ಆಯುಕ್ತರು, ಮಂಗಳೂರು ಮಹಾನಗರ ಪಾಲಿಕೆ
ತಮಗೆ ಆದರದ ಸ್ವಾಗತ ಬಯಸುವ
ಐಕಳಬಾವ ದೇವಿಪ್ರಸಾದ್ ಶೆಟ್ಟಿ ಬೆಳಪು
ಅಧ್ಯಕ್ಷರು
ಶಶಿಕುಮಾರ್ ರೈ ಬಾಲ್ಯೊಟ್ಟು
ಕಾರ್ಯಾಧ್ಯಕ್ಷರು
ಭಾಸ್ಕರ್ ಎಸ್. ಕೋಟ್ಯಾನ್ ಇರ್ವತ್ತೂರು
ಪ್ರಧಾನ ಕಾರ್ಯದರ್ಶಿ
ನವೋದಯ ಸ್ವಸಹಾಯ ಗುಂಪುಗಳ ರಜತ ಸಂಭ್ರಮ ಸಮಿತಿ 2025
ಮೇಘರಾಜ್ ಆರ್. ಜೈನ್
ಶ್ರೀಮತಿ ಹೇಮಲತಾ ಹೆಗ್ಡೆ
ಸುನೀಲ್ ಕುಮಾರ್ ಬಜಗೋಳಿ
ಟ್ರಸ್ಟಿಗಳು
ಶ್ರೀಮತಿ ಪೂರ್ಣಿಮ ಶೆಟ್ಟಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ
ನವೋದಯ ಗ್ರಾಮ ವಿಕಾಸ ಚಾರಿಟೆಬಲ್ ಟ್ರಸ್ಟ್ (ರಿ.)

ಯಾವತ್ತು: ಮೇ 16, ಶುಕ್ರವಾರ
ಸಮಯ: ಸಂಜೆ 5.30ಕ್ಕೆ
ಎಲ್ಲಿ: ಚೌಡಯ್ಯ ಸ್ಮಾರಕ ಭವನ

ಸ್ವರ್ಣ ಮಹೋತ್ಸವಕ್ಕೆ ನೃತ್ಯೋತ್ಸವ

ಶ್ರೀ ರಾಜರಾಜೇಶ್ವರಿ ಕಲಾನಿಕೇತನ 50ನೇ ವರ್ಷದ ಸಂಭ್ರಮ ಆಚರಣೆ ಪ್ರಯುಕ್ತ 'ನೃತ್ಯ ರಂಗೋಲಿ' ಎಂಬ ಕಾರ್ಯಕ್ರಮವನ್ನು ಮೇ 16ರಂದು ಸಂಜೆ 5.30ಕ್ಕೆ ಚೌಡಯ್ಯ ಸ್ಮಾರಕ ಭವನದಲ್ಲಿ ಹಮ್ಮಿಕೊಂಡಿದೆ.

ಸಂಗೀತ ಸಂಯೋಜಕ ಪ್ರವೀಣ್ ಡಿ. ರಾವ್ ಅವರ ಪಾರಂ ಫೌಂಡೇಷನ್ ಮತ್ತು ಗೋಕುಲಂ ಸ್ಕೂಲ್ ಆಫ್ ಮ್ಯೂಸಿಕ್ ಜಂಟಿಯಾಗಿ ಈ ಕಾರ್ಯಕ್ರಮವನ್ನು ಆಯೋಜಿಸುತ್ತಿವೆ.

ಇದೇ ಸಂದರ್ಭದಲ್ಲಿ 14 ಶ್ರೇಷ್ಠ ನೃತ್ಯ ಸಂಸ್ಥೆಗಳ ಕಲಾವಿದರು ಭಿನ್ನ ಭಿನ್ನ ಶೈಲಿಗಳಲ್ಲಿ ಸೇರಿ 'ಶ್ರೀಕೃಷ್ಣ ಲೀಲಾರ್ಣವ – ಹುಟ್ಟಿನಿಂದ ಭಗವದ್ಗೀತೆ ತನಕ' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಪ್ರಸ್ತುತಪಡಿಸಲಿದ್ದಾರೆ.

ಭಾಗವಹಿಸಲಿರುವ ಪ್ರಸಿದ್ಧ ಕಲಾವಿದರು: ಶ್ರೀದೇವಿ ಉನ್ನಿ, ಶಮಾ ಕೃಷ್ಣ, ಉಮಾ ಪಟ್ನಾಯಕ್, ಮಧುಲಿತಾ ಮಹಾಪಾತ್ರ, ಡಾ. ರಕ್ಷಾ ಕಾರ್ತಿಕ್, ಕೌಶಲ್ಯ ನಿವಾಸ್, ಡಾ. ವಸಂತ್ ಕಿರಣ್, ರಾಜಶ್ರೀ ಹೊಳ್ಳ, ರೇಖಾ ಸತೀಶ್, ರೇಖಾ ಜಗದೀಶ್, ದೀಪಕ್ ಪುತ್ತೂರು ಮತ್ತು ಆಯಾನಾ ಡಾನ್ಸ್ ಕಂಪನಿ.

200ಕ್ಕಿಂತ ಅಧಿಕ ಪ್ರತಿಷ್ಠಿತ ಮತ್ತು ನುರಿತ ಕಲಾವಿದರು ಭಾಗವಹಿಸಲಿರುವ ಈ ನೃತ್ಯ ರಂಗೋಲಿ, ಶ್ರೀಕೃಷ್ಣನ ಅವತಾರದಿಂದ ಗೀತೋಪದೇಶದ ತನಕದ ಕಥನವನ್ನು ನೃತ್ಯರೂಪದಲ್ಲಿ ನಿಮ್ಮ ಮುಂದೆ ತೆರೆದಿಡಲಿದೆ.

ಪಾಸ್‌ಗಾಗಿ ಸಂಪರ್ಕಿಸಿ: +91 80502 09838
ಡೋನರ್ ಪಾಸ್‌ಗಾಗಿ ಸಂಪರ್ಕಿಸಿ: +91 80502 09838

ಸಾಂಪ್ರದಾಯಿಕ ನೃತ್ಯ ಪ್ರದರ್ಶನ

ಅಮರ ಮಧುರ ಪ್ರೇಮ ನಾಟಕ ತಂಡ

ಯಾವತ್ತು: ಮೇ 11, ಭಾನುವಾರ
ಸಮಯ: ಸಂಜೆ 6.45ಕ್ಕೆ
ಎಲ್ಲಿ: ಎಡಿಎ ರಂಗಮಂದಿರ, ಜೆ.ಸಿ.ರಸ್ತೆ

ನಾಳೆ ಅಮರ ಮಧುರ ಪ್ರೇಮ

ಹೊಸ ವಿಚಾರಧಾರೆಯ ತಿಳಿ ನಗು ಹೊಮ್ಮಿಸುವ ನಾಟಕ 'ಅಮರ ಮಧುರ ಪ್ರೇಮ', ಹುಬ್ಬಳ್ಳಿಯ ಗುರು ಇನ್‌ಸ್ಟಿಟ್ಯೂಟ್ ಅಭಿನಯಿಸುವ ನಾಟಕವನ್ನು ಹೇಮಂತ್ ಎಡಲಾಬಾದಕರ್ ಮರಾಠಿಯಲ್ಲಿ ರಚಿಸಿದ್ದೂ ಕನ್ನಡಕ್ಕೆ ಡಾ ಯಶವಂತ ಸರದೇಶಪಾಂಡೆ ಅನುವಾದಿಸಿ ನಿರ್ದೇಶಿಸಿದ್ದಾರೆ.

ರಂಗದ ಮೇಲೆ ಜನಪ್ರಿಯ ತಾರಾ ಜೋಡಿ ವೀಣಾ - ಸುಂದರ್ ಹಾಗೂ ಯಶವಂತ ಸರದೇಶಪಾಂಡೆ ಅಭಿನಯಿಸಿದ್ದಾರೆ.

ಮೂವರು ನುರಿತ ಕಲಾವಿದರು ಪ್ರೇಕ್ಷಕರ ಮುಖದಲ್ಲಿ ನಗುವಿನ ಆಭರಣ ತೊಡಿಸುವುದರ ಜೊತೆಗೆ, ಸೀನಿಯರ್ ಸಿಂಗಲ್ ವ್ಯಕ್ತಿಗಳ ಜೀವನದ ಸೂಕ್ಷ್ಮ ಆಗುಹೋಗುಗಳನ್ನು ಬಿಚ್ಚಿಡುತ್ತ ಹೋಗುತ್ತಾರೆ.

ಚುರುಕು ಸಂಭಾಷಣೆ, ಅಭಿನಯದಲ್ಲಿ ಗಾಂಭೀರ್ಯ ಮತ್ತು ಪ್ರಸ್ತುತಿಯಲ್ಲಿ ತಿಳಿ ಹಾಸ್ಯದ ಮೂಲಕ ನಾಟಕ ಪ್ರೇಕ್ಷಕರನ್ನು ರಂಜಿಸುತ್ತದೆ. ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಗ್ರೀನ್ ತಾರಾ ಬಾಗ್ಸ್, ಜಕ್ಕಾಲಿಸ್ ಫುಡ್ಸ್, ಅನ್ನಪೂರ್ಣ ಐ ಹಾಸ್ಪಿಟಲ್ ಮತ್ತು ರವೀಂದ್ರ ಜೋಶಿ ಕ್ರಿಯೇಷನ್ಸ್ ಸಂಯುಕ್ತವಾಗಿ ಈ ಪ್ರದರ್ಶನ ಆಯೋಜಿಸಿದ್ದೂ ಸುಮಿತ್ರಾ ಅವರ ಸಹಯೋಗದಲ್ಲಿ ನೆರವೇರಲಿದೆ.

ವಿವರಗಳಿಗೆ ಮತ್ತು ಪ್ರವೇಶಕ್ಕೆ +91 95916 82548 ಸಂಪರ್ಕಿಸಿ.

ಸಾಂಸ್ಕೃತಿಕ

ಶ್ರೀವತ್ಸ ಕೌಲಗಿ, ಶಿವಾನಿ ಮಿರಾಜ್‌ಕರ್ ಜೈನ್, ತೇಜಸ್ ಕರೋಶಿ

ಪಂಡಿತ್ ರವಿಶಂಕರ್ ನೆನಪಿನಲ್ಲಿ 'ರವಿರಾಗ'

ಸಿತಾರ್ ಮಾಂತ್ರಿಕ ಪಂಡಿತ್ ರವಿಶಂಕರ್ ಅವರ 105ನೇ ಜನ್ಮದಿನಾಚರಣೆಯ ಪ್ರಯುಕ್ತ 'ರವಿರಾಗ– ಸುಮಧುರ ಬೆಳಕು' ಎನ್ನುವ ಸಂಗೀತ ಕಛೇರಿಯನ್ನು ಮೇ 10ರಂದು ಬೆಳಿಗ್ಗೆ 11 ರಿಂದ 12.30ವರೆಗೆ ಆಯೋಜಿಸಲಾಗಿದೆ.

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಚೌಕಟ್ಟು ಮತ್ತು ನವೀನತೆಯನ್ನು ರೂಢಿಸಿಕೊಂಡ ವಿಶಿಷ್ಟ ಕಛೇರಿ ಇದಾಗಿದ್ದು, ಸಿತಾರ್ ಮೂಲಕ ಅನ್ವೇಷಿಸಲಾದ ಮುಂಜಾನೆ ರಾಗಗಳಾದ ಬೈರಾಗಿ ಮತ್ತು ನಟಭೈರವಿಗಳ ಲಾಲಿತ್ಯಕ್ಕೆ ಗಾಯನ ಚೌಕಟ್ಟು ನೀಡಲಾಗಿದೆ. ಈ ರಾಗಗಳ ಸುಮಧುರ ಸಾರದ ವಿಶಿಷ್ಟ ಅನುಭವವನ್ನು ನೀಡಲಿದ್ದಾರೆ ಶಿವಾನಿ ಮಿರಾಜ್‌ಕರ್ ಜೈನ್ (ಗಾಯನ), ಶ್ರೀವತ್ಸ ಕೌಲಗಿ (ತಬಲಾ), ತೇಜಸ್ ಕರೋಶಿ (ಹಾರ್ಮೋನಿಯಂ).

ಮುಂಜಾನೆಯ ಈ ಎರಡೂ ರಾಗಗಳು ಪ್ರಶಾಂತತೆ ಮತ್ತು ಧ್ಯಾನಸ್ಥ ಮನೋಭಾವವನ್ನು ಸಾಕಾರಗೊಳಿಸುತ್ತವೆ. ಅಲ್ಲದೇ ಕೇಳುಗರಲ್ಲಿ ಶಾಂತಮುದ್ರೆಯನ್ನು ಮೂಡಿಸುತ್ತವೆ.

ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, 4ನೇ ಮುಖ್ಯರಸ್ತೆ, ದೊಮ್ಮಲೂರು 2ನೇ ಹಂತ.

ಯಕ್ಷಲೋಕದಲ್ಲಿ 'ಸಿಂಧೂರ'

ಭಾರತೀಯ ಸಂಸ್ಕೃತಿಯಲ್ಲಿ ಸಿಂಧೂರಕ್ಕಿರುವ ಆದ್ಯತೆ ಅಪಾರ. ಸಿಂಧೂರವನ್ನು ಅಳಿಸಿದವರ ಹುಟ್ಟಡಗಿಸಲು ಇಡೀ ದೇಶಕ್ಕೆ ದೇಶವೇ ಒಂದಾಗಿ ಮುಂದಡಿ ಇಟ್ಟಿದೆ.

ಕೊಳಗಿ ಕೇಶವ ಹೆಗಡೆ

ಇದನ್ನೇ ಸ್ಫೂರ್ತಿಯಾಗಿ ಪಡೆದುಕೊಂಡ 'ಟೀಮ್ ಕದಳಿ' ತಂಡವು 'ಯಕ್ಷ ಸಿಂಧೂರ' ವನ್ನು ಜೂನ್ 21ರಂದು ರಾತ್ರಿ 10ಕ್ಕೆ ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದೆ.

ಭಾಗವತಿಕೆ: ಕೊಳಗಿ ಕೇಶವ ಹೆಗಡೆ, ಸುರೇಶ್ ಶೆಟ್ಟಿ ಶಂಕರನಾರಾಯಣ, ಹಿಲ್ಲೂರು ರಾಮಕೃಷ್ಣ ಹೆಗಡೆ, ವಿನಯ್ ಆರ್.ಶೆಟ್ಟಿ. **ಮದ್ದಳೆ:** ಪರಮೇಶ್ವರ ಭಂಡಾರಿ ಕರ್ಕಿ, ಸುನಿಲ್ ಭಂಡಾರಿ ಕಡತೋಕ. **ಚಂಡೆ:** ಶಿವಾನಂದ ಕೋಟ, ಶ್ರೀನಿವಾಸ ಪ್ರಭು, ಸುಜನ್ ಹಾಲಾಡಿ. **ಸ್ತ್ರೀವೇಷ:** ಸಂತೋಷ್ ಹಿಲಿಯಾಣ,ಸುಧೀರ್ ಉಪ್ಪೂರ್, ನಾಗರಾಜ್ ದೇವಲ್ಕುಂದ, **ಹಾಸ್ಯ–** ಅಶೋಕ ಭಟ್ ಸಿದ್ದಾಪುರ, ಶೇಖರ್ ಶೆಟ್ಟಿ ಯಳಬೇರು, ಪ್ರಜ್ವಲ್ ಆರ್ ಗುರುವಾಯನಕೆರೆ. **ಪುರುಷವೇಷ:** ತೀರ್ಥಹಳ್ಳಿ ಗೋಪಾಲ್ ಆಚಾರ್, ಬಳ್ಕೂರು ಕೃಷ್ಣಯಾಜಿ, ಗಣಪತಿ ಹೆಗಡೆ ತೋಟಿಮನೆ, ಸುಬ್ರಹ್ಮಣ್ಯ ಚಿಟ್ಟಾಣಿ, ಜಯಪ್ರಕಾಶ್ ಶೆಟ್ಟಿ ಪೆರ್ಮುದೆ, ವಿದ್ಯಾಧರ್ ರಾವ್ ಜಲವಳ್ಳಿ, ಪ್ರಕಾಶ್ ಮೊಗವೀರ ಕಿರಾಡಿ. **ವೇಷಭೂಷಣ:** ಭರತ್‌ರಾಜ್ ಪರ್ಕಳ. **ಸಂಯೋಜನೆ:** ಅನಿಲ್ ಕುಮಾರ್ ಶೆಟ್ಟಿ ಪೆರ್ಡೂರು.

ಪಿಕ್ಚರ್ ಪ್ಯಾಲೇಸ್



ಧಗೆ ನೀಗಿಸುವ ಬಗೆ

ಚರ್ಮ ಸುಡುವ ಈ ಬಿರುಬೇಸಿಗೆಯಲ್ಲಿ ಗಜರಾಜನ ಕುಟುಂಬ ಜಲಕ್ರೀಡೆಯಲ್ಲಿ ಸಮಾಧಾನ ಪಡೆಯುತ್ತಿದೆ. ಸೊಂಡಿಲ ಶವರ್‌ನಿಂದ ನೀರು ಬೀಸಿಕೊಂಡು ಸ್ನಾನದ ಸುಖ ಅನುಭವಿಸುತ್ತಲೇ ತನ್ನ ದೇಹದ ತಾಪಮಾನ ಕಾಪಿಟ್ಟುಕೊಳ್ಳುವ ಈ ಗಜಸಂಸಾರದ ಚಂದದ ಚಿತ್ರಗಳನ್ನು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ಸೆರೆ ಹಿಡಿದಿದ್ದು **ಫೋಟೋ ಜರ್ನಲಿಸ್ಟ್** ರಂಜು. ಪಿ. ಹಸಿರು ಪೊದೆಗಳಡಿಯಲ್ಲಿ ತನ್ನ ಮೀಸೆ ಹಿಗ್ಗಲಿಸಿ, ಕೋರೆಗಳನ್ನು ತೋರಿಸಿ, ಸೂರ್ಯನಿಗೇ ಹೆದರಿಸಿ, ನೆರಳಿನಡಿಯಲ್ಲಿ ವಿರಮಿಸುತ್ತಿರುವ ಚಿರತೆ ಸಂಸಾರವೂ ಬೇಸಿಗೆಯ ನಡು ಮಧ್ಯಾಹ್ನ ಕ್ಯಾಮೆರಾ ಕಣ್ಣಿಗೆ ಸೆರೆ ಸಿಕ್ಕವು.

ಕಾಳಜಿ

ಬೇಸಿಗೆಯಲ್ಲಿ ಕೂದಲ ಆರೈಕೆ ಹೀಗಿರಲಿ...

ಬೇಸಿಗೆ ಕಾಲದಲ್ಲಿ ಸೂರ್ಯನ ತಾಪದಿಂದ ಪಾರಾಗದವರೇ ವಿರಳ. ಹೊರಗೆ ಕಾಲಿಟ್ಟರೆ ಸಾಕು ಮೈಯಷ್ಟೇ ಅಲ್ಲ ನೆತ್ತಿಯೂ ಸುಡುವಂಥ ಬಿಸಿಲು. ಮೈಬೆವರ ವಾಸನೆಯ ಜತೆಗೆ ತಲೆಕೂದಲ ಬುಡದಲ್ಲೂ ಬೆವರ ಸಿಂಚನ.

ಬೇಸಿಗೆ ಚರ್ಮವಷ್ಟೇ ಅಲ್ಲ, ಕೂದಲ ಆರೋಗ್ಯದ ಮೇಲೂ ಪರಿಣಾಮ ಬೀರಬಲ್ಲದು. ಬಿಸಿಲ ತಾಪಕ್ಕೆ ನೆತ್ತಿಯಲ್ಲಿನ ನೈಸರ್ಗಿಕ ಎಣ್ಣೆಯಂಶ ಕಡಿಮೆಯಾಗಿ ಕೂದಲು ಹೊಳಪು ಕಳೆದುಕೊಂಡು ನಿಸ್ತೇಜವಾಗುತ್ತದೆ. ಜತೆಗೆ ಕೂದಲಿಗೆ ಬೇಕಾದ ತೇವಾಂಶದ ಕೊರತೆಯೂ ಆಗಿ ಕೂದಲು ಒಣಗಿ ಸತ್ವಹೀನವಾದಂತೆ ಕಾಣುತ್ತದೆ.

ಬಿಸಿಲು ಮತ್ತು ದೂಳಿಗೆ ಕೂದಲನ್ನು ದೀರ್ಘ ಕಾಲ ಒಡ್ಡುವುದರಿಂದ ನೆತ್ತಿ ಮತ್ತು ಕೂದಲ ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ. ಮುಖ್ಯವಾಗಿ ಕೂದಲಬುಡದಲ್ಲಿ ತುರಿಕೆ, ತಲೆಹೊಟ್ಟು, ಕೂದಲು ಸೀಳು ಬಿಡುವಂಥ ಸಮಸ್ಯೆಗಳು ಬೇಸಿಗೆಯಲ್ಲಿ ಸಾಮಾನ್ಯ. ಇದು ಕೂದಲು ಉದುರುವಿಕೆಗೂ ಕಾರಣವಾಗಲ್ಲದು. ತುಸು ಕಾಳಜಿ ವಹಿಸಿದರೆ ಬೇಸಿಗೆಯಲ್ಲೂ ಕೂದಲ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

ಬೆವರನ್ನು ನಿರ್ಲಕ್ಷಿಸದಿರಿ

ಬಿಸಿಲಿಗೆ ಕೂದಲು ಒದ್ದೆಯಾದಾಗ ಅದನ್ನು ನಿರ್ಲಕ್ಷಿಸುವವರೇ ಹೆಚ್ಚು. ಕೆಲವರು ಫ್ಯಾನ್ ಗಾಳಿಗೆ ಕೂದಲು ಒಣಗಿಸಿಕೊಳ್ಳುತ್ತಾರೆ. ಆದರೆ, ಬೆವರಿನಿಂದ ಒದ್ದೆಯಾದ ಕೂದಲು ತಲೆಹೊಟ್ಟು ಮತ್ತು ಫಂಗಲ್ ಸೋಂಕಿಗೆ ಕಾರಣವಾಗಬಹುದು. ಹಾಗಾಗಿ, ಬೆವರಿನಿಂದ ತಲೆಕೂದಲು ಒದ್ದೆಯಾದಾಗ ತಲೆಸ್ನಾನ ಮಾಡುವುದು ಉತ್ತಮ. ಇದರಿಂದ ದೂಳು ಮತ್ತಿತರ ಮಾಲಿನ್ಯದಿಂದ ಜಡ್ಡುಗಟ್ಟಿದ ಕೂದಲು ಸ್ವಚ್ಛಗೊಂಡು, ಕೂದಲ ಬಡಕ್ಕೂ ಹಿತವೆನಿಸುತ್ತದೆ. ವಾರಕ್ಕೆ ಎರಡು–ಮೂರು ಬಾರಿಯಾದರೂ ತಲೆಸ್ನಾನ ಮಾಡುವುದು ಉತ್ತಮ.

ಎಣ್ಣೆ ಮಸಾಜ್

ನೆತ್ತಿಯ ಆರೋಗ್ಯ ಚೆನ್ನಾಗಿರಬೇಕೆಂದು ಈ ಹಿಂದೆ ಹಿರಿಯರು ತಲೆಕೂದಲು ಹಾಗೂ ನೆತ್ತಿಗೆ ಕೊಬ್ಬರಿ ಎಣ್ಣೆಯನ್ನು ಹಚ್ಚುತ್ತಿದ್ದರು. ವಾರಕ್ಕೊಮ್ಮೆಯಾದರೂ ಕೊಬ್ಬರಿಎಣ್ಣೆ ಇಲ್ಲವೇ ಬಾದಾಮಿ ಎಣ್ಣೆ ಹಚ್ಚಿ, ನಿಧಾನವಾಗಿ ಮಸಾಜ್ ಮಾಡಿದರೆ ಕೂದಲ ಬುಡದಲ್ಲಿ ರಕ್ತ ಪರಿಚಲನೆ ಸುಗಮವಾಗುತ್ತದೆ. ತಲೆಹೊಟ್ಟು, ಶಿಲೀಂಧ್ರದ ಸೋಂಕನ್ನೂ ತಡೆಯಬಹುದು.

ಸೂಕ್ತ ಶ್ಯಾಂಪೂ, ಕಂಡೀಷನರ್ ಅಗತ್ಯ

ಬಿಸಿಲಿಗೆ ಬೆವರು ಮತ್ತು ಕೊಳೆ ಬೇಗ ಸಂಗ್ರಹವಾಗುವುದಿಂದ ಕೂದಲ ಆರೈಕೆಗೆ ಸೂಕ್ತವಾದ, ಹೆಚ್ಚು ರಾಸಾಯನಿಕ ಇಲ್ಲದ ಶ್ಯಾಂಪೂ ಹಾಗೂ ಕಂಡೀಷನರ್ ಬಳಸುವುದು ಅಗತ್ಯ. ಶ್ಯಾಂಪೂ ಕೂದಲಿನ ಕೊಳೆಯನ್ನು ಸ್ವಚ್ಛಗೊಳಿಸಿದರೆ, ಕಂಡೀಷನರ್ ಕೂದಲಿನ ನೈಸರ್ಗಿಕ ತೇವಾಂಶ ಉಳಿಕೆಗೆ ಸಹಕಾರಿಯಾಗುತ್ತದೆ. ಕೂದಲು ಹೆಚ್ಚು ಒಣಗಿದ್ದು, ಒರಟಾಗಿದ್ದರೆ ಆಲೋವೆರಾ, ತೆಂಗಿನ ಹಾಲಿನ ಅಂಶವುಳ್ಳ ಹೆಚ್ಚು ತೇವಾಂಶ ಕಾಪಾಡುವಂಥ ಶ್ಯಾಂಪೂ ಬಳಸುವುದು ಉತ್ತಮ.

ಹೇರ್ ಡ್ರೈಯರ್ ಬಳಸದಿರಿ

ಕೆಲವರು ಕೂದಲು ಬೇಗ ಒಣಗಬೇಕೆಂಬ ತರಾತುರಿಗೆ ಹೇರ್ ಡ್ರೈಯರ್ ಬಳಸುತ್ತಾರೆ. ಆದರೆ, ಬೇಸಿಗೆಯಲ್ಲಿ ಹೇರ್ ಡ್ರೈಯರ್ ಬಳಸದಿರುವುದೇ ಕ್ಷೇಮಕರ ಎನ್ನುತ್ತಾರೆ ಕೂದಲ ಆರೋಗ್ಯ ತಜ್ಞರು. ಮೊದಲೇ ಒಣಗಿ, ನೈಸರ್ಗಿಕ ಎಣ್ಣೆಯಂಶ ಕಡಿಮೆಯಾದ ಕೂದಲನ್ನು ಶಾಖಕ್ಕೆ ಒಡ್ಡುವುದರಿಂದ ಕೂದಲು ಮತ್ತಷ್ಟು ಒಣಗಿ, ಮುರುಟಿದಂತಾಗುತ್ತದೆ. ಅಂತೆಯೇ ಬ್ಲೋ ಡ್ರೈಯರ್, ಕರ್ಲಿಂಗ್ ಮಾಡುವಂಥದ್ದನ್ನೂ ತಪ್ಪಿಸಿ.

ನೇರ ಸೂರ್ಯ ಬೆಳಕಿಗೆ ಒಡ್ಡದಿರಿ

ಬೇಸಿಗೆಯಲ್ಲಿ ಹೊರಗೆ ಹೋಗಲೇಬೇಕಾದ ಅನಿವಾರ್ಯತೆ ಇದ್ದಾಗ ಆದಷ್ಟು ತಲೆಯನ್ನು ಕಾಟನ್ ಬಟ್ಟೆಯಿಂದ ಮುಚ್ಚಿಕೊಳ್ಳುವುದು ಉತ್ತಮ. ಇಲ್ಲವೇ ಟೋಪಿಯನ್ನು ಬಳಸಬಹುದು. ಮುಖ್ಯವಾಗಿ ಬಿರು ಬಿಸಿಲಿನಲ್ಲಿ ಅಲ್ಟ್ರಾವೈಲೆಟ್ ಕಿರಣಗಳ ಪ್ರಭಾವ ಪ್ರಖರವಾಗಿರುವುದರಿಂದ ಕೂದಲಿನ ನೈಸರ್ಗಿಕ ಬಣ್ಣಕ್ಕೂ ಧಕ್ಕೆಯಾಗಬಹುದು.

ಪೌಷ್ಟಿಕಾಂಶ ಆಹಾರ ಸೇವಿಸಿ

ಬೇಸಿಗೆಯಲ್ಲಿ ದೇಹವಷ್ಟೇ ನಿರ್ಜಲೀಕರಣವಾಗುವುದಿಲ್ಲ. ಕೂದಲೂ ಕೂಡಾ ನಿರ್ಜಲೀಕರಣದ ಸ್ಥಿತಿ ಎದುರಿಸುತ್ತದೆ. ಹಾಗಾಗಿ, ನಿಮ್ಮ ದೇಹವನ್ನು ಸುಸ್ಥಿತಿಯಲ್ಲಿಡುವಂಥ ಆಹಾರ ಸೇವನೆ ಅಗತ್ಯ. ಹೆಚ್ಚು ನೀರು ಸೇವನೆ, ಒಮೆಗಾ–3 ಕೊಬ್ಬಿನಾಂಶ, ಕಬ್ಬಿಣ, ಸತುವಿನ ಅಂಶಗಳುಳ್ಳ ಆಹಾರ ಸೇವಿಸುವುದು ಉತ್ತಮ. ಇದು ದೇಹದ ಆರೋಗ್ಯವಷ್ಟೇ ಅಲ್ಲ, ಕೂದಲ ಆರೋಗ್ಯಕ್ಕೂ ಉತ್ತಮ.

ಲಹರಿ

ಗಾಡಿಯೋಡಿಸುವ ಹುಡುಗಿಯರೆಂದರೆ...

ಅಪೇಕ್ಷಾ ನಾರಾಯಣ್

ಬೀದಿಗಳಲ್ಲಿ ವಾಹನ ಚಲಾಯಿಸುವವರು ಬಹುತೇಕರು ಪುರುಷರೇ. ಚಿಕ್ಕವಳಿದ್ದಾಗಿನಿಂದಲೂ ಇದನ್ನು ಗಮನಿಸಿದ್ದೇನೆ. ಈಗಲೂ ಅದರ ಚಿತ್ರಣ ಹೆಚ್ಚೇನೂ ಬದಲಾದಂತೆ ಅನಿಸುವುದಿಲ್ಲ. ಮೊದಲ ಬಾರಿಗೆ ಅಣ್ಣ ಸೈಕಲ್ ಓಡಿಸಲು ಪ್ರಯತ್ನಿಸಿದಾಗ, ಬಿದ್ದ ಅವನು ಅಳುತ್ತಾ ಮನೆಗೆ ಓಡಿ ಬಂದಿದ್ದ. ಆಗ ಅಪ್ಪ, ' ಬೀಳುವವನೇ ಏಳುವವನು. ಬಿದ್ದರೆ ತಾನೇ ಮುಂದೆ ಓಡಿಸಲಿಕ್ಕೆ ಆಗುವುದು' ಎಂದು ಸಮಾಧಾನ ಹೇಳಿದ್ದರು.

ಆದರೆ, ಮೊದಲ ಬಾರಿಗೆ ಅಕ್ಕ ಸೈಕಲ್ ಹಿಡಿದಾಗ ಅದರ ಬಗ್ಗೆ ಅಮ್ಮ ಹೇಳಿದ್ದ ಮಾತೇ ಬೇರೆಯಾಗಿತ್ತು. 'ಜಾಗ್ರತೆ. ಬಿದ್ದರೆ, ಮೂಳೆ ಮುರಿದು ಹೋಗುತ್ತದೆ. ನಿಧಾನವಾಗಿ ಓಡಿಸು. ಬೀಳದಂತೆ ಓಡಿಸು, ಈಗ ಇದರ ಅಗತ್ಯವಾದರೂ ಏನು?' ಹೀಗೆ ಕಳಕಳಿಯ ಬಾಣಗಳು ಅಕ್ಕನ ಸೈಕಲ್ ಓಡಿಸುವ ಆಸೆಯನ್ನೇ ಚಿವುಟಿ ಹಾಕಿದ್ದವು. ಬಿದ್ದರೆ ಏನಾಗುತ್ತದೋ ಎನ್ನುವ ಭಯದಿಂದ ಆಕೆ ಸೈಕಲ್ ತುಳಿಯುವ ಸಾಹಸವನ್ನೇ ಬಿಟ್ಟಳು.

ಇದು ಕೇವಲ ಅವಳ ಕಥೆಯಲ್ಲ. ಅನೇಕ ಹೆಣ್ಣುಮಕ್ಕಳ ಕಥೆ. ಇಂಥ ಸವಾಲುಗಳನ್ನೆಲ್ಲ ಮೀರಿಯೂ ಹೆಣ್ಣುಮಕ್ಕಳು ಗಾಡಿ ಓಡಿಸಲು ಕಲಿತರೆ ಅವರತ್ತ ಕುಹಕದ ನಗೆ ಬೀರಲಾಗುತ್ತದೆ. ಕಲಿತ ತಕ್ಷಣ ಅವಳೆಡೆಗೆ ತೂರಿ ಬರುವ ಪ್ರಶ್ನೆಗಳೆಂದರೆ ' ಸರಿಯಾಗಿ ಓಡಿಸೋದಕ್ಕೆ ಬರುತ್ತೆ ತಾನೇ?', 'ಎಲ್ಲಿಯೂ ಬಿದ್ದಿಲ್ಲವಲ್ಲ?', ' ನನಗೆ ಜೀವದ ಮೇಲೆ ಆಸೆ ಇದೆ. ನಿಜ್ವಾ ಹೇಳು ನಿನ್ನ ಕೈಲಿ ಆಗುತ್ತಾ' ಹೀಗೆ ಕೇಳುತ್ತಲೇ ಅವಳ ಆತ್ಮವಿಶ್ವಾಸವನ್ನು ಕುಗ್ಗಿಸಲಾಗುತ್ತದೆ. ಹೆಣ್ಣುಮಕ್ಕಳ ವಾಹನ ಚಾಲನೆ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಬೇಕಾದಷ್ಟು ಮೀಮ್ಸ್‌ಗಳು ಸಿಗುತ್ತವೆ. ಅದೊಂದು ನಗೆಪಾಟಲಿನ ವಸ್ತುವೂ ಆಗಿ ಇದೆ.

ಗಾಡಿ ಕಲಿಕೆಯೂ ಹೆಣ್ಣಿನ ಸ್ವಾತಂತ್ರ್ಯವನ್ನು ಬಿಂಬಿಸುವ ಒಂದು ದಾರಿ. ಅಪ್ಪ–ಅಮ್ಮನಿಂದ ಉಡುಗೊರೆಯಾಗಿ ಪಡೆಯುವ 'ವಾಹನ'ದಲ್ಲಿ ಗಂಡುಮಕ್ಕಳು ಖುಷಿಯಿಂದ ಕಾಲೇಜುಗಳಿಗೆ ಬರುತ್ತಾರೆ. ಆದರೆ, ಹುಡುಗಿಯರಿಗೆ ಈ ರೀತಿಯ ಉಡುಗೊರೆ ಬರುವುದೇ ಕಡಿಮೆ. ಅವರೇನಿದ್ದರೂ, ಅಪ್ಪ, ಅಣ್ಣ, ತಮ್ಮ ಅಥವಾ ಗಂಡ ಇಲ್ಲವಾದರೆ ಸಾರ್ವಜನಿಕ ಸಾರಿಗೆಗಾಗಿ ಕಾಯಬೇಕು. ಹೀಗೆ ಕಾಯುತ್ತ ಅವರ ಸಮಯವೂ ಇಷ್ಟಿಷ್ಟೆ ಸವೆದೂ ಹೋಗುತ್ತದೆ. ಮಹಿಳೆಯರು ಸಾರ್ವಜನಿಕ ಸಾರಿಗೆಗಳಲ್ಲಿ ಓಡಾಡುವಾಗ, ಸಾರ್ವಜನಿಕ ಸಾರಿಗೆಗಾಗಿ ಕಾಯುವಾಗ ಲೈಂಗಿಕ ಕಿರುಕುಳಗಳನ್ನು ಎದುರಿಸುತ್ತಾರೆ ಎನ್ನುವುದನ್ನು ಮರೆಯುವಂತಿಲ್ಲ. ಇನ್ನು ಈ ಉಡುಗೊರೆಯ ವಿಚಾರಕ್ಕೆ ಬಂದರೆ, ಇಂಥ ವಾಹನಗಳ ಉಡುಗೊರೆಗಳೆಲ್ಲ ಸಿಗುವುದು ಗಂಡಸರಿಗೆ ಮಾತ್ರ (ಹುಟ್ಟುಹಬ್ಬಕ್ಕಿರಲಿ, ಮದುವೆಯ ಸಂದರ್ಭದಲ್ಲಿ 'ಉಡುಗೊರೆಯ' ರೂಪದಲ್ಲಿಯೇ ಇರಲಿ). ಹೆಣ್ಣುಮಕ್ಕಳಿಗೆ ವಾಹನಗಳು ಉಡುಗೊರೆಯಾಗಿ ದೊರಕುವುದು ಅಪರೂಪದ ಸಂಗತಿ. ಹೆಣ್ಣುಮಕ್ಕಳ ಹೆಸರಿನಲ್ಲಿರುವ ವಾಹನಗಳಿಗೆ ಸಾಮಾನ್ಯವಾಗಿ ಆ ಮನೆಯ ಗಂಡಸರೇ ಅಧಿಪತಿಗಳಾಗಿರುತ್ತಾರೆ. ಮಹಿಳೆಯರೇನಿದ್ದರೂ ಸಹಪ್ರಯಾಣಿಕರು ಅಥವಾ ಪಿಲ್ಲಿಯನ್ ರೈಡರ್‌ಗಳು. ಚಾಲನ ಪರವಾನಗಿ ವಿಷಯದಲ್ಲಿಯೂ ಶೇ 92.3ರಷ್ಟು ಪರವಾನಗಿಗಳನ್ನು ಗಂಡಸರು ಹೊಂದಿದ್ದರೆ, ಕೇವಲ ಶೇ 7.7ರಷ್ಟು ಪರವಾನಗಿಯನ್ನು ಮಹಿಳೆಯರು ಹೊಂದಿದ್ದಾರೆ. ಈ ಪರವಾನಗಿ ಪಡೆದ ಹೆಣ್ಣುಮಕ್ಕಳಲ್ಲಿ ನಿಯಮಿತವಾಗಿ ವಾಹನ ಓಡಿಸುವವರೆಷ್ಟೋ!.

ವಾಹನ ಚಲಾಯಿಸುವುದು ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಸ್ವಾತಂತ್ರ್ಯದ ಒಂದು ಭಾಗವೇ ಆಗಿದೆ. ಪರಾವಲಂಬನೆಯನ್ನು ಮೀರಿ ನಿಲ್ಲಲು ಇದು ಅತ್ಯುತ್ತಮ ಆಯ್ಕೆಯೇ ಸರಿ. ಅಷ್ಟೆ ಅಲ್ಲ ಚಾಲನೆಯನ್ನೇ ಉದ್ಯೋಗವನ್ನಾಗಿಯೂ ರೂಪಿಸಿಕೊಂಡು ಬದುಕು ಕಟ್ಟಿಕೊಳ್ಳಬಹುದು. ಊಬರ್, ಓಲಾ, ಸ್ವಿಗ್ಗಿ ಡೆಲಿವರಿ ಪಾರ್ಟ್ನರ್ ಹೀಗೆ ಹಲವು ಅವಕಾಶಗಳಿವೆ. ಅಸ್ಮಿತೆಯನ್ನು ಅರಿತು ಆತ್ಮವಿಶ್ವಾಸದ ದಾರಿಯಲ್ಲಿ ಸಾಗಲು 'ಗುಡ್ ರೈಡರ್' ಆಗುವುದು ಒಳ್ಳೆಯದೇ ಅಲ್ಲವೇ?

ಅಮ್ಮಂದಿರ ದಿನಕ್ಕೆ ಬಿಪಾಶಾ ಸ್ವರಾ ಪಾಠ

ಅಮ್ಮಂದಿರ ದಿನದ ಹೊಸ್ತಿಲಲ್ಲಿ ಸಿನಿಮಾ ನಟಿಯರಾದ ಬಿಪಾಶಾ ಬಸು ಮತ್ತು ಸ್ವರಾ ಭಾಸ್ಕರ್ ತಮ್ಮ ತಾಯ್ತನದ ಗಳಿಗೆಗಳನ್ನು ಹಂಚಿಕೊಂಡಿದ್ದಾರೆ.

ಇತ್ತೀಚೆಗೆ ಗೋವಾ ಪ್ರವಾಸ ಕೈಗೊಂಡಿದ್ದ ಬಿಪಾಶಾ, ಮಕ್ಕಳೊಂದಿಗೆ ಪ್ರವಾಸ ಕೈಗೊಳ್ಳುವುದರ ಲಾಭಗಳನ್ನು ಕಿರಣ್ ಗ್ರೋವರ್ ಅವರೊಂದಿಗೆ ಚರ್ಚಿಸಿ ಎನ್‌ಡಿ ಟಿ.ವಿಯೊಂದಿಗೆ ಹಂಚಿಕೊಂಡಿದ್ದಾರೆ.

ಹೆಚ್ಚುವ ಆತ್ಮವಿಶ್ವಾಸ

ಮಕ್ಕಳೊಂದಿಗೆ ಪ್ರವಾಸ ಕೈಗೊಳ್ಳುವುದರಿಂದ ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚುತ್ತದೆ. ಮನೆಯ ಪರಿಚಿತ ಪರಿಸರದಿಂದ ದೂರ, ಅಪರಿಚಿತ ಊರುಗಳಲ್ಲಿ ತಾತ್ಕಾಲಿಕವಾಗಿ ವಾಸವಾಗುವ ಸಂತೋಷದ ಜೊತೆಗೆ ಹೊಂದಿಕೊಳ್ಳುವ ಪಾಠ ಸಿಗುತ್ತದೆ.


ಬಿಪಾಶಾ ಬಸು ಮಗಳು ದೇವಿಯೊಂದಿಗೆ

ಬಿಪಾಶಾ ಬಸು ಮಗಳು ದೇವಿಯೊಂದಿಗೆ

ಸಭ್ಯತೆ, ಸೌಜನ್ಯ

ಮಕ್ಕಳು ಉಳಿದವರೊಂದಿಗೆ ಹೇಗೆ ವರ್ತಿಸಬೇಕು, ಅಪರಿಚಿತರ ನಡುವೆ ಹೇಗೆ ಇರಬೇಕು, ಯಾರೊಂದಿಗೆ ಬೆರೆಯಬೇಕು, ಹೇಗೆ ನಡೆದುಕೊಳ್ಳಬೇಕು ಇವೆಲ್ಲವನ್ನೂ ಪ್ರವಾಸದಿಂದ ಕಲಿಯುತ್ತಾರೆ.

ಊಟದ ಶಿಸ್ತು

ಮನೆಯಲ್ಲಿ ಅದು ಬೇಡ, ಇದು ಬೇಡ ಎಂದೆಲ್ಲ ಹಟ ಮಾಡುವ ಮಕ್ಕಳು, ಪ್ರವಾಸದಲ್ಲಿ ಎಲ್ಲವನ್ನೂ ಉಣ್ಣುವ ಶಿಸ್ತು ರೂಢಿಸಿಕೊಳ್ಳುತ್ತಾರೆ. ಬಹು ಆಯ್ಕೆಗಳಿದ್ದಾಗ ತಮ್ಮ ನೆಚ್ಚಿನದನ್ನು ಆಯ್ಕೆ ಮಾಡಿಕೊಳ್ಳುವ ವಿವೇಚನೆ ಕಲಿಯುತ್ತಾರೆ.

ಹೊಸತನದ ಪರಿಚಯ

ಹೊಸ ಊರು, ಹೊಸ ಭಾಷೆ, ಹೊಸ ಸಂಸ್ಕೃತಿಯೊಂದಿಗೆ ಮಕ್ಕಳು ಮುಖಾಮುಖಿಯಾಗುತ್ತಾರೆ. ಮುಂಬೈನಲ್ಲಿಯೂ ಸಮುದ್ರ ಇದೆ. ಗೋವಾದಲ್ಲಿಯೂ. ಆದರೆ ಎರಡೂ ಕರಾವಳಿಗಳ ಆಹಾರ ಪದ್ಧತಿ ಬೇರೆಯೇ ಆಗಿದೆ. ಈಗಾಗಲೇ ಬಹುಸಂಸ್ಕೃತಿಯೊಂದಿಗೆ ಹೊಂದಿಕೊಳ್ಳುತ್ತಿರುವ ಮಗು, ಪ್ರವಾಸದಿಂದಾಗಿ ಬೇರೆ ಸಂಸ್ಕೃತಿಯ ಪರಿಚಯವನ್ನೂ ಮಾಡಿಕೊಳ್ಳುತ್ತಾರೆ.

ಹೆಚ್ಚು ಪ್ರವಾಸ ಕೈಗೊಳ್ಳಿ. ಮಕ್ಕಳೊಡನೆ ಮಕ್ಕಳಾಗಿ ಎನ್ನುತ್ತ ಬಿಪಾಶಾ ಬೀಚ್ ಬದಿಯ ರೆಸಾರ್ಟಿನಲ್ಲಿ ಮಗಳೊಂದಿಗೆ ಹೆಜ್ಜೆ ಹಾಕುತ್ತಾರೆ.

ಸ್ವರಾ ಭಾಸ್ಕರ್ ತಮ್ಮ ಮಗಳು ರಾಬಿಯಾಳನ್ನು ಎಲ್ಲ ಧಾರ್ಮಿಕ ಪದ್ಧತಿಗಳನ್ನೂ ಕಲಿಸುತ್ತ ಬೆಳೆಸುತ್ತಿದ್ದೇನೆ ಎಂದು ಖಾಸಗಿ ಪಾಡ್‌ಕಾಸ್ಟ್‌ಗೆ ನೀಡಿರುವ ಸಂದರ್ಶನದಲ್ಲಿ ತಿಳಿಸಿದ್ದಾರೆ. ಯಾವ ಧರ್ಮವೂ ಕೆಡುಕನ್ನು ಬೋಧಿಸುವುದಿಲ್ಲ. ಒಳಿತನ್ನು ಎಲ್ಲ ಧರ್ಮದಿಂದಲೂ ಕಲಿಸಿದರೆ ನಮ್ಮ ಮಕ್ಕಳನ್ನು ನಾವು ಧರ್ಮಾಂಧತೆಯಿಂದ ರಕ್ಷಿಸಬಹುದು ಎಂಬುದು ಸ್ವರಾ ಅಭಿಪ್ರಾಯವಾಗಿದೆ. ಫವಾದ್ ಅಹ್ಮದ್ ಅವರನ್ನು ಮದುವೆಯಾಗಿರುವ ಸ್ವರಾ ಮನೆಯಲ್ಲಿ ಈಗಾಗಲೇ ಹಿಂದೂ ಮತ್ತು ಇಸ್ಲಾಂ ಎರಡೂ ಧರ್ಮಗಳ ಪದ್ಧತಿಯನ್ನು ಅನುಸರಿಸಲಾಗುತ್ತಿದೆ. ಇದರೊಂದಿಗೆ ವಿಶ್ವದ ಎಲ್ಲ ಧರ್ಮಗಳನ್ನೂ ಪರಿಚಯಿಸುವ ಉಮ್ಮೇದು ತಮಗಿದೆ ಎಂದು ಅವರು ಹೇಳಿದ್ದಾರೆ. ಅಮ್ಮಂದಿರ ದಿನದ ಹಿನ್ನೆಲೆಯಲ್ಲಿ ತಮ್ಮ ಹೆಣ್ಣುಮಕ್ಕಳೊಂದಿಗೆ ಈ ಇಬ್ಬರೂ ನಟಿಯರು ತಾಯ್ತನವನ್ನು ಪೂರ್ತಿಯಾಗಿ ಅನುಭವಿಸುತ್ತಲೇ ಬೆಚ್ಚನೆಯ ಭಾವ ಮಕ್ಕಳಿಗೆ ಹೇಗೆ ನೀಡುವುದಂದು ವಿವರಿಸಿದ್ದಾರೆ.

ಬಾಂಧವ್ಯ ಗಟ್ಟಿಗೊಳ್ಳುತ್ತದೆ

ಮಗುವಿನೊಂದಿಗೆ ಪ್ರತಿದಿನ 20 ನಿಮಿಷ ಸಮಯ ಕಳೆಯುವುದರಿಂದ ಬಾಂಧವ್ಯ ಗಟ್ಟಿಗೊಳ್ಳುತ್ತದೆ. ಪ್ರವಾಸದಲ್ಲಿ ಅವರೊಂದಿಗೆ ಇಡೀದಿನ ರಾತ್ರಿಗಳನ್ನು ಕಳೆಯುವುದರಿಂದ ಅವರನ್ನು ಅರ್ಥ ಮಾಡಿಕೊಳ್ಳುವುದು, ಮಕ್ಕಳಿಗೆ ಬೆಚ್ಚಗಿನ ಭಾವ ನೀಡುವುದು ಸಾಧ್ಯವಾಗುತ್ತದೆ.

ಸ್ವರಾ ಭಾಸ್ಕರ್ ಮಗಳು ರಾಬಿಯಾಳೊಂದಿಗೆ

ತಾಯಂದಿರ ದಿನಕ್ಕೆ ವಿಶೇಷ ಮ್ಯಾಜಿಕ್ ಶೋ

‘MAA-gic with ಜಯಂತ್’

ತಾಯಿ ಮತ್ತು ಹದಿಹರೆಯದ ಮಗನ ನಡುವಿನ ಬಾಂಧವ್ಯಕ್ಕೆ ಮ್ಯಾಜಿಕ್‌ನ ಚೌಕಟ್ಟು ಒದಗಿ ಬಂದರೆ!. ಇದು ಮನರಂಜನೆ ನೀಡುತ್ತಲೇ ಸಂಬಂಧಗಳ ಸೂಕ್ಷ್ಮಗಳನ್ನು ತಿಳಿಸುವ ವಿಶಿಷ್ಟ ಶೋ ‘MAA-gic with Jayant’. ಇದು ವಿಶ್ವ ತಾಯಂದಿರ ದಿನಾಚರಣೆ ಪ್ರಯುಕ್ತ ಮೇ 10 ಮತ್ತು 11ರಂದು ನಡೆಯಲಿದೆ.

ಮಗ ಮತ್ತು ಅವನ ತಾಯಿಯೇ ನಡೆಸಿಕೊಡುವ ಭಾರತದ ಮೊದಲ ಮತ್ತು ಏಕೈಕ ನಾಟಕೀಯ ಮ್ಯಾಜಿಕ್ ಶೋ ಇದಾಗಿದ್ದು, ದೈನಂದಿನ ಜೀವನವನ್ನು ವೇದಿಕೆಗೆ ತರುವ ಅಪರೂಪದ ಪ್ರದರ್ಶನವಾಗಿದೆ.

ಮಧ್ಯಮ ವರ್ಗದ ಭಾರತೀಯ ಕುಟುಂಬಗಳ ಚಿತ್ರಣವೊಂದು ಅನಾವರಣಗೊಳ್ಳುತ್ತ ಶೋ ಆರಂಭಗೊಳ್ಳುತ್ತದೆ. ಬ್ಯಾಸ್ಕೆಟ್‌ಬಾಲ್ ಆಟದಿಂದ ತಡವಾಗಿ ಹಿಂತಿರುಗಿದ್ದಕ್ಕಾಗಿ ತಾಯಿ ತನ್ನ ಮಗನನ್ನು ಗದರಿಸುತ್ತಾಳೆ. ಅವನು ಅವಳಿಗೆ ಗುಲಾಬಿ ಗುಚ್ಛ ನೀಡುತ್ತಿದ್ದಂತೆ, ಅವು ‘ಕಾನ್ಫೆಟ್ಟಿ’ಯಾಗಿ ಮಾಯವಾಗುತ್ತದೆ. ಹೀಗೆ ಇದು ಶೋನ ಝಲಕ್ ಅಷ್ಟೆ.

ಸ್ಥಳ: ಜಸ್‌ಟ್ರಫ್ಸ್, ಜಕ್ಕೂರು ಬಡಾವಣೆ. ಶನಿವಾರ ಸಂಜೆ 4ಕ್ಕೆ. ಭಾನುವಾರ ಮಧ್ಯಾಹ್ನ 12ಕ್ಕೆ.

14 ವರ್ಷದ ಪ್ರತಿಭಾನ್ವಿತ ಜಯಂತ್ ಪಟ್ವಾರಿ ಮತ್ತು ಅವರ ತಾಯಿ ನಟನೆ ಸೇರಿದ ಮ್ಯಾಜಿಕ್ ನೋಡುಗರನ್ನು ಸೆಳೆಯುತ್ತದೆ. ತಾಯಿ–ಮಗ ಪ್ರೀತಿ ಹಾಗೂ ಉಲ್ಲಾಸದ ಬದುಕಿನ ಅನಾವರಣವೂ ಇದೆ. ಕೇವಲ ತಂತ್ರಗಳಿಂದ ಈ ಮ್ಯಾಜಿಕ್ ಶೋ ಅನ್ನು ಹಣೆದಿಲ್ಲ. ಬದಲಿಗೆ ಕಥೆಯನ್ನುನಿ ರೂಪಿಸುತ್ತಾ, ಪ್ರತಿ ಮನೆಯ ಒಳಗೂ ನಡೆಯುವ ಘಟನೆಗಳಿಗೆ ನವಿರು ಸ್ಪರ್ಶ ನೀಡಲಾಗಿದೆ.

ಸದ್ಯ #Metoo ಬಂದು ಬಚಾವು



ಅಬ್ಬಾ, ಸದ್ಯ #Metoo ಚಳವಳಿ ಬಂದು ನಾವೆಲ್ಲ ಬಚಾವಾದಂತೆ ಆಯ್ತು. ಮೊದಲೆಲ್ಲ ಅದೆಷ್ಟು ಖುಲ್ಲಂಖುಲ್ಲಾ ತೊಂದರೆ ಕೊಡ್ತಿದ್ರು, ಬಹುತೇಕ ಜನರು ನನ್ನನ್ನ ಗೇ ಅಂತಂದುಕೊಂಡಿದ್ರು’ ಎಂದು ಪ್ರತೀಕ್ ಸ್ಮಿತಾ ಪಾಟೀಲ ಪಾಡ್‌ಕಾಸ್ಟ್ ಒಂದರ ಸಂದರ್ಶನದಲ್ಲಿ ನಿಟ್ಟುಸಿರು ಬಿಟ್ಟಿದ್ದಾರೆ.

20ರ ಹರೆಯದಲ್ಲಿದ್ದಾಗ ಪುರುಷರು ನನ್ನತ್ತ ದಿಟ್ಟಿಸುತ್ತಿದ್ದರು. ಲೈಂಗಿಕವಾಗಿರುವ ಅಂಥ ನೋಟಗಳನ್ನು ಎದುರಿಸುವುದೇ ಹಿಂಸೆ ಆಗಿತ್ತು. ಕ್ವೀರ್ ಪಾತ್ರದಲ್ಲಿ ನಟಿಸಿದಾಗಲೂ ಜನರು ನನ್ನನ್ನು ಸಲಿಂಗ ಕಾಮಿ ಎಂದೇ ಭಾವಿಸಿ, ಸಂಪರ್ಕಿಸಲು ಪ್ರಯತ್ನಿಸುತ್ತಿದ್ದರು. ನನ್ನ ಬಗೆಗಿನ ಈ ನೋಟ ಕಿರಿಕಿರಿಯಾಗಿದ್ದಂತೂ ಇದೆ.

ಜನರಲ್ಲಿ ಲೈಂಗಿಕತೆಯ ಬಗ್ಗೆ ಮಾತನಾಡುವ ಧೈರ್ಯ ಇಲ್ಲ. ಮುಕ್ತ ಸಮಾಜವೂ ನಮ್ಮದಲ್ಲ. ಆದರೆ ಅಸಹಾಯಕರನ್ನು ಕಂಡಾಗ ದೌರ್ಜನ್ಯ ನಡೆಯುತ್ತವೆ. ಅದು ಪುರುಷರಾಗಲಿ, ಸ್ತ್ರೀಯರಲಾಗಲಿ ತಪ್ಪಿದ್ದಲ್ಲ. ಮೀಟೂನಂತಹ ಚಳವಳಿಗಳು ಹೆಚ್ಚುಹೆಚ್ಚು ಆದಾಗ ಜಾಗೃತಿ ಮೂಡಬಹುದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಅರ್ಜುನ ಜ್ಯುವೆಲರ್ಸ್ ‘ಸಂಭವ’ ಕೊಡುಗೆ

ಅರ್ಜುನ ಜ್ಯುವೆಲ್ಲರ್ಸ್ ‘ಸಂಭವ’ ಆಭರಣ ಖರೀದಿ ಯೋಜನೆಯನ್ನು ಪ್ರಾರಂಭಿಸುತ್ತಿದೆ. ಈ ಯೋಜನೆಯು ಚಿನ್ನದಲ್ಲಿ ಹೂಡಿಕೆ ಮಾಡಲು ಪ್ರೇರೇಪಿಸುತ್ತದೆ. 11 ಕಂತು ಕಟ್ಟಿದರೆ, 12ನೇ ತಿಂಗಳಲ್ಲಿ ಅರ್ಜುನ ನಿಮಗೆ ಚಂದದ ಉಡುಗೊರೆಯನ್ನು ನೀಡುತ್ತದೆ. ಸರಾಸರಿ ದರದಲ್ಲಿ ಗಮನಿಸಿದರೆ ಚಿನ್ನದ ತೂಕ ದ್ವಿಗುಣಗೊಳ್ಳುವ ಅವಕಾಶವೂ ಈ ಯೋಜನೆಯಲ್ಲಿದೆ. ಚಿನ್ನ, ಬೆಳ್ಳಿ ಹಾಗೂ ಬೆರಗುಗೊಳಿಸುವ ವಜ್ರದ ಆಭರಣಗಳನ್ನು ಪಡೆಯಬಹುದು. ‘ಸಂಭವ’ ಇದು ಕೇವಲ ಉಳಿತಾಯ ಯೋಜನೆಯಲ್ಲ. ಇದು ಸಂಪತ್ತನ್ನು ಹೆಚ್ಚಿಸುವ ಆಯ್ಕೆಯೂ ಹೌದು. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್‌ಗೆ ಸಂಪರ್ಕಿಸಿ www.arjunaa.in.

ಗಮನ ಸೆಳೆಯಲಿದೆಯೇ ದ ರಾಯಲ್ಸ್?

ರಾಜಸ್ಥಾನಿ ರಾಜಮನೆತನದ ಕತೆಯ ಎಳೆ ಇರುವ ‘ದ ರಾಯಲ್ಸ್ ’ ಮೇ 9ರಂದು ನೆಟ್‌ಫ್ಲಿಕ್ಸ್‌ನಲ್ಲಿ ತೆರೆ ಕಂಡಿದೆ. ರಾಜಮಹಲ್ ಇರುವ ರಾಜಮನೆತನಕ್ಕೂ ಹಣಕಾಸಿನ ಸಮಸ್ಯೆಗಳು ಕಾಡದೇ ಇರುವುದಿಲ್ಲ. ರಾಜಮನೆತನದ ರಾಜಕುವರನಿಗೆ ಸ್ವಾವಲಂಬಿ ಯುವತಿಯೊಂದಿಗೆ ಪ್ರೀತಿಯಾಗುತ್ತದೆ.

ಸಾಕ್ಷಿ ತನ್ವರ್ ಮುಖ್ಯ ಪಾತ್ರದಲ್ಲಿರುವ ಈ ವೆಬ್‌ಸಿರೀಸ್‌ನಲ್ಲಿ ಸಿಚುವೇಷನ್‌ಶಿಪ್ ಮತ್ತು ಪಾರಂಪರಿಕ ಬಾಂಧವ್ಯಗಳ ವಿಸ್ತಾರವನ್ನು ವಿಶ್ಲೇಷಿಸಲಾಗಿದೆ. ತನ್ನ ತಂದೆಯ ಉಯಿಲು ಓದಲು ಬರುವ ಮಗನಿಗೆ ಪಿತ್ರಾರ್ಜಿತವಾಗಿ ಕೇವಲ ಮಹಲ್ ಅಷ್ಟೇ ಅಲ್ಲ, ಸಾಲಗಳೂ ಸಿಗುತ್ತವೆ.

ಪ್ರಿಯಾಂಕಾ ಘೋಷ್, ನೂಪುರ್ ಅಸ್ಥಾನಾ ನಿರ್ದೇಶನದ ಈ ವೆಬ್ ಸಿರೀಸ್ ಮೇ ತಿಂಗಳಲ್ಲಿ ಭಾರತೀಯರ ಗಮನ ಸೆಳೆಯಲಿದೆ ಎಂದು ನೆಟ್‌ಫ್ಲಿಕ್ಸ್ ಹೇಳುತ್ತಿದೆ. ತೆರೆದೆದೆಯ ಯುವಕ, ಮೂರು ನಾಲ್ಕು ಗುಂಡಿ ಬಿಚ್ಚಿದ ಅಂಗಿ ತೊಟ್ಟ ರಾಜಮನೆತನದ ಕತೆ ವೀಕ್ಷಕರನ್ನು ಹಿಡಿದಿಡಲಿಕ್ಕಿಲ್ಲ ಎಂದು ನೆಟ್ಟಿಗರು ಟೀಕಿಸಿದ್ದಾರೆ.

ಮೆಟ್ ಗಾಲಾದಲ್ಲಿ ಪ್ರಿಯಾಂಕಾ ಲುಕ್

ಮೆಟ್ ಗಾಲಾ ಫ್ಯಾಷನ್ ಫಿಯೆಸ್ತಾದಲ್ಲಿ ಸದಾ ಗಮನ ಸೆಳೆಯುವ ಜೋಡಿಯಲ್ಲಿ ನಿಕ್ ಜೋನಸ್, ಪ್ರಿಯಾಂಕಾ ಚೋಪ್ರಾ ಜೋನಸ್ ಅವರದ್ದು. 2019ರಲ್ಲಿ ವಿಶೇಷ ವೇಷಭೂಷಣದಲ್ಲಿ ಕಂಗೊಳಿಸಿದ್ದ ಪ್ರಿಯಾಂಕಾ ಚೋಪ್ರಾ, ಈ ಸಲ ಅದಕ್ಕೆ ತದ್ವಿರುದ್ಧವಾಗಿ ಪೋಲ್ಕಾ ಡಾಟ್ ಪೋಷಾಕಿನಲ್ಲಿ ಮಿಂಚಿದ್ದಾರೆ.

ಹಾಲ್ಕೆನೆ ಬಣ್ಣದ ಪೋಷಾಕಿಗೆ ಹೊಂದುವಂಥ ಕೋಟನ್ನೇ ನಿಕ್ ಸಹ ತೊಟ್ಟಿದ್ದಾರೆ. ಹಾಲಿವುಡ್ ನಟ ನಿಕ್‌ಗೆ ಭಾರತೀಯ ಜೀಜಾ (ಭಾರತೀಯ ಭಾವ) ಎಂಬುದು ಕಪಿಲ್‌ಶರ್ಮಾ ಕೊಟ್ಟಿರುವ ಬಿರುದಾಗಿದೆ. ಪ್ರಿಯಾಂಕಾರನ್ನು ಪಿಗ್ಗಿ ಎಂದು ಪ್ರೀತಿಯಿಂದ ಕರೆಯಲಾಗುತ್ತದೆ. 2019ರ ಲುಕ್ ಅನ್ನು ನೆನಪಿಸಿಕೊಂಡರೆ ಓಹ್... ಪ್ರಿಯಾಂಕಾ ಎಂದು ಶಾರುಖ್ ಖಾನ್ ಉದ್ಗರಿಸಿದ್ದರು. ಢಾಳಾದ ಮೇಕಪ್, ಕಣ್ಣುಸುತ್ತ ರಜತ ವರ್ಣದ ದಿರಿಸಿನಲ್ಲಿ ಗಮನ ಸೆಳೆದಿದ್ದರು.

ಈ ಸಲ ಪತಿ ನಿಕ್ ಜೊತೆಗೆ, ಇಬ್ಬರೂ ಪರಸ್ಪರ ಹೊಂದುವ ವರ್ಣಸಂಯೋಜನೆಯ ಉಡುಗೆ ತೊಟ್ಟು ಗಮನ ಸೆಳೆದಿದ್ದಾರೆ.

ಹದಿನೆಂಟು ಬಾಟಲಿ ಕುಡಿಯುತ್ತಿದ್ದೆ!

ಅದೊಂದು ಕಾಲವಿತ್ತು, ಒಬ್ಬನೇ ಹದಿನೆಂಟು ಬಾಟಲಿ ಬಿಯರ್‌ಗಳನ್ನು ಕುಡಿಯುತ್ತಿದ್ದೆ. ಮತ್ತೆ ಒಂದಿನ ಅನಿಸ್ತು, ಇದೇನಿದು, ಹೊಟ್ಟೆಯುಬ್ಬಿಸುವ ಕೆಲಸ ಮಾಡುತ್ತಿರುವೆ ಎಂದೆನಿಸಿದ್ದೇ ಬಿಯರ್ ಬಿಟ್ಟು ರಮ್ ಕುಡಿಯಲಾರಂಭಿಸಿದೆ

ಹೀಗೆ ತಮ್ಮ ಕುಡಿತದ ಚಟವನ್ನು ಬಿಚ್ಚಿಟ್ಟವರು ಸಾಹಿತಿ, ಗೀತರಚನೆಕಾರ ಜಾವೇದ್ ಅಖ್ತರ್. ದಿನಪತ್ರಿಕೆ ಒಂದಕ್ಕೆ ನೀಡಿದ ಸಂದರ್ಶನದಲ್ಲಿ ತಮ್ಮ ಯೌವ್ವನದ ದಿನಗಳನ್ನು ನೆನಪಿಸಿಕೊಂಡು, ಚಟವಾದ ಬಗೆಯನ್ನು ಹೇಳಿಕೊಂಡಿದ್ದಾರೆ.

ಮೊದಲು ವಿಸ್ಕಿ ಕುಡಿಯುತ್ತಿದ್ದೆ. ದಿನಕ್ಕೆ ಒಂದು ಬಾಟಲಿಯಾದರೂ ಸರಿ, ಮುಗಿಸುತ್ತಿದ್ದೆ. ಸ್ನೇಹಿತರ ಸಾಂಗತ್ಯ ಬೇಕು ಅಂತೇನೂ ಇರಲಿಲ್ಲ. ಕುಡಿಯಲಾರಂಭಿಸಿದರೆ ಮುಗೀತು. ಹತ್ತೊಂಬತ್ತನೆಯ ವಯಸ್ಸಿಗೆ ಒಪದವಿ ಮುಗಿಸಿ ಮುಂಬೈಗೆ ಬಂದಾಗಲೇ ಕುಡಿತದ ಚಟ ಅಂಟಿಕೊಂಡಿದ್ದು. ವಿಸ್ಕಿ ಆರೋಗ್ಯಕ್ಕೆ ಹಾನಿಕರ ಎನಿಸಿದಾಗ ಬಿಯರ್ ಕುಡಿಯಲಾರಂಭಿಸಿದೆ. ಅದೂ ಮಿತಿಮೀರಿತು. ಎಲ್ಲೆ ಮೀರಿ ಕುಡಿದಿದ್ದೂ ಇದೆ. ಆಮೇಲೆ ಅದನ್ನೂ ನಿಲ್ಲಿಸಿ, ಇದೀಗ ಪ್ರತಿದಿನ ಚೂರು ರಮ್ ಸೇವಿಸುತ್ತಿರುವೆ.

ಕುಡಿತ ಆರೋಗ್ಯಕ್ಕೆ ಹಾನಿಕರ ಎಂದು ಗೊತ್ತಿದೆ. ಗೊತ್ತಿದ್ದೂ ಚಟ ಅಂಟಿಕೊಂಡರೆ ಏನು ಮಾಡುವುದು ಎಂದೂ ಅವರು ಪ್ರಶ್ನಿಸಿದ್ದಾರೆ.

ಸಿದ್ಧಸೂತ್ರಕ್ಕೆ ಅಂಟಿದ ಸೂತ್ರಧಾರಿ

ಅಭಿಲಾಷ್ ಪಿ.ಎಸ್.

ನಾಯಕನ ಪ್ರವೇಶಕ್ಕೊಂದು ಹಾಡು, ಬುದ್ಧಿವಂತನಾದರೂ ಆಲಸಿಯಾಗಿರುವ ಹೀರೊ, ತಂದೆಯ ಮೇಲೆ ದ್ವೇಷ; ಬಳಿಕ ಅನುರಾಗ, ಘಟನೆಯೊಂದರ ಬಳಿಕ ಗಂಭೀರವಾಗುವ ನಾಯಕ, ನಾಯಕಿ ಸಿಕ್ಕ ಕೂಡಲೇ ಮತ್ತೊಂದು ಹಾಡು ಹೀಗೆ ಸಿದ್ಧಸೂತ್ರದಲ್ಲಿ ಹಲವು ಸಿನಿಮಾಗಳು ಈಗಾಗಲೇ ತೆರೆಗೆ ಬಂದಿವೆ. ಈ ಸಿದ್ಧಸೂತ್ರಗಳನ್ನು ಇಟ್ಟುಕೊಂಡೇ 'ಸೂತ್ರಧಾರಿ' ಹೆಣೆಯಲಾಗಿದೆ. ಕಥೆಯು ಕುತೂಹಲಕಾರಿ ಅಂಶಗಳನ್ನೊಳಗೊಂಡಿದ್ದರೂ, ಅದನ್ನು ಸೂಕ್ತವಾದ ಚಿತ್ರಕಥೆಯಾಗಿ ಪರಿವರ್ತಿಸುವಲ್ಲಿ ನಿರ್ದೇಶಕರು ಎಡವಿದ್ದಾರೆ.

ನಾವು ನೋಡಿದ ಸಿನಿಮಾ

ಸೂತ್ರಧಾರಿ

- ನಿರ್ದೇಶನ: ಕಿರಣ್ ಕುಮಾರ್
- ನಿರ್ಮಾಣ: ನವರಸನ್
- ತಾರಾಗಣ: ಚಂದನ್ ಶೆಟ್ಟಿ, ಅಪೂರ್ವ, ತಬಲ ನಾಣಿ, ನವರಸನ್, ಪ್ರಶಾಂತ್ ನಟನ ಮತ್ತಿತರರು

ನಾಯಕ 'ವಿಜಯ್'(ಚಂದನ್ ಶೆಟ್ಟಿ) ಪೊಲೀಸ್ ಅಧಿಕಾರಿ. ಬುದ್ಧಿವಂತನಾಗಿದ್ದರೂ ಆಲಸಿ. ಮನೆಯಲ್ಲಿ ಅಮ್ಮ ಮದುವೆಗೆ ಒತ್ತಾಯಿಸಿದರೂ ಒಪ್ಪದ ಈತ ಮನೆಯಿಂದ ಹೊರಗೆ ಕಾಲಿಟ್ಟ ಕೂಡಲೇ ಸ್ತ್ರೀಲೋಲ. ಎನ್‌ಕೌಂಟರ್ ಪ್ರಕರಣವೊಂದರಲ್ಲಿ ಅಮಾನತಿನಲ್ಲಿರುವ ಈತನಿಗೆ ಹೊಸ ಪ್ರಕರಣದ ತನಿಖೆಯೊಂದನ್ನು ಗೃಹ ಸಚಿವರೇ ಒಪ್ಪಿಸುತ್ತಾರೆ. ಅದು ಸರಣಿ ಅಪಹರಣ ಮತ್ತು ಅಪಹರಣಕ್ಕೊಳಗಾದವರೇ ಬಿಡುಗಡೆಯಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಕರಣ. ಈ ಪ್ರಕರಣ ಕೈಗೆ ಸಿಗುತ್ತಲೇ ವಿಜಯ್ ಬದುಕಿಗೆ 'ಆದ್ವಿಕಾ'(ಅಪೂರ್ವ) ಪ್ರವೇಶವಾಗುತ್ತದೆ. ಪ್ರಕರಣದ ತನಿಖೆ ಆರಂಭಿಸುವ ವಿಜಯ್‌ಗೆ ಎದುರಾಗುವ ಸವಾಲುಗಳಲೇ ಚಿತ್ರದ ಕಥೆ.

ಸಿನಿಮಾದಲ್ಲಿ ಬಹಳಷ್ಟು ದೃಶ್ಯಗಳು ಕೃತಕವಾಗಿವೆ. ಸಿಸಿಬಿ ಕಚೇರಿಯ ದೃಶ್ಯಗಳಲ್ಲಿ ಕಲಾ ನಿರ್ದೇಶಕರ ತಪ್ಪುಗಳೆಲ್ಲವೂ ತೆರೆ ಮೇಲೆ ಸ್ಪಷ್ಟವಾಗಿ ಕಾಣುತ್ತವೆ. ಚಿತ್ರಕಥೆಯು ಗಟ್ಟಿಯಾಗಿರದ ಕಾರಣ ಕಥೆಯು ಕುತೂಹಲ ಹುಟ್ಟಿಸುವುದಿಲ್ಲ. ದೃಶ್ಯಗಳನ್ನು ಎಳೆದಾಡಲಾಗಿದೆ. ಬೃಹತ್ ಪರದೆಗೆ ಬೇಕಾದ ಗುಣಮಟ್ಟದ ಕೊರತೆಯೂ ಗೋಚರಿಸುತ್ತದೆ. ಇಡೀ ಚಿತ್ರಕ್ಕಿಂತ 'ಡ್ಯಾಶ್' ಹಾಗೂ 'ಟ್ರೆಂಡಿಂಗ್‌ನಲ್ಲಿ ಬರ್ಬೇಕು ಅಂದ್ರೆ ಏನ್ ಮಾಡ್ಬೇಕು' ಎಂಬ ಹಾಡಿಗೇ ಹೆಚ್ಚಿನ ಒತ್ತು ಮತ್ತು ಖರ್ಚು ಮಾಡಲಾಗಿದೆ. ಅದಕ್ಕೆ ತಕ್ಕ ಹಾಗೆ ಅವುಗಳು ಚೆನ್ನಾಗಿ ಮೂಡಿಬಂದಿವೆ. ಚಿತ್ರಕಥೆಗೆ ಪೂರಕವಾಗುವಂತೆ ಹಿನ್ನೆಲೆ ಸಂಗೀತಮಾಡಬಹುದಿತ್ತು.

ನಟನೆಯಲ್ಲಿ ಚಂದನ್ ಶೆಟ್ಟಿ ಅವರಿಗೆ ಇದು ಚೊಚ್ಚಲ ಸಿನಿಮಾ. ಕ್ಲೈಮ್ಯಾಕ್ಸ್ ಹಂತಕ್ಕೆ ತಲುಪುತ್ತಾ ಚಂದನ್ ನಟನೆಯಲ್ಲಿ ಪಳಗಿದ್ದಾರೆ. ಅಪೂರ್ವ, ತಬಲ ನಾಣಿ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ.



ಅಪೂರ್ವ, ಚಂದನ್ ಶೆಟ್ಟಿ

ಚಿತ್ರದ ದೃಶ್ಯ

ತುಳುನಾಡಿನ ಆಚರಣೆಗಳ ಕಥನ

ನಾವು ನೋಡಿದ ಸಿನಿಮಾ

ದಸ್ಕತ್

- ನಿರ್ದೇಶನ: ಅನೀಶ್ ಪೂಜಾರಿ
- ನಿರ್ಮಾಣ: ಜಗದೀಶ್ ಎನ್
- ತಾರಾಗಣ: ದೀಕ್ಷಿತ್ ಕೆ, ದೀಪಕ್ ರೈ ಮತ್ತಿತರರು

ವಿನಾಯಕ ಕೆ.ಎಸ್.

ತುಳು ಕಮರ್ಷಿಯಲ್ ಚಿತ್ರಗಳೆಂದರೆ ಒಂದಷ್ಟು ಜನಪ್ರಿಯ ರಂಗಭೂಮಿ ಕಲಾವಿದರಿರಬೇಕು. ಕಥೆಗೆ ಅಗತ್ಯವಿರಲಿ, ಇರದಿರಲಿ, ಹಾಸ್ಯವಿರಬೇಕು. ವಾಟ್ಸ್ ಆ್ಯಪ್‌ನಲ್ಲಿ, ರಂಗಭೂಮಿಯಲ್ಲಿ ಓಡಾಡಿದ, ಡಬಲ್ ಮೀನಿಂಗ್ ಎನಿಸುವ ಮಾತುಗಳು ಬೇಕೇಬೇಕು ಎಂಬ ವಾಡಿಕೆಯನ್ನು ಮುರಿದಿರುವ ಚಿತ್ರ 'ದಸ್ಕತ್'. ಈಗಾಗಲೇ ತುಳುವಿನಲ್ಲಿ ಯಶಸ್ವಿಯಾಗಿರುವ ಚಿತ್ರ ಕನ್ನಡಕ್ಕೆ ಡಬ್ ಆಗಿದೆ. ಒಂದು ಗ್ರಾಮ ಪಂಚಾಯ್ತಿಯ ಕಥೆಯನ್ನು ಇಟ್ಟುಕೊಂಡು, ಎಲ್ಲಿಯೂ ಬಲವಂತವಾಗಿ ನಗಿಸಲು ಯತ್ನಿಸದೆ ತುಳುನಾಡಿನ ಸಂಸ್ಕೃತಿ, ಆಚರಣೆಗಳನ್ನು ಕಟ್ಟಿಕೊಡಲಾಗಿದೆ.

ತುಳುನಾಡಿನ ಒಂದು ಕುಗ್ರಾಮ ಕೆಪುಲ. ಭೂತಕೋಲ ಕಟ್ಟುವವರು, ಹುಲಿವೇಷ ಹಾಕುವವರೇ ಹೆಚ್ಚಿರುವ ಗ್ರಾಮವದು. ಅಲ್ಲಿನ ಗ್ರಾಮ ಪಂಚಾಯ್ತಿ ಅಧಿಕಾರಿ ಗುಣಪಾಲ. ಈತ ಕೂಡ ಅದೇ ಊರಿನವನು. ಭ್ರಷ್ಟನಾಗಿರುವ ಈತ ಇಡೀ ಊರನ್ನೇ ಹೆದರಿಸಿಟ್ಟುಕೊಂಡಿರುತ್ತಾನೆ. ತನ್ನ ವಿರುದ್ಧ ತಿರುಗಿ ಬಿದ್ದವರ ಧ್ವನಿ ಅಡಗಿಸುತ್ತಾನೆ. ಹೀಗಾಗಿ ಇವನ ವಿರುದ್ಧ ನಿಲ್ಲಲ್ಲು ಯಾರೂ ಮುಂದೆ ಬರುವುದಿಲ್ಲ. ಕೊನೆಗೆ ಶೇಖರ ಎಂಬ ಯುವಕ ಇವನಿಂದಾದ ಅವಮಾನಗಳನ್ನು ಸಹಿಸಲಾಗದೆ ಈತನ ವಿರುದ್ಧ ನಿಲ್ಲುತ್ತಾನೆ. ಇಡೀ ಊರು ಶೇಖರನಿಗೆ ಜೊತೆಯಾಗುತ್ತದೆ. ಈ ಹೋರಾಟದಲ್ಲಿ ಊರಿನವರು ಗೆಲ್ಲುತ್ತಾರಾ ಇಲ್ಲವಾ ಎಂಬುದೇ ಚಿತ್ರಕಥೆ. ಈ ಕಥೆಯನ್ನು ಹೇಳಲು ನಿರ್ದೇಶಕರು ಆಯ್ದುಕೊಂಡ ಮಾರ್ಗ ಬಹಳ ಸೊಗಸಾಗಿದೆ. ಆಟಿ ಋತುವಿನಲ್ಲಿ ಕೋಲ ಕಟ್ಟುವವರು ಆಚರಿಸುವ ಆಟಿಕಳಂಜ, ಪುರುಷ ವೇಷ ಮೊದಲಾದ ತುಳುನಾಡಿನ ಆಚರಣೆಗಳನ್ನು ಬಳಸಿಕೊಂಡು ಕಥೆ ಹೇಳುತ್ತ ಹೋಗುತ್ತಾರೆ.

ಈ ಸಿನಿಮಾಕ್ಕೆ ನಿರ್ದಿಷ್ಟವಾದ ನಾಯಕನಿಲ್ಲ. ಗುಣಪಾಲನ ವಿರುದ್ಧ ಶೇಖರ ಮುಂದಾಳತ್ವ ವಹಿಸಿದರೂ, ಒಂದು ರೀತಿ ಊರಿನವರೆಲ್ಲ ಹೋರಾಡುತ್ತಾರೆ. ಹೀಗಾಗಿ ಕಥೆ ನಾಲ್ಕಾರು ಪಾತ್ರಗಳ ಮೇಲೆ ಹಂಚಿಹೋಗುತ್ತದೆ. ಇದು ಚಿತ್ರದ ಕೊರತೆಯೂ ಹೌದು. ಊರು, ಅಲ್ಲಿನ ಕುಟುಂಬಗಳು, ಸಂಸ್ಕೃತಿ, ಆಚರಣೆಗಳಲ್ಲಿಯೇ ಚಿತ್ರದ ಮೊದಲಾರ್ಧ ಮುಗಿದು ಹೋಗುತ್ತದೆ. ಅದದೇ ಸನ್ನಿವೇಶಗಳು, ಜಾಗ, ಮಾತುಗಳಿಂದ ಮೊದಲಾರ್ಧ ನೋಡುಗನ ತಾಳ್ಮೆ ಪರೀಕ್ಷಿಸುತ್ತದೆ. ದ್ವಿತೀಯಾರ್ಧದಲ್ಲಿ ಸಾಕಷ್ಟು ಘಟನೆಗಳು ನಡೆಯುತ್ತವೆ. ಇಲ್ಲಿ ನಾಯಕ–ಖಳನಾಯಕನ ನೇರ ಸೆಣಸಾಟದ ಸನ್ನಿವೇಶಗಳನ್ನು ಸೃಷ್ಟಿಸುವ ಅವಕಾಶ ನಿರ್ದೇಶಕರಿಗಿತ್ತು.

ಇಲ್ಲಿನ ಬಹುತೇಕ ಕಲಾವಿದರು ಹಿರಿತೆರೆಗೆ ಹೊಸಬರು. ಹೀಗಾಗಿ ಅಭಿನಯ ನೈಜವಾಗಿದೆ. ವಯಸ್ಸಾದವರ ಪಾತ್ರಗಳಿಗೆ ಊರಿನವರನ್ನೇ ಬಳಸಿಕೊಂಡಿರುವುದು, ಮನೆಗಳು, ಪರಿಸರ ಇತ್ಯಾದಿ ಊರಿನ ನೈಜ ಚಿತ್ರಣವನ್ನೇ ತೆರೆಯ ಮೇಲೆ ತಂದಿರುವುದು ಅದೇ ಊರಿನಲ್ಲಿ ನಿಂತು ಕಥೆಯನ್ನು ನೋಡುತ್ತಿದ್ದೇವೆ ಎಂಬಂಥ ಅನುಭವ ನೀಡುತ್ತದೆ. ಸಂತೋಷ್ ಆಚಾರ್ಯ ಛಾಯಾಚಿತ್ರಗ್ರಹಣ ಸಿನಿಮಾದ ಶಕ್ತಿ. ಡಬ್ಬಿಂಗ್‌ನಲ್ಲಿ ಸಾಕಷ್ಟು ಮಾತುಗಳು ತುಳುವಿನಲ್ಲಿಯೇ ಉಳಿದಿವೆ. ಮತ್ತೊಂದಷ್ಟು ತುಳುವಿನಲ್ಲಿ ಕೇಳಿದರೆ ಚೆಂದವಿತ್ತು ಎಂಬಂತಿವೆ.

ಇಡೀ ಊರನ್ನು ಎದುರು ಹಾಕಿಕೊಳ್ಳುವ ಖಳನಾಯಕನ ನಟನೆಯನ್ನು ಇನ್ನಷ್ಟು ಉತ್ತಮವಾಗಿಸಬಹುದಿತ್ತು. ಕಥೆಯ ಎಳೆ ಚೆನ್ನಾಗಿದೆ. ಆಯ್ದುಕೊಂಡ ಪರಿಸರ, ಪಾತ್ರಗಳು ಪೂರಕವಾಗಿವೆ. ಒಟ್ಟಾರೆ ಚಿತ್ರಕಥೆಯನ್ನು ಬಿಗಿಯಾಗಿಸುವ ಅವಕಾಶ ನಿರ್ದೇಶಕರಿಗಿತ್ತು.

ಟಾಲಿವುಡ್‌ಗೆ ಧರ್ಮಕೀರ್ತಿರಾಜ್

ಚಂದನವನದ ಪ್ರತಿಭೆಗಳಾದ ಚರಣ್‌ರಾಜ್, ಪ್ರಕಾಶ್‌ರೈ, ಅರ್ಜುನ್‌ಸರ್ಜಾ, ರಶ್ಮಿಕಾ ಮಂದಣ್ಣಾ, ಶ್ರೀಲೀಲಾ, ಪೂಜಾ ಹೆಗ್ದೆ ನೆರೆಯ ಭಾಷೆಯಲ್ಲಿ ಖ್ಯಾತರಾಗುತ್ತಿರುವುದು ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ. ಈಗ ಚಾಕಲೇಟ್ ಬಾಯ್ ಅಂತ ಪ್ರೀತಿಯಿಂದ ಕರೆಸಿಕೊಂಡಿರುವ ಧರ್ಮಕೀರ್ತಿರಾಜ್ ಅವರ ಸರದಿ.

ಬ್ಲಡ್ ರೋಸಸ್ ಸಿನಿಮಾದ ಮುಖಾಂತರ ಧರ್ಮಕೀರ್ತಿರಾಜ್ ಟಾಲಿವುಡ್‌ಗೆ ಪ್ರಯಾಣ ಬೆಳೆಸಿದ್ದಾರೆ. ಅಲ್ಲಿ ನಿರ್ದೇಶಕರು ಇವರಿಗೆ ರಂಜಿತ್‌ರಾಮ್ ಎಂದು ನಾಮಕರಣ ಮಾಡಿದ್ದಾರೆ. ಪ್ರಚಾರದ ಮೊದಲ ಹಂತವಾಗಿ ಹಬ್ಬದ ದಿನದಂದು ಪೋಸ್ಟರ್ ಬಿಡುಗಡೆ ಮಾಡಲಾಗಿದ್ದು, ಎಲ್ಲೆಡೆ ವೈರಲ್ ಆಗಿರುವುದು ತಂಡಕ್ಕೆ ಸಂತಸ ತಂದಿದೆ.

ಎಂ.ಗುರುರಾಜನ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಟಿಬಿಆರ್ ಸಿನಿ ಕ್ರಿಯೇಶನ್ಸ್ ಅಡಿಯಲ್ಲಿ ಹರೀಶ್.ಕೆ ಬಂಡವಾಳ ಹೂಡಿದ್ದು, ಯಲ್ಲಪ್ಪ ನಿರ್ಮಾಪಕರಾಗಿ ಗುರುತಿಸಿಕೊಂಡಿದ್ದಾರೆ. ಕೆ.ಲಕ್ಷಮ್ಮ ಮತ್ತು ಕೆ.ನಾಗಣ್ಣ ಜಂಟಿಯಾಗಿ ಅರ್ಪಣೆ ಮಾಡಿದ್ದಾರೆ.

ಸಮಾಜದಲ್ಲಿ ನಡೆದಿರುವ ಹಾಗೂ ಪ್ರಸಕ್ತ ನಡೆಯುತ್ತಿರುವ ಒಂದಷ್ಟು ನೈಜ ಅಂಶಗಳನ್ನು ಹೆಕ್ಕಿಕೊಂಡು ಅದನ್ನು ಚಿತ್ರಕಥೆಗೆ ಬಳಸಿಕೊಂಡಿದ್ದಾರೆ. ಕ್ರೈಂ, ಥ್ರಿಲ್ಲರ್ ಹಾಗೂ ಆ್ಯಕ್ಷನ್ ಸಾರ ಇರುವುದರಿಂದ ನಿರ್ದೇಶಕರು ಸಿನಿಮಾದ ಸುಳಿವನ್ನು ಬಿಟ್ಟುಕೊಟ್ಟಿಲ್ಲ.

ಧರ್ಮಕೀರ್ತಿರಾಜ್ (ರಂಜಿತ್‌ರಾಮ್), ಅಪ್ಸರರಾಣಿ ಇಬ್ಬರು ಮುಖ್ಯ ಪಾತ್ರದಲ್ಲಿ ಪೊಲೀಸ್ ಅಧಿಕಾರಿಗಳಾಗಿ ಕಾಣಿಸಿಕೊಂಡಿದ್ದಾರೆ. ಇವರೊಂದಿಗೆ ಕ್ರಾಂತಿಕಿಲ್ಲಿ, ಶ್ರೀಲು, ಹಿರಿಯ ನಟ ಸುಮನ್, ಘರ್ಷಣಾಶ್ರೀನಿವಾಸ್, ಟಾರ್ಜಾನ್, ರಾಜೇಂದ್ರ, ಜ್ಯೂ.ರೇಲಂಗಿ, ಜಗದೀಶ್ವರಿ, ಮಣಿಕುಮಾರ್, ಧ್ರುವ, ಅನಿಲ್, ಪ್ರಗ್ಯಾ, ನವಿತಾ, ವೈಷ್ಣವಿ, ಜಬರ್‌ದಸ್ತ್ ಜಿಎಂಆರ್, ಜಬರ್‌ದಸ್ತ್ ಬಾಬು, ಜಬರ್‌ದಸ್ತ್ ರಾಮು, ಈಟಿವಿ ಜೀವನ್, ಮಮತಾರೆಡ್ಡಿ ಅಭಿನಯಿಸಿದ್ದಾರೆ.

ಸಂಗೀತ ಪೆದ್ದಪಲ್ಲಿ ರೋಹಿತ್, ಛಾಯಾಗ್ರಹಣ ಬೋಗಿರೆಡ್ಡಿ ಸಿವಕುಮಾರ್, 'ಹನುಮಾನ್' ಖ್ಯಾತಿಯ ನಂದು ಸಾಹಸ ಮತ್ತು ರಾಜೇಶ್ ಲಂಕ ಹಾಗೂ ಹುಸೇನ್ ಸಹ ಆ್ಯಕ್ಷನ್ ಮಾಡಿಸಿದ್ದಾರೆ. ಕಾರ್ಯಕಾರಿ ನಿರ್ಮಾಪಕ ಮಣಿಕುಮಾರ್, ರವಿತೇಜ್.ಸಿ.ಹೆಚ್ ಸಂಕಲನ ವಿಎಫ್‌ಎಕ್ಸ್ ಶಿರಾ ಪ್ರೊಡಕ್ಷನ್ಸ್, ಎಸ್ ಎಫ್‌ಎಕ್ಸ್ ಶ್ರೀನು ನಾಗಪುರಿ, ಡಿಐ ಸಂಜೀವ್ ಮಾಮಡಿ, ಕಾಸ್ಟ್ಯೂಮ್ ಡಿಸೈನರ್ ಮಂದಾತಿ ಗೀತಿಕ ಅವರದಾಗಿದೆ. ಹೈದರಬಾದ್, ರಾಮೋಜಿರಾವ್ ಸ್ಟುಡಿಯೊ ಸೇರಿದಂತೆ ಹಲವೆಡೆ ಚಿತ್ರೀಕರಣ ನಡೆಸಲಾಗಿದೆ. ಸದ್ಯ ಸಿನಿಮಾವು ಪೋಸ್ಟ್ ಪ್ರೊಡಕ್ಷನ್ ಹಂತದ ಕೆಲಸದಲ್ಲಿ ನಿರತರವಾಗಿದೆ.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

THE BANGALORE EDUCATION SOCIETY(R.)

॥ ಶ್ರದ್ಧಾವಾನ್ ಲಭತೇ ಜ್ಞಾನಂ ॥

ESTD-1965

(Recognised by the Govt. of Karnataka)

8th Cross, Malleswaram, Bengaluru – 560 003

The Management and the Staff of BES extend Hearty **CONGRATULATIONS** to all our students who secured Highest Marks in the

SSLC Examination 2024-25

State 2nd Rank

SUNIDHI S 624 –99.84%

HEMAVARSHINI M 603 - 96.48%
LOCHAN S 602 - 96.32%
VISHAL M 602 - 96.32%
M PRAJIT 600 - 96%
YADHUNANDHAN A S S 597 - 95.52%
MONISH K 596 - 95.36%
SNEHA SOMAPPA MALAPPANAVAR 594 - 95.04%
DAKSHA M 591 - 94.56%
RAKSHA R 590 - 94.4%
MANVITH M 586 - 93.76%
KAVYASHREE M K 585 - 93.6%
M HARINI 578 - 92.48%
DHANUSH GOWDA C 571 - 91.36%
BHOOMIKA S 563 - 90.08%
JEEVITH S 562 - 89.92%
K GOUTHAM 558 - 89.28%
ESHA G 552 - 88.32%
TANVI K 547 - 87.52%
PREM P 540- 86.4%

II PUC Examination 2024-25

State 13th Rank

BRUNDHA M 587 (97.83%) EBAS

HARSHITHA S 576 (96%) EBAM
LAKSHMI K 562 (93.66%) PCMB
SUCHITHRA M N 553 (92.16%) EBAS
SHIVU S 551 (91.83%) PCMB
GREESHMA A 548 (91.33%) PCMC
MANASA G 542 (90.33%) PCMB
SYED ZAIN 537 (89.5%) EBAM
KARTHIK RAJA 536 (89.33%) PCMB
BHAVANA R 533 (88.83%) EBAC
DHANALAKSHMI 533 (88.83%) EBAC
MOHAMMED OWAIS SHARIFF 523 (87.16%) EBAC

ADMISSIONS OPEN FOR | PRE KG - II PUC 2025-26 | FREE ADMISSION FOR 90% & ABOVE | *Scholarship will be given for those who have secured between 85% & 90%*

bes.malleswaram@gmail.com 080 233 11 770 | 080 235 61 615

RR NAGAR

JUST 8 MINS FROM KENGERI METRO ST

CREDAI

ELEGANT Hermitage

Inspired Peaceful Living

Roman Themed Apartments

2,3,4 & 5 BHK | 2B + 12 FLOORS

Stop Living Ordinary, Sky is the limit for you!

NO COMMON WALLS | 100% VASTU ORIENTED | 80 FEET MAIN ROAD

POSSESSION BY JUN 2026

RERA REGISTERED PROJECT

PRM/KA/RERA/1251/310/PR/300623/006025

63 64 62 46 53 , 90 35 78 15 73

St.MARY'S HIGH SCHOOL & PUBLIC SCHOOL

Recognised by the Government of Karnataka & Affiliated to CISCE, New Delhi –KA160

#1, T.Dasarahalli, Bengaluru -560057. Tel : 080-28392711 E-mail: sln.smps@gmail.com, www: stmarys-school.in

Congratulations *to our achievers for their stellar performance in the SSLC and ICSE Board Exams 2025 !!!*

We proudly mark 26 years of S.S.L.C. and 16 years of ICSE - a remarkable journey of consistent 100% results and academic glory !

S.S.L.C Toppers

SCHOOL TOPPER: ANAGHA 99.04% 619/625

STUDENTS APPEARED	182
Students Secured 95 % and above	36
Total Centums	69
Distinctions	108
I Class	73
II Class	01

REKHAMRUTHA B N 98.08% - 613/625
POORVIK RAJ G 97.76% -611/625
CHINMAYEE G 97.6%-610/625
HEMANTH L GOWDA 97.6%-610/625
NISCHAY NAGAVARA 97.44%-609/625
VAMSHITHA K 97.44%-609/625
GUNASHREE R 97.12% -607/625
MANASA M 96.96% -606/625
YUKTHA B S 96.96%-606/625
NAGASHREE T 96.96% -606/625
BHOOMIKA C 96.64%-604/625
NITHIN GOWDA G 96.64%-604/625
GAGAN R 96.32% -602/625
NISARGA G 96.32%-602/625
NISARGA SUNDAR 96.32% - 602/625
VARUN S 96.32%-602/625
VINAY S 96.32%-602/625
YUKTHA M B 96.32%-602/625
NITHIN KUMAR K 96.32%-602/625
HEMANTH U 96.16%-601/625
RAMYASHREE T 96.16%-601/625
KAVANA R 96%-600/625
THANUSHREE G 96%-600/625
H A VEDAVARSHINI 95.68%-598/625
GEETHIKA SAI SRI GAYATHRI T 95.68%-598/625
RISHITHA K 95.68%-598/625
VISHWAJEETH KESHAV NAYAK 95.68%-598/625
B UMMER FAROOQ 95.52%-597/625
MOHITH S 95.52%-597/625
SUDITH RAJU 95.52%-597/625
JITHIN K M 95.52%-597/625
HARSHITHA U 95.36%-596/625
SHASHANK SADASHIV 95.2%-595/625
AFRIDA J 95.04%-594/625
JANHAVI J 95.04% -594/625

ICSE Toppers

SCHOOL TOPPER: D A ANIRUDH - 98.2%

STUDENTS APPEARED	121
Students Secured 95 % and Above	12
Total Centums	23
Distinctions	71
I Class	50

APOORVA B 97.6%
KIRAN V 97%
CHARAN REDDY N 96.4%
KISHAN R 96.4%
SHREYA N 96.2%
MAYANK DEV SINGH 96%
NIHAL PRAJWAL M 96%
AASHISH K S 95.8%
SHREYAS M S 95.6%
MAYANK R 95.2%
MUKESH V 95%

100 % Results

ADMISSIONS OPEN FOR 2025-26

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

WEEKEND CORNER
ಕ್ಲಾಸಿಫೈಡ್ಸ್

REAL ESTATE SELLING

Flat

Anekal

INDYA ESTATES the Greens Apartment flat: 2 BHK 890 Sqft sale, 32 Lakhs, Special offer: Rs. 28 Lakhs, Bidaragere Village, Anekal Taluk. Mobile: 8105070265

Chandra Layout

FLATE_FOR SALE
@_CHANDRA LAYOUT
VIJAYNAGAR 3_BHK
NEW FLATE BDA
PROPERTY GOOD
LOCATION CONTACT:
98455-55666

Kammanahalli

CORNER 3BHK Flat Ground Floor Jalvayuvihar Kammanahalli for sale Excellent location1300 Sq Feet. Two car parkings 2.6 cr negotiable Genuine Buyers only. Contact: 9949009472 Brokers Excuse.

Kanakapura Road

SALE LUXURY
2/3_BHK Apartment
Starts from 8599/-sft
at Doddakalasandra,
Near Forum Mall.
Contact:7204020888
7204030888

Commercial Land

Yeshwanthpur

PRIME-COMMERCIAL-LAND 56,000SQ.FT. on Tumkur Road, Yeshwantpur, Near Sparsh Hospital. Rs.17,000/sq.ft. Full Cheque. Ph: 9845202433

Agricultural Land

Out-Station

HUBLI AGRICULTURAL LAND FOR SALE
Measuring 23 acres
Located at 11km on Hubli-Karwar Road with mango plantation, well, 2 borewell.
Also suitable for any Industry, Education centre, Resort or Convert to NA.
Location: Opposite to Hubli Water World
Brokers excuse.
Genuine Party Contact
9108133206

Sites

Anjanapura

ANJANAPURA SITE for Sale 5G Block 30x40 facing West, Good location, immediate Construction. 9845132011, 9663554448

ANJANAPURA BDA Sites For Sale, 1st Block, 20x30, W/F, Price 63 Lakhs Negotioble: 9740150364 /8884707773

Airport Road

"TOP LOCATION
for investment
Hennur Road 40x60
Rs.1.44 Crore BIAAPA
Corner 60`feet Road.
"Sri.Ganesh Estate"-
9845286505"

Banashankari

BDA APPROVED Shankar Layout,40x60,Walkble Distence From Metro Rs,12500/-Banashankari 6th Stage,1st/3rd Block,40x60 Rs.13500/-9845600007

COMMERCIAL SPACE AVAILABLE FOR RENT
Newly built **Commercial Complex** with around **48000 Sft** spread over 5 floors with 2 lifts and parking facilities prominently located near **Magadi Road – NICE Road Toll Junction**, Bengaluru available for Rent with 65KW Power Supply that can be extended to 200KW.
Suitable for Hospitals, Diagnostic Centres, Shopping Malls, Educational Institutions, Offices, and Pharmaceuticals / Electronics / Garments Manufacturing units.
Contact:
8494835002 / 7358477799

'BANASHANKARI' 6TH Stage, 6th Block 20x30, W/F, BCC Layout, 50x80, North/East, Corner: 9632822225/9448618094

BANASHANKARI 6TH STAGE- BDA-
AVAILABLE/ WANTED
20x30, 30x40 40x60,
50x80 SITES.
BRINDAVAN
ASSOCIATES-
9980863245/
9945333993

WANTED
ANJANAPURA
Banashankari 6th
Stage JPNagar Near
Kanakapura Road Any
Measurement
Immediate Settlement
Call: 9964627255

BANASHANKARI
6TH-STAGE WANTED/
AVAILABLE BDA
RESIDENTIAL AND
COMMERCIAL SITES
IMMEDIATE
SETTLEMENT
CONTACT:
8050908920/
9986866661

BSK 6TH STAGE
5TH BLOCK 40x60,
8TH BLOCK 40X60
BOTH 40FEET FACING
AND PRICE CALL:
9845117825

"BANASHANKARI
3RD-STAGE
40x60, 40x50,
J.P.Nagar 2nd Phase
40x60,
Kanakapura Road
40x60.
"Sri.Ganesh_Estate"-
9845286505"

SRINIVASA NAGAR,
Banashankari, 30x50
East facing site, prime
location 40feet Road,
Sale- 20,000/- sft.
-9845000299.

BTM Layout

20x40 BDA NOC

SITE for SALE
BTM 4th Stage, 2nd Block, Near Nano Hospital Back, Sai Baba Temple, Saraswathipuram Layout, North Builder Spot, 'E' Katha. Rs. 65 lacs. Nego.
CALL : 9845286583

Intl Airport Road

BAGALUR CROSS 30x49 PG Building Sale Good Rentel In Come Broker's Pls Excuse: 9845623970/ 9739400838

DH Classifieds
DECCAN HERALD
More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN
DH ALL KARNATAKA + PRAJAVANI BENGALURU CITY
ON SATURDAY + SUNDAY
@ 2481/-*
FOR 15 WORDS
www.dhclassifieds.com
BOOK NOW
*Conditions apply
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164



LONG TERM OFFICE RENTAL
7447 Sqft FULLY Fitted Out Office with
96 Workstations || 3 Meeting Rooms
1 MD Cabin || 5 Cabins || 1 Board || 1 Cafeteria || 6 Car Parks
ON OLD AIRPORT ROAD
Next to HAL Museum
MSG ONLY BY WHATSAPP FOR MORE DETAILS 98450 31550

30-70 Acres Land for Sale
Between KIA CARS & Bagepalli Hindupur
9343510635

Jayanagar

K.R.ROAD NEAR Uma Maheswari Temple Semi commercial 30x70 SW Corner 32,000/ Sft 'PRAKASH ENTERPRISES'- 98456-09477

Kempegowda Layout

KEMPEGOWDA
LAYOUT,
COMMERCIAL BDA SITE
FOR SALE 20x30,
30x40, 40x60, 50x80,
Contact: Kumar
9945119449

EXCELLENT EAST- facing, 30*40 BDA Site for sale in Nadaprabhu Kempegowda Layout, Very close to 300 feet PRR road, Contact 9535629981/ 9632425395

Mallathalli

30X40 SITE SALE
South Facing, BDA
Approved ITI Layout.
Mallathahalli, Broker
Excuse. Call: Owner
9449904270.

Nagarabhavi

SALE: SITE 30x60
Nagarabhavi 2nd
Stage, 'A' Khata.
Immediate
Registration. Genuine
Buyers. Contact:
6361819741.

NAGARABHAVI
NEAR BDA Complex
30x40 East Facing on
40 Feet Road @
19,500/-. Contact:
9964971895

ANNAPURNESHWARI NAGAR 30x40 East Facing Near BDA Complex 40 Feet Road Contact: 9980409820 Broker's Excuse

Rajarajeshwari Nagar

2640 SQFT N/W
Corner Site with
Duplex House for Sale
Ideal Home, RR Nagar.
9611880033

Vijayanagar

SITE FOR_SALE
30x45 North`Facing
@_Vijayanagar
Marenahalli @_Good
Location Price 19000/-
Sqft Negotiable
7676900174
9945569909

Vishweshwariah Layout

"VISVESHWARAIAH
6TH-BLOCK
30x40_East-facing
Allotte site`for`sale
Near Vidyaniketan
School/College,
Good_Location,
Genuine_Buyers only
Contact: 9945662333"

"SALE 30X40
South facing Site
near 100`feet Road
1st Block
Vishveshwaraiah
Layout, Good location.
9845500019/
7019314962"

SIR M
VISHWESHWARAIAH
LAYOUT 6TH BLOCK
30x40, 2297 NORTH
GOOD LOCATION
CONTACT:
9844938566

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

98KM FROM BANGALORE
Make a Smart Agri Investment in
SANDALWOOD FARMING
Claim your piece of green gold today
Fully Developed Gated Community Farm plots with World class amenities And 15 Years Free Maintenance*
CALL: +91 7996665118
Near ID Halli, Madhugiri Taluk (KA & AP Border)
5km from Highway (NH-544E)

DC CONVERTED BBMP E-Katha Sites Available for Sale Visveswaraiah Layout East & West Facing Measuring 3500 Sqft to 9000 Sqft 6366232222/ 6366242222

"SITE FOR-SALE 40x60`South facing Vishveshwaraiah Layout 6th`Block Good Location, Genuine Buyers Contact: 8105688602"

30X40 BDA Vishveshwaraiah Layout 3rd BDA Complex Back Side & 30X40 Site Sale 4th Block 9000 Sqft 40ft Road: 9844845864

Rajanukunte

"30X40 BIAPA Approved Near Rajankunte Doddabalapura Toll Ready`For Construction ₹3350/-P.Sft. Call: Owner-9845178335"

J P Nagar

JPNAGAR 3RD Phase 30x51,House 5.50cr/Jpnagar 2nd Phase 32x41 Rs. 30,000/-Jpnagar Dollars Colony 50x80,Rs.25,000/-9845704509

Commerical

Magadi Road

MAGADI MAIN Road
Gangapanahalli Fully
Commercial 1 Acre 1
Gunta Land Sale 6
Crore: 9342552428

House

Hanumanthnagar

30X40 LATEST
Duplex House
2,80,00,000/ 40x60
Site 6,25,00,000/
Ashoknagar 30x40
Houses 2,76,00,000
'VASAVI' 98453-76147

Industrial & Factory

Hoskote

HOSKOTE MALUR
Highway near ITC
Warehouse 1.5 Acres
suitable for
Warehouse/ Logistics,
Sale at 1500/ sft.
Agents excuse.
9845440436

REAL ESTATE BUYING

Sites

Banashankari

BDA SITES WANTED
ARKAVATHY
ANJANAPURA
BANASHANKRI 6TH
STAGE
VISHVESHWARAIAH
KEMPEGOWDA ANY
BDA LAYOUT:
9845062822/
8660751654

Kanakapura Road

WANTED SITE
30x40, 40x60
Anjanapura`BDA,
Banashankari
6th`Stage,
JCHS, BCCHS, BCMC
Balaji Layout,
Gubblala
NarayanaNagar
Vajarahalli.
Call: 9663454878

Multiple Locations

WANTED BDA SITES
Anjanapura- Arkavathi
Banashankari
6th.Stage,
Vishweswaraiah,
Kempegowda,
Dr.Shivaramkaranth
Layout.Contact:
SAPTHAGIRI,
9900268073,
9448068073.

Vishweshwariah Layout

"BUYING/ SELLING"
20x30,30x40,40x60
50x80 BDA sites at
VISHVESHWARAIAH
LAYOUT, BSK 6th-
stage. Contact:
9844533371/
9341733480

WANTED BDA SITE
40x60 at
Vishveshwaraiah
Layout, Except South
Facing, Clear Title,
Brokers Excuse.
9449904270.

BUILDERS ESSENTIAL

Roofing Materials

"WE-FIX" LEAKING
ROOF, TANK, SUMP,
BATHROOM, SKYLIGHT,
HOUSE PAINTING,
TILING, CARPENTRY,
EPOXY, CIVIL WORKS.
9448572697

Water Proofing

LEAKAGE...
LEAKAGE... Old/New
Building, Sump,
Bathroom, Wallcrack,
Skylight, Terrace
Waterproofing done
by New Technology-
9880916988

RENTAL PROPERTIES

Accommodation Available

Commercial

COMMERCIAL
OFFICE for RENT
2400 or 4500 SFT
Furnished.
OC available. Near
Yeshwanthpur Metro.
Contact: 9916155055.

BANASWADI FOR RENT SHOWROOM SPACE GROUND FLOOR5000+1500-6,500 Sqft NEAR BANASWADI MAIN ROAD: 9845350609

Farm House/Land/ Resorts

AVAILABLE FOR Rent 1.25 Acres Land 28000 sqft factory building power borewell Narasapura Industrial Area Malur Taluk Near Honda Factory, suitable for MNC. 9845862620, 9845408067

Villas/Bunglows

EAST BENGALURU 4BHK Fully Furnished New Villa Posh Community Close To Airport Suitable For Corporate Residence/ Guest House Ready For Lease interested Please Call Ph: 9949161555

Industrial And Factory

INDUSTRIAL SHED
for Rent in
Kumbalgodu. Key
Features Total Area
13,200 sq.ft.
Dimensions 220ft ×
60ft Corner Plot
Advantageous corner
plot with 3 sides open
road, ensuring
excellent accessibility
and ventilation.
Customizable Power
Supply. Contact:
9741883103.

TOURS & TRAVEL

Travel

VISIT BHUTAN, the
most Wonderful
Country with Expert
Guide and Best
Arrangements.
GANESH SHENOY
8970126393

OTHERS

For Sale

TEAK WOOD SOFA/ BEDROSE WOOD CARVED FRONT DOOR LINTELCRYSTAL GLASS WARE. Contact: 9448056996

MORE Classifieds IN MAIN ISSUE

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

SRI SRI ACADEMY

BENGALURU SOUTH

Broaden the Vision, Deepen the Roots

Sri Sri Academy
THE ART OF LIVING
विद्या ददाति पूर्णत्वम्
SSRVM Trust

GROW WITH US

Holistic education for confident, creative, and compassionate leaders.

Why Choose Sri Sri Academy?

1. Holistic, Multidisciplinary Learning
A curriculum that shapes intellectual, emotional & creative growth.

2. State-of-the-Art Infrastructure
Modern classrooms, labs, and facilities that inspire learning.

3. Compassionate, Expert Faculty
Teachers who educate with excellence and empathy.

4. Strong Value-Based Education
Building character, ethics, and leadership from within.

5. Safe & Reliable Transport
Seamless connectivity with a focus on student safety.

ADMISSIONS OPEN 2025-26
CBSE
PP1 To Grade 10

080 26586402
72598 45937
90198 40734

bangaloresouth.ssa.org.in

No 71/2, 6th Cross Kothnur Main Road, 6th Cross 7th Phase, JP Nagar, Bangalore: 78
bangalore.ssabs@ssrvm.org | srisriacademy.bengaluru south | srisriacademy.bs

RERA No. : PRM/KA/RERA/1251/310/PR/120824/006969

VAJRA ELEGANCE

71 Lakhs* Onwards

2, 3 & 4 BHK
ULTRA LUXURY PREMIUM RESIDENCES

Uttarahalli Main Road KENGERI

B + G + 9 Floors
Total 150 Units

BBMP approved | OC/CC 'A' Katha Project | RERA approved | Builders' Association of India | CREDAI

- 50+ Amenities
- 76% Open Space
- As per Vastu
- No Common Walls
- North & East Facing Flats Only
- Kengeri Metro Station - 400 Mtrs
- BGS Global Hospital - 2 KM
- Gopalan Arcade Mall - 6 KM
- Raja Rajeshwari Temple - 5 KM

V2 HOLDINGS HDPL

V2 Vajra Elegance,
Uttarahalli Main Road,(Dr. Vishnuvardhan Road), Kengeri, Bengaluru - 560060.
www.v2holdings.co | v2vajraelegance@gmail.com, v2holdings.blr@gmail.com

Scan QR code for location

Call: 99452 55552 | 99452 55553 | 99452 55550

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

RAJENDRA EDUCATION SOCIETY
KNOWLEDGE IS POWER
Estd. 1986

ರಾಜೇಂದ್ರ ಪಾಲಿಟೆಕ್ನಿಕ್
R.E.S. POLYTECHNIC

Sunkadakatte, Hegganahalli cross,
Near PEENYA II Stage, Bangalore - 560091

R. E. S. Evening Polytechnic
(Working professional program) since 2023-24

Join govt approved 2 yrs diploma in
- Electrical & electronics engg.

Eligibility:
- Any ITI trade with 2 yrs experience
- Any PUC science group with 2 yrs experience

R. E. S. Polytechnic
since 1986

Join govt approved 2/3 years diploma in
- Computer science engg.
- Information science engg.
- Mechanical engg.
- Automobile engg.
- Electrical & electronics engg.
- Electronics & communication engg.
- Civil engg.
- Fashion design & technology
- Commercial practice

Eligibility:
- PUC/ITI/12th pass for 2 years diploma
- SSLC/10th pass for 3 years diploma

For Further Details Contact : PRINCIPAL / SECRETARY
R.E.S. POLYTECHNIC
Campus : # 5, Sunkadakatte, Hegganahalli Cross, Magadi Main Road,
Bangalore - 560 091. Ph : 080-23484814, 23289424

99166 46466

MOGG'S™ ESTATES

ESCAPE TO MOGG'S AIRA FARM
Nature-Inspired Living. Investment-Inspired Thinking.

Starts at just **32 Lakhs** Onwards

Weekends in the Wild. Returns You Can Count On.

Weekends in the Wild. Returns You Can Count On. Just 45 minutes from Bengaluru, tucked away in the serene landscapes of Kanakapura, lies a rare blend of peaceful retreat and profitable opportunity.

Eco Retreat Ready | 20+ Lifestyle Amenities | Guaranteed ROI | Limited Plots Available

Zero Maintenance for You | Build Your **DREAM WEEKEND FARMHOUSE** Fully Managed Farmland | Gated, Secure and Ready-to-Build Community

95136 55556
www.moggs.in
KANAKAPURA
MOGG'S™ AIRA FARMS

ಗೌತಮ್ ವಿದ್ಯಾ ಸಂಸ್ಥೆಗಳು
ಬೆಂಗಳೂರು, ಕರ್ನಾಟಕ

GOUTHAM COLLEGE
BANGALORE, KARNATAKA

ADMISSION OPEN AFTER SSLC / PUC WHAT NEXT ?

DEGREE COURSE
- B.Com L.L.B (5 Years)
- L.L.B (3 Years)
- B.Com (3 Years)
- B.Ed Education (2 Years)
- M.Ed Education (2 Years)
- M.Sc Psychology (2 Years)
- MSW Social Work (2 Years)
- BSW Social Work (3 Years)
- B.B.A Administration (3 Years)

ALLIED HEALTH SCIENCE
- M.Sc (MLT) (2 Years)
- M.Sc (IT) (2 Years)
- B.Sc. (MLT) Med. Lab Tech (4 Years)
- B.Sc. (IT) Imaging Technology (4 Years)

PHYSIOTHERAPY
- B.P.T (4 Years)
- M.P.T (2 Years)

G.N.M
- General Nursing

PARAMEDICAL COURSES 3YEAR (3 MONTHS)
- D.M.L.T Medical Lab Technology
- D.O.T Opthalmogy Technology
- D.H.I Health Inspector
- D.I.T Imaging Technology
- D.D.T Dialysis Technology
- D.M.R.T Medical Record Technology
- D.O.T.T Operation Theatre Technology

NURSING COURSE
- B.Sc Nursing
- P.c.B.Sc Nursing
- M.Sc Nursing
- Ph.D Nursing

DIPLOMA IN PHARMACY
- D-Pharmacy - 2 YEARS

PRE - UNIVERSITY COURSE
- SCIENCE PCMB (2 Years)
- COMMERCE EBAS/EBACs/HEBA (2 Years)

JOB ORIENTED COURSE

NO DONATION

For Admission Contact : 080-23303737 / 23492763. 9845008891 / 7975373446 / 9845022057
258, 5th Main, 2nd Cross, Manjunathanagar, WOC Road, Rajajinagar, Bangalore - 560 010

ISO CERTIFIED INSTITUTIONS, *NO DONATION*